# ಉಷ್ಣ ವಿದ್ಯುತ್ ಸ್ಥಾವರ ಕುರಿತ ಮಾಹಿತಿ ಕೈಪಿಡಿ

*– An initiative by Thermal Watch*



CITIZEN CONSUMER & CIVIC ACTION GROUP [CAG]
9/5, II Street, Padmanabha Nagar, Adyar, Chennai 600 020
www.cag.org.in

# ಉಷ್ಣ ವಿದ್ಯುತ್ ಸ್ಥಾವರ ಕುರಿತ ಮಾಹಿತಿ ಕೈಪಿಡಿ

*- An initiative by Thermal Watch*

CITIZEN CONSUMER & CIVIC ACTION GROUP [CAG]

9/5, II Street, Padmanabha Nagar, Adyar, Chennai 600 020

www.cag.org.in

ಥರ್ಮಲ್ ವಾಚ್ ಎನ್ನುವುದು ಸಿಟಿಜನ್ ಕನ್ಸೂಮರ್ ಮತ್ತು ಸಿವಿಕ್ ಆಕ್ಷನ್ ಗ್ರೂಪ್ ಆರಂಭಿಸಿದ ಒಂದು ಮಧ್ಯವರ್ತನೆಯಾಗಿದ್ದು, ದಕ್ಷಿಣ ಭಾರತದುದ್ದಕ್ಕೂ ಉಷ್ಣ ವಿದ್ಯುತ್ ಸ್ಥಾವರಗಳ ಪಾರಿಸರಿಕ ಪರಿಣಾಮ ಮೌಲ್ಯಮಾಪನ ಪ್ರಕ್ರಿಯೆಯ ಕುರಿತು ಸ್ಥಳೀಯ ಸಮುದಾಯಗಳನ್ನು ಸಶಕ್ತಗೊಳಿಸುತ್ತದೆ.

ಹೆಚ್ಚಿನ ವಿವರಗಳಿಗೆ ದಯವಿಟ್ಟು ಈ ಜಾಲತಾಣಕ್ಕೆ ಭೇಟಿ ನೀಡಿ: www.thermalwatch.org.in

# ಪರಿವಿಡಿ


| ಸಂಖ್ಯೆ: | ಶೀರ್ಷಿಕೆ | ಪುಟ |
|---|---|---|
| 1 | **ಉಷ್ಣ ವಿದ್ಯುತ್ ಸ್ಥಾವರಗಳು** | |
| 1.1 | ಪರಿಚಯ | |
| 1.2 | ಕಲ್ಲಿದ್ದಲು ಮತ್ತು ಕಲ್ಲಿದ್ದಲು ಆಧರಿತ ವಿದ್ಯುತ್ ಸ್ಥಾವರಗಳು | |
| 1.3 | ಪಾರಿಸರಿಕ ಅನುಮತಿ ಪ್ರಕ್ರಿಯೆ | |
| 2 | **ಪಾರಿಸರಿಕ ಪರಿಣಾಮ ಮೌಲ್ಯಮಾಪನ (ಇಐಎ) ಪ್ರಕ್ರಿಯೆಯಲ್ಲಿ ಸಮುದಾಯಗಳನ್ನು ಸಶಕ್ತಗೊಳಿಸುವುದು** | |
| 2.1 | ಸಾರ್ವಜನಿಕ ಸಮಾಲೋಚನೆಯಲ್ಲಿ ಪರಿಣಾಮಕಾರಿ ಭಾಗವಹಿಸುವಿಕೆ | |
| 2.2 | ಸಕಾಲಿಕ ಮಧ್ಯವರ್ತನೆಗಳು | |
| 2.3 | ಯಶಸ್ವೀ ಮಧ್ಯವರ್ತನೆಗಳು | |
| 2.4 | ಆಗಾಗ ಕೇಳುವ ಪ್ರಶ್ನೆಗಳು | |
| 2.5 | ಪ್ರಮುಖ ಎನ್‌ಜಿಟಿ ಆದೇಶಗಳು | |
| 2.6 | ಪರಿಸರ ಮತ್ತು ಅರಣ್ಯಗಳ ಸಚಿವಾಲಯದ ಮಹತ್ವದ ಸುತ್ತೋಲೆಗಳು | |
| 2.7 | ಮಾಹಿತಿ ಹಕ್ಕು ಕಾಯಿದೆ (ಆರ್‌ಟಿಐ) ಬಳಸಿಕೊಂಡು ಇಸಿ ಮತ್ತು ಇಐಎ ಕುರಿತ ಮಾಹಿತಿ ಪಡೆಯುವುದು | |
| 3 | **ನವೀಕರಿಸಬಲ್ಲ ಶಕ್ತಿಗೆ ಬದಲಾಗುವುದು** | |
| | ANNEXURES | |
| A | ಎ. ಫಾರ್ಮ್ ೧ ನಮೂನೆ | |
| B | ಬಿ. ಟಿಒಆರ್ ನಮೂನೆ | |
| C | ಸಿ. ಇಐಎ ಮತ್ತು ಇಐಎ ಸಾರಾಂಶ ನಮೂನೆ | |


| | ಸಂಕ್ಷಿಪ್ತಪದಗಳು |
|---|---|
| 1 | EC: Environmental Clearance ಇಸಿ: ಪಾರಿಸರಿಕ ಅನುಮತಿ |
| 2 | EIA: Environmental Impact Assessment ಐಎ: ಪಾರಿಸರಿಕ ಪರಿಣಾಮ ಮೌಲ್ಯಮಾಪನ |
| 3 | MoEF: Ministry of Environment & Forests ಎಂಒಇಎಫ್ : ಪರಿಸರ ಮತ್ತು ಅರಣ್ಯಗಳ ಸಚಿವಾಲಯ |
| 4 | SEIAA: State Environment Impact Assessment Authority ಎಸ್ಇಐಎಎ : ರಾಜ್ಯ ಪಾರಿಸರಿಕ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ |
| 5 | EAC: Expert Appraisal Committee ಇಎಸಿ : ತಜ್ಞ ಮೌಲ್ಯನಿರ್ಣಯ ಸಮಿತಿ |
| 6 | SEAC: State Expert Appraisal Committee ಎಸ್ಇಎಸಿ : ರಾಜ್ಯ ತಜ್ಞ ಮೌಲ್ಯನಿರ್ಣಯ ಸಮಿತಿ |
| 7 | NGT: National Green Tribunal ಎನ್‌ಜಿಟಿ : ರಾಷ್ಟ್ರೀಯ ಹಸಿರು ನ್ಯಾಯಪೀಠ |
| 8 | ToR: Terms of Reference ಟಿಒಆರ್ : ಒಪ್ಪಂದದ ಕರಾರುಗಳು |
| 9 | SPCB: State Pollution Control Board ಎಸ್‌ಪಿಸಿಬಿ : ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ |
| 10 | FC: Forest Clearance ಎಫ್ಒ : ಅರಣ್ಯ ಅನುಮತಿ |
| 11 | CRZ: Coastal Regulatory Zone ಸಿಆರ್‌ಜಡ್: ಕರಾವಳಿ ನಿಯಂತ್ರಣ ವಲಯ |
| 12 | RTI: Right To Information ಆರ್‌ಟಿಐ : ಮಾಹಿತಿ ಹಕ್ಕು ಕಾಯಿದೆ |
| 13 | PIO: Public Information Officer ಪಿಐಒ : ಸಾರ್ವಜನಿಕ ಸಂಪರ್ಕಾಧಿಕಾರಿ |
| 14 | AA: Appellate Authority ಎಎ : ಮೇಲ್ಮನವಿ ಪ್ರಾಧಿಕಾರ |
| 15 | CIC: Central Information Commission ಸಿಐಸಿ : ಕೇಂದ್ರೀಯ ಮಾಹಿತಿ ಆಯೋಗ |
| 16 | SIC: State Information Commission ಎಸ್ಐಸಿ : ರಾಜ್ಯ ಮಾಹಿತಿ ಆಯೋಗ |
| 17 | RE: Renewable Energy ಆರ್ಇ : ನವೀಕರಿಸಬಲ್ಲ ಶಕ್ತಿ |
| 18 | TPP: Thermal Power Plant ಉಷ್ಣ ವಿದ್ಯುತ್ ಸ್ಥಾವರ |

# 1. ಭಾರತದಲ್ಲಿ ಉಷ್ಣ ವಿದ್ಯುಚ್ಛಕ್ತಿ

## 1.1. ಪರಿಚಯ

ವಿದ್ಯುಚ್ಛಕ್ತಿಯನ್ನು ಕಲ್ಲಿದ್ದಲು, ತೈಲ, ಜಲ, ಪರಮಾಣು, ಸೌರ, ಜೈವಿಕ ಸೇರಿದಂತೆ ಹಲವಾರು ಮೂಲಗಳಿಂದ ಉತ್ಪಾದಿಸಲಾಗುತ್ತದೆ. ಕಲ್ಲಿದ್ದಲು, ಅನಿಲ, ಡೀಸಲ್ ಮತ್ತು ನ್ಯಾಫ್ತಾವನ್ನು ಉಷ್ಣ ಸಂಪನ್ಮೂಲಗಳು ಎಂದು ಕರೆಯುತ್ತೇವೆ ಮತ್ತು ಅವುಗಳನ್ನು ಬಳಸಿಕೊಂಡು ಕಾರ್ಯನಿರ್ವಹಿಸುವ ಘಟಕಗಳನ್ನು ಉಷ್ಣ ವಿದ್ಯುತ್ ಸ್ಥಾವರಗಳು (ಟಿಪಿಪಿಗಳು) ಎಂದು ಕರೆಯುತ್ತಾರೆ (Thermal Power Plants -TPPs).

ಭಾರತದಲ್ಲಿ ವಿದ್ಯುತ್ ಉತ್ಪಾದನೆಯ ಮೂಲಗಳು





ಮುಂಬರುವ ವರ್ಷಗಳಲ್ಲಿ ನವೀಕರಿಸಬಲ್ಲ ಶಕ್ತಿಯು (ಆರ್‌ಇ) ಹೆಚ್ಚಿನ ಮಹತ್ವ ಪಡೆಯುತ್ತದೆ ಮತ್ತು ಉಷ್ಣ ಶಕ್ತಿ ಮೂಲಗಳ, ವಿಶೇಷವಾಗಿ ಕಲ್ಲಿದ್ದಲಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬೇಕು ಎನ್ನುವುದು ನಿಜವಾದರೂ, ಇವು ಸದ್ಯಕ್ಕಂತೂ ಶಕ್ತಿಯ ಅಗತ್ಯಗಳನ್ನು ಪೂರೈಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಉಷ್ಣ ವಿದ್ಯುತ್ ಸ್ಥಾವರಗಳನ್ನು (ಟಿಪಿಪಿ) ಸ್ಥಾಪಿಸಿರುವ ರೀತಿ ಮತ್ತು ಅವುಗಳ ಕಾರ್ಯನಿರ್ವಹಣಾ ವಿಧಾನವು ತೀವ್ರವಾದ ಪಾರಿಸರಿಕ ಪರಿಣಾಮಗಳನ್ನು ಬೀರಿದೆ.

೨೦೧೩ರ ಪ್ರಕಾರ, ಭಾರತದಲ್ಲಿ ಒಟ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ೨,೨೫,೭೯೩.೧೦ ಮೆ.ವ್ಯಾ.ಗಳು. ಉಷ್ಣ ಶಕ್ತಿಮೂಲಗಳು ವಿದ್ಯುತ್ ಉತ್ಪಾದನೆಯಲ್ಲಿ ಒಂದು ಪ್ರಮುಖ ಪಾಲನ್ನು ಹೊಂದಿದ್ದು, ಸ್ಥಾಪಿತ ಸಾಮರ್ಥ್ಯ ೧೫೩೮೪೭.೯೯ ಮೆ.ವ್ಯಾ. (೬೮%) ಆಗಿದೆ. ಜಲ ವಿದ್ಯುತ್‌ಶಕ್ತಿಯ ಸ್ಥಾಪಿತ ಸಾಮರ್ಥ್ಯವು ೩೯,೬೨೩.೪೦ ಮೆ.ವ್ಯಾ. (೨%) ಮತ್ತು ನವೀಕರಿಸಬಲ್ಲ ಶಕ್ತಿಯ ಸ್ಥಾಪಿತ ಸಾಮರ್ಥ್ಯ ಸುಮಾರು ೨೭,೫೪೧.೭೧ ಮೆ.ವ್ಯಾ ಆಗಿದೆ.[1]

ನಮ್ಮ ದೇಶವು ಶಕ್ತಿಗಾಗಿ ಕಲ್ಲಿದ್ದಲಿನ ಮೇಲೆ ಅತಿಯಾಗಿ ಅವಲಂಬಿಸಿದ್ದು, ಅದು ಬಹಳ ಗಂಭೀರವಾದ ಪಾರಿಸರಿಕ ಆತಂಕವನ್ನು ಹುಟ್ಟುಹಾಕಿದೆ. ಏಕೆಂದರೆ ಕಲ್ಲಿದ್ದಲಿನ ಗಣಿಗಾರಿಕೆ ಮತ್ತು ಬಳಕೆಯು ತುಂಬ ಗಂಭೀರವಾದ ಪಾರಿಸರಿಕ ಪರಿಣಾಮಗಳನ್ನು ಉಂಟುಮಾಡುತ್ತಿದೆ. ಕಲ್ಲಿದ್ದಲನ್ನು ಉರಿಸುವ ವಿದ್ಯುತ್ ಶಕ್ತಿ ಘಟಕಗಳು ಮಾನವನಿರ್ಮಿತ-ಕಾರ್ಬನ್ ಡಯಾಕ್ಸೈಡ್, ಗಂಧಕ ಹಾಗೂ ಪಾದರಸ ಹೊರಸೂಸುವಿಕೆಯ ಅತಿದೊಡ್ಡ ಮೂಲವಾಗಿದೆ. ಈ ನಿಟ್ಟಿನಲ್ಲಿ ಸಮರ್ಪಕವಾದ ಸರಿಪಡಿಸುವ ಕ್ರಮಗಳನ್ನು ಈಗಲೇ ತೆಗೆದುಕೊಳ್ಳದಿದ್ದರೆ, ಕಲ್ಲಿದ್ದಲು ಸ್ಥಾವರಗಳು ನೀರು, ಗಾಳಿ ಮತ್ತು ಮಣ್ಣನ್ನು ಮಾಲಿನ್ಯಗೊಳಿಸುತ್ತವೆ. ಜೊತೆಗೆ ಜೀವವೈವಿಧ್ಯತೆ ಮತ್ತು ಜನರ ಬದುಕಿನ ಮೇಲೆ ಹಾನಿಕರವಾದ ಪರಿಣಾಮವನ್ನು ಬೀರುತ್ತವೆ. ಸಂರಕ್ಷಣಾ ಕ್ರಿಯಾ ಟ್ರಸ್ಟ್, ಗ್ರೀನ್‌ಪೀಸ್ ಆಫ್ ಇಂಡಿಯಾ ಮತ್ತು ಅರ್ಬನ್ ಎಮಿಶನ್ಸ್ ಸಂಸ್ಥೆಗಳು ಭಾರತದಲ್ಲಿ ಕಲ್ಲಿದ್ದಲು ಸ್ಥಾವರಗಳಿಂದಾಗಿ ಉಂಟಾದ ಸಾವು ಮತ್ತು ರೋಗಗಳ ಕುರಿತ ಒಂದು ಮೌಲ್ಯಮಾಪನವನ್ನು ಮಾಡಿದ್ದು, ೨೦೧೧-೧೨ರಲ್ಲಿ ಈ ಸ್ಥಾವರಗಳಿಂದ ಬೇರೆಬೇರೆಯಾಗಿರುವ ವಿವಿಧ ರಾಸಾಯನಿಕ ಸಂಯುಕ್ತಗಳ ಕಣಗಳು ಅಥವಾ ಕಣರೂಪದ ವಸ್ತುಗಳ (ಪರ್ಟಿಕ್ಯುಲೇಟ್ ಮ್ಯಾಟರ್ - ಪಿಎಂ) ಹೊರಸೂಸುವಿಕೆಯು ೮೦,೦೦೦ದಿಂದ ೧೧೫,೦೦೦ ಅಕಾಲಿಕ

ಉಷ್ಣ ವಿದ್ಯುತ್ ಉತ್ಪಾದನೆಯ ಶೇಕಾಡಾವಾರು ಪ್ರಮಾಣ




1 http://powermin.nic.in/indian_electricity_scenario/introduction.htm

ಸಾವುಗಳಿಗೆ ಮತ್ತು ೨೦ ದಶಲಕ್ಷಕ್ಕೂ ಹೆಚ್ಚು ಅಸ್ತಮಾ ಪ್ರಕರಣಗಳಿಗೆ ಕಾರಣವಾಗಿದೆ ಎಂದು ಅಂದಾಜು ಮಾಡಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ಮತ್ತು ಸರ್ಕಾರಕ್ಕೆ ೧೬,೦೦೦ರಿಂದ ೨೩,೦೦೦ ಕೋಟಿ ರೂ.ಗಳಷ್ಟು ಹೊರೆ ಬಿದ್ದಿದೆ ಅಂದಾಜು ಮಾಡಲಾಗಿದೆ.

ಪಾರಿಸರಿಕ ಪರಿಣಾಮ ಮೌಲ್ಯಮಾಪನ(ಇಐಎ) ಪ್ರಕ್ರಿಯೆಯು ಎಲ್ಲ ಇಂಧನ ಆಧರಿತ ವಿದ್ಯುತ್ ಸ್ಥಾವರಗಳಿಗೆ ಸಾಮಾನ್ಯವಾಗಿವೆ. ಈ ಕೈಪಿಡಿಯು ಅತ್ಯಂತ ಕೊಳಕು ಇಂಧನವೆಂದೇ ಪರಿಗಣಿತವಾದ ಕಲ್ಲಿದ್ದಲು ಆಧರಿತ ವಿದ್ಯುತ್ ಸ್ಥಾವರಗಳ ಮೇಲೆ ಮತ್ತು ಸಾರ್ವಜನಿಕರ ಉತ್ತಮ ಭಾಗವಹಿಸುವಿಕೆಗಾಗಿ ದುಷ್ಪರಿಣಾಮ ತಗ್ಗಿಸುವ ಕ್ರಮಗಳು ಹಾಗೂ ಒಳಸುರಿಗಳ ಮೇಲೆ ಗಮನಕೇಂದ್ರೀಕರಿಸುತ್ತದೆ.

## 1.2 ಕಲ್ಲಿದ್ದಲು ಮತ್ತು ಕಲ್ಲಿದ್ದಲು ಆಧರಿತ ವಿದ್ಯುತ್ ಸ್ಥಾವರಗಳು

**1.2.1 ಕಲ್ಲಿದ್ದಲು ಮತ್ತು ಅದರ ಗುಣಗಳು**

**1.2.2 ಕಲ್ಲಿದ್ದಲು ಆಧರಿತ ವಿದ್ಯುತ್ ಸ್ಥಾವರಗಳಲ್ಲಿ ವಿದ್ಯುತ್ ಉತ್ಪಾದನೆ**

**1.2.3 ಕಲ್ಲಿದ್ದಲು ಆಧರಿತ ವಿದ್ಯುತ್ ಸ್ಥಾವರಗಳಿಂದ ಪಾರಸರಿಕ ಮತ್ತು ಆರೋಗ್ಯ ಪರಿಣಾಮಗಳು**

### 1.2.1. ಕಲ್ಲಿದ್ದಲು ಮತ್ತು ಅದರ ಗುಣಗಳು

ಕಲ್ಲಿದ್ದಲಿನ ಸ್ಥಿತಿ ಅಥವಾ ಇರುವಿಕೆಯ ಆಧಾರದ ಮೇಲೆ ಅದನ್ನು ಮುಖ್ಯವಾಗಿ ಮೂರು ಬಗೆಯಲ್ಲಿ ವರ್ಗೀಕರಿಸಲಾಗಿದೆ, ಅವೆಂದರೆ ಆಂತ್ರಸೈಟ್, ಬಿಟ್ಯುಮಿನಸ್ ಮತ್ತು ಲಿಗ್ನೈಟ್. ಹೆಚ್ಚು ಹಳೆಯ ಅಥವಾ ವಯಸ್ಸಾದ ಕಲ್ಲಿದ್ದಲು ಎಂದರೆ ಆಂತ್ರಸೈಟ್. ಬಿಟ್ಯುಮಿನಸ್ ತುಂಬ ಮೃದು ಕಲ್ಲಿದ್ದಲಾಗಿದ್ದು, ಲಿಗ್ನೈಟ್‌ಗಿಂತ ಉತ್ತಮ ಗುಣಮಟ್ಟದ್ದು, ಆದರೆ ಆಂತ್ರಸೈಟ್‌ಗಿಂತ ಸ್ವಲ್ಪ ಕಳಪೆ ಗುಣಮಟ್ಟದ್ದು. ಲಿಗ್ನೈಟ್ ತೀರಾ ಇತ್ತೀಚೆಗೆ ರೂಪುಗೊಂಡ, ಹೆಚ್ಚು ವಯಸ್ಸಾಗಿರದ ಕಲ್ಲಿದ್ದಲು. ಆಂತ್ರಸೈಟ್ ತುಂಬ ಗಡುಸಾದ ಕಲ್ಲಿದ್ದಲಾಗಿದ್ದು, ಇದು ತುಂಬ ಕಡಿಮೆ ಆವಿಯಾಗಬಲ್ಲ ಅಂಶಗಳನ್ನು ಹೊಂದಿರುತ್ತದೆ ಮತ್ತು ಆರ್ದ್ರತೆಯ ಪ್ರಮಾಣ ಇರುವುದಿಲ್ಲ. ಲಿಗ್ನೈಟ್ ಮೃದುವಾದ ಕಲ್ಲಿದ್ದಲಾಗಿದ್ದು, ಇದರಲ್ಲಿ ಇಂಗಾಲದ ಅಂಶ ಕಡಿಮೆ ಇರುತ್ತದೆ, ಜೊತೆಗೆ ಆವಿಯಾಗಬಲ್ಲ ಅಂಶಗಳು ಹಾಗೂ ಆರ್ದ್ರತೆಯ ಪ್ರಮಾಣ ಅಧಿಕವಿರುತ್ತವೆ.

### ಕಲ್ಲಿದ್ದಲಿನ ವಿವಿಧ ಘಟಕಾಂಶಗಳು ಮತ್ತು ಅವುಗಳ (ಸೂಚಿತ) ಪರಿಣಾಮಗಳು

**ಎ. ನಿಗದಿತ ಇಂಗಾಲ**

ನಿಗದಿತ ಇಂಗಾಲ ಎಂದರೆ ಕಲ್ಲಿದ್ದಲಿನ ಕಣವನ್ನು ಬಿಸಿಮಾಡಿದಾಗ ಆವಿಯಾಗುವ ಅಂಶಗಳು ಹೊರಹೊಮ್ಮಿದ ನಂತರ ಉಳಿಯುವ ದಹನಶೀಲ ಗಸಿ/ಶೇಷ ಘನವಸ್ತು. ಕಲ್ಲಿದ್ದಲಿನ ನಿಗದಿತ ಇಂಗಾಲದ ಅಂಶವನ್ನು ಕಂಡುಹಿಡಿಯಲು ಒಂದು ಗೊತ್ತಾದ ತೂಕದ ಕಲ್ಲಿದ್ದಲಿನ ಮಾದರಿಯಿಂದ ಆರ್ದ್ರತೆ, ಆವಿಶೀಲ ಅಂಶ ಮತ್ತು ಬೂದಿಯ ಪ್ರಮಾಣವನ್ನು ಕಳೆಯಬೇಕು. ನಿಗದಿತ ಇಂಗಾಲದ ಅಂಶವು ಆವಿಶೀಲ ಅಂಶವು ಸುಟ್ಟ ನಂತರ ಸಿಗುವ ಕಲ್ಲಿದ್ದಲಿನ ಅಂದಾಜು ಶಾಖ ಸಾಮರ್ಥ್ಯ(ಕ್ಯಾಲೋರಿಫಿಕ್ ವ್ಯಾಲ್ಯೂ)ವನ್ನು ಸೂಚಿಸುತ್ತದೆ.

**ಬಿ) ಆವಿಯಾಗಬಲ್ಲ ಅಂಶ**

ಕಲ್ಲಿದ್ದಲಿನಲ್ಲಿರುವ ಆವಿಯಾಗಬಲ್ಲ ಅಂಶಗಳು ಎಂದರೆ ಮೀಥೇನ್, ಹೈಡ್ರೋ ಕಾರ್ಬನ್‌ಗಳು, ಜಲಜನಕ, ಕಾರ್ಬನ್ ಮಾನಾಕ್ಸೈಡ್ ಮತ್ತು ದಹನಶೀಲವಲ್ಲದ ಅನಿಲಗಳಾದ ಕಾರ್ಬನ್ ಡಯಾಕ್ಸೈಡ್ ಮತ್ತು ಸಾರಜನಕ. ಆವಿಯಾಗಬಲ್ಲ ಅಂಶಗಳ ಪ್ರಮಾಣ ಅಧಿಕ ಎಂದರೆ ಕಲ್ಲಿದ್ದಲು ಸುಲಭವಾಗಿ ಉರಿಯುತ್ತದೆ ಎಂದು, ಏಕೆಂದರೆ ಈ ಆವಿಯಾಗಬಲ್ಲ ಅಂಶಗಳು ಜ್ವಾಲೆಯನ್ನು ಹೆಚ್ಚಿಸುತ್ತವೆ.

**ಸಿ) ಬೂದಿ**

ಬೂದಿಯನ್ನು ಸುಡಲು ಆಗುವುದಿಲ್ಲ ಮತ್ತು ಇದು ಉರಿಯುವ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ ಹಾಗೂ ದಹನಶೀಲತೆಯನ್ನು ಹಾಗೂ ಬಾಯ್ಲರ್‌ನ ಪರಿಣಾಮಕಾರಿತ್ವನ್ನು ಪ್ರಭಾವಿಸುತ್ತದೆ. ಇದು ಬಾಯ್ಲರ್‌ನಲ್ಲಿ ಕಿಟ್ಟವನ್ನು (ಕ್ಲಿಂಕರ್) ಉಂಟುಮಾಡುತ್ತದೆ ಮತ್ತು ಕಲ್ಲಿದ್ದಲಿನ ನಿರ್ವಹಣಾ ವೆಚ್ಚವನ್ನು ಅಧಿಕಗೊಳಿಸುತ್ತದೆ. ಆದ್ದರಿಂದ ಕಲ್ಲಿದ್ದಲಿನಲ್ಲಿ ಅಧಿಕ ಬೂದಿಯ ಅಂಶವಿರುವುದು ಅಪೇಕ್ಷಣೀಯವಲ್ಲ.

**ಡಿ) ಆರ್ದ್ರತೆಯ ಪ್ರಮಾಣ**

ಕಲ್ಲಿದ್ದಲಿನಲ್ಲಿರುವ ಆರ್ದ್ರತೆಯ ಅಂಶವು ದಹನಶೀಲ ಅಂಶಗಳನ್ನು ಕಡಿಮೆ ಮಾಡುವುದರಿಂದ ಕಲ್ಲಿದ್ದಲಿನ ಪ್ರತಿ ಕೆ.ಜಿ.ಯ ಶಾಖ ಸಾಮರ್ಥ್ಯವನ್ನು (ಕಿಲೋಕ್ಯಾಲರಿ/ಕೆ.ಜಿ.) ಕಡಿಮೆ ಮಾಡುತ್ತದೆ. ಹೀಗಾಗಿ ಆರ್ದ್ರತೆಯ ಪ್ರಮಾಣವು ಒಂದು ಮಿತಿಯಲ್ಲಿರಬೇಕಾಗುತ್ತದೆ.

**ಇ) ಗಂಧಕ**

ಕಲ್ಲಿದಲ್ಲಿನಲ್ಲಿರುವ ಗಂಧಕವು ಚಿಮಣಿ, ಏರ್ ಹೀಟರ್‌ಗಳು ಮತ್ತು ತಾಪರಕ್ಷಕಗಳು ತುಕ್ಕುಹಿಡಿಯುವಂತೆ ಮಾಡುತ್ತದೆ. ಜೊತೆಗೆ ಉಪಕರಣಗಳು ಬೇಗನೆ ಹಾಳಾಗುವಂತೆ ಮಾಡುತ್ತದೆ, ಇದು ಕೂಡ ಅಪೇಕ್ಷಣೀಯವಲ್ಲ.

## ಭಾರತದಲ್ಲಿ ಕಲ್ಲಿದ್ದಲಿನ ಗುಣಮಟ್ಟ ಮತ್ತು ಲಭ್ಯತೆ:

ಶಾಖ ಸಾಮರ್ಥ್ಯವನ್ನು ಆಧರಿಸಿ, ಕಲ್ಲಿದ್ದಲನ್ನು ಕೋಕಿಂಗ್ ಕಲ್ಲಿದ್ದಲು ಮತ್ತು ನಾನ್-ಕೋಕಿಂಗ್ ಕಲ್ಲಿದ್ದಲು ಎಂದು ವಿಂಗಡಿಸಲಾಗಿದೆ. ಕೋಕಿಂಗ್ ಕಲ್ಲಿದ್ದಲನ್ನು ಮುಖ್ಯವಾಗಿ ಲೋಹವಿಜ್ಞಾನ, ಉಕ್ಕು, ಸಿಮೆಂಟ್ ಮತ್ತು ಸ್ಪಾಂಜ್ ಕಬ್ಬಿಣದ ಉದ್ಯಮಗಳಲ್ಲಿ ಬಳಸಲಾಗುತ್ತದೆ. ದೇಶದಲ್ಲಿ ಕಲ್ಲಿದ್ದಲಿನ ಸಂಪನ್ಮೂಲದ ಹೆಚ್ಚಿನ ಭಾಗವು ನಾನ್-ಕೋಕಿಂಗ್ ಕಲ್ಲಿದ್ದಲಾಗಿದೆ. ಕಲ್ಲಿದ್ದಲನ್ನು 'ಎ'ಯಿಂದ 'ಜಿ'ಯವರೆಗೆ ಏಳು ದರ್ಜೆಗಳಲ್ಲಿ ವರ್ಗೀಕರಿಸಲಾಗುತ್ತದೆ. ಅತ್ಯುತ್ತಮ ಗುಣಮಟ್ಟದ ಕಲ್ಲಿದ್ದಲು ಎಂದರೆ ಎ, ಬಿ ಮತ್ತು ಸಿ ದರ್ಜೆಗಳಾಗಿದ್ದು, ಅವನ್ನು ಸಿಮೆಂಟ್, ರಸಗೊಬ್ಬರ ಮತ್ತು ಸ್ಪಾಂಜ್ ಕಬ್ಬಿಣದ ಉದ್ಯಮಗಳಲ್ಲಿ ಬಳಸುತ್ತಾರೆ. ಭಾರತದಲ್ಲಿರುವ ಹೆಚ್ಚಿನ ಕಲ್ಲಿದ್ದಲು ಗಣಿಗಳು ಡಿ, ಇ, ಎಫ್ ಮತ್ತು ಜಿ ದರ್ಜೆಯ ಕೆಳದರ್ಜೆಯ ಕಲ್ಲಿದ್ದಲುಗಳಾಗಿದ್ದು, ಇವನ್ನು ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ (ಟಿಪಿಪಿ)ಗಳಲ್ಲಿ ಬಳಕೆ ಮಾಡುತ್ತಾರೆ.

ಲಿಗ್ನೈಟ್ ಮತ್ತು ಬಿಟ್ಯುಮಿನಸ್ ಕಲ್ಲಿದ್ದಲು ಹೆಚ್ಚು ದೊರೆಯುವುದರಿಂದ, ಅವನ್ನೇ ಹೆಚ್ಚಿನ ಭಾರತೀಯ ಟಿಪಿಪಿಗಳಲ್ಲಿ ಬಳಕೆ ಮಾಡಲಾಗುತ್ತಿದೆ.[2] ಲಿಗ್ನೈಟ್ ವಿದ್ಯುತ್ ಉತ್ಪಾದನೆಗೆ ಸೂಕ್ತ ಎಂದು ಪರಿಗಣಿಸಲಾಗಿದೆ, ಏಕೆಂದರೆ ಅದರಲ್ಲಿ ಬೂದಿಯ ಅಂಶ ಕಡಿಮೆ ಇರುತ್ತದೆ. ಕೋಲ್ ಇಂಡಿಯಾ ಲಿಮಿಟೆಡ್ ಒಂದು ಸಾರ್ವಜನಿಕ ವಲಯದ ಕಂಪನಿಯಾಗಿದ್ದು, ಅದು ರಾಷ್ಟ್ರೀಯ ಗಣಿಗಳಿಂದ ಗುತ್ತಿಗೆ ಆಧಾರದ ಮೇಲೆ ಟಿಪಿಪಿಗಳಿಗೆ ಕಲ್ಲಿದ್ದಲನ್ನು ಒದಗಿಸುತ್ತದೆ.

## ಶಾಖ ಸಾಮರ್ಥ್ಯದ ಆಧಾರದ ಮೇಲೆ ಭಾರತದಲ್ಲಿ ಬಳಸುವ ಕಲ್ಲಿದ್ದಲಿನ ದರ್ಜೆಗಳು:

| ದರ್ಜೆ | ಶಾಖ ಸಾಮರ್ಥ್ಯದ ವ್ಯಾಪ್ತಿ (ಕಿಲೋಕ್ಯಾಲರಿ/ಕೆಜಿ) | ಬೂದಿಯ ಅಂಶ |
|---|---|---|
| ಎ | ೬೨೦೦ಗೂ ಅಧಿಕ | |
| ಬಿ | ೫೬೦೦ - ೬೨೦೦ | ೧೯.೫೦% ದಿಂದ ೨೪% |
| ಸಿ | ೪೯೪೦ - ೫೬೦೦ | ೨೪% ದಿಂದ ೨೮.೬೦% |
| ಡಿ | ೪೨೦೦ - ೪೯೪೦ | ೨೮.೬೦% ದಿಂದ ೩೪% |
| ಇ | ೩೩೬೦ - ೪೨೦೦ | ೩೪% ದಿಂದ ೪೦% ಮೇಲ್ಪಟ್ಟು |
| ಎಫ್ | ೨೪೦೦ - ೩೩೬೦ | ೪೦% ದಿಂದ ೪೭% ಮೇಲ್ಪಟ್ಟು |
| ಜಿ | ೧೩೦೦ - ೨೪೦೦ | |

ಸಾಮಾನ್ಯವಾಗಿ ಡಿ, ಇ ಮತ್ತು ಎಫ್ ದರ್ಜೆಯ ಕಲ್ಲಿದ್ದಲು ಭಾರತೀಯ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕೋಲ್ ಇಂಡಿಯಾ ಲಿಮಿಟೆಡ್‌ನಿಂದ ಪೂರೈಕೆಯಾಗುತ್ತದೆ.

ಭಾರತೀಯ ಕಲ್ಲಿದ್ದಲು ಕಳಪೆ ದರ್ಜೆಯದಾಗಿದ್ದು, ಕಡಿಮೆ ಶಾಖ ಸಾಮರ್ಥ್ಯ ಮತ್ತು ಅಧಿಕ ಬೂದಿಯ ಅಂಶವನ್ನು ಹೊಂದಿರುತ್ತದೆ.


2 http://www.productivity.in/knowledgebase/Energy%20Management/c.%20Thermal%20Energy%20systems/4.1%20Fuels%20and%20Combustion/4.1.3%20Properties%20of%20Coals.pdf

- ಬೂದಿಯ ಅಂಶವು ಶೇ. ೪೦-೫೦ರಷ್ಟಿರುತ್ತದೆ
- ಆರ್ದ್ರತೆಯ ಅಂಶವು ಶೇ. ೪-೨೦ರಷ್ಟಿರುತ್ತದೆ
- ಗಂಧಕದ ಅಂಶವು ಶೇ. ೦.೨-೦.೭ರಷ್ಟಿರುತ್ತದೆ
- ಒಟ್ಟು ಶಾಖ ಸಾಮರ್ಥ್ಯದ ಪ್ರಮಾಣವು ೨೫೦೦-೫೦೦೦ ಕಿ.ಕ್ಯಾ./ಕೆ.ಜಿ. ಇರುತ್ತದೆ
- ಆವಿಯಾಗಬಲ್ಲ ಅಂಶದ ಪ್ರಮಾಣವು ಶೇ. ೧೮-೨೦ರಷ್ಟಿರುತ್ತದೆ

ಈ ಮೇಲಿನ ಸಂಗತಿಗಳು ಭಾರತದ ಕಲ್ಲಿದ್ದಲು ಕಳಪೆ ಗುಣಮಟ್ಟದ್ದು ಎಂಬುದನ್ನು ಸೂಚಿಸುತ್ತವೆ. ಕಲ್ಲಿದ್ದಲಿನ ಕಳಪೆ ಸಾಮರ್ಥ್ಯದಿಂದಾಗಿ ಭಾರತೀಯ ಉಷ್ಣ ವಿದ್ಯುತ್ ಸ್ಥಾವರಗಳು ಇಷ್ಟೇ ಫಲಿತಾಂಶಕ್ಕೆ ಆಸ್ಟ್ರೇಲಿಯಾ ಮತ್ತು ಅಮೆರಿಕಾದಲ್ಲಿ ಬಳಸುವ ಕಲ್ಲಿದ್ದಲಿಗಿಂತ ಹೆಚ್ಚು ಕಲ್ಲಿದ್ದಲನ್ನು ಬಳಸುತ್ತವೆ.[3]

### 1.2.2 ಕಲ್ಲಿದ್ದಲು ಆಧರಿತ ಸ್ಥಾವರದಲ್ಲಿ ವಿದ್ಯುತ್ ಉತ್ಪಾದನೆ

Components of a coal-fired thermal plant




Source: Canadian Clean Power Coalition

ಕಲ್ಲಿದ್ದಲು ವಿದ್ಯುತ್ ಶಕ್ತಿಗೆ ಪರಿವರ್ತನೆಯಾಗುವುದು ಮೂರು ಹಂತಗಳಲ್ಲಿ ನಡೆಯುತ್ತದೆ:

ಬಾಯ್ಲರ್ ಕುಲುಮೆ -> ಕಲ್ಲಿದ್ದಲನ್ನು ಒಂದು ಕುಲುಮೆಯಲ್ಲಿ ಸುಟ್ಟು, ಶಾಖ ಉತ್ಪಾದನೆಯಾಗುವಂತೆ ಮಾಡಲಾಗುವುದು. ಕಲ್ಲಿದ್ದಲಿನಲ್ಲಿರುವ ಇಂಗಾಲ ಮತ್ತು ಗಾಳಿಯಲ್ಲಿರುವ ಆಮ್ಲಜನಕ ಸೇರಿ, ಇಂಗಾಲದ ಡಯಾಕ್ಸೈಡ್ ಉತ್ಪಾದನೆಯಾಗುತ್ತದೆ.

ಬಾಯ್ಲರ್ -> ಶಾಖೋತ್ಪಾದನೆಯಿಂದಾಗಿ ಬಾಯ್ಲರಿನಲ್ಲಿರುವ ನೀರು ಹಬೆಯಾಗಿ ಪರಿವರ್ತನೆಗೊಳ್ಳುತ್ತದೆ. ಇದು ಅತ್ಯಧಿಕ ಒತ್ತಡ ಮತ್ತು ಉಷ್ಣತೆಯಲ್ಲಿ ಜರುಗುತ್ತದೆ. ಮುಚ್ಚಿದ ಪಾತ್ರೆಯಲ್ಲಿ ನೀರನ್ನು ಹಬೆಯಾಗಿ ಪರಿವರ್ತನೆ ಮಾಡುವುದು ಒತ್ತಡವನ್ನು ಹೆಚ್ಚಿಸುತ್ತದೆ.

ಟರ್ಬೈನ್ ಮತ್ತು ಜನರೇಟರ್ -> ಹಬೆಯನ್ನು ಟರ್ಬೈನ್‌ಗೆ ಕಳುಹಿಸಲಾಗುತ್ತದೆ ಮತ್ತು ಅದು ಟರ್ಬೈನಲ್ಲಿರುವ ಬ್ಲೇಡ್‌ಗಳು ತಿರುಗುವಂತೆ ಮಾಡಿ, ಯಾಂತ್ರಿಕ ಶಕ್ತಿಯನ್ನು ಹುಟ್ಟುಹಾಕುತ್ತದೆ. ಹಬೆಯನ್ನು ಮತ್ತೆ ಶೀಥಲೀಕರಿಸಿ, ಬಾಯ್ಲರ್‌ಗೆ ಪುನಃ ಇದೇ ಚಕ್ರವನ್ನು ಪುನಾರವರ್ತನೆ ಮಾಡಲು ಕಳುಹಿಸಲಾಗುವುದು. ಟರ್ಬೈನ್ ತಿರುಗುವಿಕೆಯು ಜನರೇಟರ್‌ನ ರೋಟರ್ ಅನ್ನು ಸುತ್ತುವಂತೆ ಮಾಡುತ್ತದೆ ಮತ್ತು ಆ ಮೂಲಕ ವಿದ್ಯುತ್‌ಶಕ್ತಿಯನ್ನು ಉತ್ಪಾದಿಸುತ್ತದೆ.

3 IL & FS document

## ಪ್ರಕ್ರಿಯೆಯ ಸಂಕ್ಷಿಪ್ತ ವಿವರಣೆ

ಕಲ್ಲಿದ್ದಲು ಉಷ್ಣ ವಿದ್ಯುತ್ ಸ್ಥಾವರದಲ್ಲಿ ಕಲ್ಲಿದ್ದಲನ್ನು ಬಾಯ್ಲರ್‌ನಲ್ಲಿ ಸುಟ್ಟು, ಅದರಿಂದ ಉತ್ಪನ್ನವಾಗುವ ಶಾಖವನ್ನು ಬಳಸಿಕೊಂಡು, ನೀರನ್ನು ಕುದಿಸಿ ಹಬೆಯನ್ನು ಉತ್ಪಾದಿಸಲಾಗುವುದು. ಹಬೆಯು ಟರ್ಬೈನ್‌ಗಳ ಯಂತ್ರವನ್ನು ತಿರುಗಿಸುತ್ತದೆ, ಹೀಗೆ ಉತ್ಪನ್ನವಾದ ಯಾಂತ್ರಿಕ ಶಕ್ತಿಯು ಜನರೇಟರ್‌ಗಳ ರೋಟರ್‌ಗಳನ್ನು ತಿರುಗಿಸಿ, ವಿದ್ಯುತ್‌ಶಕ್ತಿಯನ್ನು ಉತ್ಪಾದಿಸುತ್ತದೆ.

ಈ ಪ್ರಕ್ರಿಯೆಯು ಕಲ್ಲಿದ್ದಲನ್ನು ಸಿದ್ಧಪಡಿಸಿಕೊಳ್ಳುವಿಕೆ, ಕಲ್ಲಿದ್ದಲಿನ ಉರಿಯುವಿಕೆಗೆ ಸಮರ್ಪಕವಾದ ಗಾಳಿಯ ಪೂರೈಕೆಯನ್ನು ಖಾತ್ರಿಪಡಿಸುವುದು, ಹಬೆಯ ಉತ್ಪಾದನೆ, ತಣ್ಣಗಾದ ಹಬೆಯನ್ನು ಪುನಃ ಬಳಕೆ ಮಾಡುವುದು ಮತ್ತು ಬಾಯ್ಲರ್‌ನಲ್ಲಿ ಉಳಿದ ಗಸಿಯನ್ನು ಹೊರತೆಗೆಯುವುದು (ಬೂದಿ ಮತ್ತು ಹೊರಹೊಮ್ಮುವ ಅನಿಲಗಳು) ಈ ಎಲ್ಲವನ್ನೂ ಒಳಗೊಂಡಿದೆ.

## ಕಲ್ಲಿದ್ದಲನ್ನು ಸಿದ್ಧಪಡಿಸಿಕೊಳ್ಳುವಿಕೆ:

ಕಲ್ಲಿದ್ದಲಿನ ಘಟಕ-> ಕಲ್ಲಿದ್ದಲಿನ ದಾಸ್ತಾನು ಸ್ಥಳ-> ಕಲ್ಲಿದ್ದಲನ್ನು ಪುಡಿ ಮಾಡುವ ಘಟಕ

ಕಲ್ಲಿದ್ದಲನ್ನು ಪುಡಿ ಮಾಡುವ ಘಟಕದಲ್ಲಿ, ಪರಿಣಾಮಕಾರಿಯಾಗಿ ಮತ್ತು ಸುಲಭವಾಗಿ ಉರಿಯಲಿಕ್ಕೆ ಎಂದು ಕಲ್ಲಿದ್ದಲನ್ನು ತುಂಬ ನಯವಾದ ಪುಡಿಯನ್ನಾಗಿ ಮಾಡಲಾಗುತ್ತದೆ. ಕಲ್ಲಿದ್ದಲಿನಲ್ಲಿರುವ ಆರ್ದ್ರತೆಯನ್ನು ನಿವಾರಿಸಿ, ಶುಷ್ಕಗೊಳಿಸಲು ಪುಡಿ ಮಾಡುವ ಘಟಕದ ಫ್ಯಾನ್‌ಗಳಿಂದ ಬಿಸಿಯಾದ ಗಾಳಿಯನ್ನು ಹಾಕಲಾಗುವುದು. ಹೀಗೆ ಉತ್ಪಾದನೆಯಾದ ಗಾಳಿಯು ಶುಷ್ಕವಾದ ಕಲ್ಲಿದ್ದಲಿನ ಪುಡಿಯನ್ನು ಬಾಯ್ಲರ್‌ನ ಕುಲುಮೆಗೆ ಸಾಗಿಸಿ, ಅಲ್ಲಿ ಅದನ್ನು ಉರಿಸಲಾಗುತ್ತದೆ.

## ಬಾಯ್ಲರ್‌ನ ಒಳಭಾಗದಲ್ಲಿ:

ಕಲ್ಲಿದ್ದಲು ವಿದ್ಯುತ್ ಸ್ಥಾವರದಲ್ಲಿ ಬಾಯ್ಲರ್ ಒಂದು ಬಹುಮುಖ್ಯವಾದ ಉಪಕರಣ. ಅದು ಕಲ್ಲಿದ್ದಲನ್ನು ಉರಿಸಿ, ಶಾಖವನ್ನು ಉತ್ಪತ್ತಿ ಮಾಡುತ್ತದೆ ಮತ್ತು ಆ ಶಾಖವನ್ನು ಅದರೊಳಗಿರುವ ನೀರನ್ನು ಕುದಿಸಿ, ಹಬೆ ಉತ್ಪಾದಿಸಲು ಬಳಸಲಾಗುತ್ತದೆ.

**ಪ್ರಕ್ರಿಯೆ ೧ - ದಹನ:**

ಬಾಯ್ಲರ್‌ನಲ್ಲಿ ಒಂದು ಗಾಳಿವ್ಯವಸ್ಥೆಯ ಮೂಲಕ ಬರುವ ಗಾಳಿಯ ಸಹಾಯದಿಂದ ಕಲ್ಲಿದ್ದಲಿನ ದಹನ ಪ್ರಕ್ರಿಯೆ ನಡೆಯುತ್ತದೆ. ಒಂದು ಬಲವಾದ ಫ್ಯಾನ್ ಹೊರಗಿನ ಗಾಳಿಯನ್ನು ಎಳೆದುಕೊಂಡು, ಕುಲುಮೆಯ ಒಳಗೆ ಹಾಯಿಸುತ್ತದೆ. ಅಲ್ಲಿರುವ ಹೀಟರ್‌ಗಳು ಗಾಳಿಯು ಕುಲುಮೆಯನ್ನು ಒಳಪ್ರವೇಶಿಸುವ ಮೊದಲು ಬಿಸಿ ಮಾಡುವುದರಿಂದ ದಹನದ ಪರಿಣಾಮಕಾರತ್ವವು ಹೆಚ್ಚುತ್ತದೆ.

ಶಾಖ, ಬೂದಿ ಮತ್ತು ಹೊಗೆ ಅನಿಲಗಳು ಈ ದಹನ ಪ್ರಕ್ರಿಯೆಯಲ್ಲಿ ಉತ್ಪಾದನೆಯಾಗುತ್ತವೆ. ಶಾಖವು ನೀರನ್ನು ಕುದಿಸಿ, ಹಬೆಯನ್ನಾಗಿ ಪರಿವರ್ತಿಸಿ, ಟರ್ಬೈನ್‌ಗಳು ತಿರುಗುವಂತೆ ಮಾಡುತ್ತದೆ. ಹೊಗೆ ಅನಿಲಗಳು ಎಂದರೆ ಶೇಷ/ಉಳಿಕೆಯಾಗಿದ್ದು, ಅದನ್ನು ಒಂದು ಇಂಡ್ಯೂಸ್ಡ್ ಡ್ರಾಫ್ಟ್ ಫ್ಯಾನ್ ಮೂಲಕ ಕುಲುಮೆಯಿಂದ ಹೊರತೆಗೆದು, ಒಂದು ಎಲೆಕ್ಟ್ರೋಸ್ಟಾಟಿಕ್ ಪ್ರಕ್ಷೇಪಯಂತ್ರಕ್ಕೆ ಕಳಿಸಲಾಗುತ್ತದೆ ಮತ್ತು ಅಲ್ಲಿ ಹಾರುಬೂದಿಯು ಹೊಗೆಯಿಂದ ಬೇರ್ಪಟ್ಟು, ಪ್ರಕ್ಷೇಪಗೊಳ್ಳುತ್ತದೆ.

ಹಾರು ಬೂದಿರಹಿತ ಹೊಗೆ ಅನಿಲವನ್ನು ನಂತರ ತುಂಬ ಎತ್ತರದಲ್ಲಿರುವ ಚಿಮಣಿ ಮೂಲಕ ಹೊರಗಿನ ವಾತಾವರಣಕ್ಕೆ ಬಿಡಲಾಗುವುದು. ಚಿಮಣಿಗಳು ಬಹಳ ಎತ್ತರದಲ್ಲಿದ್ದು, ಅನಿಲ ಹೊರಸೂಸುವಿಕೆಯು ನೆಲಮಟ್ಟದ ಗಾಳಿಗೆ ಹಾನಿಕಾರಕ ಪರಿಣಾಮ ಬೀರುವುದಿಲ್ಲ. ದೊಡ್ಡ ಟಿಪಿಪಿಗಳಿಗೆ ಚಿಮಣಿಯ ಎತ್ತರ ೨೫೦ರಿಂದ ೨೮೦ ಮೀಟರ್ ಆಗಿರುತ್ತದೆ. ದಹನದಿಂದ ಬರುವ ಇನ್ನೊಂದು ಶೇಷ/ಉಳಿಕೆ ಎಂದರೆ ಕಲ್ಲಿದ್ದಲಿನಲ್ಲಿರುವ ಜಡವಸ್ತುವಿನಿಂದ ಹುಟ್ಟಿದ ಬೂದಿ. ಕುಲುಮೆಯಲ್ಲಿ ಶೇ. ೧೫ರಷ್ಟು ಬೂದಿಯು ತಳದಲ್ಲಿ ಸಂಗ್ರಹಗೊಳ್ಳುತ್ತದೆ ಮತ್ತು ಇಲೆಕ್ಟ್ರೋಸ್ಟಾಟಿಕ್ ಪ್ರಕ್ಷೇಪಯಂತ್ರದಲ್ಲಿ ಹಿಡಿದಿಟ್ಟುಕೊಳ್ಳುತ್ತದೆ. ಮೊದಲನೆಯದನ್ನು ತಳದ ಬೂದಿ ಎಂದೂ, ಎರಡನೆಯದನ್ನು ಹಾರುಬೂದಿಯೆಂದೂ ಕರೆಯಲಾಗುತ್ತದೆ.

**ಪ್ರಕ್ರಿಯೆ ೨ - ಹಬೆ ಉತ್ಪಾದನೆ**

ಹೆಚ್ಚು ಒತ್ತಡದಲ್ಲಿರುವ ನೀರನ್ನು ನಿರಂತರವಾಗಿ ಬಾಯ್ಲರ್‌ಗೆ ಒಂದು ಫೀಡ್ ನೀರಿನ ಪಂಪ್ ಮುಖಾಂತರ ಪೂರೈಕೆ ಮಾಡಲಾಗುತ್ತಿದ್ದು, ಮೊದಲೇ ಕಾಯಿಸಿ, ಪುನಃ ಹಾಯಿಸುವ ನೀರನ್ನು ಬಳಕೆ ಮಾಡಿಕೊಳ್ಳಲಾಗುತ್ತದೆ. ಇದು ನೀರು ಹಬೆಯಾಗಿ ಪರಿವರ್ತನೆಗೊಳ್ಳುವ ಪರಿಣಾಮಕಾರತ್ವವನ್ನು ಹೆಚ್ಚಿಸುತ್ತದೆ ಮತ್ತು ಕಲ್ಲಿದ್ದಲಿನ ದಹನದ ಮೂಲಕ ಶಾಖದ ಅಗತ್ಯವನ್ನು ಕಡಿಮೆ ಮಾಡುತ್ತದೆ. ಫೀಡ್ ನೀರನ್ನು ಮೊದಲೇ ಬಿಸಿ ಮಾಡುವುದಕ್ಕೆ ಬಳಸುವ ಒಂದು ಸಾಧನವೇ ತಾಪರಕ್ಷಕ ಅಥವಾ ಎಕೊನೋಮೈಸರ್. ಬಾಯ್ಲರ್‌ನಿಂದ ಹೊರಹೊಮ್ಮಿದ ಬಿಸಿ ಅನಿಲಗಳನ್ನು ಪುನಃ ಪಡೆದುಕೊಂಡ ತಾಪರಕ್ಷಕವು ಅದರಿಂದ ನೀರನ್ನು ಬಿಸಿಮಾಡುತ್ತದೆ. ಈ ಬಿಸಿ ನೀರು ಕುಲುಮೆಯ ಒಳಗೆ ಸುತ್ತುವರೆದಿರುವ ನೀರಿನ ಗೋಡೆಗಳಿಗೆ ಕಳಿಸುತ್ತದೆ, ಅಲ್ಲಿ ನೀರನ್ನು ಸುತ್ತ ಹರಿಸಲಾಗುತ್ತದೆ ಮತ್ತು ಹಬೆಯಾಗಿ ಪರಿವರ್ತನೆ ಮಾಡಲಾಗುತ್ತದೆ. ಹಬೆಯನ್ನು ಅಲ್ಲಿ ಡ್ರಮ್ ಒಂದರಲ್ಲಿ ಸಂಗ್ರಹಿಸಿ, ಹಬೆಯ ಉಷ್ಣತೆ ಮತ್ತು ಒತ್ತಡವನ್ನು ಹೆಚ್ಚಿಸಲಾಗುತ್ತದೆ. ಹೀಗೆ ಅತಿಯಾಗಿ ಬಿಸಿಮಾಡಿದ ಹಬೆಯು ಅಂತಿಮವಾಗಿ ಟರ್ಬೈನ್‌ಗಳಿಗೆ ಹೋಗುತ್ತದೆ.

## 1.2.3 ಕಲ್ಲಿದ್ದಲು ವಿದ್ಯುತ್ ಸ್ಥಾವರಗಳಿಂದಾಗುವ ಪಾರಿಸರಿಕ ಮತ್ತು ಆರೋಗ್ಯ ಪರಿಣಾಮಗಳು

**ವಾಯು**

- ಮಾನವರಲ್ಲಿ ಉಸಿರಾಟದ ಮೇಲೆ ಆಗುವ ಹಾನಿಕಾರಕ ಪರಿಣಾಮಗಳು
- ಸಸ್ಯಗಳ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಐತಿಹಾಸಿಕ ಸ್ಮಾರಕ/ನಿರ್ಮಿತಿಗಳ ಮೇಲೆ ದುಷ್ಪರಿಣಾಮ
- ಹವಾಮಾನ ವೈಪರೀತ್ಯ ಉಂಟುಮಾಡಬಹುದು

**ನೀರು**

- ನೀರಿನ ಗುಣಮಟ್ಟವನ್ನು ಪರಿಣಾಮ ಬೀರುತ್ತದೆ ಮತ್ತು ಆ ಮೂಲಕ ಮಾನವರ ಬಳಕೆಗೆ ಲಭ್ಯವಾಗುವ ನೀರಿನ ಪ್ರಮಾಣವು ಕಡಿಮೆಯಾಗುತ್ತದೆ.
- ಕೃಷಿಗೆ ಲಭ್ಯ ನೀರಿನ ಪ್ರಮಾಣವು ಕಡಿಮೆಯಾಗುವುದರಿಂದ ಬೆಳೆಗಳ ಬೇಸಾಯವನ್ನು ಮಿತಿಗೊಳಿಸುತದೆ.
- ಸಮುದ್ರಕ್ಕೆ ಬಿಡುವ ಬಿಸಿ ನೀರು ಸಮುದ್ರ ಜಲಚರಗಳನ್ನು ಕೊಲ್ಲುತ್ತದೆ ಅಥವಾ ಬೇರೆಡೆ ಹೋಗುವಂತೆ ಮಾಡುವುದರಿಂದ ಮೀನುಗಾರಿಕೆಯ ಮೇಲೆ ದುಷ್ಪರಿಣಾಮ ಬೀರುತ್ತದೆ.

**ಭೂಮಿ**

- ಪುನರ್ವಸತಿ ಮತ್ತು ಪುನಃಸ್ಥಾಪನೆಗೆ ಕಾರಣವಾಗುತ್ತದೆ
- ಶಾಲೆಗಳು, ಬಾವಿಗಳು ಇನ್ನಿತರ ಸಾರ್ವಜನಿಕ ಸೌಲಭ್ಯಗಳ ಮೇಲೆ ದುಷ್ಪರಿಣಾಮ
- ರೈತರು ಮತ್ತು ಮೀನುಗಾರರ ಜೀವನೋಪಾಯದ ಮೇಲೆ ದುಷ್ಪರಿಣಾಮ
- ಅಪಾಯಕರ ಕೆಲಸದ ಸ್ಥಿತಿಗತಿಯಿಂದಾಗಿ ಅಪಘಾತಗಳು ಹೆಚ್ಚುವ ಸಂಭವ

**ಜನರು**

- ಮಣ್ಣಿನಲ್ಲಿ ಕ್ಷಾರೀಯಗಳ ಪ್ರಮಾಣ ಹೆಚ್ಚುವುದರಿಂದ ಬೆಳೆಗಳ ಬೇಸಾಯವನ್ನು ಮಿತಿಗೊಳಿಸುತ್ತದೆ.

ಕಲ್ಲಿದ್ದಲನ್ನು ತೊಳೆಯಲು ಬಳಸುವ ನೀರನ್ನು ನೇರವಾಗಿ ನೀರಿನ ಮೂಲಗಳಿಗೆ ಬಿಟ್ಟರೆ, ಅವು ಮಾಲಿನ್ಯಗೊಳ್ಳುತ್ತವೆ. ಈ ಸ್ಥಾವರಗಳಿಂದ ಹೊರಬೀಳುವ ಹಾರುಬೂದಿಯು ನೆಲದ ಮೇಲೆ ಬಿದ್ದು, ಮಣ್ಣನ್ನು ಮಾಲಿನ್ಯಗೊಳಿಸುತ್ತದೆ. ಈ ಸ್ಥಾವರಗಳಿಂದ ಹೊರಬೀಳುವ ಗಾಳಿಯಲ್ಲಿ ಸಲ್ಫರ್ ಡಯಾಕ್ಸೈಡ್, ನೈಟ್ರೋಜೆನ್ ಆಕ್ಸೈಡ್, ಕಣರೂಪದ ವಸ್ತುಗಳು (ಪರ್ಟಿಕ್ಯುಲೇಟ್ ಮ್ಯಾಟರ್), ಕಾರ್ಬನ್ ಮಾನಾಕ್ಸೈಡ್, (ಸಾಮಾನ್ಯ ಉಷ್ಣತೆಯಲ್ಲಿಯೇ) ಬಾಷ್ಪಶೀಲ ಸಾವಯುವ ಸಂಯುಕ್ತಗಳು ಮತ್ತು ಇನ್ನಿತರ ಲೋಹಗಳಾದ ಪಾದರಸ ಇತ್ಯಾದಿ ಮಾಲಿನ್ಯಕಾರಕಗಳು ಇದ್ದು, ಅವೆಲ್ಲವೂ ಆರೋಗ್ಯ ಮತ್ತು ಯೋಗಕ್ಷೇಮದ ದುಷ್ಪರಿಣಾಮ ಬೀರುತ್ತವೆ. [4]

ಟಿಪಿಪಿಗಳ ದುಷ್ಪರಿಣಾಮಗಳ ಲಕ್ಷಣಗಳು ಮತ್ತು ಗುಣಗಳ ಆಧಾರದ ಮೇಲೆ ನಾಲ್ಕು ಬಗೆಯ ಪಾರಿಸರಿಕ ಪರಿಣಾಮಗಳಿವೆ:

- ನೇರ ಪರಿಣಾಮ - ಉದಾ: ವಿದ್ಯುತ್ ಸ್ಥಾವರದಿಂದ ತ್ಯಾಜ್ಯನೀರನ್ನು ಸಂಸ್ಕರಣ ಮಾಡದೆಯೇ ನೇರವಾಗಿ ನೀರಿಗೆ ಅಥವಾ ಹಳ್ಳಕ್ಕೆ ಬಿಡುವುದರಿಂದ ಜಲಚರ ಜೀವಿಗಳ ಮೇಲಾಗುವ ದುಷ್ಪರಿಣಾಮ
- ಪರೋಕ್ಷ ಪರಿಣಾಮ - ಉದಾ: ವಿದ್ಯುತ್ ಸ್ಥಾವರದಿಂದ ಹೊರಬೀಳುವ ಸಲ್ಫರ್ ಡಯಾಕ್ಸೈಡ್ ನಂತರ ಮಣ್ಣಿನ ಮೇಲೆ ಸಲ್ಫರ್ ಟೆಟ್ರಾಕ್ಸೈಡ್ ಆಗಿ ಸಂಗ್ರಹಗೊಂಡು, ಕೃಷಿಯ ಮೇಲೆ ದುಷ್ಪರಿಣಾಮ ಬೀರುತ್ತದೆ.
- ಸಂಚಯಿತ ಪರಿಣಾಮ - ಉದಾ: ಆ ಪ್ರದೇಶದಲ್ಲಿ ಇರುವ ಮತ್ತು ಮುಂಬರುವ ಯೋಜನೆಗಳ ಎಲ್ಲ

4 Performance Review of Thermal Power Stations 2004-05 Section 14 Page no. 14.1 , section-14, Environmental aspects in power sector

ಅನಿಲ ಹೊರಸೂಸುವಿಕೆಯ ಸಂಚಯಿತ ಪರಿಣಾಮ

- ಪ್ರೇರಿತ ಪರಿಣಾಮ – ಉದಾ: ಆ ಪ್ರದೇಶದಲ್ಲಿ ಭೂ ಬಳಕೆಯ ವಿಧಾನಗಳಲ್ಲಿ ಮತ್ತು ಜನಸಂಖ್ಯೆಯಲ್ಲಿ ವ್ಯತ್ಯಾಸವಾಗುವುದು, ಏಕೆಂದರೆ ಸ್ಥಾವರವು ಅಲ್ಲಿಯ ನೀರು, ಗಾಳಿಯಂತಹ ಸ್ವಾಭಾವಿಕ ಸಂಪನ್ಮೂಲಗಳ ಮೇಲೆ ಪರಿಣಾಮ ಬೀರುತ್ತದೆ.

## ಪಾರಿಸರಿಕ ಪರಿಣಾಮಗಳು:

೧. **ವಾಯು ಮಾಲಿನ್ಯ:** ಕಲ್ಲಿದ್ದಲು ವಿದ್ಯುತ್ ಸ್ಥಾವರವು ಗಾಳಿಯಲ್ಲಿ ಹಲವಾರು ಮಾಲಿನ್ಯಕಾರಕಗಳನ್ನು ಹೊರಸೂಸುತ್ತವೆ. ಅವೆಂದರೆ ಸಲ್ಫರ್ ಡಯಾಕ್ಸೈಡ್ ($SO_2$), ಕಾರ್ಬನ್ ಮಾನಾಕ್ಸೈಡ್ (CO), ನೈಟ್ರೋಜೆನ್ನಿನ ಆಕ್ಸೈಡ್‌ಗಳು ($NO_x$), ಓಝೋನ್ ($O_3$) ತೇಲುವ ಕಣವಸ್ತುಗಳು (SPO), ಸೀಸ ಮತ್ತು ಮೀಥೇನ್‌ರಹಿತ ಹೈಡ್ರೋಕಾರ್ಬನ್‌ಗಳು ಇತ್ಯಾದಿಗಳು ಹೊರಹೊಮ್ಮುತ್ತವೆ. ಯಾವುದೇ ದಹನ ಪ್ರಕ್ರಿಯೆಯು $O_3$ ಉತ್ಪನ್ನದ ಮೂಲ ಎಂದೇ ಹೇಳಬಹುದು. ಅವು ಇಂದನದಲ್ಲಿರುವ ಸಾರಜನಕ ಮತ್ತು ಗಾಳಿಯಲ್ಲಿರುವ ಆಮ್ಲಜನಕ ಪರಸ್ಪರ ಕ್ರಿಯೆ ನಡೆಸುವ ಮೂಲಕ ಉತ್ಪನ್ನವಾಗುತ್ತವೆ. ದಹನದ ಉಷ್ಣತೆಯಲ್ಲಿ ಹೆಚ್ಚಳವಾದಂತೆ $O_3$ ಉತ್ಪನ್ನಗೊಳ್ಳುವುದೂ ಹೆಚ್ಚುತ್ತದೆ. ಪ್ರಮುಖ ಹಸಿರು ಮನೆ ಅನಿಲಗಳು ಕೂಡ ರೂಪುಗೊಳ್ಳುತ್ತವೆ, ಅವೆಂದರೆ ಗಾಳಿಯಲ್ಲಿರುವ ಆಮ್ಲಜನಕದೊಂದಿಗೆ $O_2$ ಸಂಯೋಗ ಹೊಂದಿ ಅಔ೨, ಗಾಳಿಯಲ್ಲಿರುವ ಆಮ್ಲಜನಕದೊಂದಿಗೆ $O_3$ ಸಂಯೋಗ ಹೊಂದಿ ನೈಟ್ರಸ್ ಆಕ್ಸೈಡ್ ಆಗುತ್ತದೆ.

ಅದೇ ರೀತಿಯಾಗಿ, ಇಂಧನದಲ್ಲಿರುವ ಗಂಧಕ/ಸಲ್ಫರ್ ಗಾಳಿಯಲ್ಲಿರುವ ಆಮ್ಲಜನಕದೊಂದಿಗೆ ಸಂಯೋಗಹೊಂದಿ, ಸಲ್ಫರ್‌ನ ಆಕ್ಸೈಡ್‌ಗಳು ($SO_2$) ರೂಪುಗೊಳ್ಳುತ್ತವೆ. ಕಲ್ಲಿದ್ದಲು ವಿದ್ಯುತ್ ಸ್ಥಾವರಗಳಿಂದ ಹೊರಹೊಮ್ಮುವ ಒಂದು ಸಾಮಾನ್ಯ ಮಾಲಿನ್ಯಕಾರಕ ಎಂದರೆ ಸಲ್ಫರ್ ಡಯಾಕ್ಸೈಡ್ ($SO_2$). ಕೆಲವೊಮ್ಮೆ ಹೆಚ್ಚಿನ ಆಮ್ಲಜನಕದಿಂದಾಗಿ, ಸಲ್ಫರ್ ಟ್ರಯಾಕ್ಸೈಡ್ ($SO_3$) ಕೂಡ ರೂಪುಗೊಳ್ಳುತ್ತದೆ ಮತ್ತು ಇದು ಗಾಳಿಯಲ್ಲಿರುವ ನೀರಿನ ಅಂಶದೊಂದಿಗೆ ಸಂಮಿಶ್ರಗೊಂಡು, ಆಮ್ಲ ಮಳೆ(ಆಸಿಡ್ ರೈನ್) ಯನ್ನು ಉಂಟು ಮಾಡುತ್ತದೆ.

ಕಲ್ಲಿದ್ದಲು ವಿದ್ಯುತ್ ಸ್ಥಾವರಗಳಿಂದ ಹೊರಹೊಮ್ಮುವ ತೇಲುವ ಕಣರೂಪದ ವಸ್ತುಗಳಲ್ಲಿ (ಎಸ್‌ಪಿಎಂ) ಹೊಗೆ, ಬೂದಿಯ ಕಣಗಳು, ತುಂಬ ಚಿಕ್ಕ, ನಯವಾದ ದೂಳಿನ ಕಣಗಳು ಇದ್ದು, ಅಸ್ತಮಾ ಮತ್ತು ಹಾಗೂ ಉಸಿರಾಟದ ಕಾಯಿಲೆಗಳನ್ನು ಉಂಟುಮಾಡುತ್ತದೆ.

೨. **ಜಲಮಾಲಿನ್ಯ**

ಕಲ್ಲಿದ್ದಲು ವಿದ್ಯುತ್ ಸ್ಥಾವರದಲ್ಲಿ, ನೀರನ್ನು ಕಲ್ಲಿದ್ದಲು ತೊಳೆಯಲಿಕ್ಕೆ, ಬಾಯ್ಲರ್ ಕುಲುಮೆಯಲ್ಲಿ ನೀರನ್ನು ಸುತ್ತ ಹಾಯಿಸಿ, ಹಬೆಯನ್ನು ಉತ್ಪಾದನೆ ಮಾಡುವುದಕ್ಕೆ ಮತ್ತು ಘಟಕವನ್ನು ತಂಪುಗೊಳಿಸಲು ಬಳಸಲಾಗುವುದು. ಕಲ್ಲಿದ್ದಲು ತೊಳೆದ ನೀರಿನಲ್ಲಿರುವ ದೂಳು ಅಂತರ್ಜಲವನ್ನು ಮಾಲಿನ್ಯಗೊಳಿಸುತ್ತದೆ. ಬಿಸಿನೀರನ್ನು, ತಂಪುಗೊಳಿಸದೆಯೇ ಹಾಗೆಯೇ ನೀರಿನ ಮೂಲಗಳಿಗೆ ಬಿಟ್ಟರೆ, ಅದರಿಂದ ಉಷ್ಣತೆಯು ಹೆಚ್ಚಿ ಜಲಚರಗಳು ಮತ್ತು ಜಲಸಸ್ಯಗಳ ಮೇಲೆ ದುಷ್ಪರಿಣಾಮ ಬೀರುತ್ತದೆ.

೩. **ಭೂ ಸವೆತ:**

ಕಲ್ಲಿದ್ದಲು ವಿದ್ಯುತ್ ಸ್ಥಾವರಗಳಿಂದ ಸಂಸ್ಕರಣೆ ಮಾಡದ ಗಾಳಿ ಮತ್ತು ಮಾಲಿನ್ಯಕಾರಕಗಳು ಸುತ್ತಮುತ್ತಲಿನ ಪ್ರದೇಶದ ಭೂಮಿ, ನೀರು, ಸಸ್ಯ ಮತ್ತು ಪ್ರಾಣಿಗಳ ಮೇಲೆ ದುಷ್ಪರಿಣಾಮ ಬೀರುತ್ತದೆ, ಇದರಿಂದಾಗಿ ಸುತ್ತಮುತ್ತಲಿನ ಪ್ರದೇಶವು ಯಾವುದೇ ರೀತಿಯ ಜೀವನ ಅಥವಾ ಜೀವನೋಪಾಯ ಚಟುವಟಿಕೆ ನಡೆಸಲು ಯೋಗ್ಯವಾಗುವುದಿಲ್ಲ.

## ಆರೋಗ್ಯದ ಮೇಲಾಗುವ ಪರಿಣಾಮಗಳು[5]

| ರಾಸಾಯನಿಕ ಮಾಲಿನ್ಯಕಾರಕಗಳು | ಆರೋಗ್ಯದ ಮೇಲಾಗುವ ಪರಿಣಾಮಗಳು |
|---|---|
| ಸಲ್ಫರ್ ಡಯಾಕ್ಸೈಡ್ | • ಉಸಿರಾಟದ ವ್ಯವಸ್ಥೆ ಮತ್ತು ಶ್ವಾಸಕೋಶದ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರುತ್ತದೆ.<br>• ಅಸ್ತಮಾ ಮತ್ತು ತೀವ್ರವಾದ ಬ್ರಾಂಕೈಟಿಸ್ ಕಾಯಿಲೆಗಳನ್ನು ಉಂಟುಮಾಡುತ್ತದೆ.<br>• ಕಣ್ಣುಗಳಲ್ಲಿ ಉರಿ ಉಂಟುಮಾಡುತ್ತದೆ.<br>• ಹೃದಯ ರೋಗಗಳನ್ನು ಉಂಟುಮಾಡುತ್ತದೆ. |
| ನೈಟ್ರಸ್ ಆಕ್ಸೈಡ್‌ಗಳು | • ಅಸ್ತಮಾ ಉಂಟುಮಾಡುತ್ತದೆ.<br>• ತೀವ್ರವಾದ ಶ್ವಾಸಕೋಶಕ್ಕೆ ತಡೆಯಾಗುವ (ಒಬ್‌ಸ್ಟ್ರಕ್ಟಿವ್ ಪಲ್ಮನರಿ)ಕಾಯಿಲೆಯನ್ನು ಉಂಟುಮಾಡುತ್ತದೆ.<br>• ಶ್ವಾಸಕೋಶದ ಬೆಳವಣಿಗೆಯನ್ನು ಮೊಟಕುಗೊಳಿಸುತ್ತದೆ.<br>• ಹೃದಯ ರೋಗಗಳನ್ನು ಉಂಟುಮಾಡುತ್ತದೆ. |
| ಕಣರೂಪದ ವಸ್ತುಗಳು (ಪಿಎಂ) ದಪ್ಪನಾದ ಕಣರೂಪದ ವಸ್ತುಗಳು (ಕೋರ್ಸ್ ಪರ್ಟಿಕ್ಯೂಲೇಟ್ಸ್ ಪಿಎಂ ೧೦) ನಯವಾದ ಕಣರೂಪದ ವಸ್ತುಗಳು (ಫೈನ್ ಪರ್ಟಿಕ್ಯುಲೇಟ್ಸ್ ಪಿಎಂ ೨.೫) | • ಅಸ್ತಮಾ ಉಂಟುಮಾಡುತ್ತದೆ.<br>• ತೀವ್ರವಾದ ಶ್ವಾಸಕೋಶಕ್ಕೆ ತಡೆಯಾಗುವ (ಒಬ್‌ಸ್ಟ್ರಕ್ಟಿವ್ ಪಲ್ಮನರಿ) ಕಾಯಿಲೆಯನ್ನು ಉಂಟುಮಾಡುತ್ತದೆ.<br>• ಶ್ವಾಸಕೋಶದ ಬೆಳವಣಿಗೆಯನ್ನು ಮೊಟಕುಗೊಳಿಸುತ್ತದೆ.<br>• ಹೃದಯ ರೋಗಗಳನ್ನು ಉಂಟುಮಾಡುತ್ತದೆ.<br>• ಶ್ವಾಸಕೋಶದ ಕ್ಯಾನ್ಸರ್ ಉಂಟುಮಾಡುತ್ತದೆ.<br>• ಕಂಜೆಸ್ಟಿವ್ ಹಾರ್ಟ್ ಫೈಲ್ಯೂರ್ ಉಂಟುಮಾಡುತ್ತದೆ. |
| ಅಮೋನಿಯಾ | • ಉಸಿರಾಟದ ತೊಂದರೆಗಳನ್ನು ಉಂಟುಮಾಡುತ್ತದೆ.<br>• ಚರ್ಮ ಮತ್ತು ಕಣ್ಣುಗಳಲ್ಲಿ ಅಪಾರ ಉರಿಯನ್ನು ಉಂಟುಮಾಡುತ್ತದೆ. |
| ಹೈಡ್ರೋಜನ್ ಕ್ಲೋರೈಡ್ ಮತ್ತು ಫ್ಲೋರೈಡ್ | • ಚರ್ಮ, ಕಣ್ಣುಗಳು, ಮೂಗು, ಗಂಟಲು, ಉಸಿರಾಟದ ನಾಳಗಳಿಗೆ ಕಿರಿಕಿರಿ/ಕೆರಳಿಕೆ ಉಂಟುಮಾಡುತ್ತದೆ. |
| ಡೈಆಕ್ಸಿನ್ಸ್ ಮತ್ತು ಫ್ಯೂರಾನ್ | • ಹೊಟ್ಟೆಯಲ್ಲಿ ಕ್ಯಾನ್ಸರ್ ಆಗುವ ಸಾಧ್ಯತೆ ಇದೆ.<br>• ಸಂತಾನೋತ್ಪತ್ತಿ, ನಿರ್ನಾಳ ಗ್ರಂಥಿಗಳು ಮತ್ತು ರೋಗನಿರೋಧಕ ವ್ಯವಸ್ಥೆ ಮೇಲೆ ದುಷ್ಪರಿಣಾಮ |
| ಪಾಲಿಸೈಕ್ಲಿಕ್ ಆರೋಮ್ಯಾಟಿಕ್ ಹೈಡ್ರೋಕಾರ್ಬನ್‌ಗಳು | • ಕ್ಯಾನ್ಸರ್‌ಕಾರಕಗಳಿಂದ/ಕಾರ್ಸಿನೋಜೆನ್‌ಗಳಿಂದ ದುಷ್ಪರಿಣಾಮವಾಗುವ ಸಾಧ್ಯತೆ ಇದೆ.<br>• ಜಠರ, ಮೂತ್ರಕೋಶ ಮತ್ತು ವೃಷಣದ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತದೆ.<br>• ವೀರ್ಯಾಣು ಜೀವಕೋಶಗಳನ್ನು ಹಾನಿಗೊಳಿಸಿ, ಸಂತಾನೋತ್ಪತ್ತಿಯನ್ನು ಕುಂದಿಸಬಹುದು.<br>• ಇವು ಸಣ್ಣ ಕಣರೂಪದ ವಸ್ತುಗಳಿಗೆ ಅಂಟಿಕೊಂಡು, ಶ್ವಾಸಕೋಶದಲ್ಲಿ ಸಂಗ್ರಹಗೊಳ್ಳಬಹುದು. |

5 http://www.env-health.org/IMG/pdf/heal_report_the_unpaid_health_bill_how_coal_power_plants_make_us_sick_final.pdf

| ರಾಸಾಯನಿಕ ಮಾಲಿನ್ಯಕಾರಕಗಳು | ಆರೋಗ್ಯದ ಮೇಲಾಗುವ ಪರಿಣಾಮಗಳು |
|---|---|
| ಪಾದರಸ (ಮರ್ಕ್ಯುರಿ) | • ಮಿದುಳು, ನರವ್ಯವಸ್ಥೆ, ಮೂತ್ರಕೋಶ, ಜಠರವನ್ನು ಹಾನಿಗೊಳಿಸುತ್ತದೆ.<br>• ನರಗಳಿಗೆ ಹಾನಿಯನ್ನು ಹಾಗೂ ಜನ್ಮ ನ್ಯೂನತೆಯನ್ನು ಉಂಟುಮಾಡುತ್ತದೆ. |
| ಸೀಸ (ಲೆಡ್) | • ಮಕ್ಕಳ ನರ ವ್ಯವಸ್ಥೆಗೆ ಹಾನಿ ಉಂಟುಮಾಡುತ್ತದೆ.<br>• ಮಕ್ಕಳ ಕಲಿಕೆ, ಸ್ಮರಣೆ ಮತ್ತು ವರ್ತನೆಯ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತದೆ.<br>• ಮೂತ್ರಕೋಶಕ್ಕೆ ಹಾನಿ ಉಂಟುಮಾಡುತ್ತದೆ. ಕಾರ್ಡಿಯೋವ್ಯಾಸ್ಕುಲಾರ್ ಕಾಯಿಲೆಯನ್ನು ಉಂಟುಮಾಡುತ್ತದೆ. ರಕ್ತಹೀನತೆಯನ್ನು ಉಂಟುಮಾಡುತ್ತದೆ. |
| ಆಂಟಿಮನಿ, ಅರ್ಸೆನಿಕ್, ಬೆರಿಲಿಯಂ, ಕ್ಯಾಡ್ಮಿಯಂ, ಕ್ರೋಮಿಯಂ, ನಿಕಲ್, ಸೆಲೆನಿಯಂ ಮತ್ತು ಮ್ಯಾಂಗನೀಸ್ | • ಕ್ಯಾನ್ಸರ್‌ಕಾರಕಗಳ ಸಂಭಾವ್ಯ ಪರಿಣಾಮ (ಶ್ವಾಸಕೋಶ, ಬ್ಲಾಡರ್, ಮೂತ್ರಕೋಶ, ಚರ್ಮದ ಕ್ಯಾನ್ಸರ್‌ಗಳು)<br>• ನರವ್ಯೂಹ, ಕಾರ್ಡಿಯೋವ್ಯಾಸ್ಕುಲಾರ್ , ಚರ್ಮ, ಉಸಿರಾಟದ ಮತ್ತು ರೋಗನಿರೋಧಕ ವ್ಯವಸ್ಥೆಗಳ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತದೆ. |
| ರೇಡಿಯಂ | • ಕ್ಯಾನ್ಸರ್‌ಕಾರಕಗಳ ಸಂಭಾವ್ಯ ಪರಿಣಾಮ (ಶ್ವಾಸಕೋಶ ಮತ್ತು ಮೂಳೆ ಕ್ಯಾನ್ಸರ್)<br>• ರಕ್ತಹೀನತೆಯನ್ನು ಉಂಟುಮಾಡುತ್ತದೆ.<br>• ಮಿದುಳು ಊತವನ್ನು ಉಂಟುಮಾಡುತ್ತದೆ. |
| ಯುರಾನಿಯಂ | • ಕ್ಯಾನ್ಸರ್‌ಕಾರಕಗಳ ಸಂಭಾವ್ಯ ಪರಿಣಾಮ (ಶ್ವಾಸಕೋಶ ಮತ್ತು ದುಗ್ಧರಸ/ಲಿಂಫಾಟಿಕ್ ವ್ಯವಸ್ಥೆಯ ಕ್ಯಾನ್ಸರ್)<br>• ಮೂತ್ರಕೋಶದ ಕಾಯಿಲೆಗಳನ್ನು ಉಂಟುಮಾಡುತ್ತದೆ. |

**ಶಬ್ದ ಮಾಲಿನ್ಯ**

ವಿದ್ಯುತ್ ಸ್ಥಾವರಗಳಲ್ಲಿ ಬಳಸುವ ಸಲಕರಣೆಗಳಾದ ಬಾಯ್ಲರ್‌ಗಳು, ಟರ್ಬೈನ್‌ಗಳು, ಕ್ರಶರ್‌ಗಳು ಇನ್ನಿತರ ಯಂತ್ರಗಳಿಂದ ಹೊರಹೊಮ್ಮುವ ಅತಿಹೆಚ್ಚು ಶಬ್ದದ ಪ್ರಮಾಣ ಅಥವಾ ತೀವ್ರ ಕರ್ಕಶ ಸದ್ದಿಗೆ ಸದಾ ಒಳಗಾಗುವುದರಿಂದ, ಅಲ್ಲಿ ಕೆಲಸ ಮಾಡುವ ಜನರ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ.

## 1.3 ಪಾರಿಸರಿಕ ಅನುಮತಿ ಪ್ರಕ್ರಿಯೆ


**1.3.1 ಇಐಎ ಅಧಿಸೂಚನೆ, ೨೦೦೬ರ ಪರಿಚಯ**

**1.3.2 ಟಿಪಿಪಿಗಳಿಗೆ ಇಐಎ ಪ್ರಕ್ರಿಯೆ – ಹರಿವುನಕ್ಷೆ (ಫ್ಲೋಚಾರ್ಟ್)**

**1.3.3 ಹೊಸ ಟಿಪಿಪಿಗಳಿಗೆ ಪಾರಿಸರಿಕ ಅನುಮತಿ (ಇಸಿ) ಪಡೆಯುವುದು**

**1.3.4 ಪ್ರಸ್ತುತ ಇರುವ ಟಿಪಿಪಿಗಳಿಗೆ ಪಾರಿಸರಿಕ ಅನುಮತಿ(ಇಸಿ) ಪಡೆಯುವುದು (ವಿಸ್ತರಣೆ/ ಆಧುನೀಕರಣ/ಉತ್ಪನ್ನ ಮಿಶ್ರಣ ಬದಲಾವಣೆ)**

**1.3.5 ಟಿಪಿಪಿಗಳ ಮೇಲ್ವಿಚಾರಣೆ (ಇಸಿ ಪಡೆದ ನಂತರ)**

**1.3.6 ಇಸಿಯ ವರ್ಗಾವಣೆ ಸಾಧ್ಯತೆ**


### 1.3.1 ಇಐಎ ಅಧಿಸೂಚನೆ, ೨೦೦೬ - ಪರಿಚಯ

**ಪರಿಸರ ಮತ್ತು ಅರಣ್ಯಗಳ ಸಚಿವಾಲಯ (ಎಂಒಇಎಫ್)** - ಇದು ಕೇಂದ್ರ ಸರ್ಕಾರದಲ್ಲಿ ಭಾರತದ ಪಾರಿಸರಿಕ ಮತ್ತು ಅರಣ್ಯ ನೀತಿಗಳ ಕಾರ್ಯಕ್ರಮಗಳ ಯೋಜನೆ, ಉತ್ತೇಜನೆ, ಸಂಯೋಜನೆ ಮತ್ತು ಅನುಷ್ಠಾನದ ಮೇಲುಸ್ತುವಾರಿ ಮಾಡುವ ನೋಡಲ್ ಏಜೆನ್ಸಿಯಾಗಿದೆ.

**ಪಾರಿಸರಿಕ ಸಂರಕ್ಷಣಾ ಕಾಯಿದೆ ೧೯೮೬ (ಇಪಿಎ)** - ಕೆಲವೊಂದು ಪ್ರದೇಶಗಳಲ್ಲಿ ಯಾವುದೇ ಕೈಗಾರಿಕೆಗಳ ಕಾರ್ಯನಿರ್ವಹಣೆ ಅಥವಾ ಪ್ರಕ್ರಿಯೆಗಳನ್ನು ನಡೆಸಲು ಆಸ್ಪದವಿಲ್ಲದ ಅಥವಾ ಕೆಲವೊಂದು ಸುರಕ್ಷತಾ ಮಾರ್ಗದರ್ಶಿಗೆ ಒಳಪಟ್ಟು ನಡೆಸಲು ನಿರ್ಬಂಧಿಸುವ ಅಧಿಕಾರವನ್ನು ಎಂಒಇಎಫ್‌ಗೆ ನೀಡುತ್ತದೆ. (ಇಪಿಎಯ ಕಲಂv, ಉಪ-ಪರಿಚ್ಛೇದ (೨), ಪರಿಚ್ಛೇದ ೩)

**ಪಾರಿಸರಿಕ ಪರಿಣಾಮ ಮೌಲ್ಯಮಾಪನ ಅಧಿಸೂಚನೆ ೨೦೦೬** – ಇಐಎ ಅಧಿಸೂಚನೆ – ಇದನ್ನು ಇಪಿಎ ಅಡಿಯಲ್ಲಿ ನೀಡಲಾಗಿದೆ.

**ಪಾರಿಸರಿಕ ಪರಿಣಾಮ ಮೌಲ್ಯಮಾಪನ (ಇಐಎ)** - ಇದು ಈಗ ಇಪಿಎ ಅಡಿಯಲ್ಲಿ ೫೦ ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಹೂಡಿಕೆಯನ್ನು ಒಳಗೊಂಡಿರುವ ೩೯ ವಿಧದ ಅಭಿವೃದ್ಧಿ ಚಟುವಟಿಕೆಗಳಿಗೆ ಕಡ್ಡಾಯವಾಗಿದೆ.

ಇಐಎ ಅಧಿಸೂಚನೆಯು ಪಾರಿಸರಿಕ ಅನುಮತಿಯನ್ನು ಈ ಕೆಳಗಿನ ಯೋಜನೆಗಳು/ಚಟುವಟಿಕೆಗಳಿಗೆ ಕಡ್ಡಾಯಗೊಳಿಸಿದೆ:

- ಎಲ್ಲ ಹೊಸ ಚಟುವಟಿಕೆಗಳು ಮತ್ತು ಯೋಜನೆಗಳು
- ಸದ್ಯ ಇರುವ ಯೋಜನೆಗಳ ವಿಸ್ತರಣೆ/ಆಧುನೀಕರಣ
- ಅಧಿಸೂಚನೆಯಲ್ಲಿ ಪಟ್ಟಿ ಮಾಡಲಾದ ಚಟುವಟಿಕೆಗಳು

ಟಿಪಿಪಿಗಳನ್ನು ಅಧಿಸೂಚನೆಯ ಪಟ್ಟಿಯಲ್ಲಿ ೧(ಡಿ) ಎಂದು ಪಟ್ಟಿ ಮಾಡಲಾಗಿದೆ.

- **ಟಿಪಿಪಿಗಳು ಯಾವಾಗ ಇಸಿಯನ್ನು ಪಡೆದುಕೊಳ್ಳಬೇಕು?**

೧. ಹೊಸ ಸ್ಥಾವರವನ್ನು ಆರಂಭಿಸುವ ಮೊದಲು

೨. ಪ್ರಸ್ತುತ ಇರುವ ಸ್ಥಾವರದ ವಿಸ್ತರಣೆ ಅಥವಾ ಆಧುನೀಕರಣ ಮಾಡುವ ಮೊದಲು

೩. ಪ್ರಸ್ತುತ ಇರುವ ಸ್ಥಾವರದ ಉತ್ಪನ್ನದ ಮಿಶ್ರಣದಲ್ಲಿ ಬದಲಾವಣೆ ಮಾಡುವ ಸಂದರ್ಭದಲ್ಲಿ

- **ಇಸಿಯನ್ನು ಯಾವ ಪ್ರಾಧಿಕಾರಗಳು ನೀಡಬಹುದು?**

೧. ಪರಿಸರ ಮತ್ತು ಅರಣ್ಯಗಳ ಸಚಿವಾಲಯ (ಎಂಒಇಎಫ್)

೨. ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (ಎಸ್‌ಇಐಎಎ)

ಇಐಎ ಅಧಿಸೂಚನೆಯು ಈ ಎರಡೂ ಪ್ರಾಧಿಕಾರಗಳನ್ನು ನಿಯಂತ್ರಕ ಪ್ರಾಧಿಕಾರಗಳು ಎಂದು ಪರಿಗಣಿಸುತ್ತದೆ. ಪಟ್ಟಿಯಲ್ಲಿ ಎ ವರ್ಗದಲ್ಲಿ ಬರುವ ದೊಡ್ಡ ಯೋಜನೆಗಳಿಗೆ ಎಂಒಇಎಫ್ ಇಸಿಯನ್ನು ನೀಡುತ್ತದೆ. ಬಿ ವರ್ಗದ ಸಣ್ಣ ಯೋಜನೆಗಳಿಗೆ, ಪ್ರತೀ ರಾಜ್ಯದಲ್ಲಿ ಕಾರ್ಯನಿರ್ವಹಣೆ ಮಾಡುವ ಕೇಂದ್ರ ಸರ್ಕಾರದ ಪ್ರಾಧಿಕಾರವಾದ ಎಸ್ಇಐಎಎ ಅನುಮತಿಯನ್ನು ನೀಡುತ್ತದೆ.

## ಎಸ್ಇಐಎಎ

ಎಸ್ಇಐಎಎ ಕೇಂದ್ರ ಸರ್ಕಾರದ ಪ್ರಾಧಿಕಾರವಾಗಿದ್ದು, ರಾಜ್ಯ ಸರ್ಕಾರದಿಂದ ರಚಿತವಾಗಿರುತ್ತದೆ, ಆದರೆ ಎಂಒಇಎಫ್ ಪರವಾಗಿ ಕೆಲಸ ಮಾಡುತ್ತದೆ ಮತ್ತು ಎಂಒಇಎಫ್‌ಗೆ ವರದಿ ಮಾಡುತ್ತದೆ.

**ರಚನೆ ಮತ್ತು ಕಾರ್ಯ:**

ಎಸ್ಇಐಎಎಯಲ್ಲಿ ೩ ಸದಸ್ಯರಿರುತ್ತಾರೆ:

೧. ಸದಸ್ಯ-ಕಾರ್ಯದರ್ಶಿ -ಪಾರಿಸರಿಕ ಕಾಯಿದೆಗಳೊಂದಿಗೆ ವ್ಯವಹರಿಸಿ, ತಿಳಿವಳಿಕೆ ಇರುವ ರಾಜ್ಯ ಸರ್ಕಾರದ/ ಕೇಂದ್ರಾಡಳಿತ ಪ್ರದೇಶದ ಒಬ್ಬರು ಕಾರ್ಯನಿರತ ಅಧಿಕಾರಿ

೨. ಅಧ್ಯಕ್ಷರು - ಇಐಎ ಪ್ರಕ್ರಿಯೆಯಲ್ಲಿ ತಜ್ಞರಾಗಿರುವವರು, ೩ ವರ್ಷಗಳ ಕಾಲಾವಧಿ

೩. ಕಚೇರಿ-ಅಧಿಕಾರಿಯಲ್ಲದ ಸದಸ್ಯರು - ಇಐಎ ಪ್ರಕ್ರಿಯೆಯಲ್ಲಿ ತಜ್ಞರಾಗಿರುವವರು, ೩ ವರ್ಷಗಳ ಕಾಲಾವಧಿ

ರಾಜ್ಯವೊಂದರಲ್ಲಿ ಎಸ್ಇಐಎಎಯನ್ನು ರಚಿಸಿರದಿದ್ದರೆ, ಆಗ ಪಾರಿಸರಿಕ ಅನುಮತಿ ಅಗತ್ಯವಿರುವ ಎಲ್ಲ ಯೋಜನೆಗಳನ್ನು ಎಂಒಇಎಫ್ ಪರಿಗಣಿಸುತ್ತದೆ.

ಎಸ್ಇಐಎಎಯ ಎಲ್ಲ ನಿರ್ಧಾರಗಳನ್ನು ಒಂದು ಸಭೆಯಲ್ಲಿ ತೆಗೆದುಕೊಳ್ಳಬೇಕು ಮತ್ತು ಸಾಧ್ಯವಿರುವ ಮಟ್ಟಿಗೆ ನಿರ್ಧಾರಗಳು ಒಮ್ಮತದಿಂದ ಆಗಿರಬೇಕು. ಬಹುಮತದ ನಿರ್ಧಾರ ತೆಗೆದುಕೊಂಡರೆ, ಆಗ ನಿರ್ಧಾರದ ಪರ ಮತ್ತು ವಿರೋಧ ಇರುವ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ದಾಖಲಿಸಿ, ಒಂದು ಪ್ರತಿಯನ್ನು ಎಂಒಇಎಫ್‌ಗೆ ಕಳುಹಿಸಬೇಕು.

| ಇಸಿ ನೀಡುವ ಪ್ರಾಧಿಕಾರ → / ↓ ಚಟುವಟಿಕೆ | ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (ಎಸ್ಇಐಎಎ) ಬಿ ವರ್ಗ | ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (ಎಸ್ಇಐಎಎ) ಬಿ ವರ್ಗ |
|---|---|---|
| ಕಲ್ಲಿದ್ದಲು/ಲಿಗ್ನೈಟ್/ನ್ಯಾಫ್ತಾ ಮತ್ತು ಅನಿಲ ಆಧರಿತ ಇಂಧನ | ೫೦೦ ಮೆ.ವ್ಯಾ. | <೫೦೦ ಮೆ.ವ್ಯಾ |
| ಪೆಟ್‌ಕೋಕ್, ಡೀಸೆಲ್<br><br>ಮತ್ತು ಎಲ್ಲ ಇತರೆ ಇಂಧನಗಳು, ರಿಫೈನರಿ ರೆಸಿಡ್ಯುಅಲ್ ತೈಲ ತ್ಯಾಜ್ಯವೂ ಸೇರಿದಂತೆ (ಬಯೋಮಾಸ್ ಹೊರತುಪಡಿಸಿ) | >೫೦ ಮೆ.ವ್ಯಾ. | ೫ ಮೆ.ವ್ಯಾ.- ೪೯ ಮೆ.ವ್ಯಾ. |
| ಬಯೋಮಾಸ್ ಆಧರಿತ ಅಥವಾ ಅಪಾಯಕಾರಿಯಲ್ಲದ ಮುನ್ಸಿಪಲ್ ಘನ ತ್ಯಾಜ್ಯವನ್ನು ಇಂಧನವಾಗಿ ಉಳ್ಳ ಸ್ಥಾವರ | >೨೦ ಮೆ.ವ್ಯಾ. | ೧೫ ಮೆ.ವ್ಯಾ. - ೧೯ ಮೆ.ವ್ಯಾ. |

- **ಪ್ರಾಧಿಕಾರಗಳಿಗೆ ಯೋಜನೆಯೊಂದಕ್ಕೆ ಇಸಿ ನೀಡುವಂತೆ ಯಾರು ಶಿಫಾರಸು ಮಾಡುತ್ತಾರೆ?**

೧. ತಜ್ಞ ಮೌಲ್ಯನಿರ್ಣಯ ಸಮಿತಿ (ಇಎಸಿ)

೨. ರಾಜ್ಯ ತಜ್ಞ ಮೌಲ್ಯನಿರ್ಣಯ ಸಮಿತಿ (ಇಎಸಿ)

ಇಎಸಿ ಮಾಡಿದ ಶಿಫಾರಸುಗಳ ಆಧಾರದ ಮೇಲೆ ಎಂಒಇಎಫ್ ಯೋಜನೆಗಳನ್ನು ಮೌಲ್ಯಮಾಪನ ಮಾಡಿ, ಇಸಿಯನ್ನು ನೀಡುತ್ತದೆ. ಅದೇ ರೀತಿ, ಎಸ್ಇಎಸಿಯ ಶಿಫಾರಸುಗಳನ್ನು ಆಧರಿಸಿ, ಎಸ್ಇಐಎಎ ಇಸಿಯನ್ನು ನೀಡುತ್ತದೆ.

## ಎಸ್ಇಎಸಿ

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಸಮಾಲೋಚನೆ ಮೇರೆಗೆ ಎಸ್ಇಎಸಿಯನ್ನು ರಚನೆ ಮಾಡುತ್ತದೆ. ಎಸ್ಇಎಸಿಯನ್ನು ರಾಜ್ಯವು ರಚನೆ ಮಾಡಿರದಿದ್ದಲ್ಲಿ, ಆಗ ಇಸಿ ಅಗತ್ಯವಿರುವ ಎಲ್ಲ ಬಿ ವರ್ಗದ ಯೋಜನೆಗಳನ್ನು ಎಂಒಇಎಫ್ ಪರಿಗಣಿಸಬೇಕಾಗುತ್ತದೆ.

## ಇಎಸಿ & ಎಸ್ಇಎಸಿಯ ರಚನೆ ಮತ್ತು ಕಾರ್ಯ

ಇಎಸಿ & ಎಸ್ಇಎಸಿಯು ಸುಮಾರು ೧೫ ಜನ ಸದಸ್ಯರನ್ನು ಹೊಂದಿದ್ದು, ಅವರು ಈ ಕೆಳಗಿನ ಕ್ಷೇತ್ರಗಳಲ್ಲಿ ವೃತ್ತಿಪರರಾಗಿರಬೇಕು ಅಥವಾ ತಜ್ಞರಾಗಿರಬೇಕು.

- ಪಾರಿಸರಿಕ ಗುಣಮಟ್ಟ
- ಯೋಜನೆ ನಿರ್ವಹಣೆಯಲ್ಲಿ ವಿವಿಧ ವಲಯಗಳು
- ಪಾರಿಸರಿಕ ಪರಿಣಾಮ ಮೌಲ್ಯಮಾಪನ ಪ್ರಕ್ರಿಯೆ
- ಅಪಾಯ ಸಾಧ್ಯತೆ ಮೌಲ್ಯಮಾಪನ
- ಪ್ರಾಣಿಸಂಪತ್ತು ಮತ್ತು ಸಸ್ಯಸಂಪತ್ತು ನಿರ್ವಹಣೆ (ಜೀವ ವಿಜ್ಞಾನ ತಜ್ಞ)
- ಅರಣ್ಯ ಮತ್ತು ವನ್ಯಜೀವಿ
- ಪಾರಿಸರಿಕ ಆರ್ಥಿಕತೆ (ಯೋಜನೆ ಮೌಲ್ಯನಿರ್ಣಯದಲ್ಲಿ ತಜ್ಞರು ಅನುಭವ ಹೊಂದಿರಬೇಕು)

ಅಧ್ಯಕ್ಷರು ಪಾರಿಸರಿಕ ನೀತಿಯಲ್ಲಿ ಅಸಾಧಾರಣ, ಅಪಾರ ಅನುಭವವಿರುವ ತಜ್ಞರಾಗಿರಬೇಕು ಅಥವಾ ಸಾರ್ವಜನಿಕ ಆಡಳಿತದಲ್ಲಿ ಅಥವಾ ನಿರ್ವಹಣೆಯಲ್ಲಿ ತಜ್ಞತೆ ಹೊಂದಿದ್ದು, ಸಂಬಂಧಿತ ಅಭಿವೃದ್ಧಿ ವಲಯದಲ್ಲಿ ಆಳವಾದ ಅನುಭವ ಹೊಂದಿರಬೇಕು.

**ಅನುಭವವಿರುವ ವೃತ್ತಿಪರರ ಅರ್ಹತೆಗಳು:**

ವೃತ್ತಿಪರರಿಗೆ ಕನಿಷ್ಠ ಈ ಕೆಳಗಿನ ಅರ್ಹತೆಗಳಿರಬೇಕು:

೧. ಸಂಬಂಧಿತ ವಿಷಯದಲ್ಲಿ ೫ ವರ್ಷಗಳ ಔಪಚಾರಿಕ ವಿಶ್ವವಿದ್ಯಾಲಯದ ತರಬೇತಿಯೊಂದಿಗೆ ಎಂಎ/ ಎಂಎಸ್ಸಿ ಪದವಿ, ಅಥವಾ

೨. ವೃತ್ತಿಪರ ತರಬೇತಿ ಕೋರ್ಸ್‌ನಲ್ಲಿ ೪ ವರ್ಷಗಳ ಔಪಚಾರಿಕ ತರಬೇತಿ, ಜೊತೆಗೆ ಆಯಾ ಕ್ಷೇತ್ರದಲ್ಲಿ ಸೂಚಿತ ಪ್ರಾಯೋಗಿಕ ತರಬೇತಿಯೊಂದಿಗೆ ಇಂಜಿನಿಯರಿಂಗ್/ತಂತ್ರಜ್ಞಾನ/ವಾಸ್ತುಶಿಲ್ಪ ಕೋರ್ಸ್‌ಗಳಾದರೆ, ಬಿ.ಟೆಕ್/ಬಿ.ಇ./ಬಿ.ಆರ್ಕಿಟೆಕ್ಚರ್ ಪದವಿ, ಅಥವಾ

೩. ಯಾವುದಾದರೂ ವೃತ್ತಿಪರ ಪದವಿಯಲ್ಲಿ (ಉದಾ: ಕಾನೂನು) ವಿಶ್ವವಿದ್ಯಾಲಯದ ೫ ವರ್ಷಗಳ ಔಪಚಾರಿಕ ತರಬೇತಿ ಮತ್ತು ಆಯಾ ಕ್ಷೇತ್ರದಲ್ಲಿ ಸೂಚಿತ ಪ್ರಾಯೋಗಿಕ ತರಬೇತಿ, ಅಥವಾ

೪. ಸೂಚಿತ ಅಪ್ರೆಂಟಿಸ್‌ಶಿಪ್/ಆರ್ಟಿಕಲ್‌ಶಿಪ್ ಮತ್ತು ಸಂಬಂಧಿತ ವೃತ್ತಿಪರ ಸಂಸ್ಥೆ (ಉದಾ: ಚಾರ್ಟ್‌ರ್ಡ್ ಅಕೌಂಟನ್ಸಿ) ನಡೆಸುವ ಪರೀಕ್ಷೆಗಳಲ್ಲಿ ಉತ್ತೀರ್ಣ, ಅಥವಾ

೫. ಒಂದು ವಿಶ್ವವಿದ್ಯಾಲಯದ ಪದವಿ, ಇದರೊಂದಿಗೆ ವಿಶ್ವವಿದ್ಯಾಲಯದಲ್ಲಿ ಅಥವಾ ಸರ್ವಿಸ್ ಅಕಾಡೆಮಿಯಲ್ಲಿ ೨ ವರ್ಷಗಳ ಔಪಚಾರಿಕ ತರಬೇತಿ (ಉದಾ. ಎಂಬಿಎ/ಐಎಎಸ್/ಐಎಫ್ಎಸ್)

ತಜ್ಞರನ್ನು/ತಜ್ಞ ವೃತ್ತಿಪರರನ್ನು ಆಯ್ಕೆ ಮಾಡಿಕೊಳ್ಳುವಾಗ, ಅವರ ಸಂಬಂಧಿತ ಕ್ಷೇತ್ರಗಳಲ್ಲಿ ಗಳಿಸಿರುವ ತಜ್ಞತೆಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.

**ತಜ್ಞರಿಗಿರಬೇಕಾದ ಅರ್ಹತೆ:**

ಈ ಕೆಳಗಿನ ಅರ್ಹತೆ ಮಾನದಂಡಗಳನ್ನು ಈಡೇರಿಸುವ ವೃತ್ತಿಪರರು:

೧. ಕನಿಷ್ಠ ೧೫ ವರ್ಷಗಳ ಕಾಲ ಸಂಬಂಧಿತ ಕ್ಷೇತ್ರದಲ್ಲಿ ಅನುಭವವಿರುವವರು, ಅಥವಾ


೨. ಸಂಬಂಧಿತ ಕ್ಷೇತ್ರದಲ್ಲಿ ಒಂದು ಹೆಚ್ಚಿನ ಪದವಿ (ಉದಾ: ಪಿಎಚ್‌ಡಿ) ಮತ್ತು ಕನಿಷ್ಠ ೧೦ ವರ್ಷಗಳ ಕಾಲ ಸಂಬಂಧಿತ ಅನುಭವ

ತಜ್ಞರು ៦೦ ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು. ಆದರೆ ನಿರ್ದಿಷ್ಟ ಕ್ಷೇತ್ರವೊಂಧರಲ್ಲಿ ತಜ್ಞರು ಲಭ್ಯವಿಲ್ಲದೇ ಇದ್ದ ಸಂದರ್ಭದಲ್ಲಿ, ತಜ್ಞ ಮೌಲ್ಯನಿರ್ಣಯ ಸಮಿತಿಯ ಸದಸ್ಯರೊಬ್ಬರ ವಯಸ್ಸು ಗರಿಷ್ಠ ೬೫ ವರ್ಷಗಳಾಗಬಹುದು.

- ಅಧ್ಯಕ್ಷರೂ ಸೇರಿದಂತೆ, ಪ್ರತೀ ಸದಸ್ಯರು ೩ ವರ್ಷಗಳ ಗರಿಷ್ಠ ೨ ಅವಧಿಯನ್ನು ಹೊಂದಿರುತ್ತಾರೆ.
- ಮಾಸಿಕ ಸಭೆಗಳನ್ನು ನಡೆಸಬೇಕು.
- ಸಭೆಯ ಕಾರ್ಯಸೂಚಿ ಮತ್ತು ನಡಾವಳಿಗಳನ್ನು ದಾಖಲಿಸಬೇಕು.
- ಸಭೆಯ ನಡಾವಳಿಯನ್ನು ಸಭೆ ನಡೆದ ನಂತರ ೫ ಕೆಲಸದ ದಿನಗಳಲ್ಲಿ ಅಂತಿಮಗೊಳಿಸಿ, ಎಂಒಇಎಫ್ ಜಾಲತಾಣದಲ್ಲಿ ಹಾಕಬೇಕು.

## 1.3.2 ಟಿಪಿಪಿಗಳ ಇಐಎ ಪ್ರಕ್ರಿಯೆ: ಹರಿವುನಕ್ಷೆ (ಫ್ಲೋಚಾರ್ಟ್)

## ಸಾಮರ್ಥ್ಯ > ೫೦೦ ಮೆ.ವ್ಯಾ. ಇರುವ ಯೋಜನೆಗಳು




* ಕಡಿಮೆ ಸಾಮರ್ಥ್ಯದ ಟಿಪಿಪಿಗಳಿಗೆ, ಎಂಒಇಎಫ್ ಬದಲಿಗೆ ಎಸ್‌ಇಐಎಎ ಮತ್ತು ಇಎಸಿ ಬದಲಿಗೆ ಎಸ್‌ಇಎಸಿಯು ಅನುಮತಿ ನೀಡುವುದನ್ನು ಪರಿಗಣಿಸುತ್ತದೆ.

### 1.3.3 ಹೊಸ ಟಿಪಿಪಿಗಳಿಗೆ ಪಾರಿಸರಿಕ ಅನುಮತಿ(ಇಸಿ) ಪಡೆಯುವುದು

**ಪಾರಿಸರಿಕ ಅನುಮತಿ(ಇಸಿ) ಪ್ರಕ್ರಿಯೆ:**

೧. ಯೋಜನಾ ಪ್ರತಿಪಾದಕರು/ಅರ್ಜಿದಾರರಿಂದ ಎಂಒಇಎಫ್/ಎಸ್‌ಇಐಎಎಗೆ ಅರ್ಜಿ ಸಲ್ಲಿಸುವಿಕೆ

೨. ಎಂಒಇಎಫ್/ಎಸ್‌ಇಐಎಎದಿಂದ ಒಪ್ಪಂದದ ಕರಾರುಗಳನ್ನು(ಟಿಒಆರ್) ನೀಡುವಿಕೆ

೩. ಯೋಜನಾ ಪ್ರತಿಪಾದಕರು/ಅರ್ಜಿದಾರರು ಇಐಎ ನಡೆಸಲು ಅರ್ಜಿ ಸಲ್ಲಿಸುವಿಕೆ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ (ಎಸ್‌ಪಿಸಿಬಿ)ಯು ಸಾರ್ವಜನಿಕ ಸಮಾಲೋಚನೆಯನ್ನು ನಡೆಸುವುದು

೪. ಎಂಒಇಎಫ್/ಎಸ್‌ಇಐಎಎದಿಂದ ಇಸಿ ನೀಡುವಿಕೆ/ಅರ್ಜಿಯ ತಿರಸ್ಕರಿಸುವಿಕೆ

### ೧. ಯೋಜನಾ ಪ್ರತಿಪಾದಕರು/ಅರ್ಜಿದಾರರಿಂದ ಎಂಒಇಎಫ್/ಎಸ್‌ಇಐಎಎಗೆ ಅರ್ಜಿ ಸಲ್ಲಿಸುವಿಕೆ

೧. ಯೋಜನಾ ಪ್ರತಿಪಾದಕರು/ಅರ್ಜಿದಾರರು ಯೋಜನೆಗೆ ಸಂಭಾವ್ಯ ಸ್ಥಳವನ್ನು ಗುರುತಿಸಿದ ನಂತರವಷ್ಟೆ ಇಸಿಗೆ ಅರ್ಜಿಯನ್ನು ನೀಡಬಹುದು. ಈ ಅರ್ಜಿಗಳನ್ನು ನಮೂನೆ ೧ರಲ್ಲಿ ಸಿದ್ಧಪಡಿಸಬೇಕು (ನಮೂನೆ ೧ ಅನ್ನು ಅನುಬಂಧದಲ್ಲಿ ನೋಡಿ) ಮತ್ತು ಪ್ರಸ್ತಾಪಿತ ಸ್ಥಾವರದ ಸಾಮರ್ಥ್ಯವನ್ನು ಆಧರಿಸಿ, ಕಾರ್ಯಸಾಧ್ಯತೆ-ಪೂರ್ವ ವರದಿಯನ್ನು ಸಿದ್ಧಪಡಿಸಿ, ಈ ಎರಡನ್ನೂ ಎಂಒಇಎಫ್/ಎಸ್‌ಇಐಎಎಗೆ ಸಲ್ಲಿಸಬೇಕು. ನಮೂನೆ ೧ ಯೋಜನಾ ಪ್ರತಿಪಾದಕರು ಪ್ರಸ್ತಾಪಿಸುವ ಒಪ್ಪಂದದ ಕರಾರುಗಳನ್ನು ಒಳಗೊಂಡಿರುತ್ತದೆ.

೨. ಇಸಿ ಪಡೆದುಕೊಳ್ಳುವ ಮೊದಲು, ಅರ್ಜಿದಾರರು ಎಂದೂ ಕರೆಯಲಾಗುವ ಯೋಜನಾ ಪ್ರತಿಪಾದಕರು, ಸ್ಥಳದಲ್ಲಿ ಯಾವುದೇ ರೀತಿಯ ಚಟುವಟಿಕೆಗಳನ್ನು ಆರಂಭಿಸಲು ಆಸ್ಪದವಿಲ್ಲ. ಸ್ಥಳವನ್ನು ಸ್ವಚ್ಛಪಡಿಸಿ, ಬೇಲಿ ಹಾಕುವುದು ಅಥವಾ ಕಾರ್ಮಿಕರಿಗೆ ಮೂಲಸೌಕರ್ಯದೊಂದಿಗೆ ತಾತ್ಕಾಲಿಕ ಶೆಡ್ ಹಾಕುವುದು ಬಿಟ್ಟರೆ, ಇನ್ನುಳಿದ ಯಾವುದೇ ಚಟುವಟಿಕೆ ಆರಂಭಿಸುವಂತಿಲ್ಲ.

೩. ಈ ಹಂತದಲ್ಲಿ, ಎಸ್‌ಇಐಎಎಗೆ ಸಲ್ಲಿಸಿದ ಅರ್ಜಿಯನ್ನು ವರ್ಗ ಬಿ೧ ಮತ್ತು ಬಿ೨ ಎಂದು ಪ್ರಾಧಿಕಾರವು* ವರ್ಗೀಕರಿಸುತ್ತದೆ. ಈ ಪ್ರಕ್ರಿಯೆಯನ್ನು ಪರೀಕ್ಷಣೆ(ಸ್ಕ್ರೀನಿಂಗ್) ಎಂದು ಕರೆಯಲಾಗುವುದು.

೪. ಬಿ೨ ಯೋಜನೆಗಳಿಗೆ ಇಐಎ ಅಗತ್ಯವಿರುವುದಿಲ್ಲ.

* ಎಂಒಇಎಫ್ ಯೋಜನೆಗಳನ್ನು ಬಿ೧ ಮತ್ತು ಬಿ೨ ಎಂದು ವರ್ಗೀಕರಿಸುವುದರ ಕುರಿತು ಕಾಲದಿಂದ ಕಾಲಕ್ಕೆ ಅಧಿಸೂಚನೆಯನ್ನು ಹೊರಡಿಸುತ್ತದೆ. ಪ್ರಸ್ತುತ, ೫ ಮೆ.ವ್ಯಾ.ಗಿಂತ ಹೆಚ್ಚಿನ ಸಾಮರ್ಥ್ಯದ ಎಲ್ಲ ಕಲ್ಲಿದ್ದಲು/ಲಿಗ್ನೈಟ್/ನ್ಯಾಫ್ತಾ & ಅನಿಲ ಆಧರಿತ ಇಂಧನ ಉಷ್ಣ ವಿದ್ಯುತ್ ಸ್ಥಾವರಗಳನ್ನು ಬಿ೧ ಎಂದು ವರ್ಗೀಕರಿಸಿದ್ದು, ಇವಕ್ಕೆ ಇಐಎ ಪಡೆಯುವುದು ಅಗತ್ಯವಿದೆ.

### ೨. ಎಂಒಇಎಫ್/ಎಸ್‌ಇಐಎಎದಿಂದ ಒಪ್ಪಂದದ ಕರಾರುಗಳನ್ನು(ಟಿಒಆರ್) ನೀಡುವಿಕೆ:

**ನಿಗದಿಪಡಿಸಿದ ಕಾಲ ಮಿತಿ - ೬೦ ದಿನಗಳು**

೧. ಅರ್ಜಿಯನ್ನು ಸ್ವೀಕರಿಸಿದ ನಂತರ, ಎಲ್ಲ ಅಗತ್ಯ ದಾಖಲೆಗಳನ್ನೂ ಸಲ್ಲಿಸಿದ್ದಾರೆಯೇ ಎಂದು ಎಸ್‌ಇಐಎಎ/ಎಂಒಇಎಫ್ ಪರಿಶೀಲಿಸುತ್ತಾರೆ.

೨. ಏನಾದರೂ ಹೆಚ್ಚುವರಿ ವಿವರಗಳು ಅಗತ್ಯವಾದರೆ, ಯೋಜನಾ ಪ್ರತಿಪಾದಕರು/ಅರ್ಜಿದಾರರು ಅವನ್ನು ಸಲ್ಲಿಸಬೇಕಾಗುತ್ತದೆ.

೩. ಅರ್ಜಿಯನ್ನು ಒಪ್ಪಿಕೊಂಡ ನಂತರ, ಯೋಜನಾ ಪ್ರತಿಪಾದಕರು/ಅರ್ಜಿದಾರರನ್ನು ಇಎಸಿ/ಎಸ್‌ಇಎಸಿಯೊಂದಿಗೆ ಸಭೆ ನಡೆಸಲು ಎಂಒಇಎಫ್/ಎಸ್‌ಇಐಎಎ ಆಹ್ವಾನಿಸುತ್ತಾರೆ, ಅಲ್ಲಿ ಈ

ಯೋಜನೆಯ ಮೌಲ್ಯಮಾಪನ ಮಾಡಲಾಗುವುದು.

೪. ಸಭೆಯಲ್ಲಿ, ಇಐಎ ಅಧ್ಯಯನ ಮಾಡಲು ಎಲ್ಲ ಪಾರಿಸರಿಕ ಕಾಳಜಿಗಳನ್ನು ಉದ್ದೇಶಿಸುವ ಒಪ್ಪಂದದ ಕರಾರುಗಳನ್ನು ಎಂಒಇಎಫ್/ಎಸ್‌ಇಐಎಎ ನೀಡುತ್ತದೆ. ಈ ಪ್ರಕ್ರಿಯೆಯನ್ನು ವ್ಯಾಪ್ತೀಕರಣ (ಸ್ಕೋಪಿಂಗ್) ಎಂದು ಕರೆಯಲಾಗುವುದು.

ಟಿಪ್ಪಣಿ:

ಇಎಸಿ/ಎಸ್‌ಇಎಸಿ ಅರ್ಜಿಯ ಮೌಲ್ಯಮಾಪನದ ಸಮಯದಲ್ಲಿ, ಒಪ್ಪಂದದ ಕರಾರುಗಳನ್ನು ರೂಪಿಸಲು ಒಮ್ಮೆ ಸ್ಥಳ ಭೇಟಿ ಮಾಡುವುದು ಅಗತ್ಯವೆಂದು ಭಾವಿಸಿದರೆ (ಒಪ್ಪಂದದ ಕರಾರುಗಳ ವಿಷಯವಸ್ತುವಿಗೆ ಅನುಬಂಧವನ್ನು ನೋಡಿ), ಸ್ಥಳ ಭೇಟಿಯನ್ನು ಮಾಡಲಾಗುವುದು ಮತ್ತು ಒಪ್ಪಂದದ ಕರಾರನ್ನು ನೀಡಲಾಗುವುದು. ಇದಕ್ಕಾಗಿ, ಎಂಒಇಎಫ್/ಎಸ್‌ಇಐಎಎ ಯೋಜನಾ ಪ್ರತಿಪಾದಕರು/ಅರ್ಜಿದಾರರಿಗೆ ೭ ದಿನಗಳ ನೋಟಿಸ್ ನೀಡಬೇಕಾಗುತ್ತದೆ, ಅವರು ತಪಾಸಣೆಯನ್ನು ನಡೆಸಲು ಬೇಕಾದ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಾರೆ.

ಒಪ್ಪಂದದ ಕರಾರನ್ನು ಈ ಕೆಳಗಿನ ಅಂಶಗಳನ್ನು ಆಧರಿಸಿ ನಿರ್ಣಯಿಸಲಾಗುತ್ತದೆ:

- ನಮೂನೆ ೧
- ಯೋಜನಾ ಪ್ರತಿಪಾದಕರು/ಅರ್ಜಿದಾರರು ಪ್ರಸ್ತಾಪಿಸಿದ ಒಪ್ಪಂದದ ಕರಾರು
- ಇಎಸಿ ಅಥವಾ ಎಸ್‌ಇಎಸಿಯ ಉಪ-ಗುಂಪು ಮಾಡಿದ ಸ್ಥಳಭೇಟಿ (ಭೇಟಿ ಮಾಡಿದರೆ)
- ಇಎಸಿ ಅಥವಾ ಎಸ್‌ಇಎಸಿಯಲ್ಲಿ ಲಭ್ಯವಿರುವ ಬೇರೆ ಮಾಹಿತಿಗಳು

ಇಎಸಿ ಅಥವಾ ಎಸ್‌ಇಎಸಿಯು ಒಪ್ಪಂದದ ಕರಾರನ್ನು ಯೋಜನಾ ಪ್ರತಿಪಾದಕರು/ಅರ್ಜಿದಾರರಿಗೆ ನಮೂನೆ ೧ನ್ನು ಸ್ವೀಕರಿಸಿದ ೬೦ ದಿನಗಳ ಒಳಗೆ ತಿಳಿಸಬೇಕು. ಇಲ್ಲವಾದಲ್ಲಿ, ಯೋಜನಾ ಪ್ರತಿಪಾದಕರು/ಅರ್ಜಿದಾರರು ಪ್ರಸ್ತಾಪಿಸಿದ ಒಪ್ಪಂದದ ಕರಾರನ್ನು ಇಐಎ ಉದ್ದೇಶಗಳಿಗಾಗಿ ಒಪ್ಪಿಗೆ ನೀಡಿದ ಒಪ್ಪಂದದ ಕರಾರು ಎಂದು ಪರಿಗಣಿಸಲಾಗುವುದು.

ಒಪ್ಪಿಗೆ ನೀಡಿದ ಒಪ್ಪಂದದ ಕರಾರನ್ನು ಎಂಒಇಎಫ್ ಜಾಲತಾಣದಲ್ಲಿ ಮತ್ತು ಸಂಬಂಧಿತ ಎಸ್‌ಇಐಎಎಯಲ್ಲಿ ಪ್ರದರ್ಶಿಸಲಾಗುವುದು. ಕರಾವಳಿಯ ಉದ್ದಕ್ಕೆ ಇರುವ ಸ್ಥಾವರಗಳಿಗೆ ಒಪ್ಪಂದದ ಕರಾರುಗಳು ಹೆಚ್ಚುವರಿ ಅಧ್ಯಯನಗಳನ್ನು ಮಾಡುವ ವಿವರಗಳನ್ನು ಒಳಗೊಂಡಿರುವುದು ಅಗತ್ಯವಾಗುತ್ತದೆ.

ಈ ಹಂತದಲ್ಲಿಯೇ ಎಂಒಇಎಫ್/ಎಸ್‌ಇಐಎಎಯು ಇಎಸಿ ಅಥವಾ ಎಸ್‌ಇಎಸಿ ಮಾಡಿದ ಶಿಫಾರಸುಗಳ ಆಧಾರದ ಮೇರೆಗೆ ಅರ್ಜಿಯನ್ನು ತಿರಸ್ಕರಿಸಬಹುದಾಗಿದೆ. ಹಾಗಿದ್ದರೆ, ಈ ನಿರ್ಧಾರವನ್ನು, ತಿರಸ್ಕರಿಸುವುದಕ್ಕೆ ಕಾರಣಗಳನ್ನು ಯೋಜನಾ ಪ್ರತಿಪಾದಕರು/ಅರ್ಜಿದಾರರಿಗೆ ಅರ್ಜಿ ಸ್ವೀಕರಿಸಿದ ೬೦ ದಿನಗಳಲ್ಲಿ ಲಿಖಿತ ರೂಪದಲ್ಲಿ ತಿಳಿಸಬೇಕಾಗುತ್ತದೆ.

**ಯೋಜನಾ ಪ್ರತಿಪಾದಕರಿಗೆ ಒಪ್ಪಂದದ ಕರಾರನ್ನು ನೀಡುವ ಮೊದಲು ಒಪ್ಪಂದದ ಕರಾರು ಮತ್ತು ನಮೂನೆ ೧ ಅನ್ನು ಎಂಒಇಎಫ್/ಎಸ್‌ಇಐಎಎ ಜಾಲತಾಣದಲ್ಲಿ ಪ್ರದರ್ಶಿಸಬೇಕಾಗುತ್ತದೆ.**

## ೧. ಯೋಜನಾ ಪ್ರತಿಪಾದಕರು/ಅರ್ಜಿದಾರರು ಇಐಎ ನಡೆಸಲು ಅರ್ಜಿ ಸಲ್ಲಿಸುವಿಕೆ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ (ಎಸ್‌ಪಿಸಿಬಿ)ಯು ಸಾರ್ವಜನಿಕ ಸಮಾಲೋಚನೆಯನ್ನು ನಡೆಸುವುದು

### ಕಾಲ ಮಿತಿ - ೪೫ ದಿನಗಳು

೧. ಒಪ್ಪಂದದ ಕರಾರು ಪಡೆದುಕೊಂಡ ನಂತರ, ಯೋಜನಾ ಪ್ರತಿಪಾದಕರು/ಅರ್ಜಿದಾರರು ಇಐಎ ಅಧ್ಯಯನವನ್ನು ಮಾಡಲು ಒಬ್ಬರು ಮಾನ್ಯತೆ ಪಡೆದುಕೊಂಡ ಸಮಾಲೋಚಕರನ್ನು

ತೊಡಗಿಸಿಕೊಳ್ಳುತ್ತಾರೆ ಮತ್ತು ಕರಡು ಇಐಎ ವರದಿಯನ್ನು ಸಿದ್ಧಪಡಿಸುತ್ತಾರೆ (ಈ ಕರಡು ಸಿದ್ಧಪಡಿಸುವುದು ಕನಿಷ್ಠ ೩ ತಿಂಗಳನ್ನು ತೆಗೆದುಕೊಳ್ಳುತ್ತದೆ, ಏಕೆಂದರೆ ಇದು ಒಪ್ಪಂದದ ಕರಾರಿನಲ್ಲಿ ಸೂಚಿಸಿರುವಂತೆ ನಿರ್ದಿಷ್ಟಪಡಿಸಿದ ಕೆಲವು ಋತುಗಳಲ್ಲಿ ಅಧ್ಯಯನಗಳನ್ನು ಮಾಡುವುದನ್ನು ಅವಲಂಬಿಸಿದೆ).

೬. ಯೋಜನಾ ಪ್ರತಿಪಾದಕರು/ಅರ್ಜಿದಾರರು ಕರಡು ಇಐಎ ವರದಿಯನ್ನು ಎಂಒಇಎಫ್/ಎಸ್‌ಇಐಎಎ ಅವರಿಗೆ ಸಲ್ಲಿಸುತ್ತಾರೆ. ಇದೇ ವೇಳೆಯಲ್ಲಿ ಎಸ್‌ಪಿಸಿಬಿಗೆ ಸಾರ್ವಜನಿಕ ಸಮಾಲೋಚನೆಯನ್ನು ನಡೆಸಲು ಯೋಜನಾ ಪ್ರತಿಪಾದಕರು/ಅರ್ಜಿದಾರರು ಕೋರಿಕೆ ಸಲ್ಲಿಸುತ್ತಾರೆ.

**ಸಾರ್ವಜನಿಕ ಸಮಾಲೋಚನೆಯು ಎರಡು ಭಾಗಗಳನ್ನು ಒಳಗೊಂಡಿದೆ:**

ಎ) ಸಾರ್ವಜನಿಕ ಅಹವಾಲು ಸಭೆಯನ್ನು ಯೋಜನಾ ಸ್ಥಳದಲ್ಲಿ ಅಥವಾ ಅದಕ್ಕೆ ಹತ್ತಿರದ ಸ್ಥಳದಲ್ಲಿ ಯೋಜನೆಯಿಂದ ಪರಿಣಾಮಕ್ಕೊಳಗಾಗುವ ಸ್ಥಳೀಯ ಜನರ ಕಾಳಜಿಗಳನ್ನು ದೃಢಪಡಿಸಲು ನಡೆಸುವುದು

ಬಿ) ಸಂಬಂಧಿತ ವ್ಯಕ್ತಿಗಳು ಯೋಜನೆಯಿಂದ ಅಥವಾ ಅದರ ಚಟುವಟಿಕೆಗಳಿಂದ ಸಮಾಜೋ-ಆರ್ಥಿಕ ಅಂಶಗಳ ಮೇಲೆ ಆಗುವ ಸಂಭಾವ್ಯ ಪರಿಣಾಮಗಳ ಕುರಿತ ಲಿಖಿತ ಪ್ರತಿಕ್ರಿಯೆಗಳನ್ನು ನೀಡಬಹುದು. ಎಂಒಇಎಫ್/ಎಸ್‌ಇಐಎಎ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಗಳು ಯೋಜನೆ ಕುರಿತು ಲಿಖಿತ ಪ್ರಕ್ರಿಯೆಗಳನ್ನು ಆಹ್ವಾನಿಸಬೇಕು.

**ಕರಡು ಇಐಎ ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ:**

- ಯೋಜನೆಯ ವಿವರಣೆ
- ಪರಿಸರದ ವಿವರಣೆ - ಮೂಲಾಧಾರ ಮಾಹಿತಿ, ಜನಸಂಖ್ಯೆ, ಭೌಗೋಳಿಕ ವಿವರಗಳು, ಅಧ್ಯಯನ ಪ್ರದೇಶದಲ್ಲಿ ಪಾರಿಸರಿಕವಾಗಿ ಸೂಕ್ಷ್ಮ ಗುಣಲಕ್ಷಣಗಳು
- ಯೋಜನೆಯಿಂದಾಗುವ ಅಂದಾಜು ಮಾಡಲಾದ ಪರಿಸರ ಮತ್ತು ಸಾಮಾಜಿಕ ಪರಿಣಾಮಗಳು
- ಪರ್ಯಾಯ ಸಂಪನ್ಮೂಲಗಳು ಮತ್ತು ತಂತ್ರಜ್ಞಾನದ ವಿಶ್ಲೇಷಣೆ
- ಪಾರಿಸರಿಕ ಮೇಲ್ವಿಚಾರಣಾ ಕಾರ್ಯಕ್ರಮ
- ಹೆಚ್ಚುವರಿ ಅಧ್ಯಯನಗಳು: ಯೋಜನೆಯಿಂದ ಹಾನಿಗೀಡಾಗುವ ಕುಟುಂಬಗಳಿಗೆ ಪರಿಹಾರ, ಅಧ್ಯಯನ ಪ್ರದೇಶದಲ್ಲಿರುವ ಸಮಾಜೋ-ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳ ವಿವರಗಳು, ಯೋಜನೆಯ ಅಪಾಯ ಸಾಧ್ಯತೆಯ ಮೌಲ್ಯಮಾಪನ, ಪ್ರಸ್ತಾಪಿತ ರಕ್ಷಣಾ ಕ್ರಮಗಳು
- ಪರಿಸರ ನಿರ್ವಹಣಾ ಯೋಜನೆ - ಪ್ರಸ್ತಾಪಿತ ದುಷ್ಪರಿಣಾಮ ತಗ್ಗಿಸುವ ಕ್ರಮಗಳು, ಅವುಗಳ ಅನುಷ್ಠಾನದ ವೆಚ್ಚ, ಸ್ಥಳದಲ್ಲಿ ಮತ್ತು ಸ್ಥಳದಿಂದ ದೂರ ವಿಕೋಪ ನಿರ್ವಹಣಾ ಯೋಜನೆ (ಇಐಎ ಕರಡು ಸಂರಚನೆಗಾಗಿ ಅನುಬಂಧ ಸಿ ಅನ್ನು ನೋಡಿ)

ಸಾರ್ವಜನಿಕ ಸಮಾಲೋಚನೆಯನ್ನು ನಡೆಸಿ, ಅಹವಾಲು ಸಭೆಯ ಕಲಾಪಗಳು, ಸಾರ್ವಜನಿಕರು ಎತ್ತಿದ ಸಮಸ್ಯೆಗಳು ಮತ್ತು ಅರ್ಜಿದಾರರ ಉತ್ತರಗಳು/ಅಭಿಪ್ರಾಯಗಳು, ಸಭೆಯ ವಿಡಿಯೋ ಚಿತ್ರೀಕರಣ ಮತ್ತು ಸ್ವೀಕರಿಸಲಾದ ಲಿಖಿತ ಪ್ರತಿಕ್ರಿಯೆಗಳನ್ನು ಒಳಗೊಂಡ ಸಾರ್ವಜನಿಕ ಅಹವಾಲು ಸಭೆಯ ವರದಿಯನ್ನು ಎಸ್‌ಪಿಸಿಬಿಯು ಎಂಒಇಎಫ್/ಎಸ್‌ಇಐಎಎಗೆ ಅರ್ಜಿದಾರರಿಗೆ ಕೋರಿಕೆ ಬಂದ ೪೫ ದಿನಗಳ ಒಳಗೆ ಸಲ್ಲಿಸುತ್ತದೆ.

ಹೆಚ್ಚಿನ ವಿವರಗಳಿಗೆ, ಸಾರ್ವಜನಿಕ ಸಮಾಲೋಚನಾ ಪ್ರಕ್ರಿಯೆಯಲ್ಲಿ ಪರಿಣಾಮಕಾರಿ ಭಾಗವಹಿಸುವಿಕೆ ಅಧ್ಯಾಯವನ್ನು ನೋಡಿ.

೬. ಎಂಒಇಎಫ್/ಎಸ್‌ಇಐಎಎದಿಂದ ಇಸಿ ನೀಡುವಿಕೆ/ಅರ್ಜಿಯ ತಿರಸ್ಕರಿಸುವಿಕೆ

ನಿಗದಿತ ಕಾಲ ಮಿತಿ - ೧೩೫ ದಿನಗಳು

೧. ಯೋಜನೆಯ ಪ್ರತಿಪಾದಕರು/ಅರ್ಜಿದಾರರು ಸಾರ್ವಜನಿಕ ಸಮಾಲೋಚನಾ ಪ್ರಕ್ರಿಯೆಯಲ್ಲಿ ವ್ಯಕ್ತಪಡಿಸಲಾದ ಸಾಮಾಜಿಕ -ಪಾರಿಸರಿಕ ಕಾಳಜಿಗಳನ್ನು ಉದ್ದೇಶಿಸಬೇಕು ಮತ್ತು ಕರಡು ಇಐಎ ವರದಿಯಲ್ಲಿ ಸಮರ್ಪಕವಾದ ಬದಲಾವಣೆಗಳನ್ನು ಮಾಡಬೇಕು. ಪರಿಷ್ಕೃತ ದಾಖಲೆಯನ್ನು ಅಂತಿಮ ಇಐಎ ವರದಿ ಎಂದು ಕರೆಯುತ್ತಾರೆ.

೨. ಅಂತಿಮ ಇಐಎ ವರದಿಯನ್ನು ಎಂಒಇಎಫ್/ಎಸ್‌ಇಐಎಎ ಮೌಲ್ಯನಿರ್ಣಯಕ್ಕೆ ಸಲ್ಲಿಸಲಾಗುವುದು. (ಪರ್ಯಾಯವಾಗಿ, ಯೋಜನಾ ಪ್ರತಿಪಾದಕರು/ಅರ್ಜಿದಾರರು ಸಾರ್ವಜನಿಕ ಸಮಾಲೋಚನೆಯಲ್ಲಿ ವ್ಯಕ್ತಪಡಿಸಲಾದ ಎಲ್ಲ ಕಾಳಜಿಗಳನ್ನು ಉದ್ದೇಶಿಸಲು ಒಂದು ಪೂರಕ ವರದಿಯನ್ನು ಸಲ್ಲಿಸಬಹುದು. ಇದು ಮತ್ತು ಕರಡು ಇಐಎ ಸೇರಿ ಅಂತಿಮ ಇಐಎ ಆಗುತ್ತದೆ.

೩. ಯೋಜನಾ ಪ್ರತಿಪಾದಕರು ಈ ಕೆಳಗಿನವುಗಳನ್ನು ಎಂಒಇಎಫ್/ಎಸ್‌ಇಐಎಎಗೆ ಸಲ್ಲಿಸುತ್ತಾರೆ:

- ಅಂತಿಮ ಇಐಎ ವರದಿ (೨೦ ಮುದ್ರಿತ ಪ್ರತಿಗಳು, ೧ ಸಾಫ್ಟ್ ಪ್ರತಿ)
- ಅಂತಿಮ ಲೇಔಟ್ ಯೋಜನೆ (೨೦ ಪ್ರತಿಗಳು)
- ಯೋಜನಾ ಕಾರ್ಯಸಾಧ್ಯತೆ ವರದಿ (೧ ಪ್ರತಿ)

ಯೋಜನಾ ಪ್ರತಿಪಾದಕರು ಸಾರ್ವಜನಿಕ ಅಹವಾಲು ಸಭೆಯ ಕಲಾಪಗಳ ಒಂದು ವಿಡಿಯೋಟೇಪ್ ಅಥವಾ ಸಿಡಿಯನ್ನೂ ಸಲ್ಲಿಸಬಹುದಾಗಿದೆ (೧ ಪ್ರತಿ)

೪. ಈ ಎಲ್ಲ ದಾಖಲೆಗಳನ್ನು ಸ್ವೀಕರಿಸಿದ ೩೦ ದಿನಗಳ ಒಳಗೆ, ಒಪ್ಪಂದದ ಕರಾರುಗಳಲ್ಲಿ ಉಲ್ಲೇಖಿಸಿದ ಕರಾರುಗಳಿಗೆ ಇವೆಲ್ಲವೂ ಬದ್ಧವಾಗಿದೆಯೇ ಎಂಬುದನ್ನು ಎಂಒಇಎಫ್ ಪರೀಕ್ಷಣೆ ಮಾಡುತ್ತದೆ. ಪರೀಕ್ಷಣೆಯ ನಂತರ ಎಂಒಇಎಫ್ ಏನಾದರೂ ಅಸಮರ್ಪಕತೆಗಳನ್ನು ಗಮನಿಸಿದರೆ, ಆ ಕುರಿತು ಒಂದು ವೀಕ್ಷಣಾ ವರದಿಯನ್ನು ಇಎಸಿ/ಎಸ್‌ಇಎಸಿಗೆ ವಿದ್ಯುನ್ಮಾನ ಮಾಧ್ಯಮದ ಮುಖಾಂತರ ಅಥವಾ ಹಾಗೆಯೇ ಕಳುಹಿಸುತ್ತಾರೆ. ಪ್ರಸ್ತಾವನೆಯನ್ನು ಪರಿಗಣಿಸಲಿರುವ ಇಎಸಿ/ಎಸ್‌ಇಎಸಿ ಸಭೆಯ ನಿಗದಿಯಾದ ದಿನಾಂಕವನ್ನೂ ಕೂಡ ಉಲ್ಲೇಖಿಸಲಾಗುತ್ತದೆ.

೫. ಸಭೆಯಲ್ಲಿ ಹಾಜರಿರುವಂತೆ ಯೋಜನಾ ಪ್ರಸ್ತಾಪಕರಿಗೆ ಒಂದು ಪತ್ರ ಮತ್ತು ಯೋಜನೆಯ ಬಗ್ಗೆ ಅಗತ್ಯವಿದ್ದರೆ ಸ್ಪಷ್ಟೀಕರಣಗಳನ್ನು ಒದಗಿಸುವಂತೆ, ವೈಯಕ್ತಿಕವಾಗಿ ಅಥವಾ ಯಾರಾದರೂ ಅಧಿಕೃತತೆ ಇರುವ ಪ್ರತಿನಿಧಿಯ ಮೂಲಕ ಎಂಒಇಎಫ್/ಎಸ್‌ಇಐಎಎದಿಂದ ಕಳಿಸಲಾಗುತ್ತದೆ. ಇಎಸಿ/ಎಸ್‌ಇಎಸಿ ಸಭೆ ಬಗ್ಗೆ ಯೋಜನಾ ಪ್ರತಿಪಾದಕರಿಗೆ ಕನಿಷ್ಠ ೧೫ ದಿನಗಳ ಮೊದಲು ತಿಳಿಸಬೇಕು.

೬. ಇಎಸಿ/ಎಸ್‌ಇಎಸಿಯು ಅಗತ್ಯವಿರುವ ದಾಖಲೆಗಳನ್ನು ಪಡೆದ ೬೦ ದಿನಗಳ ಒಳಗೆ ಅರ್ಜಿಯ ಮೌಲ್ಯನಿರ್ಣಯವನ್ನು ಮಾಡಬೇಕು. ಇಎಸಿ/ಎಸ್‌ಇಎಸಿಯು ಪಾರಿಸರಿಕ ಅನುಮತಿ ನೀಡಲು ಶಿಫಾರಸು ಮಾಡಿದರೆ, ಸಭಾ ನಡಾವಳಿಯಲ್ಲಿ ನಿರ್ದಿಷ್ಟ ಪಾರಿಸರಿಕ ರಕ್ಷಣಾ ಕ್ರಮಗಳನ್ನು ಮತ್ತು ಕರಾರುಗಳನ್ನು ಸ್ಪಷ್ಟವಾಗಿ ಪಟ್ಟಿ ಮಾಡಬೇಕು. ಅರ್ಜಿಯನ್ನು ತಿರಸ್ಕರಿಸಲು ಶಿಫಾರಸು ಮಾಡಿದರೆ, ಅದಕ್ಕೆ ಕಾರಣಗಳನ್ನೂ ಪಟ್ಟಿ ಮಾಡಬೇಕು.

೭. ಇಎಸಿ/ಎಸ್‌ಇಎಸಿ ಸಭೆಯ ನಡಾವಳಿಗಳನ್ನು ೫ ಕೆಲಸದ ದಿನಗಳ ಒಳಗೆ ಅಂತಿಮಗೊಳಿಸಬೇಕು ಮತ್ತು ಎಂಒಇಎಫ್/ಎಸ್‌ಇಐಎಎ ಜಾಲತಾಣದಲ್ಲಿ ಪ್ರದರ್ಶಿಸಬೇಕು.

೮. ಎಂಒಇಎಫ್/ಎಸ್‌ಇಐಎಎ ಯೋಜನಾ ಪ್ರತಿಪಾದಕರಿಗೆ ಪಾರಿಸರಿಕ ಅನುಮತಿಯನ್ನು ನೀಡುವ ಅಥವಾ ಅರ್ಜಿಯನ್ನು ತಿರಸ್ಕರಿಸುವ ಸ್ಥಿತಿಗತಿ ಕುರಿತು ತಿಳಿಸಬೇಕು - ಇಎಸಿ/ಎಸ್‌ಇಎಸಿಯಿಂದ ಮಾಹಿತಿಯನ್ನು ಸ್ವೀಕರಿಸಿದ ೪೫ ದಿನಗಳ ಒಳಗೆ ತಿಳಿಸಬೇಕು.

ಈ ಸಮಯದ ನಂತರ, ಇಸಿಯನ್ನು ನೀಡುವ ಅಥವಾ ತಿರಸ್ಕರಿಸುವ ಕುರಿತ ಇಎಸಿ/ಎಸ್‌ಇಎಸಿಯ ಶಿಫಾರಸುಗಳು ಸಾರ್ವಜನಿಕ ದಾಖಲೆಗಳಾಗುತ್ತವೆ. ಹೀಗೆ ಎಂಒಇಎಫ್/ಎಸ್‌ಇಐಎಎ ೭ನೇ ಅಂಶದಲ್ಲಿ ಹೇಳಿದ ಕಾಲಮಿತಿಯಲ್ಲಿ ಅಂದರೆ ೫ ದಿನಗಳಲ್ಲಿ ಯೋಜನಾ ಪ್ರತಿಪಾದಕರಿಗೆ ನಿರ್ಧಾರವನ್ನು ತಿಳಿಸಲಿಲ್ಲ ಎಂದಾದರೆ, ಇಎಸಿ/ಎಸ್‌ಇಎಸಿಯ ಅಂತಿಮ ಶಿಫಾರಸುಗಳ ಆಧಾರದಲ್ಲಿ ಇಸಿ ನೀಡಲಾಗಿದೆ ಎಂದು ಅಥವಾ ನಿರಾಕರಿಸಲಾಗಿದೆ ಎಂದು ತಿಳಿದು ಯೋಜನಾ ಪ್ರತಿಪಾದಕರು ಮುಂದುವರೆಯಬಹುದು.

ಸಾರ್ವಜನಿಕ ಅಹವಾಲು ಸಭೆಯ ವರದಿಯನ್ನು ಎಸ್‌ಪಿಸಿಬಿ ಕಚೇರಿಯಲ್ಲದೇ ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತು ಜಿಲ್ಲಾ ನ್ಯಾಯಾಧೀಶರ ಕಚೇರಿಗಳಲ್ಲಿ ಎದ್ದು ಕಾಣುವಂತೆ ಪ್ರದರ್ಶಿಸಬೇಕು. ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯು ತನ್ನ (ಎಸ್‌ಪಿಸಿಬಿ) ಜಾಲತಾಣದಲ್ಲಿ ವರದಿಯನ್ನು ಅಪ್‌ಲೋಡ್ ಮಾಡಬೇಕು ಮತ್ತು ಎಂಒಇಎಫ್/ಎಸ್‌ಇಐಎಎ ಸಾರ್ವಜನಿಕರಿಂದ ಸ್ವೀಕರಿಸಿದ ಎಲ್ಲ ಪ್ರತಿಕ್ರಿಯೆಗಳನ್ನು ಸಾರ್ವಜನಿಕ ಸಮಾಲೋಚನಾ ಪ್ರಕ್ರಿಯೆಯ ಭಾಗವಾಗಿ ಯೋಜನಾ ಪ್ರತಿಪಾದಕರೊಂದಿಗೆ ಹಂಚಿಕೊಳ್ಳಬೇಕು.

**ಪಾರಿಸರಿಕ ಅನುಮತಿ ನಿರ್ಧಾರದ ಮರುಪರಿಗಣನೆ: ೧೩೫ ದಿನಗಳು**

ಇಎಸಿ/ಎಸ್‌ಇಎಸಿಯ ಶಿಫಾರಸುಗಳನ್ನು ಎಂಒಇಎಫ್/ಎಸ್‌ಇಐಎಎ ಸಾಮಾನ್ಯವಾಗಿ ಸ್ವೀಕರಿಸುತ್ತದೆ. ಶಿಫಾರಸುಗಳು ಒಪ್ಪಿಗೆಯಾಗದಿದ್ದಲ್ಲಿ, ಎಂಒಇಎಫ್/ಎಸ್‌ಇಐಎಎ, ಒಪ್ಪದೇ ಇರುವುದಕ್ಕೆ ಕಾರಣಗಳನ್ನು ಹೇಳಿ, ಇಎಸಿ/ಎಸ್‌ಇಎಸಿಯ ಶಿಫಾರಸುಗಳನ್ನು ಮರುಪರಿಗಣನೆ ಮಾಡುವುದಕ್ಕೆ ಕೋರಿಕೊಳ್ಳಬಹುದು. ಶಿಫಾರಸುಗಳನ್ನು ಸ್ವೀಕರಿಸಿದ ೪೫ ದಿನಗಳ ಒಳಗೆ ಕೋರಿಕೆಯನ್ನು ಕಳುಹಿಸಬೇಕು.

ಹಾಗೆಯೇ, ಈ ನಿರ್ಧಾರದ ಕುರಿತು ಯೋಜನಾ ಪ್ರತಿಪಾದಕರಿಗೆ ಒಂದು ಸೂಚನೆ ತಿಳಿಸಬೇಕು.

ಇಎಸಿ/ಎಸ್‌ಇಎಸಿಯು ಎಂಒಇಎಫ್/ಎಸ್‌ಇಐಎಎ ಗಮನಿಸಿದ ಅಂಶಗಳನ್ನು ಪರಿಗಣಿಸಬೇಕು ಮತ್ತು ತನ್ನ ದೃಷ್ಟಿಕೋನಗಳನ್ನು ೬೦ ದಿನಗಳ ಒಳಗೆ ವ್ಯಕ್ತಪಡಿಸಬೇಕು.

ನಂತರ ಇಎಸಿ/ಎಸ್‌ಇಎಸಿಯು ವ್ಯಕ್ತಪಡಿಸಿದ ದೃಷ್ಟಿಕೋನಗಳನ್ನು ಎಂಒಇಎಫ್/ಎಸ್‌ಇಐಎಎ ಪರಿಗಣಿಸಬೇಕು ಮತ್ತು ಇಸಿ ನೀಡುವ ಕುರಿತು ನಿರ್ಧಾರ ಮಾಡಬೇಕು. ಎಂಒಇಎಫ್/ಎಸ್‌ಇಐಎಎಯ ನಿರ್ಧಾರವು ಅಂತಿಮವಾಗಿದ್ದು, ಅದನ್ನು ಯೋಜನಾ ಪ್ರತಿಪಾದಕರಿಗೆ ಮುಂದಿನ ೩೦ ದಿನಗಳ ಒಳಗೆ ತಿಳಿಸಬೇಕು.

**ಇಸಿಯ ಊರ್ಜಿತತೆ**

ಟಿಪಿಪಿಗೆ ಇಸಿಯ ಊರ್ಜಿತತೆಯು ಇಸಿಯನ್ನು ನೀಡಿದ ದಿನಾಂಕದಿಂದ ಹಿಡಿದು ಉತ್ಪಾದನಾ ಕಾರ್ಯಾಚರಣೆಯನ್ನು ಆರಂಭಿಸುವವರೆಗೆ ೫ ವರ್ಷಗಳವರೆಗೆ ಇರುತ್ತದೆ,

ಇಸಿಯನ್ನು ನವೀಕರಿಸಿಕೊಳ್ಳಲು, ಎಂಒಇಎಫ್/ಎಸ್‌ಇಐಎಎಗೆ ಅರ್ಜಿಯೊಂದನ್ನು, ಪರಿಷ್ಕರಿಸಿದ ನಮೂನೆ ೧ರ ಜೊತೆಯಲ್ಲಿ ಊರ್ಜಿತತೆ ಅವಧಿಯ ಒಳಗೆ ಸಲ್ಲಿಸಬೇಕು. ಎಂಒಇಎಫ್/ಎಸ್‌ಇಐಎಎ ಅಗತ್ಯ ಬಿದ್ದರೆ ಇಎಸಿ/ಎಸ್‌ಇಎಸಿಯನ್ನು ಸಮಾಲೋಚಿಸಬಹುದು.

**ಪಾರಿಸರಿಕ ಅನುಮತಿಯನ್ನು ರದ್ದು ಪಡಿಸುವುದು**

ಯೋಜನಾ ಪ್ರತಿಪಾದಕರು ಇಸಿಯನ್ನು ಪಡೆಯಲು ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿದ್ದಾರೆ ಅಥವಾ ಸುಳ್ಳು ಅಥವಾ ತಪ್ಪುದಾರಿಗೆಳೆಸುವ ಮಾಹಿತಿಯನ್ನು ಸಲ್ಲಿಸಿದ್ದಾರೆ ಎಂದು ಕಂಡುಬಂದರೆ ಮತ್ತು ಯೋಜನೆಯು ಪ್ರತಿಕೂಲ ಅಥವಾ ಋಣಾತ್ಮಕ ಪರಿಣಾಮಗಳನ್ನು ಅಥವಾ ಸಮಾಜೋ-ಆರ್ಥಿಕ ಪರಿಣಾಮಗಳನ್ನು ಹೊಂದಿದೆ ಎಂದಾದರೆ, ಇಸಿಯನ್ನು ರದ್ದುಪಡಿಸಬಹುದು. ಎಂಒಇಎಫ್/ಎಸ್‌ಇಐಎಎಯು ಯೋಜನಾ ಪ್ರತಿಪಾದಕರಿಗೆ ವೈಯಕ್ತಿಕವಾಗಿ ಅಹವಾಲಿಗೆ ಆಸ್ಪದ ನೀಡಿದ ನಂತರ ಮತ್ತು ಸ್ವಾಭಾವಿಕ ನ್ಯಾಯದ ತತ್ವಗಳನ್ನು ಅನುಸರಿಸಿ, ನಿರ್ಧಾರವನ್ನು ಮಾಡುವುದು.

## ೧.೩.೪ ಪ್ರಸ್ತುತ ಇರುವ ಟಿಪಿಪಿಗಳಿಗೆ ಪಾರಿಸರಿಕ ಅನುಮತಿ(ಇಸಿ) ಪಡೆಯುವುದು (ವಿಸ್ತರಣೆ/ ಆಧುನೀಕರಣ/ಉತ್ಪನ್ನ ಮಿಶ್ರಣ ಬದಲಾವಣೆ)

೧. ಈ ಕೆಳಗಿನ ಎಲ್ಲದಕ್ಕೆ ಇಸಿ ಪಡೆಯುವ ಮೊದಲು ಎಲ್ಲ ಅರ್ಜಿಗಳಿಗೆ ನಮೂನೆ ೧ನ್ನು ಹೊಸದಾಗಿ ಸಲ್ಲಿಸಬೇಕು:

- ಸ್ಥಾವರದ ವಿಸ್ತರಣೆ
- ಇಐಎ ಅಧಿಸೂಚನೆಯ ಪಟ್ಟಿಯಲ್ಲಿ ಉಲ್ಲೇಖಿಸಲಾದ ಗರಿಷ್ಠ ಸಾಮರ್ಥ್ಯವನ್ನು ಮೀರಿ, ಉತ್ಪಾದನಾ ಸಾಮರ್ಥ್ಯದ ಹೆಚ್ಚಳದೊಂದಿಗೆ ಪ್ರಸ್ತುತ ಇರುವ ಸ್ಥಾವರದ ಆಧುನೀಕರಣ*
- ಪ್ರಸ್ತುತ ಇರುವ ಸ್ಥಾವರದ ಉತ್ಪನ್ನ ಮಿಶ್ರಣ ಬದಲಾವಣೆ

ವಿಸ್ತರಣೆಯ ಪ್ರಮಾಣವನ್ನು ಆಧರಿಸಿ, ಎಂಒಇಎಫ್/ಎಸ್‌ಇಐಎಎಗಳಿಗೆ ಅರ್ಜಿಗಳನ್ನು ಸಲ್ಲಿಸಬೇಕು.

೧. ಇಎಸಿ/ಎಸ್‌ಇಎಸಿಯು ೬೦ ದಿನಗಳ ಒಳಗೆ ಅರ್ಜಿಗಳನ್ನು ಪರಿಗಣಿಸುವುದು

೨. ಇಎಸಿ/ಎಸ್‌ಇಎಸಿಯು ಅಗತ್ಯವಿದ್ದರೆ ಇಐಎ ಮತ್ತು ಸಾರ್ವಜನಿಕ ಸಮಾಲೋಚನೆಯೂ ಸೇರಿದಂತೆ ಸೂಕ್ತ ಪರಿಶೀಲನೆಯೊಂದಿಗೆ ನಿರ್ಧಾರ ಮಾಡುತ್ತದೆ. ಅದಕ್ಕೆ ಅನುಗುಣವಾಗಿ ಅರ್ಜಿಯನ್ನು ಇಸಿ ಅನುಮೋದನೆಗಾಗಿ ಮೌಲ್ಯನಿರ್ಣಯ ಮಾಡುತ್ತದೆ.

*ಎಸ್‌ಇಐಎಎದಿಂದ ನೀಡಲಾಗುವ ಇಸಿಗೆ, ಟಿಪಿಪಿಗಳ ಗರಿಷ್ಠ ಸಾಮರ್ಥ್ಯವು ೫೦೦ ಮೆ.ವ್ಯಾ. ಆಗಿದೆ. ಆದ್ದರಿಂದ ೩೦೦ ಮೆ.ವ್ಯಾ. ಸ್ಥಾವರವು ಆಧುನೀಕರಣದ ನಂತರ, ೫೦೦ ಮೆ.ವ್ಯಾ.ಗಿಂತ ಹೆಚ್ಚಾಗುವುದಾದರೆ, ಆಗ ಎಂಒಇಎಫ್‌ದಿಂದ ಇಐಎ ಪ್ರಕ್ರಿಯೆಯ ಎಲ್ಲ ಹಂತಗಳನ್ನು ಒಳಗೊಂಡಂತೆ ಪೂರ್ವಭಾವಿ ಪಾರಿಸರಿಕ ಅನುಮತಿಯನ್ನು ಪಡೆಯುವುದು ಅಗತ್ಯವಾಗುತ್ತದೆ.

## ೧.೩.೫ ಇಸಿ ಪಡೆದ ನಂತರ ಟಿಪಿಪಿಗಳ ಮೇಲ್ವಿಚಾರಣೆ

ಯೋಜನಾ ಪ್ರತಿಪಾದಕರು ಇಸಿಯಲ್ಲಿ ವಿಧಿಸಲಾದ ನಿಯಮಾವಳಿಗಳು ಮತ್ತು ಕರಾರುಗಳಿಗೆ ಅನುಗುಣವಾಗಿ ಅರ್ಧ ವಾರ್ಷಿಕ ಅನುವರ್ತನಾ ವರದಿಗಳನ್ನು, ಪ್ರತಿ ವರ್ಷ ಜೂನ್ ೧ ಮತ್ತು ಡಿಸೆಂಬರ್ ೧ರಂದು ಎಂಒಇಎಫ್/ಎಸ್‌ಇಐಎಎಗೆ ಮುದ್ರಿತ ಮತ್ತು ಸಾಫ್ಟ್ ಪ್ರತಿಗಳನ್ನು ಸಲ್ಲಿಸಬೇಕು. ಈ ಪ್ರತಿಯೊಂದೂ ಸಾರ್ವಜನಿಕ ದಾಖಲೆಗಳಾಗಿದ್ದು, ಎಂಒಇಎಫ್/ಎಸ್‌ಇಐಎಎಗೆ ಅರ್ಜಿ ನೀಡಿ ಪಡೆದುಕೊಳ್ಳಬಹುದಾಗಿದೆ.

ಇತ್ತೀಚಿನ ಅನುವರ್ತನಾ ವರದಿಯನ್ನು ಎಂಒಇಎಫ್/ಎಸ್‌ಇಐಎಎ ಜಾಲತಾಣದಲ್ಲಿ ಪ್ರದರ್ಶಿಸಬೇಕು.

## ೧.೩.೬ ಇಸಿಯ ವರ್ಗಾವಣೆ ಸಾಧ್ಯತೆ

ಯೋಜನಾ ಪ್ರತಿಪಾದಕರಿಗೆ ಯೋಜನೆಯೊಂದಕ್ಕೆ ನೀಡಲಾದ ಇಸಿಯನ್ನು ಅದರ ಊರ್ಜಿತತೆ ಇರುವ ಅವಧಿಯಲ್ಲಿ ಇನ್ನೊಬ್ಬ ವ್ಯಕ್ತಿ ಅದೇ ಯೋಜನೆಯನ್ನು ಕೈಗೆತ್ತಿಕೊಳ್ಳಲು ವರ್ಗಾಯಿಸಬಹುದಾಗಿದೆ. ಅಂತಹ ಸಂದರ್ಭದಲ್ಲಿ, ವರ್ಗಾಯಿಸುತ್ತಿರುವ ವ್ಯಕ್ತಿಯಿಂದ ಅಥವಾ ವರ್ಗಾವಣೆ ಪಡೆದ ವ್ಯಕ್ತಿಯಿಂದ ವರ್ಗಾಯಿಸಿದ ವ್ಯಕ್ತಿಯಿಂದ ನಿರಾಕ್ಷೇಪಣಾ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸಬೇಕಾಗುತ್ತದೆ. ಊರ್ಜಿತತೆಯ ಅವಧಿ, ನಿಯಮಗಳು ಮತ್ತು ಕರಾರುಗಳು ಎಲ್ಲವೂ ಇಸಿಯಲ್ಲಿ ವಿಧಿಸಲಾದಂತೆ ಹಾಗೆಯೇ ಜಾರಿ ಇರುತ್ತವೆ. ಇದಕ್ಕೆ ಸಂಬಂಧಿಸಿದಂತೆ ಇಎಸಿ/ಎಸ್‌ಇಎಸಿಯಿಂದ ಯಾವುದೇ ಪುನಾ ದೃಢೀಕರಣದ ಅಗತ್ಯವಿರುವುದಿಲ್ಲ.

## 2.1 ಸಾರ್ವಜನಿಕ ಸಮಾಲೋಚನಾ ಪ್ರಕ್ರಿಯೆಯಲ್ಲಿ ಪರಿಣಾಮಕಾರಿ ಭಾಗವಹಿಸುವಿಕೆ


**2.2.1 ಸಾರ್ವಜನಿಕ ಸಮಾಲೋಚನಾ ಪ್ರಕ್ರಿಯೆಯ ಸಂಕ್ಷಿಪ್ತರೂಪ**
**2.2.2 ಸಾರ್ವಜನಿಕ ಸಮಾಲೋಚನೆಯ ಸಂರಚನೆ ಮತ್ತು ಉದ್ದೇಶ**
**2.2.3 ಸಾರ್ವಜನಿಕ ಸಮಾಲೋಚನೆಯ ಕಾಲಾವಧಿ**
**2.2.4 ಸಾರ್ವಜನಿಕ ಸಮಾಲೋಚನೆ ಹರಿವುನಕ್ಷೆ (ಫ್ಲೋಚಾರ್ಟ್)**
**2.2.5 ಆಗಾಗ ಕೇಳುವ ಪ್ರಶ್ನೆಗಳು (ಎಫ್ಎಕ್ಯು)**
**2.2.6 ಸಾರ್ವಜನಿಕ ಅಹವಾಲು ಸಭೆಗಳಲ್ಲಿ ನಿಮ್ಮ ಹಕ್ಕುಗಳನ್ನು ಪ್ರತಿಪಾದಿಸಿ!**


### 2.2.1 ಸಾರ್ವಜನಿಕ ಸಮಾಲೋಚನಾ ಪ್ರಕ್ರಿಯೆಯ ಸಂಕ್ಷಿಪ್ತರೂಪ

ಸಾರ್ವಜನಿಕ ಸಮಾಲೋಚನೆಯು ಸದ್ಯದ ಸಂದರ್ಭದಲ್ಲಿ, ಸ್ಥಳೀಯ ಸಮುದಾಯಗಳಿಗೆ ಮತ್ತು ಟಿಪಿಪಿಯನ್ನು ಪ್ರಸ್ತಾಪಿಸಲಾದ ಪ್ರದೇಶದ ಪರಿಸರದಲ್ಲಿ ಪಾಲು ಇರುವ ಎಲ್ಲರಿಗೂ ತಮ್ಮ ಪ್ರಶ್ನೆಗಳಿಗೆ ಸ್ಪಷ್ಟೀಕರಣವನ್ನು ಪಡೆಯಲು, ತಮ್ಮ ಕಾಳಜಿಗಳನ್ನು ವ್ಯಕ್ತಪಡಿಸಲು ಮತ್ತು ಯೋಜನೆಯು ಅವರ ಹಕ್ಕುಗಳನ್ನು ಮೊಟಕುಗೊಳಿಸುತ್ತಿದ್ದರೆ, ಯೋಜನೆಗೆ ತಮ್ಮ ವಿರೋಧವನ್ನು ನ್ಯಾಯಸಮ್ಮತವಾಗಿ ದಾಖಲಿಸಲು ಲಭ್ಯವಿರುವ ಒಂದು ಅತ್ಯುತ್ತಮ ಮತ್ತು ಅತಿ ದೊಡ್ಡ ವೇದಿಕೆಯಾಗಿದೆ. ಸಾರ್ವಜನಿಕ ಸಮಾಲೋಚನೆ ಪ್ರಕ್ರಿಯೆಯ ಫಲಿತಾಂಶವು ಭಾಗವಹಿಸಿದ ಜನರ ಸಂಖ್ಯೆ ಮತ್ತು ಸಾರ್ವಜನಿಕರ ಪರಿಣಾಮಕಾರಿ ಭಾಗವಹಿಸುವಿಕೆ, ಎರಡನ್ನೂ ಅವಲಂಬಿಸಿರುತ್ತದೆ. ಸಾರ್ವಜನಿಕರ ವಿಚಾರಣೆಗಳು, ಕಾಳಜಿಗಳು ಮತ್ತು ಪ್ರತಿಭಟನೆಗಳನ್ನು ದಾಖಲಿಸಿಕೊಂಡು, ಅವು ಸರಿಯೆಂದು ಕಂಡುಬಂದರೆ ಅರ್ಜಿಯನ್ನು ತಿರಸ್ಕರಿಸಲು ನಿಯಂತ್ರಕ ಪ್ರಾಧಿಕಾರವು ಅದನ್ನು ಬಳಸಿಕೊಳ್ಳಬಹುದಾಗಿದೆ.

ಯೋಜನಾ ಪ್ರಸ್ತಾಪಕರು/ಅರ್ಜಿದಾರರು ಇಐಎ ಕರಡು ವರದಿಯನ್ನು ಎಂಒಇಎಫ್‌ಗೆ ಅಥವಾ ಎಸ್‌ಇಐಎಎಗೆ ಸಲ್ಲಿಸಿ, ಅದೇ ಸಮಯದಲ್ಲಿ ಸಂಬಂಧಿತ ಎಸ್‌ಪಿಸಿಬಿಗೆ ಸಾರ್ವಜನಿಕ ಸಮಾಲೋಚನೆಯನ್ನು ನಡೆಸುವಂತೆ ಪತ್ರವನ್ನು ಸಲ್ಲಿಸಿದ ನಂತರ ಸಾರ್ವಜನಿಕ ಸಮಾಲೋಚನೆಯನ್ನು ನಡೆಸಲಾಗುತ್ತದೆ.

ಪತ್ರವನ್ನು ಸ್ವೀಕರಿಸಿದ ೪೫ ದಿನಗಳ ಒಳಗೆ, ಎಸ್‌ಪಿಸಿಬಿಯು ಸಾರ್ವಜನಿಕ ಸಮಾಲೋಚನಾ ಸಭೆಯನ್ನು ಪೂರ್ಣಗೊಳಿಸಬೇಕು ಮತ್ತು ಎಂಒಇಎಫ್‌ಗೆ ಅಥವಾ ಎಸ್‌ಇಐಎಎಗೆ ವರದಿಯೊಂದನ್ನು ಸಲ್ಲಿಸಬೇಕು. ಎಸ್‌ಪಿಸಿಬಿಯು ಸಾರ್ವಜನಿಕ ಸಮಾಲೋಚನಾ ಪ್ರಕ್ರಿಯೆಯನ್ನು ನಿಗದಿತ ಸಮಯದೊಳಗೆ ಪೂರ್ಣಗೊಳಿಸದಿದ್ದರೆ, ಎಂಒಇಎಫ್/ಎಸ್‌ಇಐಎಎ ಇನ್ನೊಂದು ಏಜೆನ್ಸಿಯನ್ನು ನೇಮಕಗೊಳಿಸಿ, ಅಹವಾಲು ಸಭೆಯನ್ನು ನಡೆಸಬಹುದು.

ಯೋಜನಾ ಪ್ರಸ್ತಾಪಕರು/ಅರ್ಜಿದಾರರು ಈ ಎಲ್ಲ ದೃಷ್ಟಿಕೋನಗಳನ್ನು ಪರಿಗಣನೆಗೆ ತೆಗೆದುಕೊಂಡು, ಇಐಎ ಕರಡನ್ನು ಅದಕ್ಕೆ ಅನುಗುಣವಾಗಿ ಪರಿಷ್ಕರಿಸಬೇಕು. ನಿಯಂತ್ರಕ ಪ್ರಾಧಿಕಾರದಿಂದ ಪಾರಿಸರಿಕ ಅನುಮತಿ (ಇಸಿ) ನೀಡುವುದು/ಅರ್ಜಿಯನ್ನು ತಿರಸ್ಕರಿಸುವುದು ಅಂತಿಮ ಇಐಎ ಸಲ್ಲಿಕೆಯನ್ನು ಅವಲಂಬಿಸಿರುತ್ತದೆ.

ಸಾರ್ವಜನಿಕ ಸಮಾಲೋಚನೆಯು ಎರಡು ಭಾಗಗಳಲ್ಲಿರುತ್ತದೆ:

೧. **ಸಾರ್ವಜನಿಕ ಅಹವಾಲು ಸಭೆ:** ಎಲ್ಲ ಟಿಪಿಪಿಗಳಿಗೂ, ಅವುಗಳ ಸಾಮರ್ಥ್ಯ ಮತ್ತು ಸ್ಥಳ ಎಲ್ಲಿಯೇ ಇದ್ದರೂ, ಇದೊಂದು ಕಡ್ಡಾಯ ಸಭೆಯಾಗಿದ್ದು, ಸರ್ಕಾರಿ ಅಧಿಕಾರಿಗಳು ಇದನ್ನು ನಡೆಸುತ್ತಾರೆ. ಇಲ್ಲಿ ಯೋಜನೆಯ ಪ್ರತಿಪಾದಕ/ಅರ್ಜಿದಾರರು ಸಭೆ ಸೇರಿರುವ ಜನರಿಗೆ ಯೋಜನೆಯ ಕುರಿತು ವಿವರಿಸುತ್ತಾರೆ. ಇದು ಜನರಿಗೆ ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಯೋಜನೆಯ ಕುರಿತು ವಿಚಾರಣೆ ಮಾಡುವುದರ ಜೊತೆಗೆ, ಯೋಜನೆಯ ಬಗ್ಗೆ ತಮ್ಮ ಹಿಂಜರಿಕೆಗಳು/ಕಾಳಜಿಗಳನ್ನು ಧ್ವನಿಯೆತ್ತಿ ಕೇಳಲು ಒಂದು ವೇದಿಕೆಯಾಗಿದೆ. ಸಭೆಯ ನಡಾವಳಿಗಳನ್ನು ಅಧಿಕಾರಿಗಳು ದಾಖಲಿಸಿಕೊಳ್ಳುತ್ತಾರೆ.

೨. ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ವಿಚಾರಣೆ/ಪ್ರಶ್ನೆಗಳು, ಕಾಳಜಿಗಳನ್ನು ಎಸ್‌ಪಿಸಿಬಿ ಮತ್ತು ನಿಯಂತ್ರಕ ಪ್ರಾಧಿಕಾರಕ್ಕೆ ಬರೆದು ಕಳುಹಿಸಬಹುದು.

## 2.1.2 ಸಾರ್ವಜನಿಕ ಸಮಾಲೋಚನೆಯ ಸಂರಚನೆ ಮತ್ತು ಉದ್ದೇಶ

**ಪ್ರಚಾರ**

- ಸಾರ್ವಜನಿಕ ಸಮಾಲೋಚನೆ ಕುರಿತು (ಸಾರ್ವಜನಿಕ ಅಹವಾಲು ಮತ್ತು ಲಿಖಿತ ಪ್ರತಿಕ್ರಿಯೆ) ಪ್ರಕಟಣಾ ಜಾಹೀರಾತುಗಳು ಸ್ಪಷ್ಟವಾಗಿರಬೇಕು ಮತ್ತು ಸಮರ್ಪಕವಾಗಿರಬೇಕು.
- ಆ ಜಿಲ್ಲೆಯಲ್ಲಿ ಪ್ರಸರಣವಿರುವ ಒಂದು ಪ್ರಾದೇಶಿಕ ಭಾಷೆಯ ದೈನಿಕ ಹಾಗೂ ಒಂದು ಇಂಗ್ಲಿಷ್ ದೈನಿಕದಲ್ಲಿ ಜಾಹೀರಾತುಗಳನ್ನು ನೀಡಬೇಕು.

## ಸಾರ್ವಜನಿಕ ಅಹವಾಲು

**ಪ್ರಕಟಣಾ ಅವಧಿ**

ಎಸ್‌ಪಿಸಿಬಿಯು ಸಾರ್ವಜನಿಕರಿಗೆ ಮುಂಬರುವ ಅಹವಾಲು ಸಭೆಯ ಬಗ್ಗೆ ಕನಿಷ್ಠ ಒಂದು ತಿಂಗಳ ಮೊದಲೇ ಪ್ರಕಟನೆ/ಸೂಚನೆ ನೀಡುತ್ತದೆ.

**ಸ್ಥಳ:**

೧. ಸಾರ್ವಜನಿಕ ಅಹವಾಲು ಸಭೆಯ ಸ್ಥಳವು ಯೋಜನಾ ಸ್ಥಳಕ್ಕೆ ಹತ್ತಿರದಲ್ಲಿರಬೇಕು. ರಾಷ್ಟ್ರೀಯ ಹಸಿರು ನ್ಯಾಯಪೀಠ (ನ್ಯಾಶನಲ್ ಗ್ರೀನ್ ಟ್ರಿಬ್ಯುನಲ್) ಆದೇಶವು ಹೇಳುವಂತೆ ಸಾಧ್ಯವಿದ್ದಷ್ಟೂ ಅಹವಾಲು ಸಭೆಯ ಸ್ಥಳವು ಯೋಜನಾ ಸ್ಥಳದ ೧ ಕಿ.ಮೀ. ವ್ಯಾಪ್ತಿಯಲ್ಲಿರಬೇಕು. (ಎಂಒಇಎಫ್ ಮತ್ತು ಇತರರ ವಿರುದ್ಧ ಕೃಷಿ ವಿಗ್ಯಾನ್ ಆರೋಗ್ಯ ಸಂಸ್ಥಾ & ಇನ್ನೊಬ್ಬರು)[6]

ಆಯ್ಕೆ ಮಾಡಿಕೊಂಡ ಸ್ಥಳವು ಯೋಜನಾ ಸ್ಥಳಕ್ಕೆ ಲಭ್ಯವಿರುವ ಅತ್ಯಂತ ಹತ್ತಿರದ ಸ್ಥಳಗಳಲ್ಲಿ ಒಂದಾಗಿರಬೇಕು. ಉದಾಹರಣೆಗೆ, ಸ್ಥಳದಿಂದ ೨ ಕಿ.ಮೀ. ದೂರದಲ್ಲಿ ಸೂಕ್ತವಾದ ಸ್ಥಳವಿದ್ದರೆ, ಇದಕ್ಕಿಂತ ದೂರವಿರುವ ಇನ್ನೊಂದು ಸ್ಥಳವನ್ನು ಎಸ್‌ಪಿಸಿಬಿಯು ಆಯ್ಕೆ ಮಾಡಿಕೊಳ್ಳಬಾರದು.

೨. ಸ್ಥಳವು ಯೋಜನಾ ಸ್ಥಳಕ್ಕೆ ಹತ್ತಿರವಿಲ್ಲದಿದ್ದರೆ, ಸಾರ್ವಜನಿಕರಿಗೆ ಸ್ಥಳಕ್ಕೆ ಹೋಗಲು ಸಾರಿಗೆ ವ್ಯವಸ್ಥೆಯನ್ನು ಯೋಜನಾ ಪ್ರತಿಪಾದಕರು ಮಾಡಬೇಕು. ಯೋಜನಾ ಪ್ರತಿಪಾದಕರು ಸ್ಥಳಕ್ಕೆ ಹೋಗಲು ಸಾರಿಗೆ ವ್ಯವಸ್ಥೆಯನ್ನು ಮಾಡಿದರೂ ಕೂಡ, ಸಾರ್ವಜನಿಕ ಅಹವಾಲು ಸಭೆಯನ್ನು ತುಂಬ ದೂರದಲ್ಲಿ ನಡೆಸುವ ಹಾಗಿಲ್ಲ.

**ಸರ್ಕಾರಿ ಅಧಿಕಾರಿಗಳ ಕಡ್ಡಾಯ ಉಪಸ್ಥಿತಿ**

೧. ಜಿಲ್ಲಾ ನ್ಯಾಯಾಧೀಶರು/ಜಿಲ್ಲಾಧಿಕಾರಿ/ಜಿಲ್ಲಾ ಆಯುಕ್ತರು ಅಥವಾ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರ ಹುದ್ದೆಗಿಂತ ಕಡಿಮೆ ಇಲ್ಲದ ಅವರ ಪ್ರತಿನಿಧಿಗಳು

೨. ಎಸ್‌ಪಿಸಿಬಿಯ ಪ್ರತಿನಿಧಿಗಳು

**ಸಾರ್ವಜನಿಕ ಭಾಗವಹಿಸುವಿಕೆ**

೧. ಭಾಗವಹಿಸಲು ಇಷ್ಟವಿರುವ ಸ್ಥಳೀಯ ಸಮುದಾಯಗಳು ಮತ್ತು ಜನಸಾಮಾನ್ಯರು

೨. ಹಾಜರಾತಿಗೆ ಕೋರಂ (ಅಂದರೆ ಇಷ್ಟೇ ಜನರು ಇರಬೇಕೆಂಬ) ಅಗತ್ಯವಿಲ್ಲ.

೩. ಸ್ಥಳದಲ್ಲಿರುವ ಎಲ್ಲರ ಉಪಸ್ಥಿತಿಯನ್ನು ದಾಖಲಿಸಿಕೊಳ್ಳಬೇಕು.

೪. ಸಾರ್ವಜನಿಕರು ವೇದಿಕೆ ಮೇಲಿರುವ ಅಧಿಕಾರಿಗಳನ್ನು ಸಂಪರ್ಕಿಸಲು ಬಯಸಿದರೆ, ಅವರಿಗೆ ಅದಕ್ಕೆ ಲಭ್ಯತೆ ಇರಬೇಕು. (ವೇದಿಕೆ ಪ್ರದೇಶಕ್ಕೆ ಏನೂ ತಡೆಗಳು ಇರಬಾರದು)

ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಸಾರ್ವಜನಿಕ ಅಹವಾಲು ಸಭೆಯಲ್ಲಿ ಇರಬೇಕು.

ಯಾವುದೇ ಪಕ್ಷದ ಬಾವುಟಗಳು/ಸ್ಲೋಗನ್ನುಗಳ ಪ್ರದರ್ಶನಕ್ಕೆ ಆಸ್ಪದವಿಲ್ಲ.

- ಎನ್‌ಜಿ ಟಿ ತೀರ್ಪ (ಎಂಒಇಎಫ್ ಮತ್ತು ಇತರರ ವಿರುದ್ಧ ಒಸ್ಸಿ ಫರ್ನಾಂಡಿಸ್ ಮತ್ತು ಇನ್ನೊಬ್ಬರು)

6 Krishi Vigyan Arogya Sanstha & Ors. v.MOEF & Ors.(7-2011 (T) ) + Ossie Fernandes & Ors. v. MOEF & Ors. [12-2011 (Ap)]

**ಸಭಾ ಕಲಾಪಗಳನ್ನು ದಾಖಲಿಸಿಕೊಳ್ಳುವುದು**

ಎಸ್‌ಪಿಸಿಬಿಯು ಸಾರ್ವಜನಿಕ ಅಹವಾಲನ್ನು ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಲು ವ್ಯವಸ್ಥೆ ಮಾಡಬೇಕು.

ಎಸ್‌ಪಿಸಿಬಿ ಅಧಿಕಾರಿಗಳು ನಿಖರವಾಗಿ ಸಭೆಯ ನಡಾವಳಿಗಳನ್ನು ದಾಖಲಿಸಿಕೊಳ್ಳಬೇಕು.

## ದೂರುಗಳು

ಅಹವಾಲು ಸಭೆಯ ಯೋಜನೆಯ ಬಗ್ಗೆ ಅಥವಾ ಅದರ ಪರಿಣಾಮದ ಬಗ್ಗೆ ಪ್ರಸ್ತುತಪಡಿಸಿದ ದಾಖಲೆಗಳಲ್ಲಿ ಅಥವಾ ಸಭೆಯಲ್ಲಿ ದಾಖಲಿಸಿಕೊಂಡು, ಓದಲಾದ ಸಭಾ ನಡವಳಿಗಳಲ್ಲಿ ಯಾವುದೇ ರೀತಿಯಲ್ಲಿ ತಪ್ಪಾದ ಅಥವಾ ಬದಲಾಯಿಸಿದ ಸತ್ಯಾಂಶಗಳು ಕಂಡುಬಂದಲ್ಲಿ, ಸಾರ್ವಜನಿಕರು ಅಹವಾಲು ಸಭೆಯಲ್ಲಿ ಹಾಜರಿರುವ ಅಧಿಕಾರಿಗಳಿಗೆ ವರದಿ ಮಾಡತಕ್ಕದ್ದು.

ಸಾರ್ವಜನಿಕ ಅಹವಾಲು ಸಭೆಯನ್ನು ನಡೆಸುವಲ್ಲಿ ಯಾವುದೇ ರೀತಿಯ ಕಾರ್ಯಕಲಾಪದ ಲೋಪಗಳು ಕಂಡುಬಂದಲ್ಲಿ, ಎಂಒಇಎಫ್/ಎಸ್‌ಇಐಎಎಗೆ ಹೊಸದಾಗಿ ಅಹವಾಲು ಸಭೆ ನಡೆಸುವಂತೆ ಬೇಡಿಕೆ ಇಟ್ಟು ವರದಿ ಮಾಡಬಹುದಾಗಿದೆ.

## ಲಿಖಿತ ಪ್ರತಿಕ್ರಿಯೆ

ಸಾರ್ವಜನಿಕ ಅಹವಾಲು ಸಭೆಗೆ ಒಂದು ತಿಂಗಳ ಪ್ರಕಟಣಾ ಕಾಲಾವಧಿ ನೀಡಿದ್ದು, ಆ ಅವಧಿಯಲ್ಲಿ ಎಸ್‌ಪಿಸಿಬಿಯು ಸಾರ್ವಜನಿಕರಿಂದ ಲಿಖಿತ ಪ್ರತಿಕ್ರಿಯೆಗಳನ್ನು ಸ್ವೀಕರಿಸುತ್ತದೆ.

ಲಿಖಿತ ಪ್ರತಿಕ್ರಿಯೆಗಳನ್ನು ಸ್ವೀಕರಿಸಲು ಇ-ಮೇಲ್ ಮತ್ತು ಅಂಚೆ ವಿಳಾಸಗಳನ್ನು ಎಸ್‌ಪಿಸಿಬಿಯ ಸಾರ್ವಜನಿಕ ಹಿತಾಸಕ್ತಿ ಜಾಹೀರಾತಿನಲ್ಲಿ ಪ್ರಕಟ ಮಾಡಿರಬೇಕು. ಎಸ್‌ಪಿಸಿಬಿಯು ಈ ಪ್ರತಿಕ್ರಿಯೆಗಳನ್ನು ಕ್ರೋಢೀಕರಿಸಿ, ಎಂಒಇಎಫ್/ಎಸ್‌ಇಐಎಎಗೆ ಸಲ್ಲಿಸುವ ಸಾರ್ವಜನಿಕ ಸಮಾಲೋಚನಾ ವರದಿಯಲ್ಲಿ ಸೇರಿಸಬೇಕು.

ಎಂಒಇಎಫ್/ಎಸ್‌ಇಐಎಎ ಸಾರ್ವಜನಿಕ ಸಮಾಲೋಚನಾ ಪ್ರಕ್ರಿಯೆಯ ಭಾಗವಾಗಿ ಸ್ವೀಕರಿಸಿದ ಪ್ರತಿಕ್ರಿಯೆಗಳನ್ನು ಯೋಜನಾ ಪ್ರತಿಪಾದಕರಿಗೆ/ಅರ್ಜಿದಾರರಿಗೆ 'ಲಭ್ಯವಿರುವ ಅತ್ಯಂತ ತ್ವರಿತ ವಿಧಾನ'ದ ಮೂಲಕ ಕಳುಹಿಸಬೇಕು. ಸ್ವೀಕರಿಸಲಾದ ಲಿಖಿತ ಪ್ರತಿಕ್ರಿಯೆಗಳು ಎಸ್‌ಪಿಸಿಬಿ ಸಲ್ಲಿಸಿದ ಸಾರ್ವಜನಿಕ ಅಹವಾಲು ವರದಿಯ ಭಾಗವಾಗಿರುತ್ತದೆ ಮತ್ತು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಜಿಲ್ಲಾ ನ್ಯಾಯಾಧೀಶರು ಮತ್ತು ಎಸ್‌ಪಿಸಿಬಿಯವರ ಕಚೇರಿಗಳಲ್ಲಿ ಇರುತ್ತದೆ ಹಾಗೂ ಎಸ್‌ಪಿಸಿಬಿ ಜಾಲತಾಣದಲ್ಲಿಯೂ ಇರುತ್ತದೆ.

### 2.1.3 ಸಾರ್ವಜನಿಕ ಸಮಾಲೋಚನೆಯ ಕಾಲಾವಧಿ

## ಹೆಜ್ಜೆ

## 1

**ದಿನ 1:** ಪ್ರತಿಪಾದಕರು ಎಸ್‌ಪಿಸಿಬಿಯನ್ನು ಸಾರ್ವಜನಿಕ ಅಹವಾಲು ನಡೆಸುವಂತೆ ಕೋರುತ್ತಾರೆ.

ಇದೇ ವೇಳೆ, ಇಐಎ ಕರಡು ಮತ್ತು ಇಐಎ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಇಂಗ್ಲಿಷ್ ಮತ್ತು ಸ್ಥಳೀಯ ಭಾಷೆಯಲ್ಲಿ ಈ ಕೆಳಗಿನ ಕಚೇರಿಗಳಿಗೆ ಸಲ್ಲಿಸುತ್ತಾರೆ:

- ಎಂಒಇಎಫ್ ಮತ್ತು ಅದರ ಪ್ರಾದೇಶಿಕ ಕಚೇರಿಗಳು
- ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ
- ಜಿಲ್ಲಾ ನ್ಯಾಯಾಧೀಶರು/ಜಿಲ್ಲಾಧಿಕಾರಿ/ಜಿಲ್ಲಾ ಕಲೆಕ್ಟರ್
- ಜಿಲ್ಲಾ ಪರಿಷತ್/ಮುನ್ಸಿಪಲ್ ಕಾರ್ಪೋರೇಶನ್/ ಪಂಚಾಯಿತಿ
- ಜಿಲ್ಲಾ ಕೈಗಾರಿಕಾ ಕಚೇರಿ
- ನಗರದ ಸ್ಥಳೀಯ ಸಂಸ್ಥೆಗಳು(ವಾರ್ಡ್)/ ಪಂಚಾಯಿತಿ/ಅಭಿವೃದ್ಧಿ ಪ್ರಾಧಿಕಾರ

# ಹೆಜ್ಜೆ 2

**೭ನೇ ದಿನಕ್ಕೆ ಮೊದಲು:** ಎಸ್‌ಪಿಸಿಬಿಯು ಸಾರ್ವಜನಿಕ ಸಮಾಲೋಚನೆಯ ವಿವರಗಳನ್ನು ಪ್ರಕಟಿಸುತ್ತದೆ.

೧. ಸಾರ್ವಜನಿಕ ಅಹವಾಲು

೨. ಲಿಖಿತ ಪ್ರಕ್ರಿಯೆಗಳು

೧. ಸಾರ್ವಜನಿಕ ಅಹವಾಲು

- ಸಾರ್ವಜನಿಕ ಅಹವಾಲು ಸಭೆಯ ವಿವರಗಳನ್ನು ಒಂದು ಸ್ಥಳೀಯ/ಮಾತೃಭಾಷೆಯ ಮತ್ತು ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ಜಾಹೀರಾತುಗೊಳಿಸಬೇಕು.
- ದಿನಪತ್ರಿಕೆಗಳು ತಲುಪಲಾರದ ಕಡೆಗಳಲ್ಲಿ, ರೇಡಿಯೋ/ಟಿವಿ ಮೂಲಕ ಹಾಗೂ ಟಾಂಟಾಂ ಹೊಡೆಸುವ ಮೂಲಕ ವಿವರಗಳನ್ನು ಪ್ರಚಾರಪಡಿಸಬೇಕು.
- ಕರಡು ಇಐಎ ಸಾರಾಂಶವು ಎಸ್‌ಪಿಸಿಬಿ ಜಾಲತಾಣ ಮತ್ತು ಎಂಒಇಎಫ್ ಜಾಲತಾಣದಲ್ಲಿ ಲಭ್ಯವಾಗಬೇಕು.
- ಕರಡು ಇಐಎ ಮತ್ತು ಕರಡು ಇಐಎಯ ಕಾರ್ಯನಿರ್ವಾಹಕ ಸಾರಾಂಶವು ಮುದ್ರಿತ/ಸಾಫ್ಟ್ ಪ್ರತಿಗಳು ಹೆಜ್ಜೆ೧ರಲ್ಲಿ ತಿಳಿಸಲಾದ ಕಚೇರಿಗಳಲ್ಲಿ ಮತ್ತು ಜಾಹೀರಾತು ದಿನಪತ್ರಿಕೆ/ಪ್ರಕಟಣೆಗಳಲ್ಲಿ ಸೂಚಿಸಲಾದ ಸ್ಥಳಗಳಲ್ಲಿ ದೊರೆಯುವಂತಿರಬೇಕು.

೨. ಲಿಖಿತ ಪ್ರತಿಕ್ರಿಯೆ:

- ಲಿಖಿತ ಪ್ರತಿಕ್ರಿಯೆಗಳನ್ನು ಕಳುಹಿಸಬೇಕಾದ ವಿಳಾಸ ಮತ್ತು ಇಮೇಲ್ ವಿಳಾಸಗಳನ್ನು ಸಾರ್ವಜನಿಕ ಅಹವಾಲು ಜಾಹೀರಾತು/ಪ್ರಕಟಣೆಯಲ್ಲಿ ಉಲ್ಲೇಖಿಸಿರಬೇಕು.
- ಜಾಹೀರಾತು/ಪ್ರಕಟಣೆಯ ನಂತರ ಸಾರ್ವಜನಿಕ ಅಹವಾಲು ಸಭೆಯು ನಡೆಯುವವರೆಗೂ ೧ ತಿಂಗಳಿನವರೆಗೆ ಲಿಖಿತ ಪ್ರತಿಕ್ರಿಯೆಗಳನ್ನು ಸ್ವೀಕರಿಸಲಾಗುವುದು.
- ಹೆಜ್ಜೆ ೧ರಲ್ಲಿ ತಿಳಿಸಲಾದ ಎಲ್ಲ ಕಚೇರಿಗಳೂ ಲಿಖಿತ ಪ್ರತಿಕ್ರಿಯೆಗಳನ್ನು ಆಹ್ವಾನಿಸಬಹುದಾಗಿದೆ.

# ಹೆಜ್ಜೆ 3

## 45ನೇ ದಿನಕ್ಕೆ ಮೊದಲು: ಎಸ್‌ಪಿಸಿಬಿಯು ಸಾರ್ವಜನಿಕ ಸಮಾಲೋಚನೆಯನ್ನು ಪೂರ್ಣಗೊಳಿಸಿ, ವರದಿಯನ್ನು ಎಂಒಇಎಫ್/ಎಸ್‌ಇಐಎಎಗೆ ಸಲ್ಲಿಸುತ್ತದೆ

1. ಸಾರ್ವಜನಿಕ ಅಹವಾಲು ಸಭೆಯ ಪ್ರಕ್ರಿಯೆ:

- ಜಿಲ್ಲಾ ನ್ಯಾಯಾಧೀಶರು/ಜಿಲ್ಲಾಧಿಕಾರಿ/ಜಿಲ್ಲಾ ಕಲೆಕ್ಟರ್ ಸ್ಥಳದಲ್ಲಿ ಹಾಜರಿರುತ್ತಾರೆ.
- ಎಸ್‌ಪಿಸಿಬಿಯು ಭಾಗವಹಿಸಿದ ಎಲ್ಲರ ಹೆಸರುಗಳನ್ನು ಬರೆದುಕೊಂಡು, ಕಲಾಪದ ಟಿಪ್ಪಣಿಯನ್ನು ಮಾಡಿಕೊಂಡು, ಎಲ್ಲರಿಗೂ ಭಾಗವಹಿಸುವ ಮತ್ತು ನ್ಯಾಯಸಮ್ಮತ ಅವಕಾಶದೊರೆಯುವುದನ್ನು ಖಾತ್ರಿಪಡಿಸುತ್ತದೆ.
- ಯೋಜನಾ ಪ್ರತಿಪಾದಕರು/ಅರ್ಜಿದಾರರು ಪ್ರಸ್ತಾಪಿತ ಯೋಜನೆಯ ಬಗ್ಗೆ ಪ್ರಮುಖ ವಿವರಗಳನ್ನು (ವಿಶೇಷವಾಗಿ ಸಾಮಾಜಿಕ ಮತ್ತು ಪಾರಿಸರಿಕ ಪರಿಣಾಮಗಳ ಬಗ್ಗೆ) ಮತ್ತು ಇಐಎ ಕರಡಿನ ಕಾರ್ಯನಿರ್ವಹಣಾ ಸಾರಾಂಶವನ್ನು ಪ್ರಸ್ತುತಪಡಿಸುತ್ತಾರೆ
- ಭಾಗವಹಿಸಿದವರು ಪ್ರಶ್ನೆಗಳನ್ನು ಕೇಳುತ್ತಾರೆ ಮತ್ತು ನ್ಯಾಯಸಮ್ಮತ ಕಾಳಜಿ/ಆತಂಕಗಳೇನಾದ್ದರೂ ಇದ್ದಲ್ಲಿ ಅದರ ಬಗ್ಗೆ ಧ್ವನಿಯೆತ್ತುತ್ತಾರೆ.
- ಯೋಜನಾ ಪ್ರತಿಪಾದಕರು/ಅರ್ಜಿದಾರರು ಸ್ಪಷ್ಟೀಕರಣಗಳು ಮತ್ತು ಪ್ರಸ್ತಾಪಿತ ದುಷ್ಪರಿಣಾಮ ಕಡಿಮೆಗೊಳಿಸುವ/ತಗ್ಗಿಸುವ ಕ್ರಮಗಳನ್ನು ವಿವರಿಸಿ ಪ್ರತಿಕ್ರಿಯಿಸುತ್ತಾರೆ
- ಎಸ್‌ಪಿಸಿಬಿಯು ಸ್ಥಳೀಯ ಭಾಷೆಯಲ್ಲಿ ದಾಖಲಿಸಿಕೊಂಡ ಸಭಾ ನಡಾವಳಿಯನ್ನು ಓದಿ ಹೇಳಿ, ವಿವರಿಸುತ್ತಾರೆ, ಏನಾದರೂ ತಿದ್ದುಪಡಿಗಳಿದ್ದಲ್ಲಿ, ಎಲ್ಲರೂ ಒಪ್ಪಿಕೊಂಡರೆ ಅದನ್ನು ಸೇರಿಸುತ್ತಾರೆ.
- ಎಸ್‌ಪಿಸಿಬಿಯು ಸಾರ್ವಜನಿಕ ಅಹವಾಲು ವರದಿಯನ್ನು ಎಂಒಇಎಫ್/ಎಸ್‌ಇಐಎಎಗೆ ಸಲ್ಲಿಸುತ್ತದೆ.
- ಜಿಲ್ಲಾ ನ್ಯಾಯಾಧೀಶರು/ಜಿಲ್ಲಾಧಿಕಾರಿ/ಜಿಲ್ಲಾ ಕಲೆಕ್ಟರ್ ಸ್ಥಳದಲ್ಲಿಯೇ ಸಭಾ ನಡಾವಳಿಗೆ ಸಹಿ ಹಾಕುತ್ತಾರೆ.

2. ಸಾರ್ವಜನಿಕ ಅಹವಾಲು ವರದಿಯು ಈ ಕೆಳಗಿನವುಗಳನ್ನು ಒಳಗೊಂಡಿರಬೇಕು:

- ಸಾರ್ವಜನಿಕ ಅಹವಾಲಿನ ಸಾರಾಂಶ
- ಸಾರ್ವಜನಿಕರು ಎತ್ತಿದ ಪ್ರತಿಯೊಂದೂ ಸಮಸ್ಯೆಗಳು ಮತ್ತು ಯೋಜನಾ ಪ್ರತಿಪಾದಕರಿಂದ ಅದಕ್ಕೆ ಸೂಕ್ತ ಉತ್ತರ/ಪ್ರತಿಕ್ರಿಯೆಗಳನ್ನು ಕೋಷ್ಟಕದ ರೂಪದಲ್ಲಿಟ್ಟಿರಬೇಕು
- ಸಾರ್ವಜನಿಕ ಅಹವಾಲು ಸಭೆಯ ವಿಡಿಯೋ ಚಿತ್ರೀಕರಣದ ಪ್ರತಿ
- ಯೋಜನೆಯ ಕುರಿತು ಸ್ವೀಕರಿಸಲಾದ ಲಿಖಿತ ಪ್ರತಿಕ್ರಿಯೆಗಳು
- ಸಾರ್ವಜನಿಕ ಅಹವಾಲು ಸಭೆಯನ್ನು ಪ್ರಚಾರಪಡಿಸಲು ಎಸ್‌ಪಿಸಿಬಿಯು ತೆಗೆದುಕೊಂಡ ಕ್ರಮಗಳ ವಿವರಗಳು, ಇವು ಅನುಸರಿಸಲಾದ ಪ್ರಕ್ರಿಯೆಗಳು ಸಮರ್ಪಕವಾಗಿತ್ತೇ ಎಂಬುದನ್ನು ಪ್ರಮಾಣೀಕರಿಸುವಂತಿರಬೇಕು.

3. ಸಾರ್ವಜನಿಕ ಅಹವಾಲು ವರದಿಯ ಲಭ್ಯತೆ:

- ವರದಿಯನ್ನು ಇಂಗ್ಲಿಷ್ ಮತ್ತು ಪ್ರಾದೇಶಿಕ ಭಾಷೆಯಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಬಹಿರಂಗವಾಗಿ ಪ್ರದರ್ಶನಕ್ಕೆ ಇಟ್ಟಿರಬೇಕು:
- ಪಂಚಾಯಿತಿ
- ಜಿಲ್ಲಾ ಪಂಚಾಯಿತಿ
- ಜಿಲ್ಲಾ ನ್ಯಾಯಾಧೀಶರು
- ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ
- ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯ ಜಾಲತಾಣ

## 2.1.4 ಸಾರ್ವಜನಿಕ ಸಮಾಲೋಚನಾ ಪ್ರಕ್ರಿಯೆ - ಪವರ್ ಪಾಯಿಂಟ್ ಪ್ರಸ್ತುತಿಗೆ

**ದಿನ 1**

1 ಇಐಎ ಕರಡು ವರದಿಯ ೧೦ ಮುದ್ರಿತ ಪ್ರತಿಗಳು ಮತ್ತು ೧೦ ಸಿಡಿಗಳ ಸಲ್ಲಿಸುವಿಕೆ (ಪಾರಿಸರಿಕ ಮೇಲ್ವಿಚಾರಣಾ ಯೋಜನೆಯ ಕರಡೂ ಸೇರಿದಂತೆ), ಜೊತೆಗೆ ಇಐಎ ಕರಡು ವರದಿಯ ಸಂಕ್ಷಿಪ್ತರೂಪ, ಇಂಗ್ಲಿಶ್ ಮತ್ತು ಪ್ರಾದೇಶಿಕ ಭಾಷೆಯಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯ ಸದಸ್ಯ ಕಾರ್ಯದರ್ಶಿಯವರಿಗೆ, ಜೊತೆಗೆ ಸಾರ್ವಜನಿಕ ಅಹವಾಲು ಸಭೆಯನ್ನು ನಡೆಸುವಂತೆ ಯೋಜನಾ ಪ್ರತಿಪಾದಕರಿಂದ ಒಂದು ಮನವಿ ಪತ್ರ ಸಲ್ಲಿಸಲಾಗುವುದು.

**ದಿನ 2**

2 ಯೋಜನಾ ಪ್ರತಿಪಾದಕರು ಅದೇ ಸಮಯದಲ್ಲಿ ಇಐಎ ಕರಡು ವರದಿಯ ಒಂದು ಮುದ್ರಿತ ಪ್ರತಿ ಮತ್ತು ಸಾಫ್ಟ್ ಪ್ರತಿಯನ್ನು ಇಐಎ ಕರಡು ವರದಿಯ ಸಂಕ್ಷಿಪ್ತರೂಪದೊಂದಿಗೆ ಜಿಲ್ಲಾ ನ್ಯಾಯಾಧೀಶರ ಕಚೇರಿ, ಮುನ್ಸಿಪಲ್ ಕಾರ್ಪೋರೇಶನ್/ ಜಿಲ್ಲಾ ಪರಿಷತ್ ಕಚೇರಿ(ಜಿಪಂ), ಜಿಲ್ಲಾ ಕೈಗಾರಿಕಾ ಕಚೇರಿ, ಪರಿಸರ ಮತ್ತು ಅರಣ್ಯ ಸಚಿವಾಲಯ (ಎಂಒಇಎಫ್) ಮತ್ತು ಅದರ ಪ್ರಾದೇಶಿಕ ಕಚೇರಿಗೆ ಸಲ್ಲಿಸುತ್ತಾರೆ.

**7ನೇ ದಿನಕ್ಕೆ ಮೊದಲು**

3 ಎಸ್‌ಪಿಸಿಬಿಯು ಸಾರ್ವಜನಿಕ ಅಹವಾಲು ಸಭೆ, ಇಐಎ ಕರಡು ಲಭ್ಯತೆ ಮತ್ತು ಲಿಖಿತ ಪ್ರತಿಕ್ರಿಯೆಗಳಿಗೆ ಕರೆ ಕುರಿತು ಒಂದು ಇಂಗ್ಲಿಷ್ ಮತ್ತು ಒಂದು ಪ್ರಾದೇಶಿಕ ದಿನಪತ್ರಿಕೆಗಳಲ್ಲಿ ಜಾಹೀರಾತುಗಳ ಮೂಲಕ ಪ್ರಕಟಣೆ ಮಾಡುತ್ತದೆ ಮತ್ತು ತನ್ನ ಜಾಲತಾಣದಲ್ಲಿಯೂ ಈ ವಿವರಗಳನ್ನು ಪ್ರಕಟಿಸುತ್ತದೆ. ಎಸ್‌ಪಿಸಿಬಿ & ಎಂಒಇಎಫ್ ಜಾಲತಾಣಗಳು ಕರಡು ಇಐಎಯ ಸಂಕ್ಷಿಪ್ತ ಸಾರಾಂಶವನ್ನು ಮತ್ತು ಯೋಜನಾ ಪ್ರತಿಪಾದಕರ ನಮೂನೆ ೧ ಅರ್ಜಿಯನ್ನು ಪ್ರಕಟಿಸುತ್ತವೆ.

**ದಿನ 8-44**

4 ಎಸ್‌ಪಿಸಿಬಿಯು ದಿನಪತ್ರಿಕೆಗಳು ಲಭ್ಯವಿಲ್ಲದ ಕಡೆಗಳಲ್ಲಿ ಜನರಿಗೆ ಸಾರ್ವಜನಿಕ ಅಹವಾಲು ಸಭೆಯ ಬಗ್ಗೆ ತಿಳಿಸಲು ಹಳ್ಳಿಗಳಲ್ಲಿ ಟಾಂಟಾಂ ಹೊಡೆಸುವುದು ಮತ್ತು ಟಿವಿ/ ರೇಡಿಯೋ ಜಾಹೀರಾತು ನೀಡುವುದನ್ನು ಅವಲಂಬಿಸುತ್ತದೆ. ಜಿಲ್ಲಾ ನ್ಯಾಯಾಧೀಶರು, ಮುನ್ಸಿಪಾಲ್ಟಿ/ಜಿ.ಪಂ. ಮತ್ತು ಜಿಲ್ಲಾ ಕೈಗಾರಿಕಾ ಕಚೇರಿಗಳಲ್ಲಿಯೂ ಅಹವಾಲು ಸಭೆ ಮತ್ತು ಲಿಖಿತ ಪ್ರತಿಕ್ರಿಯೆಗಳನ್ನು ಆಹ್ವಾನಿಸುವ ಕುರಿತು ಪ್ರಚಾರ ನಡೆಸುವುದು.

**5.** ಸ್ಥಳೀಯ ಸಮುದಾಯಗಳು ಮೇಲೆ ತಿಳಿಸಿದ ಕಚೇರಿಗಳಿಂದ ಅಥವಾ ಎಂಒಇಎಫ್ ನವದೆಹಲಿ ಕಚೇರಿಯಿಂದ ಅಥವಾ ಎಸ್‌ಪಿಸಿಬಿ ಜಾಹೀರಾತಿನಲ್ಲಿ ತಿಳಿಸಿದ ಬೇರೆ ಸ್ಥಳಗಳಿಂದ ಕರಡು ಇಐಎ (ಸಿಡಿ/ಮುದ್ರಿತ ಪ್ರತಿ) ಗಳನ್ನು ಪಡೆದುಕೊಳ್ಳಬಹುದು. ಒಪ್ಪಂದದ ಕರಾರುಗಳನ್ನು ಕರಡು ಇಐಎ ವರದಿಯಲ್ಲಿ ಸೇರಿಸಲು ಆಗದಿದ್ದರೆ, ಸ್ಥಳೀಯ ಸಮುದಾಯಗಳು ಎಂಒಇಎಫ್/ಎಸ್‌ಇಐಎಎ ಜಾಲತಾಣ ಅಥವಾ ಮೇಲೆ ತಿಳಿಸಿದ ಕಚೇರಿಗಳಿಂದ ಪಡೆದುಕೊಳ್ಳಬಹುದು.

**6.** ಸ್ಥಳೀಯ ಸಮುದಾಯಗಳು ಕರಡು ಇಐಎ ವರದಿಯನ್ನು ಚೆನ್ನಾಗಿ ಪರಿಶೀಲಿಸಿ, ಒಪ್ಪಂದದ ಕರಾರುಗಳ ಪಾಲನೆ, ಸ್ಥಳೀಯ ಪರಿಸರದ ವಿವರಣೆಯಲ್ಲಿ ನಿಖರತೆ, ಕೈಗೆತ್ತಿಕೊಳ್ಳಲಾದ ಪ್ರಾಥಮಿಕ ಮೂಲಾಧಾರ ಅಧ್ಯಯನ, ಇತ್ಯಾದಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಬೇಕು.

**7.** ಸ್ಥಳೀಯ ಸಮುದಾಯಗಳು/ ವ್ಯಕ್ತಿಗಳು ಸಂಭಾವ್ಯ ಪಾರಿಸರಿಕ ಪರಿಣಾಮಗಳು ಮತ್ತು ಅವುಗಳನ್ನು ತಗ್ಗಿಸಲು/ಕಡಿಮೆ ಮಾಡಲು ಪ್ರಸ್ತಾಪಿಸಲಾದ ಕ್ರಮಗಳ ಔಚಿತ್ಯ/ಸಮರ್ಪಕತೆ ಕುರಿತು ಪರಿಸರ ತಜ್ಞರೊಂದಿಗೆ ಸಮಾಲೋಚಿಸಬಹುದು.

**8.** ಸ್ಥಳೀಯ ಸಮುದಾಯಗಳು/ವ್ಯಕ್ತಿಗಳು ಪ್ರಸ್ತಾವಿತ ಸಾರ್ವಜನಿಕ ಅಹವಾಲು ಸಭೆಯಲ್ಲಿ ಏನೇ ಲೋಪಗಳಿದ್ದರೂ, ಜಿಲ್ಲಾ ಕಲೆಕ್ಟರ್/ ನ್ಯಾಯಾಧೀಶರು, ಎಂಒಇಎಫ್, ಎಸ್‌ಪಿಸಿಬಿಗೆ ವರದಿ ಮಾಡಬೇಕು ಮತ್ತು ಎಂಒಇಎಫ್ ಆದೇಶಪಡಿಸಿದಂತೆ ಅಹವಾಲು ಸಭೆ ನಡೆಸುವಂತೆ ಕೋರಿಕೆ ಸಲ್ಲಿಸಬಹುದು.

**9.** ಸ್ಥಳೀಯ ಸಮುದಾಯಗಳು/ ವ್ಯಕ್ತಿಗಳು ಲಿಖಿತ ಪ್ರತಿಕ್ರಿಯೆಗಳನ್ನು ಎಸ್‌ಪಿಸಿಬಿ ನಿರ್ದಿಷ್ಟಪಡಿಸಿದ ವಿಳಾಸಗಳಿಗೆ, ಎಂಒಇಎಫ್/ಎಸ್‌ಇಐಎಎ ಕಚೇರಿಗೆ ಕಳಿಸುತ್ತಾರೆ.

**10.** ಎಸ್‌ಪಿಸಿಬಿಯು ಸಾರ್ವಜನಿಕ ಅಹವಾಲು ಸಭೆಯನ್ನು ನಡೆಸುತ್ತದೆ ಮತ್ತು ಅಹವಾಲು ಸಭೆಯ ದಿನಾಂಕದವರೆಗೂ ಲಿಖಿತ ಪ್ರತಿಕ್ರಿಯೆಗಳನ್ನು ಸ್ವೀಕರಿಸುತ್ತದೆ.

**11.** ಸ್ಥಳೀಯ ಸಮುದಾಯಗಳು/ ವ್ಯಕ್ತಿಗಳು ಸಾರ್ವಜನಿಕ ಅಹವಾಲು ಸಭೆಯನ್ನು ನಡೆಸಿದ್ದರಲ್ಲಿ ಏನಾದರೂ ಲೋಪಗಳಾದರೆ ಅದನ್ನು ಎಂಒಇಎಫ್/ ಎಸ್‌ಇಐಎಎ & ಎಸ್‌ಪಿಸಿಬಿಗೆ ವರದಿ ಮಾಡುತ್ತಾರೆ.

**45ನೇ ದಿನಕ್ಕೆ ಮೊದಲು**

**12.** ಎಸ್‌ಪಿಸಿಬಿಯು ಸಾರ್ವಜನಿಕ ಅಹವಾಲು ಸಭೆಯ ವರದಿಯನ್ನು (ಅಹವಾಲು ಸಭೆಯ ಸಾರಾಂಶ, ಆಕ್ಷೇಪಣೆಗಳ ಹೇಳಿಕೆ, ವಿಡಿಯೋ ಚಿತ್ರೀಕರಣದ ಒಂದು ಪ್ರತಿ, ಸ್ವೀಕರಿಸಲಾದ ಲಿಖಿತ ಹೇಳಿಕೆಗಳು) ಎಂಒಇಎಫ್/ಎಸ್‌ಇಐಎಎಗೆ ಸಲ್ಲಿಸುತ್ತದೆ

**13.** ಎಂಒಇಎಫ್/ಎಸ್‌ಇಐಎಎ & ಎಸ್‌ಪಿಸಿಬಿಯು ಲಿಖಿತ ಪ್ರತಿಕ್ರಿಯೆಗಳನ್ನು ಯೋಜನಾ ಪ್ರತಿಪಾದಕರೊಂದಿಗೆ 'ಲಭ್ಯವಿರುವ ತ್ವರಿತ ವಿಧಾನ'ದ ಮೂಲಕ ಹಂಚಿಕೊಳ್ಳುತ್ತಾರೆ.

**14.** ಸಾರ್ವಜನಿಕರ ಆತಂಕ/ಕಾಳಜಿಗಳನ್ನು ಉದ್ದೇಶಿಸಲು ಇಐಎ ಕರಡು ವರದಿಗೆ ಅತ್ಯಗತ್ಯ ಬದಲಾವಣೆಗಳನ್ನು ಮಾಡಿ, ಅಂತಿಮ ಇಐಎ ವರದಿ (ಪರಿಷ್ಕೃತ ಇಎಂಪಿಯೂ ಸೇರಿದಂತೆ), ಯೋಜನೆ ಕಾರ್ಯಸಾಧ್ಯತೆ ವರದಿ ಮತ್ತು ಅಂತಿಮ ಲೇಔಟ್ ಯೋಜನೆ, ಒಪ್ಪಿಗೆ ಪಡೆದ ಸಾರ್ವಜನಿಕ ಅಹವಾಲು ಸಭೆಯ ಕಲಾಪಗಳ ವರದಿಯ ಒಂದು ಪ್ರತಿ (ಐಚ್ಛಿಕ) ಎಂಒಇಎಫ್/ಎಸ್‌ಇಐಎಎಗೆ ಯೋಜನಾ ಪ್ರತಿಪಾದಕರು ಸಲ್ಲಿಸುತ್ತಾರೆ.

## 2.1.5 ಆಗಾಗ ಕೇಳುವ ಪ್ರಶ್ನೆಗಳು (ಎಫ್‌ಎಕ್ಯು)

೧. **ನಾನು ಸಾರ್ವಜನಿಕ ಅಹವಾಲಿಗೆ ಹಾಜರಿದ್ದು, ಜೊತೆಗೆ ಲಿಖಿತ ಪ್ರತಿಕ್ರಿಯೆಯನ್ನೂ ಕಳುಹಿಸಬಹುದೇ?**

ಖಂಡಿತವಾಗಿಯೂ ಎರಡನ್ನೂ ಮಾಡಬಹುದು.

೨. **ನಾನು ಪ್ರಸ್ತಾಪಿತ ಯೋಜನಾ ಸ್ಥಳದ ಬಳಿ ವಾಸಿಸುವುದಿಲ್ಲ, ಹಾಗಿದ್ದರೂ ನಾನು ಸಾರ್ವಜನಿಕ ಅಹವಾಲು ಸಭೆಯಲ್ಲಿ ಭಾಗವಹಿಸಿ, ನನ್ನ ಆತಂಕಗಳ ಕುರಿತ ಪ್ರಶ್ನೆಗಳನ್ನು ಕೇಳಬಹುದಲ್ಲವೇ?**

ಖಂಡಿತವಾಗಿಯೂ ಭಾಗವಹಿಸಬಹುದು. ನೀವು ಮೌಲಿಕವಾದ ಸಾಮಾಜಿಕ ಮತ್ತು ಪರಿಸರದ ಕಾಳಜಿಗಳನ್ನು ಎತ್ತುವಿರಾದರೆ, ಭಾಗವಹಿಸಲು ಯಾವ ಅಡ್ಡಿಯೂ ಇಲ್ಲ!

೩. **ನನಗೆ ಸಾರ್ವಜನಿಕ ಅಹವಾಲು ಸಭೆಯಲ್ಲಿ ಕೇಳಲು ಯಾವುದೇ ರೀತಿಯ ಮುಖ್ಯವಾದ ಪರಿಸರದ ಸಮಸ್ಯೆಗಳೇನಿಲ್ಲ. ಬದಲಿಗೆ ನಾನು ಸಾಮಾಜಿಕ ಮತ್ತು ಉದ್ಯೋಗ ಸಂಬಂಧಿತ ಸಮಸ್ಯೆಗಳ ಕುರಿತ ಪ್ರಶ್ನೆಗಳನ್ನು ಕೇಳಲು ಬಯಸಿದ್ದೇನೆ. ಹಾಗೆ ಕೇಳಬಹುದೇ?**

ಹೌದು, ಸಾರ್ವಜನಿಕ ಅಹವಾಲು ಸಭೆಯು ಪ್ರಸ್ತಾಪಿತ ಯೋಜನೆಯಿಂದ ಆಗುವ ಪಾರಿಸರಿಕ ಪರಿಣಾಮಗಳ ಮೇಲೆ ಗಮನಕೇಂದ್ರೀಕರಿಸುವ ಉದ್ದೇಶ ಹೊಂದಿದೆ. ಆದರೆ, 'ಪರಿಸರ' ಎಂಬ ಪದವನ್ನು ವಿಶಾಲವಾಗಿ ವ್ಯಾಖ್ಯಾನಿಸಬೇಕು ಮತ್ತು ಸಾಮಾಜಿಕ ವಿಚಾರಗಳಿಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಆರ್ಥಿಕ (ಜೀವನೋಪಾಯ)ಕ್ಕೆ ಸಂಬಂಧಿಸಿದ ಪರಿಣಾಮಗಳೂ ಕೂಡ ಇಐಎ ಅಧ್ಯಯನದ ಭಾಗವಾಗಿವೆ. ಆದ್ದರಿಂದ ಆ ಪ್ರಶ್ನೆಗಳನ್ನೂ ಸಾರ್ವಜನಿಕ ಅಹವಾಲು ಸಭೆಗಳಲ್ಲಿ ಕೇಳಬಹುದಾಗಿದೆ. ಸಾಮಾಜಿಕ ಪರಿಣಾಮ ಮೌಲ್ಯಾಂಕನ ಮತ್ತು ಪುನರ್ವಸತಿ ಮತ್ತು ಪುನಸ್ಥಾಪನೆ ಯೋಜನೆಗಳು ಇಐಎ ಅಧ್ಯಯನದ ಭಾಗವಾಗಿರುತ್ತವೆ ಮತ್ತು ಈ ಕುರಿತ ಸಮಸ್ಯೆಗಳನ್ನು ಅಹವಾಲು ಕೇಳುವ ಸಂದರ್ಭದಲ್ಲಿ ಎತ್ತಬಹುದಾಗಿದೆ.

> 'ಪರಿಸರ' ಎಂಬ ಪದವನ್ನು ವಿಶಾಲವಾಗಿ ಅರ್ಥೈಸಬೇಕು ಮತ್ತು ಸಾರ್ವಜನಿಕ ಅಹವಾಲು ಸಭೆಯಲ್ಲಿ ಸಾಮಾಜಿಕ & ಆರ್ಥಿಕ ಪರಿಣಾಮಗಳು ಮತ್ತು ಜೀವನೋಪಾಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಎತ್ತಬಹುದಾಗಿದೆ.

೪. **ಯೋಜನೆಯ ಬಗ್ಗೆ ಲಿಖಿತ ಪ್ರತಿಕ್ರಿಯೆಗಳನ್ನು ಯಾರು ಕಳುಹಿಸಬಹುದು?**

ಯೋಜನೆಯ ಅಥವಾ ಚಟುವಟಿಕೆಯ ಪಾರಿಸರಿಕ ಅಂಶಗಳ ಕುರಿತು ಸಕಾರಣ ಬಾಧ್ಯತೆ ಇರುವ ಯಾರೇ ಆದರೂ, ಸ್ಥಳೀಯ ಸಮುದಾಯವಲ್ಲದೇ, ಹೋರಾಟಗಾರರು ಮತ್ತು ಮಾಧ್ಯಮದವರು ಕೂಡ ಲಿಖಿತ ಪ್ರತಿಕ್ರಿಯೆಗಳನ್ನು ಕಳುಹಿಸಬಹುದಾಗಿದೆ.

೫. **ಸಾರ್ವಜನಿಕ ಅಹವಾಲು ಸಭೆ ನಡೆಸದೆಯೇ ಒಂದು ಯೋಜನೆ ಇಸಿ (ಪರಿಸರ ಪರವಾನಗಿ/ಒಪ್ಪಿಗೆ) ನೀಡಿದರೆ ಏನು ಮಾಡಬೇಕು?**

ರಾಷ್ಟ್ರೀಯ ಹಸಿರು ನ್ಯಾಯಪೀಠದಲ್ಲಿ ಇಸಿ ವಿರುದ್ಧ ಒಂದು ಮೊಕದ್ದಮೆ ಹೂಡಬೇಕು. ಇಸಿ ನೀಡಿದ ೩೦ ದಿನಗಳ ಒಳಗೆ ದೂರು ನೀಡಬೇಕು ಅಥವಾ ಸಮರ್ಥಿಸಿಕೊಳ್ಳಬಲ್ಲ ಕಾರಣವಿದ್ದರೆ ೯೦ ದಿನಗಳವರೆಗೆ ಈ ಅವಧಿಯನ್ನು ವಿಸ್ತರಿಸಬಹುದು.

೬. **ಎರಡು ಯೋಜನೆಗಳ ಸಾರ್ವಜನಿಕ ಅಹವಾಲು ಸಭೆಗಳನ್ನು ಏಕಕಾಲದಲ್ಲಿ ಒಂದೇ ಸಮಯದಲ್ಲಿ ಮತ್ತು ಒಂದೇ ಸ್ಥಳದಲ್ಲಿ ನಡೆಸಬಹುದೇ?**

ಇಲ್ಲ, ಎಂಇಎಫ್ ಏಪ್ರಿಲ್ ೨೦೧೦ರಲ್ಲಿ ಹೊರಡಿಸಿದ ಕಚೇರಿ ಮೆಮೊ ಪ್ರಕಾರ ಹಾಗೆ ಮಾಡುವಂತಿಲ್ಲ.[7]

೭. **ಸಾರ್ವಜನಿಕ ಅಹವಾಲು ಸಭೆಯನ್ನು ಮುಂದೂಡಬಹುದೇ?**

ಮುಂದೂಡಬಹುದು, ಆದರೆ ಏನಾದರೂ ತುಂಬಾ ತುರ್ತು ಕಾರಣ ಇದ್ದಾಗ ಮಾತ್ರ ಮುಂದೂಡಬಹುದು. ಇಲ್ಲವಾದಲ್ಲಿ ಅಹವಾಲು ಸಭೆಯ ದಿನಾಂಕ, ಸ್ಥಳ ಮತ್ತು ಸಮಯವನ್ನು ಬದಲು ಮಾಡುವಂತಿಲ್ಲ.

---

7 http://envfor.nic.in/divisions/iass/Cir/pub_hear_EIA.pdf

- ಜಿಲ್ಲಾ ನ್ಯಾಯಾಧೀಶರು/ಜಿಲ್ಲಾ ಕಲೆಕ್ಟರ್/ಜಿಲ್ಲಾಧಿಕಾರಿಯವರ ಶಿಫಾರಸ್ಸಿನ ಮೇರೆಗೆ ಮಾತ್ರ ಅಹವಾಲು ಸಭೆಯನ್ನು ಮುಂದೂಡಬಹುದು.
- ಹೀಗೆ ಮುಂದೂಡಿದ್ದನ್ನು ಈ ಮೊದಲು ಅಹವಾಲು ಸಭೆಯ ಪ್ರಕಟಣೆಯು ಪ್ರಕಟಗೊಂಡ ಅದೇ ಇಂಗ್ಲಿಷ್ ಮತ್ತು ಪ್ರಾದೇಶಿಕ ದಿನಪತ್ರಿಕೆಗಳ ಮೂಲಕ ಪ್ರಕಟಿಸಬೇಕು. ಜೊತೆಗೆ ಎಸ್‌ಪಿಸಿಬಿಯು ಗುರುತಿಸಿದ ಎಲ್ಲ ಕಚೇರಿಗಳಲ್ಲಿಯೂ ಎದ್ದು ಕಾಣುವಂತೆ ಪ್ರದರ್ಶಿಸಬೇಕು.
- ಸಾರ್ವಜನಿಕ ಅಹವಾಲು ಸಭೆಯ ಹೊಸ ತಾರೀಖು, ಸಮಯ ಮತ್ತು ಸ್ಥಳವನ್ನು ಎಸ್‌ಪಿಸಿಬಿಯ ಸದಸ್ಯ-ಕಾರ್ಯದರ್ಶಿಯವರು ಜಿಲ್ಲಾನ್ಯಾಯಾಧೀಶರು/ಜಿಲ್ಲಾಕಲೆಕ್ಟರ್/ ಜಿಲ್ಲಾಧಿಕಾರಿಯವರೊಂದಿಗೆ ಸಮಾಲೋಚನೆ ನಡೆಸಿದ ನಂತರವಷ್ಟೆ ನಿರ್ಧರಿಸಬೇಕು ಮತ್ತು ಹೊಸದಾಗಿ ಪ್ರಕಟಣೆಯನ್ನು ನೀಡಬೇಕು.
- ಸ್ಥಳೀಯ ಸನ್ನಿವೇಶಗಳ ಕಾರಣದಿಂದಾಗಿ, ಸಾರ್ವಜನಿಕ ಅಹವಾಲು ಸಭೆಯನ್ನು ನಿಗದಿತ ರೀತಿಯಲ್ಲಿ ನಡೆಸಲು ಸಾಧ್ಯವಾಗದಿದ್ದರೆ, ಎಸ್‌ಪಿಸಿಬಿಯು ನಂತರ ಈ ಕುರಿತು ಎಂಒಇಎಫ್/ಎಸ್‌ಇಐಎಎಗೆ ವರದಿ ಮಾಡಬೇಕು, ಅವರು ಸೂಕ್ತ ಪರಿಶೀಲನೆ ನಂತರ, ಸಾರ್ವಜನಿಕ ಸಮಾಲೋಚನೆಯು ಆ ನಿರ್ದಿಷ್ಟ ಪ್ರಕರಣದಲ್ಲಿ ಸಾರ್ವಜನಿಕ ಅಹವಾಲನ್ನು ಒಳಗೊಳ್ಳುವ ಅಗತ್ಯವಿಲ್ಲ ಎಂದು ನಿರ್ಧರಿಸುತ್ತದೆ.
- ಆದರೆ, ಇತ್ತೀಚಿನ ಎನ್‌ಜಿಟಿ ಆದೇಶವು, ಜನರು ಆಕ್ರಮಣಶೀಲರು, ಗಲಾಟೆ ಮಾಡುವ ಸಂದರ್ಭದಲ್ಲಿ, ಸಾರ್ವಜನಿಕ ಅಹವಾಲು ಸಭೆಯನ್ನು ರದ್ದುಪಡಿಸಿ, ಸೂಕ್ತ ಪ್ರತಿನಿಧಿತ್ವವನ್ನು ಖಾತ್ರಿಪಡಿಸಿಕೊಳ್ಳಲು ನಂತರ ನಡೆಸಬಹುದು ಎನ್ನುತ್ತದೆ.

**೮. ಸಾರ್ವಜನಿಕ ಅಹವಾಲು ಸಭೆಯನ್ನು ಮುಂದೂಡುವಂತೆ ಜನರು ಕೇಳಿಕೊಳ್ಳಬಹುದೇ?**

ಅಹವಾಲು ಸಭೆಯನ್ನು ನಡೆಸುವಲ್ಲಿ ಏನಾದರೂ ಕಾರ್ಯವಿಧಾನದ ಲೋಪಗಳಾಗಿದ್ದರೆ ಮಾತ್ರ ಜನರು ಕೇಳಬಹುದು. ಲೋಪಗಳೆಂದರೆ - ಸ್ಥಳವು ತುಂಬಾ ದೂರವಿದೆ ಅಥವಾ ಗುರುತುಪಡಿಸಿದ ಸ್ಥಳಗಳಲ್ಲಿ ಇಐಎ ಕರಡು ಲಭ್ಯವಿಲ್ಲ ಇತ್ಯಾದಿ. ಜನರು ಜಿಲ್ಲಾ ನ್ಯಾಯಾಧೀಶರು/ಕಲೆಕ್ಟರ್/ ಜಿಲ್ಲಾಧಿಕಾರಿಯವರಿಗೆ ಜಂಟಿ ಪ್ರತಿನಿಧಿತ್ವದಿಂದ ಮನವಿ ಮಾಡಬಹುದು.

**೯. ಸಾರ್ವಜನಿಕ ಅಹವಾಲು ಸಭೆಯಲ್ಲಿ ಎಷ್ಟು ಜನ ಮಾತನಾಡಬಹುದು ಎಂದು ನಿಯಮವಿದೆಯೇ?**

ಇಲ್ಲ, ಆ ರೀತಿಯ ಮಿತಿಗಳಿಲ್ಲ. ಅಹವಾಲು ಸಭೆಯಲ್ಲಿ ಹಾಜರಿರುವ ಎಲ್ಲರಿಗೂ ತಮ್ಮ ದೃಷ್ಟಿಕೋನಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಲಾಗುವುದು.

**೧೦.ಸಾರ್ವಜನಿಕ ಅಹವಾಲು ಸಭೆಗೆ ಸಮಯದ ಮಿತಿಯನ್ನು ನಿಗದಿ ಮಾಡಲಾಗಿದೆಯೇ?**

ಹಾಗೇನಿಲ್ಲ! ಸಾರ್ವಜನಿಕರು ಸಭೆಯಲ್ಲಿ ಕೇಳುವ ಪ್ರಶ್ನೆಗಳಿಗೆ ಉತ್ತರ ಹೇಳುವವರೆಗೂ ಅಹವಾಲು ಸಭೆಯು ಮುಂದುವರೆಯುವುದು.

**೧೧.ತುಂಬಾ ಮಾಲಿನ್ಯಗೊಂಡ ಪ್ರದೇಶದಲ್ಲಿ ಯೋಜನೆಯೊಂದನ್ನು ಪ್ರಸ್ತಾಪಿಸಲಾಗುತ್ತಿದೆ ಎಂದಿಟ್ಟುಕೊಳ್ಳೋಣ. ಆಗ ಆ ಒಂದು ಯೋಜನೆಯ ಸಾರ್ವಜನಿಕ ಅಹವಾಲು ಸಭೆಯಲ್ಲಿ ಎಲ್ಲ ಮಾಲಿನ್ಯಗೊಳಿಸುವ ಯೋಜನೆಗಳ ಒಟ್ಟು ಪರಿಣಾಮದ ಕುರಿತು ಪ್ರಶ್ನೆಗಳನ್ನು ಕೇಳಬಹುದೇ?**

ಖಂಡಿತವಾಗಿಯೂ ಕೇಳಬಹುದು. ಇಐಎ ಅಧ್ಯಯನವು ಯೋಜನಾ ಸ್ಥಳದಲ್ಲಿ ಪ್ರಸ್ತಾಪಗೊಂಡ ಯೋಜನೆಗಳು ಮತ್ತು ಮುಂಬರಲಿರುವ ಯೋಜನೆಗಳ ಒಟ್ಟು ಸಂಚಯಿತ ಪರಿಣಾಮದ ಮೌಲ್ಯಾಂಕನ ಮಾಡುವುದನ್ನು ಒಳಗೊಂಡಿರುತ್ತದೆ. ಈ ಯೋಜನೆಗಳ ಸಂಚಯಿತ ಪರಿಣಾಮಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಸಾರ್ವಜನಿಕ ಅಹವಾಲು ಸಭೆಯಲ್ಲಿ ಪ್ರಶ್ನೆ ಕೇಳಲು ಆಸ್ಪದವಿರುತ್ತದೆ.

ಇಐಎ ಕರಡಿನ ೧೦ ಮುದ್ರಿತ ಪ್ರತಿಗಳು ಮತ್ತು ಸಾಫ್ಟ್ ಪ್ರತಿಗಳನ್ನು ಸಾರ್ವಜನಿಕ ಅಹವಾಲು ಸಭೆಗೆ ಒಂದು ತಿಂಗಳು ಮೊದಲೇ ಜಿಲ್ಲಾ ನ್ಯಾಯಾಧೀಶರು, ಜಿಲ್ಲಾ ಪರಿಷತ್/ಮುನ್ಸಿಪಲ್ ಕಾರ್ಪೋರೇಶನ್/ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ, ಜೊತೆಗೆ ಜಿಲ್ಲಾ ಕೈಗಾರಿಕಾ ಕಚೇರಿ ಮತ್ತು ಎಂಒಇಎಫ್ ಪ್ರಾದೇಶಿಕ ಕಚೇರಿಯಲ್ಲಿ ದೊರಕುವಂತಿರಬೇಕು.

**೧೨.ಯೋಜನಾ ಸ್ಥಳವು ಎರಡು ರಾಜ್ಯಗಳ ನಡುವಣ ಗಡಿಯಲ್ಲಿದ್ದರೆ, ಆಗ ಸಾರ್ವಜನಿಕ ಅಹವಾಲು ಸಭೆಯನ್ನು ಎಲ್ಲಿ ನಡೆಸಲಾಗುವುದು?**

ಅಂತಹ ಸಂದರ್ಭದಲ್ಲಿ ಎರಡೂ ರಾಜ್ಯಗಳ ಎಸ್‌ಪಿಸಿಬಿಗಳು ಸೇರಿ ಜಂಟಿಯಾಗಿ ಅಹವಾಲು ಸಭೆಯನ್ನು ನಡೆಸಬೇಕು.

**೧೩.ಎಸ್‌ಪಿಸಿಬಿಯು ಸಾರ್ವಜನಿಕ ಅಹವಾಲು ಸಭೆಯನ್ನು ಹೇಗೆ ಪ್ರಚಾರ ಮಾಡುತ್ತದೆ ಎಂದು ತಿಳಿಯುವ ವಿಧಾನಗಳಿವೆಯೇ?**

ಹೌದು, ಇದೆ. ಈ ಮಾಹಿತಿಯು ಸಾರ್ವಜನಿಕ ಅಹವಾಲು ವರದಿಯಲ್ಲಿ ಲಭ್ಯವಿರಬೇಕಾಗುತ್ತದೆ. ೨೦೧೦ರ ಏಪ್ರಿಲ್‌ನಲ್ಲಿ ಎಂಒಇಎಫ್ ನೀಡಿದ ಕಚೇರಿ ಆದೇಶದ ಪ್ರಕಾರ ಎಸ್‌ಪಿಸಿಬಿಯು ಸ್ಥಳೀಯ ಜನರಿಗೆ ಅಹವಾಲು ಸಭೆಯ ಸಮಯ, ಸ್ಥಳ ಮತ್ತು ದಿನಾಂಕವನ್ನು ತಿಳಿಸಲು ಹೇಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಯಿತು ಎಂದು ಸಾರ್ವಜನಿಕ ಅಹವಾಲು ಸಭಾಕಲಾಪದಲ್ಲಿ ತಿಳಿಸಬೇಕಾದ ಅಗತ್ಯವಿದೆ. ಎಸ್‌ಪಿಸಿಬಿಯು ಅಹವಾಲು ಸಭೆಗೆ ಅನುಸರಿಸಲಾದ ಪ್ರಕ್ರಿಯೆಯು ಕೂಡ ಸಮರ್ಪಕವಾಗಿತ್ತು ಎಂದು ಪ್ರಮಾಣೀಕರಿಸುವ ಅಗತ್ಯವಿದೆ. [8]

## 2.1.6 ಸಾರ್ವಜನಿಕ ಅಹವಾಲು ಸಭೆಗಳಲ್ಲಿ ನಿಮ್ಮ ಹಕ್ಕುಗಳನ್ನು ಪ್ರತಿಪಾದಿಸಿ!

**ಸಾರ್ವಜನಿಕ ಅಹವಾಲು ಸಭೆಗಳಲ್ಲಿ ನಿಮ್ಮ ಹಕ್ಕುಗಳನ್ನು ಪ್ರತಿಪಾದಿಸಿ!**

೧. ಸಾರ್ವಜನಿಕ ಅಹವಾಲು ಸಭೆಗಳ ಪ್ರಕಟಣೆಯಾದೊಡನೆಯೇ, ಕರಡು ಇಐಎ ಮತ್ತು ಕರಡು ಇಐಎ ಸಾರಾಂಶವನ್ನು ಪಡೆದುಕೊಳ್ಳಿ.

೨. ಎಂಒಇಎಫ್/ಎಸ್‌ಇಐಎಎ ಬಿಡುಗಡೆ ಮಾಡಿರುವ ಯೋಜನೆಯ ಒಪ್ಪಂದದ ಕರಾರುಗಳ ಒಂದು ಪ್ರತಿಯನ್ನು ಪಡೆದುಕೊಳ್ಳಿ.

೩. ಇಐಎ ಕರಡನ್ನು ಟಿಒಆರ್‌ನಲ್ಲಿ ಸೂಚಿಸಿದ ರೀತಿಯಲ್ಲಿಯೇ ರಚಿಸಲಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ.

೪. ಅಹವಾಲು ಸಭೆಯಲ್ಲಿ, ಪ್ರತಿಪಾದಕರ/ಅರ್ಜಿದಾರರ ಮಂಡನೆಯನ್ನು ಸ್ಥಳೀಯ ಭಾಷೆಯಲ್ಲಿ ಎಲ್ಲರಿಗೂ ಅರ್ಥವಾಗುವ ಹಾಗೆ ಮಾಡುವಂತೆ ಒತ್ತಾಯಿಸಿ.

೫. ಯೋಜನೆಯ ಸಾಮಾಜಿಕ, ಆರ್ಥಿಕ ಮತ್ತು ಪಾರಿಸರಿಕ ಪರಿಣಾಮಗಳ ಬಗ್ಗೆ ಹೇಗೆ ಗಮನ ಕೇಂದ್ರೀಕರಿಸುತ್ತಾರೆ ಎಂಬ ನಿರ್ದಿಷ್ಟ ವಿವರಗಳನ್ನು ಕೇಳಿಕೊಳ್ಳಿ.

೬. ಸಾರ್ವಜನಿಕ ಅಹವಾಲು ಸಭೆಯು ಮುಕ್ತಾಯದ ಹಂತಕ್ಕೆ ಬರುತ್ತಿರುವಂತೆ, ನಿಮ್ಮೆಲ್ಲ ಕಾಳಜಿಗಳನ್ನು ಸಭಾ ನಡಾವಳಿಯಲ್ಲಿ ದಾಖಲಿಸಲಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ - ನಡಾವಳಿಯನ್ನು ಸ್ಥಳೀಯ ಭಾಷೆಯಲ್ಲಿ ಜೋರಾಗಿ ಓದಿಹೇಳಿ, ವಿವರಿಸಬೇಕು.

೭. ನಿಮ್ಮೆಲ್ಲ ಕಾಳಜಿಗಳನ್ನು ಸರಿಯಾಗಿ ದಾಖಲಿಸಿಕೊಂಡಿದ್ದಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಸಾರ್ವಜನಿಕ ಅಹವಾಲು ಸಭೆಯ ನಡಾವಳಿಯ ಪ್ರತಿಯನ್ನು ಪಡೆದುಕೊಳ್ಳಿ.

೮. ಅಂತಿಮ ಇಐಎ ಪ್ರತಿಯನ್ನು ಪಡೆದುಕೊಂಡು, ಸ್ಥಳೀಯ ಜನರ ಕಾಳಜಿಗಳನ್ನು ಮತ್ತು ಅದಕ್ಕೆ ಯೋಜನೆಯ ಅರ್ಜಿದಾರರು/ಪ್ರತಿಪಾದಕರು ನೀಡಿದ ಪ್ರತಿಕ್ರಿಯೆಗಳನ್ನು ಸೇರಿಸಲಾಗಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ.

೯. ಯೋಜನೆಯ ಅರ್ಜಿದಾರರು/ಪ್ರತಿಪಾದಕರು ಸಾರ್ವಜನಿಕ ಅಹವಾಲು ಸಭೆಯಲ್ಲಿ ನೀಡಿದ ಭರವಸೆಗಳನ್ನೆಲ್ಲ ಅಂತಿಮ ಇಐಎ ವರದಿಯಲ್ಲಿ ಮತ್ತು ಪರಿಷ್ಕೃತ ಕಾರ್ಯಸಾಧ್ಯ ವರದಿಯಲ್ಲಿ ಸರಿಯಾಗಿ ಸೇರಿಸಲಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ. ಉದಾ: ಯೋಜನೆಯ ಅರ್ಜಿದಾರರು/ಪ್ರತಿಪಾದಕರು ಯೋಜನೆಯಿಂದ ಪರಿಣಾಮಿತರಾಗುವ ಸಮುದಾಯಗಳಿಗೆ ಕೊಳವೆ ನೀರಿನ ಸಂಪರ್ಕ ಕಲ್ಪಿಸುವುದಾಗಿ ಒಪ್ಪಿಕೊಂಡಿದ್ದರೆ, ಅದಕ್ಕೆ ಅಂತಿಮ ಇಐಎ ವರದಿಯಲ್ಲಿ ಆಯವ್ಯಯ ಹಂಚಿಕೆ ಮಾಡಿರಬೇಕಾಗುತ್ತದೆ.

---

8 http://envfor.nic.in/divisions/iass/Cir/pub_hear_EIA.pdf

## 2.2 ಸಕಾಲಿಕ ಮಧ್ಯವರ್ತನೆಗಳು

೧. ಅರ್ಜಿ ಸಲ್ಲಿಸುವ ಮೊದಲು
೨. ನಮೂನೆ ೧ ಸಲ್ಲಿಸಿದ ನಂತರ
೩. ಒಪ್ಪಂದದ ಕರಾರುಗಳನ್ನು ನೀಡಿದ ನಂತರ
೪. ಸಾರ್ವಜನಿಕ ಅಹವಾಲು ಸಭೆ ಕುರಿತು ಪ್ರಕಟಣೆ ನೀಡಿದ ನಂತರ
೫. ಸಾರ್ವಜನಿಕ ಸಮಾಲೋಚನೆ ಪೂರ್ಣಗೊಳಿಸಿ, ಅಂತಿಮ ಇಐಎ ಸಲ್ಲಿಸಿದ ನಂತರ
೬. ಪಾರಿಸರಿಕ ಅನುಮತಿ ನೀಡಿದ ನಂತರ

### I. ಅರ್ಜಿ ಸಲ್ಲಿಸುವ ಮೊದಲು

**ಹೊಸ ಯೋಜನೆಗಳು/ವಿಸ್ತರಣೆಗಳ ಬಗ್ಗೆ ಹೇಗೆ ತಿಳಿಯುವುದು**

- ಪತ್ರಿಕೆಗಳಲ್ಲಿ ನಿರಂತರವಾಗಿ ಪರಿಶೀಲಿಸುವುದು - ಹೊಸ ಯೋಜನೆಗಳ ಕುರಿತ ಪ್ರಕಟಣೆಗಾಗಿ ಪ್ರಾದೇಶಿಕ ಮತ್ತು ವಾಣಿಜ್ಯ ಪತ್ರಿಕೆಗಳೂ ಸೇರಿದಂತೆ ಎಲ್ಲ ಪತ್ರಿಕೆಗಳನ್ನು ನೋಡುತ್ತಿರಿ.

- ಬೃಹತ್ ಪ್ರಮಾಣದಲ್ಲಿ ಭೂ ಸ್ವಾಧೀನದ ಬಗ್ಗೆ ವಿಚಾರಿಸುತ್ತಿರುವುದು - ವಿಶೇಷವಾಗಿ ಕರಾವಳಿ ಪ್ರದೇಶಗಳಲ್ಲಿ ಈ ಕುರಿತು ಗಮನವಹಿಸಬೇಕು. ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಮಾರಲಾಯಿತು ಎಂದು ಜಮೀನುದಾರರನ್ನು ವಿಚಾರಿಸುತ್ತಿರಿ.

- ಇಂಧನ ಪೂರೈಕೆ ಕಂಪನಿಗಳ ಮತ್ತು ವಿದ್ಯುತ್‌ಶಕ್ತಿ ಉತ್ಪಾದಕರ ಪೂರೈಕೆ ಪ್ರಕಟಣೆಗಳನ್ನು ಗಮನಿಸುತ್ತಿರುವುದು ಮತ್ತು ಅಂತರ್ಜಾಲ ಜಾಲತಾಣಗಳನ್ನು ಪರೀಕ್ಷಿಸುತ್ತಿರಬೇಕು. ಏನಾದರೂ ಹೊಸ ಯೋಜನೆ ಅಥವಾ ವಿಸ್ತರಣೆ ಯೋಜನೆ ಬಗ್ಗೆ ಪ್ರಕಟಣೆಗಳಿವೆಯೇ, ನಿರ್ದಿಷ್ಟ ವಿದ್ಯುತ್‌ಶಕ್ತಿ ಕಂಪನಿಯೊಂದಕ್ಕೆ ಇಂಧನ ಪೂರೈಕೆಯ ಕುರಿತು ಖಾತ್ರಿಪಡಿಸಲಾಗಿದೆಯೇ ಎಂಬುದನ್ನು ಪರಿಶೀಲನೆ ಮಾಡುತ್ತಿರಿ.

- ಸಾರ್ವಜನಿಕ ವಲಯದ ವಿದ್ಯುತ್ ಉತ್ಪಾದಕರನ್ನು ಅನುಸರಣೆ ಮಾಡುತ್ತಿರಿ - ಎನ್‌ಟಿಪಿಸಿ (http://www.ntpc.co.in/)ಮತ್ತು ಎನ್‌ಎಲ್‌ಸಿ (http://www.nlcindia.com/) ಹಲವಾರು ವಿದ್ಯುತ್ ಸ್ಥಾವರಗಳನ್ನು ಹೊಂದಿದ್ದು, ಇವುಗಳ ವಾರ್ಷಿಕ ಸಾಮಾನ್ಯ ಮಹಾಸಭೆಗಳ ವರದಿಗಳನ್ನು ಮತ್ತು ಜಾಲತಾಣಗಳನ್ನು ಗಮನಿಸುತ್ತಿರಿ, ಹೊಸ ಯೋಜನೆಗಳು/ವಿಸ್ತರಣೆಗಳ ಕುರಿತ ಪ್ರಕಟಣೆಗಳು ಇರುತ್ತವೆ.

- ರಾಜ್ಯ ಶಕ್ತಿ ಇಲಾಖೆ ಮತ್ತು ವಿದ್ಯುತ್ ಮಂಡಳಿಗಳ ವಾರ್ಷಿಕ ನೀತಿ ಟಿಪ್ಪಣಿಗಳನ್ನು ಓದುತ್ತಿರಿ, ಇವುಗಳ ಜಾಲತಾಣದಲ್ಲಿ ಲಭ್ಯವಿರುವ ದಾಖಲೆಗಳಲ್ಲಿ ಹೊಸ ಯೋಜನೆಗಳು/ವಿಸ್ತರಣೆಗಳ ಕುರಿತ ಏನಾದರೂ ಯೋಜನೆಗಳಿವೆಯೇ ಎಂದು ಗಮನಿಸುತ್ತಿರಿ.

- ಖಾಸಗಿ ವಲಯದ ವಿದ್ಯುತ್ ಉತ್ಪಾದಕರು ಏನಾದರೂ ಯೋಜನೆ ಕುರಿತು ಪ್ರಕಟಿಸಿರುವುದನ್ನು ತಿಳಿಯಲು ಅವರ ವಾರ್ಷಿಕ ಸಾಮಾನ್ಯ ಮಹಾಸಭೆಯ ನಡಾವಳಿಗಳು ಮತ್ತು ಪ್ರಕಟಣೆಗಳನ್ನು ಓದುತ್ತಿರಿ. ರಿಲಾಯನ್ಸ್ (http://www.reliancepower.co.in/), ಆದಾನಿ (http://www.adanipower.com/), ಟಾಟಾ ಪವರ್ (http://www.tatapower.com/), ಲ್ಯಾನ್ಕೋ (http://www.lancogroup.com/)

- ಟಿಪಿಪಿಗಳ ಬೆಳವಣಿಗೆ ಮೇಲೊಂದು ಕಣ್ಣು ಇಟ್ಟಿರಿ - ವಾರ್ಷಿಕ ಸಾಮಾನ್ಯ ಮಹಾಸಭೆಗಳ ವರದಿಗಳು, ಷೇರುದಾರರ ವರದಿಗಳು, ಜಾಲತಾಣಗಳು ಇತ್ಯಾದಿಗಳಲ್ಲಿ ಹೊಸ ಯೋಜನೆ/ವಿಸ್ತರಣೆ ಕುರಿತ ಪ್ರಕಟಣೆಗಳನ್ನು ಆಗಾಗ ಓದುವ ಮೂಲಕ ಟಿಪಿಪಿಗಳ ಬೆಳವಣಿಗೆಯನ್ನು ಗಮನಿಸುತ್ತಿರಿ.

**ಹೊಸ ಟಿಪಿಪಿಗಳು - ನೀವೇನು ಮಾಡಬಹುದು**

1. ಹೊಸ ಸ್ಥಾವರ ಅಥವಾ ಅದರ ಆಕ್ಷೇಪಣಾರ್ಹ ಅಂಶಗಳ ಕುರಿತು ವಿರೋಧಿಸಲು ಸಂಘಟಿತ ಸಂಘ/ಸಂಸ್ಥೆ ಅಥವಾ ಒಕ್ಕೂಟದ ಭಾಗವಾಗಿರಿ. ಈಗಾಗಲೇ ಇರುವ ಗುಂಪುಗಳಾದ ರೈತರು/ಮೀನುಗಾರರ ಸಂಘ, ಟ್ರೇಡ್ ಯೂನಿಯನ್, ಸಕ್ರಿಯ ಎನ್‌ಜಿಒದ ಭಾಗವಾಗಿ ಅಥವಾ ಸಂಭಾವ್ಯ ಪರಿಣಾಮಿತರ ಜನರ ಒಂದು ಗುಂಪನ್ನು ರಚಿಸಿಕೊಳ್ಳಿ. ಸ್ಥಳೀಯ ಜನರ ಬೆಂಬಲವನ್ನು ಒಗ್ಗೂಡಿಸಿ, ಒಂದು ಗುಂಪಾಗಿ ನಿಮ್ಮ ಕಾಳಜಿಗಳ ಕುರಿತು ಧ್ವನಿಯೆತ್ತಿರಿ.
2. ಪ್ರಸ್ತಾಪಿತ ಯೋಜನೆ/ವಿಸ್ತರಣೆಯನ್ನು ವಿರೋಧಿಸಲು ಈಗಾಗಲೇ ಸ್ಥಾಪಿತವಾಗಿರುವ ಸ್ಥಾವರದ ಕುರಿತಾಗಿ ಹೋರಾಡುತ್ತಿರುವ ಒಂದು ಗುಂಪಿನೊಂದಿಗೆ ಸಂಬಂಧ ಬೆಳೆಸಿಕೊಳ್ಳಿ.
3. ಈಗಾಗಲೇ ಇರುವ ಸ್ಥಾವರದಿಂದಾಗಿ ಸ್ಥಳೀಯ ಜನರು ಎದುರಿಸುತ್ತಿರುವ ಸಮಸ್ಯೆಗಳ ಒಂದು ಪಟ್ಟಿಯನ್ನು ಮಾಡಿಕೊಳ್ಳಿ. ಯೋಜನಾ ಪ್ರತಿಪಾದಕರು ಎಂಒಇಎಫ್/ಎಸ್‌ಪಿಸಿಬಿಗೆ ಸಲ್ಲಿಸಿದ ಅನುವರ್ತನಾ ವರದಿಗಳನ್ನು ಪಡೆದುಕೊಳ್ಳಿ ಮತ್ತು ಪಾರಿಸರಿಕ ಕರಾರುಗಳಲ್ಲಿ ಏನಾದರೂ ಲೋಪಗಳಾಗಿವೆಯೇ ಎಂದು ಪರಿಶೀಲಿಸಿ.
4. ಈಗಾಗಲೇ ನಿಮ್ಮ ಅಕ್ಕಪಕ್ಕದಲ್ಲಿ ಮಾಲಿನ್ಯಗೊಳಿಸುವ ಕೈಗಾರಿಕೆಗಳಿದ್ದರೆ, ಸಾರ್ವಜನಿಕರಿಗೆ ಮತ್ತು ಅಧಿಕಾರಿಗಳಿಗೆ, ನಿಮ್ಮ ಪರಿಸರದ ಮೇಲಾಗುವ ಸಂಚಯಿತ ಪರಿಣಾಮವನ್ನು ಲೆಕ್ಕಹಾಕಿ, ವರದಿ ಮಾಡಿ.
5. ಸ್ಥಾವರದ ಕುರಿತು ಮತ್ತು ಅದರ ಬಗ್ಗೆ ನಿಮ್ಮ ಆಕ್ಷೇಪಣೆಗಳನ್ನು ನಿಮ್ಮ ಪಂಚಾಯಿತಿ ಮುಖಂಡರಿಗೆ/ಎಂಒಇಎಫ್‌ಗೆ ಸಾಮೂಹಿಕವಾಗಿ ಬರೆಯಿರಿ.
6. ನಿಮ್ಮ ಪ್ರದೇಶದಲ್ಲಿರುವ ಯೋಜನೆಗೆ ನಿರಾಕ್ಷೇಪಣಾ ಪ್ರಮಾಣಪತ್ರ (ಎನ್‌ಒಸಿ) ನೀಡದೇ ಇರುವಂತೆ ಪಂಚಾಯಿತಿ ಅಧ್ಯಕ್ಷರಿಗೆ ಒತ್ತಾಯಿಸಿ ಅಥವಾ ನೀವು ಹೇಳಿದ ಕರಾರುಗಳನ್ನು ಹಾಕಿ, ಎನ್‌ಒಸಿ ನೀಡುವಂತೆ ಕೇಳಿಕೊಳ್ಳಿ.
7. ನೀಡಲಾದ ಎಲ್ಲ ಪತ್ರಗಳು ಮತ್ತು ಮೇಲ್‌ಗೆ ಒಂದು ಸ್ವೀಕೃತಿ ಪತ್ರ ಪಡೆದುಕೊಳ್ಳಿ.

## II. ನಮೂನೆ ೧ ಸಲ್ಲಿಸಿದ ನಂತರ

**ಈ ಕೆಳಗಿನ ದಾಖಲೆಗಳನ್ನು ಪಡೆದುಕೊಳ್ಳಿ**

1. ನಮೂನೆ 1 ಸ್ಥೂಲವಾಗಿ ಈ ಕೆಳಗಿನವುಗಳನ್ನು ಉಲ್ಲೇಖಿಸುತ್ತದೆ:

- ಭೂಮಿಯ ಸದ್ಯದ ಬಳಕೆ
- ಸರ್ವೇ ಸಂಖ್ಯೆ
- ನೈಸರ್ಗಿಕ ಸಂಪನ್ಮೂಲಗಳ ಬಳಕೆ
- ಸ್ಥಾವರದ ಕಾರ್ಯನಿರ್ವಹಣೆ

ಈ ಮಾಹಿತಿಯು ಸ್ವಾಧೀನ ಪಡಿಸಿಕೊಳ್ಳಲಿರುವ ಭೂಮಿ ಮತ್ತು ಅದರ ಗಾತ್ರ ಎಷ್ಟು, ಸಂಭಾವ್ಯ ಮಾಲಿನ್ಯಕಾರಕಗಳು ಯಾವುವು ಮತ್ತು ಸ್ಥಾವರದ ಪರಿಣಾಮಗಳೇನು ಎಂಬುದರ ಒಂದು ಚಿತ್ರಣವನ್ನು ನೀಡುತ್ತದೆ.

2. ಕಾರ್ಯಸಾಧ್ಯತೆ-ಪೂರ್ವ ವರದಿಯು ಈ ಕೆಳಗಿನವುಗಳನ್ನು ಉಲ್ಲೇಖಿಸುತ್ತದೆ:

- ಮುಖ್ಯ ಮಾಲಿನ್ಯಕಾರಕಗಳು
- ಯೋಜನೆಯ ಗಾತ್ರ
- ವೆಚ್ಚ
- ಪಾರಿಸರಿಕ ದುಷ್ಪರಿಣಾಮ ತಗ್ಗಿಸುವ/ಕಡಿಮೆಮಾಡುವ ವೆಚ್ಚ
- ಸಮಾಜೋ-ಆರ್ಥಿಕ ಪರಿಣಾಮ ತಗ್ಗಿಸುವ/ಕಡಿಮೆಮಾಡುವ ವೆಚ್ಚ

**ಹೊಸ ಸ್ಥಾವರಗಳು –**

ನೀವೇನು ಮಾಡಬಹುದು...

1. ಸ್ಥಾವರದ ಸಂಭಾವ್ಯ ಪಾರಿಸರಿಕ ಮತ್ತು ಸಮಾಜೋ-ಆರ್ಥಿಕ ಪರಿಣಾಮಗಳನ್ನು ತಿಳಿಯಲು ನಮೂನೆ ೧ ಮತ್ತು ಕಾರ್ಯಸಾಧ್ಯತೆ-ಪೂರ್ವ ವರದಿಗಳನ್ನು ಅಭ್ಯಾಸ ಮಾಡಿ.
2. ಈ ಕೆಳಗಿನ ಅಂಶಗಳಿಗೆ ಸಂಬಂಧಿಸಿದಂತೆ ತಪ್ಪುಮಾಹಿತಿಗಾಗಿ ನಮೂನೆ ೧ನ್ನು ಪರಿಶೀಲಿಸಿ
    - ಯೋಜನಾ ಸ್ಥಳ
    - ಭೂಮಿಯ ವರ್ಗೀಕರಣ
    - ಸಸ್ಯ ಮತ್ತು ಪ್ರಾಣಿ ಸಂಪತ್ತು
    - ನೀರಿನ ಮೂಲಗಳು
    - ಬೇರೆ ಪ್ರಮುಖ ಲಕ್ಷಣಗಳು
3. ಪಾರಿಸರಿಕ ಮತ್ತು ಸಮಾಜೋ-ಆರ್ಥಿಕ ಪರಿಣಾಮಗಳು/ಸಮುದಾಯದ ಅಗತ್ಯಗಳು, ದುಷ್ಪರಿಣಾಮಗಳನ್ನು ತಗ್ಗಿಸುವ ಪ್ರಕ್ರಿಯೆಗಳ ವೆಚ್ಚದ ಸಮರ್ಪಕತೆ ಈ ಎಲ್ಲ ಅಂಶಗಳಿಗಾಗಿ ಕಾರ್ಯಸಾಧ್ಯತೆ-ಪೂರ್ವ ವರದಿಯನ್ನು ಪರಿಶೀಲಿಸಿ.
4. ಮಾಹಿತಿಯು ತಪ್ಪಾಗಿದ್ದರೆ ಅದನ್ನು ಎಂಒಇಎಫ್ ಗಮನಕ್ಕೆ ತನ್ನಿ ಮತ್ತು ಯೋಜನಾ ಸ್ಥಳದ ಸ್ಥಿತಿಗತಿಗಳ ತಳಮಟ್ಟದ ಪರೀಕ್ಷಣೆ ಕೈಗೆತ್ತಿಕೊಳ್ಳಲು ಎಂಒಇಎಫ್‌ಗೆ ಲಾಬಿ ಮಾಡಿ.
5. ಎಂಒಇಎಫ್ ಜಾಲತಾಣದಲ್ಲಿ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ ಮಾಸಿಕ ಸಭೆಗಳ ನಡಾವಳಿಗಳಲ್ಲಿ ಅಗತ್ಯವೆನ್ನಿಸಿದರೆ ಸಿಆರ್‌ಜಡ್ ಅನುಮತಿಯನ್ನು ಪರೀಕ್ಷಿಸಿ. ಸ್ಥಾವರದ ಕುರಿತ ಇತ್ತೀಚಿನ ಮಾಹಿತಿಗಳು, ಸಿಆರ್‌ಜಡ್ ಅನುಮತಿಯನ್ನು ಶಿಫಾರಸು ಮಾಡಲಾಗಿದೆಯೇ, ಸಿಆರ್‌ಜಡ್ ಮಾನದಂಡಗಳಿಗೆ ಅನುಗುಣವಾಗಿ ಸಿಆರ್‌ಜಡ್ ಅನುಮತಿಯನ್ನು ನೀಡಲಾಗಿದೆಯೇ. ಎಂಬ ಅಂಶಗಳನ್ನು ಪರೀಕ್ಷಿಸಿರಿ.
6. ಮಾನದಂಡಗಳಿಗೆ ವಿರುದ್ಧವಾಗಿ ಸಿಆರ್‌ಜಡ್ ಅನುಮತಿಯನ್ನು ನೀಡಲಾಗಿದ್ದರೆ ಮತ್ತು ಎಂಒಇಎಫ್ ಅದನ್ನು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ರಾಷ್ಟ್ರೀಯ ಹಸಿರು ನ್ಯಾಯಪೀಠದಲ್ಲಿ ಪ್ರಕರಣವನ್ನು ದಾಖಲಿಸಿ.

**ಟಿಪಿಪಿ ವಿಸ್ತರಣೆ –**

**ನೀವೇನು ಮಾಡಬಹುದು**

1. ಎಂಒಇಎಫ್/ಎಸ್‌ಪಿಸಿಬಿ ಯೋಜನಾ ಪ್ರತಿಪಾದಕರಿಂದ ಅನುವರ್ತನಾ ವರದಿಗಳನ್ನು ಪಡೆದುಕೊಳ್ಳಿ.
2. ಏನಾದರೂ ಲೋಪಗಳಾಗಿವೆಯೇ ಎಂದು ಸದ್ಯ ಕಾರ್ಯನಿರ್ವಹಿಸುತ್ತಿರುವ ಸ್ಥಾವರದ ಇಸಿ ಕರಾರುಗಳನ್ನು ಪರಿಶೀಲಿಸಿ.
3. ಇಸಿ ಕರಾರುಗಳಲ್ಲಿ ಏನಾದರೂ ಲೋಪಗಳಾಗಿದ್ದರೆ, ಪಂಚಾಯಿತಿ ಮತ್ತು ಎಂಒಇಎಫ್‌ಗೆ ಲಿಖಿತ ರೂಪದಲ್ಲಿ ವರದಿ ಮಾಡಿ.

## III. ಒಪ್ಪಂದದ ಕರಾರುಗಳನ್ನು ನೀಡಿದ ನಂತರ

### ದಾಖಲೆಗಳನ್ನು ಪಡೆದುಕೊಳ್ಳಿ

೧. ಎಂಒಇಎಫ್/ಎಸ್‌ಇಐಎಎ ನೀಡಿದ ಒಪ್ಪಂದದ ಕರಾರುಗಳು(ಟಿಒಆರ್): ಒಪ್ಪಂದದ ಕರಾರುಗಳು ಸ್ಥಾವರದ ನಿರೀಕ್ಷಿತ ಪರಿಣಾಮಗಳು ಮತ್ತು ಪರಿಣಾಮಗಳ ವ್ಯಾಪ್ತಿಯನ್ನು ಮೌಲ್ಯಮಾಪನ ಮಾಡಲು ನಡೆಸಲು ಉದ್ದೇಶಿಸಿದ ಅಧ್ಯಯನಗಳ ಒಂದು ಪ್ರಾಥಮಿಕ ಚಿತ್ರಣವನ್ನು ನೀಡುತ್ತವೆ.

ಟಿಪ್ಪಣಿ: ಎಂಒಇಎಫ್/ಎಸ್‌ಇಐಎಎ ಒಪ್ಪಂದದ ಕರಾರು ನೀಡಲಿಕ್ಕೆ ಇರುವ ಕಾಲ ಮಿತಿ ೬೦ ದಿನಗಳು. ಸಕಾಲಿಕ ಕ್ರಮ ತೆಗೆದುಕೊಳ್ಳದಿದ್ದರೆ ಯೋಜನಾ ಪ್ರತಿಪಾದಕರು ಇಐಎ ಅಧ್ಯಯನ ನಡೆಸಲಿಕ್ಕೆ ನಮೂನೆ ೧ರೊಂದಿಗೆ ಸಲ್ಲಿಸಲಾದ 'ಪ್ರಸ್ತಾಪಿತ' ಒಪ್ಪಂದದ ಕರಾರನ್ನು ಬಳಸಿಕೊಳ್ಳುತ್ತಾರೆ. ಟಿಒಆರ್ ನೀಡಿದ ನಂತರ, ಇಐಎ ಸಿದ್ಧಪಡಿಸಲು ಸುಮಾರು ೩ ತಿಂಗಳು ಸಮಯ ತೆಗೆದುಕೊಳ್ಳುತ್ತದೆ.

೨. ಎಸ್‌ಇಎಸಿ/ಇಎಸಿ ಸಭೆಗಳ ಕಾರ್ಯಸೂಚಿ ಮತ್ತು ನಡಾವಳಿಗಳು ಯೋಜನೆಯ ಕುರಿತ ತಜ್ಞರ ದೃಷ್ಟಿಕೋನಗಳು, ತೆಗೆದುಕೊಳ್ಳಲಾದ ನಿರ್ಧಾರಗಳು ಮತ್ತು ಯೋಜನೆ ಬಗ್ಗೆ ಮಾಹಿತಿಗಳನ್ನು ಸೂಚಿಸುತ್ತವೆ.

೩. ಸ್ಥಳ ಭೇಟಿ ವರದಿಯು ಇಎಸಿ/ಎಸ್‌ಇಎಸಿ ತಂಡವು ಸ್ಥಳ ಭೇಟಿ ನೀಡಿದ ಸಮಯದಲ್ಲಿ ಗಮನಿಸಿದ ಹಾಗೆ ಸ್ಥಾವರದಿಂದ ಆಗುವ ಸಂಭಾವ್ಯ ಪರಿಣಾಮದ ಮಾಹಿತಿಯನ್ನು ನೀಡುತ್ತದೆ.

### ಹೊಸ ಸ್ಥಾವರಗಳು

### ನೀವೇನು ಮಾಡಬಹುದು

೧. ಒಪ್ಪಂದದ ಕರಾರುಗಳ ಗಡುವಿನ ಅವಧಿಯನ್ನು ಎಂಒಇಎಫ್/ಎಸ್‌ಇಐಎಎ ಅನುಸರಿಸುತ್ತಿವೆಯೇ ಎಂಬುದನ್ನು ತಿಳಿಯಲು ಇಎಸಿ/ಎಸ್‌ಇಎಸಿ ಸಭೆಗಳನ್ನು ಗಮನಿಸುತ್ತಿರಿ.

೨. ಒಪ್ಪಂದದ ಕರಾರಿನ ಲಭ್ಯತೆಯನ್ನು ಪರಿಶೀಲಿಸಿರಿ ಮತ್ತು, ಲಭ್ಯವಿಲ್ಲದಿದ್ದರೆ, ಎಂಒಇಎಫ್/ಎಸ್‌ಇಐಎಎ ಜಾಲತಾಣದಲ್ಲಿ ಕೂಡಲೇ ಅಪ್‌ಲೋಡ್ ಮಾಡುವಂತೆ ಕೋರಿಕೊಳ್ಳಿ.

೩. ಯೋಜನಾ ಪ್ರತಿಪಾದಕರಿಗೆ ಇಐಎ ಸಿದ್ಧತೆಗೆ ಇರುವ ಅವಧಿಯನ್ನು ಒಪ್ಪಂದದ ಕರಾರನ್ನು ಅರ್ಥ ಮಾಡಿಕೊಳ್ಳಲು ಮತ್ತು ಸ್ಥಾವರದ ಮಾಲಿನ್ಯಗೊಳಿಸುವ ಅಂಶದ ಕುರಿತು ಆಕ್ಷೇಪಣೆಯೆತ್ತಲು ಸ್ಥಳೀಯ ಹಾಗೂ ಅಕ್ಕಪಕ್ಕದವರ ಬೆಂಬಲ ಪಡೆದುಕೊಳ್ಳಲು ಬಳಸಿಕೊಳ್ಳಿ.

೪. ಯೋಜನಾ ಸ್ಥಳದ ಅಧ್ಯಯನವನ್ನು ಮಾಡಲಾಗಿದ್ದರೆ, ಒಪ್ಪಂದದ ಕರಾರಿನಲ್ಲಿ ಪ್ರಸ್ತಾಪಿತವಾದ ಯೋಜನಾ ಸ್ಥಳದ ವಿಸ್ತೀರ್ಣವನ್ನು ಪರೀಕ್ಷಿಸಿ, ಪರಿಶೀಲನೆ ಮಾಡಿಕೊಳ್ಳಿ.

೫. ಯೋಜನೆಯ ಕಾಳಜಿಗಳನ್ನು ಅರ್ಥ ಮಾಡಿಕೊಳ್ಳಲು ಯೋಜನಾ ಸ್ಥಳ ಭೇಟಿ ವರದಿಯನ್ನು ಅಧ್ಯಯನ ಮಾಡಿ.

೬. ಯೋಜನಾ ಸ್ಥಳ ಭೇಟಿ ವರದಿಯ ಕಾಳಜಿಗಳನ್ನು ಸೇರಿಸಲಾಗಿದೆಯೇ ಎಂಬುದನ್ನು ನೋಡಲು ನೀಡಲಾದ ಒಪ್ಪಂದದ ಕರಾರನ್ನು ಪರಿಶೀಲಿಸಿಕೊಳ್ಳಿ.

೭. ಸ್ಥಳ ಭೇಟಿ ವರದಿಯಲ್ಲಿ ಪ್ರಸ್ತಾಪಿಸಲಾದ ಕಾಳಜಿಗಳನ್ನು ಉದ್ದೇಶಿಸಿರಲಿಲ್ಲ ಎಂದಾದರೆ, ಎಂಒಇಎಫ್/ಎಸ್‌ಇಐಎಎ ಅವರಿಂದ ಪರಿಷ್ಕೃತ ಒಪ್ಪಂದದ ಕರಾರನ್ನು ಪುನಃ ನೀಡುವಂತೆ ಕೇಳಿ.

**ಸ್ಥಾವರಗಳ ವಿಸ್ತರಣೆ - ನೀವೇನು ಮಾಡಬಹುದು**

ಸದ್ಯ ಇರುವ ಸ್ಥಾವರವು ಇಸಿ ಮತ್ತು ಸಿಆರ್‌ಜಡ್ ಅನುಮತಿಗಳಲ್ಲಿರುವ ಕರಾರುಗಳಿಗೆ ಬದ್ಧವಾಗಿರುವುದನ್ನು ಮೌಲ್ಯಮಾಪನ ಮಾಡಲು ಕಾರ್ಯವಿಧಾನವೊಂದನ್ನು ಒಪ್ಪಂದದ ಕರಾರು ಒಳಗೊಂಡಿರಲಿಲ್ಲ ಎಂದಾದರೆ, ಎಂಒಇಎಫ್ ಗೆ ಅಹವಾಲು ಸಲ್ಲಿಸಿ.*

ಇಸಿಯಲ್ಲಿ ವಿಧಿಸಲಾದ ಕರಾರುಗಳಿಗೆ ಈಗ ಅಸ್ತಿತ್ವದಲ್ಲಿರುವ ಸ್ಥಾವರವು ಬದ್ಧವಾಗಿದೆಯೇ ಎಂದು ಅಧ್ಯಯನ ಮಾಡಿ.**

* ಒಪ್ಪಂದದ ಕರಾರಿನಲ್ಲಿ ಬೂದಿ ಹೊಂಡದ ವಿವರಗಳು ಮತ್ತು ಸದ್ಯ ಇರುವ ಬೂದಿ ಹೊಂಡದ ಸುತ್ತಮುತ್ತ ಭಾರಲೋಹಗಳ ಅಧ್ಯಯನಕ್ಕೆ ಕ್ರಿಯಾ ಯೋಜನೆಯ ವಿವರಗಳು ಸೇರುವುದು ಅಗತ್ಯವಿದೆ.

** ಆರ್‌ಟಿಐ ಅಡಿಯಲ್ಲಿ, ಎಸ್‌ಪಿಸಿಬಿಗೆ ಸಲ್ಲಿಸಲಾದ ತ್ರೈಮಾಸಿಕ ವರದಿ, ಎಂಒಇಎಫ್‌ನ ಪ್ರಾದೇಶಿಕ ಕಚೇರಿಗೆ ಸಲ್ಲಿಸಲಾದ ಅರ್ಧವಾರ್ಷಿಕ ವರದಿ ಮತ್ತು ಎಸ್‌ಪಿಸಿಬಿಗೆ ಸಲ್ಲಿಸಿದ ವಾರ್ಷಿಕ ಪಾರಿಸರಿಕ ಹೇಳಿಕೆ ಹಾಗೂ ಕಾರ್ಯಾಚರಣೆಗೆ ಒಪ್ಪಿಗೆಗೆ ಕರಾರುಗಳು, ಈ ಎಲ್ಲವನ್ನು ಪಡೆದುಕೊಳ್ಳುವುದು ಸಾಧ್ಯವಿದೆ.

## IV ಸಾರ್ವಜನಿಕ ಅಹವಾಲು ಸಭೆ ಕುರಿತು ಪ್ರಕಟಣೆ ನೀಡಿದ ನಂತರ

**ದಾಖಲೆಗಳನ್ನು ಪಡೆದುಕೊಳ್ಳಿ**

೧. ಯೋಜನಾ ಪ್ರತಿಪಾದಕರು ಇಂಗ್ಲಿಷ್ ಮತ್ತು ಪ್ರಾದೇಶಿಕ ಭಾಷೆಯಲ್ಲಿ ಸಲ್ಲಿಸಿದ ಕರಡು ಇಐಎ, ಇಐಎ ವರದಿಯ ಸಂಕ್ಷಿಪ್ತ ಸಾರಾಂಶ:

ಟಿಪ್ಪಣಿ:

- ಎರಡೂ ದಾಖಲೆಗಳ ಮುದ್ರಿತ ಮತ್ತು ಸಾಫ್ಟ್ ಪ್ರತಿಗಳನ್ನು ಸಲ್ಲಿಸಿರಬೇಕು ಮತ್ತು ಎರಡೂ ರೂಪದಲ್ಲಿ ಲಭ್ಯವಿರಬೇಕು.
- ಕರಡು ಇಐಎ ವರದಿಯು ಕೈಗೆತ್ತಿಕೊಳ್ಳಲಾದ ಅಧ್ಯಯನಗಳು, ಬಳಸಿಕೊಂಡ ಕಾರ್ಯವಿಧಾನ, ತೆಗೆದುಕೊಳ್ಳಲಾಗುವ ದುಷ್ಪರಿಣಾಮ ತಗ್ಗಿಸುವ ಕ್ರಮಗಳು ಮತ್ತು ಸಿಎಸ್‌ಆರ್ ಆಗಿ ಪ್ರಸ್ತಾಪಿಸಲಾದ ಚಟುವಟಿಕೆಗಳ ವಿವರಗಳನ್ನು ಒಳಗೊಂಡಿರಬೇಕು.
- ಕರಡು ಇಐಎಯಲ್ಲಿ ಪಾರಿಸರಿಕ ನಿರ್ವಹಣಾ ಯೋಜನೆಯು ದುಷ್ಪರಿಣಾಮ ತಗ್ಗಿಸುವ ಕ್ರಮಗಳನ್ನು ವಿವಿಧ ಕ್ರಮಗಳ ವೆಚ್ಚದೊಂದಿಗೆ ಪ್ರಸ್ತಾಪಿಸುತ್ತದೆ. ಪಾರಿಸರಿಕ ನಿರ್ವಹಣಾ ಯೋಜನೆಯ ಭಾಗವಾದ ವಿಕೋಪ ನಿರ್ವಹಣಾ ಯೋಜನೆಯನ್ನು ಪ್ರಕ್ರಿಯೆ ಚಟುವಟಿಕೆ, ಯಾವ ವಿಧವಾದ ರಾಸಾಯನಿಕಗಳನ್ನು ಬಳಸಲಾಗುತ್ತದೆ, ತುರ್ತು ಸ್ಥಿತಿಗೆ ಸಿದ್ಧತೆ ಮತ್ತು ಪ್ರತಿಕ್ರಿಯೆ, ಈ ಎಲ್ಲವನ್ನೂ ಆಧರಿಸಿ, ವಿವರವಾಗಿ ರೂಪಿಸಿರಬೇಕು.

೧. **ಒಪ್ಪಂದದ ಕರಾರು (೨ನೇ ಹಂತದಲ್ಲಿ ಲಭ್ಯವಾಗಿದ್ದು):** ಒಪ್ಪಂದದ ಕರಾರು ಕೈಗೆತ್ತಿಕೊಳ್ಳಲಾದ ಅಧ್ಯಯನಗಳನ್ನು ಸೂಚಿಸುತ್ತದೆ.

## ಹೊಸ ಟಿಪಿಪಿಗಳು- ನೀವೇನು ಮಾಡಬಹುದು

**ಜಿಲ್ಲಾ ಕಲೆಕ್ಟರ್, ಜಿಲ್ಲಾ ನ್ಯಾಯಾಧೀಶರು/ಜಿಲ್ಲಾಧಿಕಾರಿಯವರಿಗೆ ಆದೇಶದ ಪ್ರಕಾರ ಸಾರ್ವಜನಿಕ ಅಹವಾಲು ಸಭೆಯನ್ನು ನಡೆಸಲು ಸೂಕ್ತ ಮತ್ತು ಸಕಾಲಿಕ ತಿದ್ದುಪಡಿಗಳಿಗಾಗಿ ಪಿಟಿಶನ್ ಸಲ್ಲಿಸುವುದು** - ಸಾರ್ವಜನಿಕ ಅಹವಾಲು ಸಭೆಯ ಪ್ರಕಟಣೆ ನೀಡುವಲ್ಲಿ ಪ್ರಕ್ರಿಯಾ ವಿಧಾನಗಳಲ್ಲಿ, ಪತ್ರಿಕೆಗಳಲ್ಲಿ ನೀಡಲಾದ ಪ್ರಚಾರದಲ್ಲಿ, ಇಐಎ ಕರಡು ವರದಿಯು ಲಭ್ಯವಾಗುವಂತೆ ಮಾಡುವಲ್ಲಿ ಲೋಪಗಳಾಗಿದ್ದರೆ ಅಥವಾ ಯೋಜನಾ ಸ್ಥಳದಿಂದ ಅಹವಾಲು ಸಭೆಯ ಸ್ಥಳವು ತುಂಬ ದೂರದಲ್ಲಿದ್ದರೆ ಪಿಟಿಶನ್ ಸಲ್ಲಿಸಬಹುದು.

೧. ಕರಡು ಇಐಎ ವರದಿಯೊಂದಿಗೆ ಒಪ್ಪಂದದ ಕರಾರನ್ನು ತುಲನೆ ಮಾಡಿ, ಸೂಚಿಸಲಾದ ಎಲ್ಲ ಅಧ್ಯಯನಗಳನ್ನು ಕೈಗೆತ್ತಿಕೊಳ್ಳಲಾಗಿದೆಯೇ ಎಂದು ಪರಿಶೀಲಿಸಿರಿ.

೨. ೨೦೦೬ರ ಇಐಎ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ನಮೂನೆಗೆ ಅನುಗುಣವಾಗಿ ಕರಡು ಇಐಎ ವರದಿಯ ಅಧ್ಯಾಯಗಳ ಅನುಕ್ರಮತೆ ಇದೆಯೇ ಎಂದು ಪರಿಶೀಲಿಸಿರಿ.

೩. ಪ್ರಸ್ತಾಪಿಸಲಾದ ದುಷ್ಪರಿಣಾಮ ತಗ್ಗಿಸುವ ಕ್ರಮಗಳು ಸಮರ್ಪಕವಾಗಿವೆಯೇ ಎಂದು ಪರೀಕ್ಷಿಸಲು ಒಬ್ಬರು ಪಾರಿಸರಿಕ ತಜ್ಞರೊಂದಿಗೆ ಸಮಾಲೋಚಿಸಿ.

೪. ಯಾವುದೇ ಮೂಲ ಪ್ರಾಥಮಿಕ ದತ್ತಾಂಶಗಳು ಇರಲಿಲ್ಲ ಎಂದಾದರೆ ಕೂಡಲೇ ಎಂಒಇಎಫ್/ ಎಸ್‌ಇಐಎಎಗೆ ವರದಿ ಮಾಡಿರಿ. *

೫. ಸ್ಥಾವರದ ಕುರಿತು ನಿಮ್ಮ ಆಕ್ಷೇಪಣೆಗಳು ಮತ್ತು ಕಾಳಜಿಗಳ ಕುರಿತು ಆ ಪ್ರದೇಶದ ಜಿಲ್ಲಾ ಪಾರಿಸರಿಕ ಇಂಜಿನಿಯರ್ ಅವರಿಗೆ ಬರೆಯಿರಿ. **

೬. ಸಾರ್ವಜನಿಕ ಅಹವಾಲು ಸಭೆಯಲ್ಲಿ ಎತ್ತಬೇಕಿರುವ ಆಕ್ಷೇಪಣೆಗಳ ಒಂದು ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಿ.

೭. ಸಾರ್ವಜನಿಕ ಅಹವಾಲು ಸಭೆಯಲ್ಲಿ ಹೆಚ್ಚು ಸ್ಥಳೀಯರು ಭಾಗವಹಿಸುವುದನ್ನು ಖಾತ್ರಿಪಡಿಸಿಕೊಳ್ಳಿ.

೮. ಸ್ಥಾವರವನ್ನು ವಿರೋಧಿಸಲು ಅಥವಾ ಅದರ ಚಿಂತೆಗೀಡು ಮಾಡುವ ಅಂಶಗಳ ಕುರಿತು ಆಕ್ಷೇಪಣೆ ಎತ್ತಲು ನಿಮ್ಮ ಜೊತೆಯಾಗುವಂತೆ ಪಂಚಾಯಿತಿ ಮುಖಂಡರಿಗೆ ಒತ್ತಾಯಿಸಿ.

೯. ವಿಧಿಸಲಾದ ಕಾರ್ಯವಿಧಾನಗಳಿಗೆ ಅನುಗುಣವಾಗಿ ಸಾರ್ವಜನಿಕ ಅಹವಾಲು ಸಭೆಯನ್ನು ನಡೆಸದಿದ್ದರೆ, ಎಂಒಇಎಫ್/ಎಸ್‌ಇಐಎಎಗೆ ತಕ್ಷಣವೇ ವರದಿ ಮಾಡಿರಿ ಮತ್ತು ಹೊಸದಾಗಿ ಅಹವಾಲು ಸಭೆ ನಡೆಸುವಂತೆ ಕೋರಿಕೊಳ್ಳಿ ಅಥವಾ ರಾಷ್ಟ್ರೀಯ ಹಸಿರು ನ್ಯಾಯ ಪೀಠವನ್ನು(ಎನ್‌ಜಿಟಿ) ಸಂಪರ್ಕಿಸಿ.

* ಎನ್‌ಜಿಟಿಯ ಒಂದು ತೀರ್ಪಿನ ಪ್ರಕಾರ (ಗುಜರಾತ್ ರಾಜ್ಯ ಹಂತದ ಪಾರಿಸರಿಕ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರದ ವಿರುದ್ಧ ವಿನೋದ್ ಆರ್ ಪಟೇಲ್), ಯೋಜನಾ ಪ್ರತಿಪಾದಕರು ಮತ್ತು ಇಐಎ ಸಮಾಲೋಚಕರು ಪ್ರಾಥಮಿಕ ಸಮಾಜೋ-ಆರ್ಥಿಕ ದತ್ತಾಂಶ ಸಮೀಕ್ಷೆಯನ್ನು ಮಾಡುವುದು ಅಗತ್ಯವಿದೆ.

** ಇದನ್ನು ಸಾರ್ವಜನಿಕ ಅಹವಾಲು ಸಭೆಯ ದಿನಾಂಕದವರೆಗೂ ಮಾಡಬಹುದು. ನೀವು ಒಂದು ಗುಂಪಾಗಿ ಪ್ರತಿನಿಧಿತ್ವ ಮಾಡಬೇಕು ಎಂಬುದನ್ನು ನೆನಪಿಡಿ.

**ಟಿಪಿಪಿ ವಿಸ್ತರಣೆ - ನೀವೇನು ಮಾಡಬಹುದು...**

೧. ಕರಡು ಇಐಎ ಪ್ರಸ್ತುತ ಇರುವ ಸ್ಥಾವರದ ಕಾರ್ಯನಿರ್ವಹಣೆ ಕುರಿತು ಸತ್ಯವಂತಿಕೆಯಿಂದ ವರದಿ ಮಾಡಿರದಿದ್ದರೆ, ಕೂಡಲೇ **ಎಂಒಇಎಫ್‌ಗೆ ವರದಿ ಮಾಡಿ**.

೨. ಸಾರ್ವಜನಿಕ ಅಹವಾಲು ಸಭೆಯಲ್ಲಿ ಭಾಗವಹಿಸುವಂತೆ ಸ್ಥಳೀಯ **ಸಮುದಾಯದ ಜನರಿಗೆ ಒತ್ತಾಯಿಸಿ.**

೩. ಸಾರ್ವಜನಿಕ ಅಹವಾಲು ಸಭೆಯಲ್ಲಿ ಸ್ಥಳೀಯರು ಎದುರಿಸುವ **ಸಮಸ್ಯೆಗಳನ್ನು ವಿವರಿಸಿರಿ.**

೪. ಸಾರ್ವಜನಿಕ ಅಹವಾಲು ಸಭೆಯಲ್ಲಿ ವ್ಯಕ್ತಪಡಿಸಲಾದ ಅಭಿಪ್ರಾಯಗಳು, ಕಾಳಜಿಗಳನ್ನು ಸಭಾ ನಡಾವಳಿಯಲ್ಲಿ ದಾಖಲಿಸುವುದನ್ನು/ವಿಡಿಯೋ ಚಿತ್ರೀಕರಿಸುವುದನ್ನು ಖಾತ್ರಿಪಡಿಸಿಕೊಳ್ಳಿ.

## V ಸಾರ್ವಜನಿಕ ಸಮಾಲೋಚನೆ ಪೂರ್ಣಗೊಳಿಸಿ, ಅಂತಿಮ ಇಐಎ ಸಲ್ಲಿಸಿದ ನಂತರ

**ದಾಖಲೆಗಳನ್ನು ಪಡೆದುಕೊಳ್ಳುವುದು**

೧. ಎಸ್‌ಪಿಸಿಬಿ ಕ್ರೋಢೀಕರಿಸಿದ ಸಾರ್ವಜನಿಕ ಅಹವಾಲು ಸಭೆಯ ನಡಾವಳಿಗಳು.

೨. ಸಾರ್ವಜನಿಕರಿಂದ ಸ್ವೀಕರಿಸಲಾದ ಲಿಖಿತ ಪ್ರತಿಕ್ರಿಯೆಗಳಿಗೆ ಅಂತಿಮ ಇಐಎಯಲ್ಲಿ ಯೋಜನಾ ಪ್ರತಿಪಾದಕರಿಂದ ಉತ್ತರಗಳು

೩. ಯೋಜನಾ ಪ್ರತಿಪಾದಕರು ಸಲ್ಲಿಸಿದ ಅಂತಿಮ ಇಐಎ & ಪರಿಷ್ಕೃತ ಯೋಜನಾ ಕಾರ್ಯಸಾಧ್ಯತೆ ವರದಿ.*

೪. ಒಪ್ಪಂದದ ಕರಾರಿಗೆ ಇಐಎ ಬದ್ಧವಾಗಿರುವುದರ ಕುರಿತು ಎಂಒಇಎಫ್/ಎಸ್‌ಇಐಎಎ ವರದಿ: ಎಂಒಇಎಫ್/ಎಸ್‌ಇಐಎಎ ವರದಿಯು ಅಂತಿಮ ಇಐಎ ವರದಿಯಲ್ಲಿ ಏನಾದರೂ ಅಸಮರ್ಪಕತೆಗಳು ಇದ್ದರೆ ತೋರಿಸುತ್ತದೆ. ಇಸಿಯನ್ನು ಕೊಡುವ ಸಮಯದಲ್ಲಿ ದೂರು ಸಲ್ಲಿಸುವುದೇನಾದರೂ ಇದ್ದಲ್ಲಿ, ಇದನ್ನು ಸಮುದಾಯಗಳು ಮಾಹಿತಿಯ ಒಳಸುರಿಯಾಗಿ ಬಳಸಿಕೊಳ್ಳಬಹುದು.

೫. ಯೋಜನೆಗೆ ಸಂಬಂಧಿಸಿದಂತೆ ಇಎಸಿ/ಎಸ್‌ಇಎಸಿ ಸಭೆಯ ನಡಾವಳಿಗಳು:

* ಅಂತಿಮ ಇಐಎ ವರದಿಯು ಸಾರ್ವಜನಿಕ ಸಮಾಲೋಚನೆಯಲ್ಲಿ ಜನರ ಕಾಳಜಿಗಳನ್ನು ವಿವರವಾಗಿ ವಿವರಿಸಿ, ಅವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿರಬೇಕು. ಪರಿಷ್ಕೃತ ಯೋಜನಾ ಕಾರ್ಯಸಾಧ್ಯತೆ ವರದಿಯು ಸಾರ್ವಜನಿಕ ಅಹವಾಲು ಸಭೆಯಲ್ಲಿ ಎತ್ತಿತೋರಿಸಿದ್ದನ್ನೂ ಒಳಗೊಂಡಂತೆ ಪಾರಿಸರಿಕ ಪರಿಣಾಮಗಳನ್ನು ತಗ್ಗಿಸುವ ನಿಟ್ಟಿನಲ್ಲಿ ಕೈಗೆತ್ತಿಕೊಳ್ಳಲಾಗುವ ಹೆಚ್ಚುವರಿ ಚಟುವಟಿಕೆಗಳು ಮತ್ತು ಆಯವ್ಯಯ ಹಂಚಿಕೆಗಳನ್ನು ಒಳಗೊಂಡಿರಬೇಕು.

**ಹೊಸ ಸ್ಥಾವರಗಳು - ನೀವೇನು ಮಾಡಬಹುದು**

೧. ಸಾರ್ವಜನಿಕ ಅಹವಾಲು ಸಭೆಯಲ್ಲಿ ಜನರ ಕಾಳಜಿಗಳನ್ನು **ಸೂಕ್ತರೀತಿಯಲ್ಲಿ ದಾಖಲಿಸಿಕೊಳ್ಳುವುದನ್ನು ಖಾತ್ರಿಪಡಿಸಿಕೊಳ್ಳಿ.**

೨. ಸಾರ್ವಜನಿಕ ಅಹವಾಲು ಸಭೆಗಳಲ್ಲಿ ಮತ್ತು ಸಾರ್ವಜನಿಕ ಸಮಾಲೋಚನಾ ವರದಿಯಲ್ಲಿ ಯೋಜನಾ ಪ್ರತಿಪಾದಕರು ನೀಡಿದ **ಪ್ರತಿಕ್ರಿಯೆಗಳನ್ನು ಹೋಲಿಕೆ ಮಾಡಿ ನೋಡಿ.**

೩. ಅಂತಿಮ ಇಐಎ ವರದಿಯೊಂದಿಗೆ **ಸಾರ್ವಜನಿಕ ಅಹವಾಲು ಸಭೆಯ ನಡಾವಳಿಗಳನ್ನು ಮತ್ತು ಲಿಖಿತ ಪ್ರತಿಕ್ರಿಯೆಗಳನ್ನು ಹೋಲಿಕೆ ಮಾಡಿ** ಮತ್ತು ಯೋಜನಾ ಪ್ರತಿಪಾದಕರು, ಜನರು ವ್ಯಕ್ತಪಡಿಸಿದ ಕಾಳಜಿಗಳನ್ನು ಉದ್ದೇಶಿಸಿದ್ದಾರೆಯೇ ಎಂದು **ಪರಿಶೀಲನೆ ಮಾಡಿ.** *

೪. ಕಾರ್ಯಸಾಧ್ಯತೆ ವರದಿಯಲ್ಲಿ **ಹೆಚ್ಚುವರಿ ಕ್ರಮಗಳನ್ನು ಸೇರಿಸಲಾಗಿದೆಯೇ ಎಂದು ಪರಿಶೀಲನೆ ಮಾಡಿ** ಮತ್ತು ಯೋಜನಾ ಪ್ರತಿಪಾದಕರು ಸಾರ್ವಜನಿಕ ಅಹವಾಲು ಸಭೆಯ ನಡಾವಳಿ ಮತ್ತು ಲಿಖಿತ ಪ್ರತಿಕ್ರಿಯೆಗಳಲ್ಲಿ ದಾಖಲಿಸಿದ ದುಷ್ಪರಿಣಾಮ ತಗ್ಗಿಸುವ ಈ ಹೆಚ್ಚುವರಿ ಕ್ರಮಗಳನ್ನು ಅಳವಡಿಸಿಕೊಳ್ಳಲು ಗಂಭೀರವಾಗಿ ಯೋಜನೆ ಮಾಡಿದ್ದಾರೆ ಎಂಬುದನ್ನು ಖಾತ್ರಿಪಡಿಸಲು ಇದಕ್ಕೆ ಹಣಕಾಸು ಹಂಚಿಕೆ ಮಾಡಿದ್ದಾರೆಯೇ ಎಂದು ಪರಿಶೀಲಿಸಿ.

೫. **ಅಂತಿಮ ಹಾಗೂ ಕರಡು ಇಐಎ ವರದಿಗಳನ್ನು ಹೋಲಿಕೆ ಮಾಡಿರಿ** ಮತ್ತು ಏನಾದರೂ ವ್ಯತ್ಯಾಸ/ಗಳು ಕಂಡುಬಂದಲ್ಲಿ ಎಂಒಇಎಫ್/ಎಸ್ಇಐಎಎಗೆ ತಿಳಿಸಿರಿ. **

೬. **ಸಾರ್ವಜನಿಕ ಅಹವಾಲು ಸಭೆಯ ವರದಿಯನ್ನು ಪರಿಶೀಲಿಸಿ** ಮತ್ತು ಜನರ ಯಾವುದಾದರೂ ಕಾಳಜಿಗಳನ್ನು ಕೈಬಿಟ್ಟಿದ್ದಲ್ಲಿ, ಎಂಒಇಎಫ್‌ಗೆ ತಿಳಿಸಿರಿ.

೭. ಇಎಸಿ/ಎಸ್ಇಎಸಿ ಸಮಿತಿಯು ಎತ್ತಿದ ಕಾಳಜಿಗಳಿಗೆ ಯೋಜನಾ ಪ್ರತಿಪಾದಕರ ಉತ್ತರಗಳು ಸಮರ್ಪಕವಾಗಿವೆಯೇ ಎಂದು ತಿಳಿಯಲು ಇಎಸಿ/ಎಸ್ಇಎಸಿ ಸಭೆಯ **ನಡಾವಳಿಗಳನ್ನು ಪರಿಶೋಧನೆ ಮಾಡಿರಿ**. ***

೮. ದುಷ್ಪರಿಣಾಮ ತಗ್ಗಿಸುವ ಕ್ರಮಗಳು ಮತ್ತು ಅದಕ್ಕೆ ಸಂಬಂಧಿತ **ವೆಚ್ಚಗಳ ವಿಭಾಗವಾರು ವಿವರಗಳನ್ನು** ಇಎಂಪಿ ಅಧ್ಯಾಯ, ಕರಡು ಇಐಎ ವರದಿ ಮತ್ತು ಅಂತಿಮ ಇಐಎ ವರದಿಗಳಲ್ಲಿ **ಪರಿಶೀಲಿಸಿ**.****

೯. ಒಪ್ಪಿಕೊಂಡ ಸಿಎಸ್ಆರ್ ಕ್ರಮಗಳು, ಅದಕ್ಕೆ ಸಂಬಂಧಿತ ವೆಚ್ಚ ಮತ್ತು ಅನುಷ್ಠಾನದ ಯೋಜನೆಗಳ **ತ್ವರಿತ ಅನುಷ್ಠಾನಕ್ಕಾಗಿ ಆಗ್ರಹಿಸಿ, ಪರಿಶೀಲಿಸಿರಿ**.

೧೦. ಸಂಭಾವ್ಯ ತುರ್ತು ಸನ್ನಿವೇಶಗಳು ಮತ್ತು ಅದರ ಸಿದ್ಧತೆಯ ಕುರಿತು 'ಸಾರ್ವಜನಿಕ ಬಹಿರಂಗಪಡಿಸುವಿಕೆ'ಗಾಗಿ ಆಗ್ರಹಿಸಿ.

* ಅಂತಿಮ ಇಐಎ ವರದಿಯು ಪರಿಹಾರ ಕ್ರಮಗಳು ಮತ್ತು ವೆಚ್ಚಗಳ ಹಂಚಿಕೆಯೂ ಸೇರಿದಂತೆ ಜನರ ಕಾಳಜಿಗಳನ್ನು ಉದ್ದೇಶಿಸಬೇಕು.

**ಅಂತಿಮ ಇಐಎ ವರದಿಯಲ್ಲಿ ಯಾವುದೇ ಹೊಸ ಅಥವಾ ಹೆಚ್ಚುವರಿ ಅಧ್ಯಯನವನ್ನು ಸೇರಿಸುವಂತಿಲ್ಲ ಮತ್ತು ಯಾವುದೇ ಮೂಲಾಧಾರ ದತ್ತಾಂಶಗಳನ್ನು ಬದಲಾಯಿಸುವಂತಿಲ್ಲ.

*** ಇಎಸಿ ಮತ್ತು ಎಸ್ಇಎಸಿ ವರದಿಗಳ ಪರಿಶೀಲನೆಯು ಯೋಜನಾ ಪ್ರತಿಪಾದಕರ ಪರವಾಗಿ ಪಕ್ಷಪಾತ ಹೊಂದಿದ್ದರೆ ಅದು ಸ್ಥಳೀಯ ಸಮುದಾಯಗಳಿಗೆ ಯೋಜನೆಯನ್ನು ವಿರೋಧಿಸಿ ಎಂಒಇಎಫ್‌ಗೆ ಬರೆಯಲು ಅಥವಾ ಎನ್‌ಜಿಟಿಯಲ್ಲಿ ಅಹವಾಲು ಸಲ್ಲಿಸಲು ಒಂದು ಒಳಸುರಿ ಮಾಹಿತಿಯಾಗಿದೆ.

**** ಕರಡು ಇಐಎ ವರದಿಯಿಂದ ನಂತರ ಸಿದ್ಧಪಡಿಸಿದ ಅಂತಿಮ ಇಐಎ ವರದಿಯಲ್ಲಿ ದುಷ್ಪರಿಣಾಮ ತಗ್ಗಿಸುವ ಕ್ರಮಗಳು ಮತ್ತು ಅವುಗಳ ವೆಚ್ಚದಲ್ಲಿ ಕೆಲವು ರೀತಿಯ ಹೆಚ್ಚಳಗಳಿರುವ ಸಾಧ್ಯತೆ ಇರುತ್ತದೆ.

## VI ಪಾರಿಸರಿಕ ಅನುಮತಿ ನೀಡಿದ ನಂತರ

### ಈ ಕೆಳಗಿನ ದಾಖಲೆಗಳನ್ನು ಪಡೆದುಕೊಳ್ಳಿ

೧. ಎಂಒಇಎಫ್ /ಎಸ್‌ಇಐಎಎ ನೀಡಿದ ಪಾರಿಸರಿಕ ಅನುಮತಿಯನ್ನು ಪಡೆದುಕೊಳ್ಳಿ. *

೨. ಎಂಒಇಎಫ್ /ಎಸ್‌ಇಐಎಎಗೆ ಯೋಜನಾ ಪ್ರತಿಪಾದಕರು ಸಲ್ಲಿಸಿದ ಅನುವರ್ತನಾ ವರದಿ.

೩. ಎಸ್‌ಪಿಸಿಬಿಯ ತಪಾಸಣಾ ವರದಿ.

೪. ಕೇಂದ್ರ ವಿದ್ಯುತ್ ಪ್ರಾಧಿಕಾರ, ಎಸ್‌ಪಿಸಿಬಿ ಮತ್ತು ಎಂಒಇಎಫ್‌ಗಳಿಗೆ ಯೋಜನಾ ಪ್ರತಿಪಾದಕರು ಸಲ್ಲಿಸಿದ ವಾರ್ಷಿಕ ಹಾರು ಬೂದಿ ಬಳಕೆ ವರದಿ.

೫. ಎಸ್‌ಪಿಸಿಬಿ ಸಲ್ಲಿಸಿದ 'ಸ್ಥಾಪನೆಗೆ ಒಪ್ಪಿಗೆ' ಮತ್ತು 'ಕಾರ್ಯಾಚರಣೆಗೆ ಒಪ್ಪಿಗೆ'.

* ಪಾರಿಸರಿಕ ಅನುಮತಿಯಲ್ಲಿರುವ ಕರಾರುಗಳು ಎಂಒಇಎಫ್‌ನ ಕಾಳಜಿಗಳ ಮತ್ತು ದುಷ್ಪರಿಣಾಮಗಳನ್ನು ತಗ್ಗಿಸಲು ಅಳವಡಿಸುವ ಕ್ರಮಗಳ ಒಂದು ಸೂಚಕವಾಗಿವೆ. ಇವು ಸ್ಥಾವರವನ್ನು ಮೇಲ್ವಿಚಾರಣೆ ಮಾಡಲು ಮುಖ್ಯವಾಗಿ ಗಮನಕೇಂದ್ರೀಕರಿಸಬೇಕಾದ ಕ್ಷೇತ್ರಗಳಾಗಬಹುದು.

### ಹೊಸ ಟಿಪಿಪಿಗಳು - ನೀವೇನು ಮಾಡಬಹುದು

*ಸ್ಥಳೀಯ ಸಮುದಾಯವು ಸಕಾರಣಗಳೊಂದಿಗೆ ಇಸಿಯನ್ನು ನೀಡಬಾರದು ಎಂದು ಬಲವಾಗಿ ನಂಬಿದರೆ, ರಾಷ್ಟ್ರೀಯ ಹಸಿರು ನ್ಯಾಯಪೀಠಕ್ಕೆ ದೂರು ಸಲ್ಲಿಸಿ.

೧. ತಪಾಸಣೆ ಮತ್ತು/ಅಥವಾ ಅನುವರ್ತನಾ ವರದಿಗಳು ಇಸಿ ಕರಾರುಗಳನ್ನು ಉಲ್ಲಂಘಿಸಲಾಗಿದೆ ಎಂದು ತೋರಿಸಿದರೆ **ಎಂಒಇಎಫ್‌ಗೆ ವರದಿ ಮಾಡಿ** ಮತ್ತು ಅಗತ್ಯವೆನ್ನಿಸಿದರೆ **ಎನ್‌ಜಿಟಿಯಲ್ಲಿ ಪೆಟಿಶನ್ ಸಲ್ಲಿಸಿ.**

೨. ಎಸ್‌ಪಿಸಿಬಿಯಿಂದ ನೀಡಲಾದ 'ಸ್ಥಾಪನೆಗೆ ಒಪ್ಪಿಗೆ'ಯಲ್ಲಿ ವಿಧಿಸಿದ ಕರಾರುಗಳು ಪಾರಿಸರಿಕ ಅನುಮತಿಯಲ್ಲಿ ವಿಧಿಸಲಾದ ಕರಾರುಗಳಿಗೆ ಹೊಂದಿಕೊಳ್ಳುವಂತೆ ಇಲ್ಲದಿದ್ದರೆ ಅಥವಾ ಅವುಗಳಿಂದ ದೂರಸರಿದಿದ್ದರೆ, ಎಸ್‌ಪಿಸಿಬಿಗೆ ದೂರು ನೀಡಿ, ಜೊತೆಗೆ ಎಂಒಇಎಫ್ ಮತ್ತು ಅದರ ಪ್ರಾದೇಶಿಕ ಕಚೇರಿಗೂ ಅದನ್ನು ತಿಳಿಸಿರಿ. ಈ ಮೊದಲು ಯಾವುದೇ ಹಂತದಲ್ಲಿ ಪ್ರಕ್ರಿಯಾವಿಧಾನದಲ್ಲಿ ಲೋಪಗಳಾಗಿದ್ದರೆ, ಅದು ಪೆಟಿಶನ್ ಹಾಕಲು ಒಳಸುರಿ ಮಾಹಿತಿಯಾಗುತ್ತದೆ.

# 2.3 ವಿದ್ಯುತ್ ಸ್ಥಾವರಗಳ ವಿರುದ್ಧ ಯಶಸ್ವೀ ಮಧ್ಯವರ್ತನೆಗಳ ನಿದರ್ಶನಗಳು

## 2.3.1 ಸಂಪೀಟ ಉಷ್ಣ ವಿದ್ಯುತ್ ಸ್ಥಾವರ ಘಟಕ

| ನಿರ್ದಿಷ್ಟತೆಗಳು | ವಿದ್ಯುತ್ ಸ್ಥಾವರದ ವಿವರಗಳು |
|---|---|
| ವಿದ್ಯುತ್ ಸ್ಥಾವರದ ಹೆಸರು | ಸಂಪೀಟ ಉಷ್ಣ ವಿದ್ಯುತ್ ಸ್ಥಾವರ ಘಟಕ |
| ಸ್ಥಳ | ಸಂಪೀಟ, ಶ್ರೀಕಾಕುಲಂ, ಆಂಧ್ರಪ್ರದೇಶ |
| ಯೋಜನಾ ಪ್ರತಿಪಾದಕರು | ಯೋಜನಾ ಪ್ರತಿಪಾದಕರು |
| ಸ್ಥಾವರದ ಸಾಮರ್ಥ್ಯ | 2640 ಮೆ.ವ್ಯಾ. |
| ವಿರೋಧಕ್ಕೆ ಕಾರಣಗಳು | ಯೋಜನಾ ಸ್ಥಳವು ಜೌಗುನೆಲದಲ್ಲಿದ್ದು, ವಲಸೆ ಹಕ್ಕಿಗಳ ಆವಾಸವಾಗಿತ್ತು. ಇಐಎ ವರದಿಯಲ್ಲಿ ತಪ್ಪುಗ್ರಹಿಕೆಯ ಮಾಹಿತಿಗಳು ಸಾರ್ವಜನಿಕ ಅಹವಾಲು ಸಭೆಗೆ ಮೊದಲು ಇಐಎ ವರದಿಯ ಲಭ್ಯವಾಗಲಿಲ್ಲ |
| ಫಲಿತಾಂಶ | ಹಸಿರು ನ್ಯಾಯಪೀಠವು ಮೇ ೨೦೧೨ರಲ್ಲಿ ಅನುಮತಿಯನ್ನು ತಡೆಹಿಡಿಯಿತು ಮತ್ತು ಯೋಜನೆಯನ್ನು ಬೇರೆಡೆ ಸ್ಥಳಾಂತರಿಸುವಂತೆ ಹೇಳಿತು. |
| | |

ಆಂಧ್ರ ಪ್ರದೇಶ ರಾಜ್ಯ ಸರ್ಕಾರವು ೨೦೦೮ರಲ್ಲಿ ನಾಗಾರ್ಜುನ ನಿರ್ಮಾಣ ಕಂಪನಿ(ಎನ್‌ಸಿಸಿ)ಗೆ ಆಂದ್ರದ ಸಂಪೀಟ ಎಂಬ ಸ್ಥಳದಲ್ಲಿ ೧೯೮೦ ಮೆ.ವ್ಯಾ. ಸಾಮರ್ಥ್ಯದ ಉಷ್ಣ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಒಪ್ಪಿಗೆ ನೀಡಿತು.

ತಜ್ಞ ಮೌಲ್ಯನಿರ್ಣಯ ಸಮಿತಿಯು ಮೊದಲಿಗೆ ಯೋಜನಾ ಸ್ಥಳವು ಜೌಗು ಪ್ರದೇಶದಲ್ಲಿ ಇದ್ದಿದ್ದನ್ನು ಗಮನಿಸಿ, ಒಪ್ಪಂದದ ಕರಾರುಗಳನ್ನು ನೀಡಲಿಲ್ಲ ಮತ್ತು ಯೋಜನೆ ಪ್ರತಿಪಾದಕರಿಗೆ ಸಿಆರ್‌ಜಡ್ ನಿಯಮಾವಳಿಗೆ ಅನುಗುಣವಾಗಿ ಜೌಗು ಪ್ರದೇಶದಿಂದ ದೂರ ಬೇರೆ ಪರ್ಯಾಯ ಸ್ಥಳವನ್ನು ಕಂಡುಕೊಳ್ಳುವಂತೆ ಹೇಳಿತು. ಯೋಜನೆಯ ಪ್ರತಿಪಾದಕರು ಯೋಜನಾ ಸ್ಥಳವು ಜೌಗು ಪ್ರದೇಶವೂ ಅಲ್ಲ ಅಥವಾ ಸಿಆರ್‌ಜಡ್ ಪ್ರದೇಶವೂ ಅಲ್ಲ ಎಂದು ಇಎಸಿ ವರದಿಯಲ್ಲಿ ತಿಳಿಸಿದ್ದರು ಮತ್ತು ಮೊದಲು ಅವರು ನೀಡಿದ ಮಾಹಿತಿಗಳು ತಪ್ಪುಗಳಿಂದ ಕೂಡಿತ್ತು. ಇಎಸಿ ಉಪಸಮಿತಿಯು ಮಾಡಿದ ಸ್ಥಳ ಭೇಟಿ ವರದಿಯು ಯೋಜನಾ ಸ್ಥಳವು ಒಣ, ಕೃಷಿ ಭೂಮಿಯಾಗಿದೆ ಎಂದು ಹೇಳಿತ್ತು. ಸ್ಥಳ ಭೇಟಿಯ ವರದಿಯನ್ನು ಆಧರಿಸಿ, ಒಂದು ಒಪ್ಪಂದಗಳ ಕರಾರನ್ನು ಮೇ ೨೦೦೯ರಲ್ಲಿ ನೀಡಲಾಯಿತು, ಅದರಲ್ಲಿ ಯೋಜನಾ ಪ್ರತಿಪಾದಕರಿಗೆ ನಿರ್ದಿಷ್ಟವಾದ ೪೦೦ ಎಕರೆ ಜಾಗವನ್ನು ಯೋಜನೆಯಿಂದ ಹೊರತುಪಡಿಸುವಂತೆ ಕೇಳಲಾಗಿತ್ತು. ಆಗಸ್ಟ್‌ನಲ್ಲಿ ಸಾರ್ವಜನಿಕ ಅಹವಾಲು ಸಭೆಯನ್ನು ನಡೆಸಲಾಯಿತು ಮತ್ತು ಎಂಪಿಎಫ್ ನಂತರ ಡಿಸೆಂಬರ್‌ನಲ್ಲಿ ಪಾರಿಸರಿಕ ಅನುಮತಿಯನ್ನು ನೀಡಿತು. ಇದಾದ ನಂತರ ೨೦೧೦ರ ಆರಂಭದಲ್ಲಿ ರಾಷ್ಟ್ರೀಯ ಪಾರಿಸರಿಕ ಮೇಲ್ಮನವಿ/ಅಪೀಲು ಪ್ರಾಧಿಕಾರದಲ್ಲಿ (ಎನ್‌ಇಎಎ) ಅನುಮತಿ ವಿರುದ್ಧ ದೂರುಗಳನ್ನು ಸಲ್ಲಿಸಲಾಯಿತು.

ಯೋಜನೆಯು ಬೃಹತ್ ಪ್ರಮಾಣದಲ್ಲಿ ಭೂ ಸ್ವಾದೀನವನ್ನು ಒಳಗೊಂಡಿದ್ದರಿಂದ, ಸ್ಥಳೀಯ ನಿವಾಸಿಗಳಿಗೆ ಯೋಜನೆಯ ಕುರಿತು ಅರಿವಿತ್ತು. ಸ್ಥಳೀಯರ ಕಾಳಜಿಗಳ ಪರವಾಗಿ ಮೊದಲು ಪ್ರಾದೇಶಿಕ ಸರ್ಕಾರೇತರ ಸಂಸ್ಥೆಯಾದ ಪರ್ಯಾವರಣ ಪರಿಕಾಕ್ಷಣ ಸಮಿತಿ (ಪಿಪಿಎಸ್) ಧ್ವನಿಯೆತ್ತಿತು ಮತ್ತು ಎಸ್‌ಪಿಸಿಬಿ, ಪ್ರಾದೇಶಿಕ ಎಂಪಿಎಫ್ ಕಚೇರಿ ಮತ್ತು ಮುಖ್ಯಮಂತ್ರಿಗಳಿಗೆ ಪತ್ರಿಸಿತು. ಸಾರ್ವಜನಿಕ ಅಹವಾಲು ಸಭೆಯಲ್ಲಿ ಅಪಾರ ಸಂಖ್ಯೆಯ ಸಾರ್ವಜನಿಕರು ಸ್ಥಾವರವನ್ನು ವಿರೋಧಿಸಿದರು ಎಂದು ಹೇಳಲಾಯಿತು. ಜನರ ಮುಖ್ಯ ಆಕ್ಷೇಪಣೆ ಎಂದರೆ ಭೂಮಿಯು ಯಾವ ರೀತಿಯದು ಎಂಬ ಬಗ್ಗೆ ನೀಡಿದ ತಪ್ಪುಮಾಹಿತಿ.

ಕಂಪನಿಗೆ ಹಸ್ತಾಂತರಿಸುವ ಸರ್ಕಾರಿ ಭೂಮಿಗಳ ಕುರಿತು ಶ್ರೀಕಾಕುಲಂನ ಕಲೆಕ್ಟರ್ ನೀಡಿದ ವರದಿಯನ್ನು ಆಧರಿಸಿ ರಾಜ್ಯ ಸರ್ಕಾರವು ಎನ್‌ಸಿಸಿಗೆ ಭೂಮಿಯನ್ನು ಹಂಚಿಕೆ ಮಾಡಿತ್ತು. ಇದು ಕೃಷಿಯಡಿ ಬರುವ ೪೪.೬ ಹೆಕ್ಟೇರ್ ಭೂಮಿಯನ್ನು ಮತ್ತು ಕರಾವಳಿ ನಿಯಂತ್ರಣ ವಲಯ(ಸಿಆರ್‌ಜಡ್)ದೊಳಗೆ ಬರುವ ಪ್ರದೇಶವನ್ನು ಹೊರತುಪಡಿಸಿತ್ತು. ನಂತರ ೨೦೦೯ರಲ್ಲಿ ಇನ್ನೊಂದು ಆದೇಶದ ಮೂಲಕ, ಈ ಎರಡೂ ಪ್ರದೇಶವನ್ನು ಕಂಪನಿಗೆ ಹಂಚಿಕೆ ಮಾಡಲಿರುವ ಪ್ರದೇಶದಲ್ಲಿ ಸೇರಿಸಲಾಯಿತು. ಕಲೆಕ್ಟರ್ ಅವರ ವರದಿಯು ಅಲ್ಲಿ ಕಾರ್ಯಾಚರಣೆ ಮಾಡುತ್ತಿದ್ದ ಮೂರು ಏತ ನೀರಾವರಿ ಯೋಜನೆಗಳ ಕುರಿತ ವಿವರಗಳನ್ನು ನೀಡಲು ವಿಫಲವಾಯಿತು. ೨೦೦೩ರಲ್ಲಿಯೇ ಸರ್ಕಾರವು ಎಲ್ಲಾ ಜಿಲ್ಲಾ ಕಲೆಕ್ಟರ್‌ಗಳಿಗೆ, ನೀರಿನ ಮೂಲಗಳಿರುವ ಎಲ್ಲ ಭೂಮಿಗಳ ಕುರಿತು ಪ್ರಕಟಣೆ ನೀಡಿ, ಅವುಗಳನ್ನು ಗ್ರಾಮದ 'ನಿಷೇಧಿತ ಆದೇಶಗಳ ಪುಸ್ತಕಗಳ'ಲ್ಲಿ ಸೇರಿಸುವಂತೆ ಸೂಚನೆ ನೀಡಿ, ಅಂತಹ ಭೂಮಿಯನ್ನು ಬೇರೆಡೆ ತಿರುಗಿಸುವುದು ಮತ್ತು ಹಾನಿಯಿಂದ ಹೊರತುಪಡಿಸಬೇಕೆಂದು ಒಂದು ಸೂಚನೆ ನೀಡಿದ್ದಾಗ್ಯೂ, ಈ ರೀತಿ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳಲಾಗಿತ್ತು. ಕಲೆಕ್ಟರ್ ಅವರ ವರದಿಯು ಈ ಅಂಶವನ್ನು ಮರೆಮಾಚಿ, ಪ್ರಶ್ನೆಯಲ್ಲಿರುವ ಭೂಮಿಯು 'ವ್ಯರ್ಥ ಪ್ರದೇಶ' ಮತ್ತು 'ಕೃಷಿ-ರಹಿತ' ಎಂದು ವಿವರಿಸಿ, ಎನ್‌ಸಿಸಿಗೆ ಭೂಹಂಚಿಕೆ ಮಾಡಲು ದಾರಿ ಮಾಡಿಕೊಟ್ಟಿತ್ತು. ಯೋಜನಾ ಸ್ಥಳವು ಆಸ್ಟ್ರೇಲಿಯಾ ಮತ್ತು ಸೈಬೀರಿಯಾಗಳಿಂದ ಬರುವ ವಲಸೆ ಹಕ್ಕಿಗಳಿಗೆ ಗೂಡುಕಟ್ಟುವ ಮತ್ತು ಆಹಾರದ ನೆಲೆಯಾಗಿದ್ದು, ಆ ಹಕ್ಕಿಗಳು ಆರು ತಿಂಗಳು ಅಲ್ಲಿಗೆ ಭೇಟಿ ಕೊಡುತ್ತಿದ್ದವು ಹಾಗೂ ಪರಿಸರ ಸಂರಕ್ಷಣಾ ಕಾಯಿದೆ ೧೯೮೬ರ ಪ್ರಕಾರ ಜೌಗು ನೆಲದಲ್ಲಿ ಯಾವುದೇ ಕೈಗಾರಿಕಾ ಚಟುವಟಿಕೆಗಳನ್ನು ನಡೆಸಲು ಒಪ್ಪಿಗೆ ಇಲ್ಲ.

ಯೋಜನೆಯನ್ನು ಅನುಷ್ಠಾನಗೊಳಿಸಿದ್ದೇ ಆದಲ್ಲಿ ರೈತರು ಮತ್ತು ಮೀನುಗಾರರ ನೆಲೆಗಳಾದ ರುಶಿಕುಡ್ಡ, ಗೊಲ್ಲಗುಂಡ, ಬರುವಪೇಟ ಮತ್ತು ಬೆಂಕಿಲಿ ಗ್ರಾಮಗಳ ಮೇಲೆ ದುಷ್ಪರಿಣಾಮವಾಗುತ್ತಿತ್ತು.

ತಪ್ಪು ಮಾಹಿತಿಗಳ ಆಧಾರದ ಮೇಲೆ ಯೋಜನೆಗೆ ಒಪ್ಪಿಗೆ ನೀಡಲಾಗಿದೆ ಎಂದು ಆಕ್ಷೇಪಿಸಿ, ಯೋಜನೆಗೆ ನೀಡಿದ ಅನುಮತಿಯನ್ನು ಸ್ಥಳೀಯ ಸಮುದಾಯಗಳವರು ವಿರೋಧಿಸಿದರು. ಪಿಪಿಎಸ್ ಪಾರಸರಿಕ ಅನುಮತಿ ವಿರುದ್ಧ ಮೊಕದ್ದಮೆ ದಾಖಲಿಸಿತು ಮತ್ತು ಇಐಎಯಲ್ಲಿ ತಪ್ಪುದಾರಿಗೆಳೆಸುವ ವಾಸ್ತವಾಂಶಗಳನ್ನು ಆಧರಿಸಿ, ಒಪ್ಪಿಗೆ ನೀಡಲಾಗಿದೆ ಎಂದು ಆರೋಪಿಸಿತು. ಇದೇ ವೇಳೆಗೆ ಜುಲೈ ೨೦೧೦ರಲ್ಲಿ, ಯೋಜನಾ ಪ್ರತಿಪಾದಕರು ಭೂ ಸ್ವಾಧೀನವನ್ನು ಆರಂಭಿಸಿದರು, ಇದು ಯೋಜನಾ ಪ್ರತಿಪಾದಕರು ಮತ್ತು ಪೋಲೀಸರು ಒಂದು ಕಡೆಯಾದರೆ, ಸಹಸ್ರಾರು ಗ್ರಾಮಸ್ಥರು ಇನ್ನೊಂದೆಡೆ, ಎರಡೂ ಬಣಗಳ ನಡುವೆ ಘರ್ಷಣೆ ಆರಂಭವಾಯಿತು. ಸ್ಥಳೀಯ ಪೊಲೀಸರು ರೈತರು ಮತ್ತು ಮೀನುಗಾರರ ಮೇಲೆ ಗುಂಡಿನ ಮಳೆಗರೆದು, ಇಬ್ಬರು ಮೀನುಗಾರರು ಮೃತಪಟ್ಟರು. ಜೊತೆಗೆ ೪೫ ಪೊಲೀಸರೂ ಸೇರಿದಂತೆ ೧೫೦ ಜನರು ಗಾಯಗೊಂಡರು.

ಪೊಲೀಸ್ ಗುಂಡಿನ ದಾಳಿಯ ಎರಡು ದಿನಗಳ ನಂತರ, ಎನ್‌ಇಎಎ ಯೋಜನೆಗೆ ನೀಡಿದ ಪಾರಿಸರಿಕ ಅನುಮತಿಯನ್ನು ರದ್ದುಪಡಿಸಿತು ಮತ್ತು ಈ ಕೆಳಗಿನಂತೆ ಹೇಳಿಕೆ ನೀಡಿತು.

ತಪಾಸಣೆಯ ನಂತರ, ಈ ಭೂಮಿಯು ಅತ್ಯಧಿಕ ಪರಿಸರ ಮಹತ್ವವಿರುವ ವಿಶಿಷ್ಟವಾದ ಜೌಗು ಪ್ರದೇಶವಾಗಿದೆ ಮತ್ತು ಹತ್ತಿರದ ಹಳ್ಳಿಗಳಿಗೆ ನೀರಿನ ಮೂಲವಾಗಿದೆ ಮತ್ತು ಇದನ್ನು ಆಧರಿಸಿ, ಸರ್ಕಾರದ ಮೂರು ಪ್ರಮುಖ ಏತ ನೀರಾವರಿ ಯೋಜನೆಗಳು ಇವೆ ಎಂಬುದನ್ನು ಪ್ರಾಧಿಕಾರವು ಕಂಡುಕೊಂಡಿದೆ. ಇಎಸಿಯ ಉಪಸಮಿತಿಯೂ ಸೇರಿದಂತೆ ವಿವಿಧ ಏಜೆನ್ಸಿಗಳು ಸಲ್ಲಿಸಿದ ವರದಿಗಳು ತಪ್ಪುದಾರಿಗೆಳೆಸುವಂಥದ್ದು. (ಪ್ಯಾರಾ ೬) ಮತ್ತು ಈಗ ಪ್ರಶ್ನೆಯಲ್ಲಿರುವ ಪ್ರದೇಶವು ಅತ್ಯಧಿಕ ಪರಿಸರ ಮಹತ್ವವಿರುವ ವಿಶಿಷ್ಟವಾದ ಜೌಗು ಪ್ರದೇಶವಾಗಿದೆ ಎಂಬುದರ ಬಗ್ಗೆ ಪ್ರಾಧಿಕಾರಕ್ಕೆ ಯಾವುದೇ ಅನುಮಾನಗಳಿಲ್ಲ ಮತ್ತು ವಿದ್ಯುತ್ ಸ್ಥಾವರಕ್ಕೆ ಇದರ ಬಳಕೆಯನ್ನು ಯಾವುದೇ ಕಾಯಿದೆಯು ನಿಷೇಧಿಸದಿದ್ದರೂ, ಈ ಉದ್ದೇಶಕ್ಕೆ ಸ್ಥಳದ ಬಳಕೆಗೆ ಅನುಮತಿ ನೀಡಲಾಗುವುದಿಲ್ಲ (ಪ್ಯಾರಾ ೯)

ಎನ್‌ಇಎಎ ಆದೇಶವು ಬಂದ ನಂತರ, ಯೋಜನಾ ಪ್ರತಿಪಾದಕರು ಆರು ಪರಿಶೀಲನಾ ಕೋರಿಕೆಗಳನ್ನು ಸಲ್ಲಿಸಿದರು ಮತ್ತು ಅವನ್ನು ರಾಷ್ಟ್ರೀಯ ಹಸಿರು ನ್ಯಾಯಪೀಠ(ಎನ್‌ಜಿಟಿ)ಕ್ಕೆ ವರ್ಗಾಯಿಸಲಾಯಿತು. ಮೇ ೨೦೧೨ರಲ್ಲಿ, ಎನ್‌ಜಿಟಿಯು ಯೋಜನೆಗೆ ನೀಡಲಾದ ಅನುಮತಿಯನ್ನು ರದ್ದುಪಡಿಸಿತು.[9] ಮೂಲಾಧಾರ (ಬೇಸ್‌ಲೈನ್)ಮಾಹಿತಿಯನ್ನು ಒಪ್ಪಂದಗಳ ಕರಾರನ್ನು ನೀಡುವ ಮೊದಲೇ ಸಂಗ್ರಹಿಸಲಾಗಿತ್ತು ಎಂಬುದನ್ನು ಪೀಠವು ಗಮನಿಸಿತು ಮತ್ತು ಇಐಎ ವರದಿಯಲ್ಲಿ ಹಲವು ಸಮೀಕ್ಷೆಗಳ ಸಮಯವನ್ನು ನಿರ್ದಿಷ್ಟಪಡಿಸಿರಲಿಲ್ಲ. ಜೊತೆಗೆ ಸಾರ್ವಜನಿಕ ಅಹವಾಲು ಪ್ರಕ್ರಿಯೆಯಲ್ಲಿ ಜನರನ್ನು ಮಾಹಿತಿಯಿಂದ ವಂಚಿಸಲಾಗಿತ್ತು, ಏಕೆಂದರೆ

9 http://epaper.timesofindia.com/Default/Scripting/ArticleWin.asp?From=Archive&Source=Page&Skin=ETNEW&BaseHref=ETD/2012/05/24&PageLabel=17&EntityId=Ar01702&ViewMode=HTML

ಅಲ್ಲಿ ಇಐಎ ವರದಿಯ ಲಭ್ಯತೆಯೇ ಇರಲಿಲ್ಲ ಎಂಬುದನ್ನು ಕೂಡ ನ್ಯಾಯಪೀಠವು ಗಮನಿಸಿತು. ಈ ಎಲ್ಲ ವೀಕ್ಷಣೆಗಳನ್ನು ಆಧರಿಸಿ, ರಾಷ್ಟ್ರೀಯ ಹಸಿರು ನ್ಯಾಯಪೀಠವು ಯೋಜನೆಯ ಪಾರಿಸರಿಕ ಅನುಮತಿಯನ್ನು ರದ್ದುಪಡಿಸಬೇಕೆಂದು ಕೇಳಿತು.[10] ಇದೇವೇಳೆ ಯೋಜನೆಯ ಪ್ರತಿಪಾದಕರಾದ ಕಂಪನಿಯು ಯೋಜನೆಯನ್ನು ಕೃಷ್ಣಂಪಟ್ಟಣಂಗೆ ಸ್ಥಳಾಂತರಿಸಲಾಗಿದೆ ಎಂದು ಹೇಳಿತು.[11]

**2.3.2 ಚೆಟ್ಟಿನಾಡ್ ವಿದ್ಯುತ್ ಸ್ಥಾವರ**

| ನಿರ್ದಿಷ್ಟತೆಗಳು | ವಿದ್ಯುತ್ ಸ್ಥಾವರದ ವಿವರಗಳು |
|---|---|
| ವಿದ್ಯುತ್ ಸ್ಥಾವರದ ಹೆಸರು | ಚೆಟ್ಟಿನಾಡ್ ವಿದ್ಯುತ್ ಸ್ಥಾವರ |
| ಸ್ಥಳ | ತರಂಗಂಬದಿ ತಾಲ್ಲೂಕು, ನಾಗಪಟ್ಟಿಣಂ ಜಿಲ್ಲೆ, ತಮಿಳುನಾಡು |
| ಯೋಜನಾ ಪ್ರತಿಪಾದಕರು | ಚೆನ್ನೈ ವಿದ್ಯುತ್ ನಿಗಮ ಖಾಸಗಿ ನಿಯಮಿತ |
| ಸ್ಥಾವರದ ಸಾಮರ್ಥ್ಯ | ೧೩೨೦ ಮೆ.ವ್ಯಾ. (ಪ್ರಸ್ತಾಪಿಸಲಾದ ಮೂಲ ಸಾಮರ್ಥ್ಯ ೧೨೦೦ ಮೆ.ವ್ಯಾ.) |
| ವಿರೋಧಕ್ಕೆ ಕಾರಣಗಳು | ಇಐಎ ಕರಡಿನಲ್ಲಿ ಒಪ್ಪಂದದ ಕರಾರುಗಳನ್ನು ಪಾಲಿಸದೇ ಇರುವುದು ಒಪ್ಪಂದದ ಕರಾರುಗಳನ್ನು ನೀಡುವ ಮೊದಲೇ ಮತ್ತು ಸಾರ್ವಜನಿಕ ಅಹವಾಲಿನ ನಂತರ ಮೂಲಾಧಾರ ಮಾಹಿತಿಯ ಸಂಗ್ರಹಣೆ ಇಐಎ ಕರಡು ಮತ್ತು ಅಂತಿಮ ವರದಿಯ ಮಧ್ಯೆ ಹೊಂದಾಣಿಕೆ ಇಲ್ಲದಿರುವುದು |
| ಫಲಿತಾಂಶ | ರಾಷ್ಟ್ರೀಯ ಹಸಿರು ಪೀಠವು(ಎನ್‌ಜಿಟಿ) ಅನುಮತಿಯನ್ನು ರದ್ದುಪಡಿಸಿತು, ನಂತರ ಹೆಚ್ಚುವರಿ ಷರತ್ತುಗಳೊಡನೆ ಪುನಾನೀಡಲಾಯಿತು; ಎನ್‌ಜಿಟಿ ತೀರ್ಪು ಸಾರ್ವಜನಿಕ ಅಹವಾಲು ನಡೆಸಲು ಸಲಹೆಗಳನ್ನು ಕೂಡ ಒತ್ತಿಹೇಳಿತು. |

## ಚೆಟ್ಟಿನಾಡ್ ವಿದ್ಯುತ್ ಸ್ಥಾವರ

ಯೋಜನೆಯ ಪ್ರತಿಪಾದಕರು ೨೦೦೯ರಲ್ಲಿ ಅರ್ಜಿಯನ್ನು ಸಲ್ಲಿಸಿದರು ಮತ್ತು ಇದಕ್ಕೆ ೨೦೧೦ ಜನವರಿಯಲ್ಲಿ ಇಐಎ ಅಧ್ಯಯನಕ್ಕೆ ಒಪ್ಪಂದದ ಕರಾರುಗಳನ್ನು ನೀಡಲಾಯಿತು. ಇದಾದ ನಂತರ, ಏಪ್ರಿಲ್ ೨೦೧೧ರಲ್ಲಿ ಇಐಎ ಕರಡನ್ನು ಸಲ್ಲಿಸಲಾಯಿತು ಮತ್ತು ಮೇ ತಿಂಗಳಿನಲ್ಲಿ ಸಾರ್ವಜನಿಕ ಅಹವಾಲು ಸಭೆಯನ್ನು ನಡೆಸಲಾಯಿತು.

ಯೋಜನೆಯನ್ನು ನಾಗಪಟ್ಟಿಣಂನಲ್ಲಿ ಸ್ಥಾಪಿಸಲು ಪ್ರಸ್ತಾಪಿಸಲಾಗಿದ್ದು, ಅಲ್ಲಿ ಅದಾಗಲೇ ಹಲವಾರು ಯೋಜನೆಗಳು ಅನುಮತಿ ಪಡೆಯಲು ಸರದಿಯಲ್ಲಿ ನಿಂತಿದ್ದು. ಕೋಸ್ಟಲ್ ಆಕ್ಷನ್ ನೆಟ್‌ವರ್ಕ್ (ಸಿಎಎನ್) ಎಂಬ ಒಂದು ಸರ್ಕಾರೇತರ ಸಂಸ್ಥೆಯು ಮದ್ರಾಸ್ ಹೈಕೋರ್ಟಿನಲ್ಲಿ ಸಾರ್ವಜನಿಕ ಅಹವಾಲು ಸಭೆಯ ಸ್ಥಳವನ್ನು ಬದಲಿಸುವಂತೆ ಕೋರಿ, ದೂರು ಸಲ್ಲಿಸಿದರು, ಏಕೆಂದರೆ ಪ್ರಸ್ತಾಪಿಸಲಾದ ಸ್ಥಳವು ಯೋಜನಾ ಆವರಣದೊಳಗೇ ಇದ್ದು, ಯೋಜನಾ ಪ್ರತಿಪಾದಕರು ಬೆದರಿಕೆ ಒಡ್ಡಬಹುದು ಎನ್ನುವುದು ಅವರ ಭಯವಾಗಿತ್ತು. ಹೈಕೋರ್ಟಿನ ವಿಭಾಗೀಯ ಪೀಠವು ನಿಗದಿಯಾದ ಸ್ಥಳ ಮತ್ತು ಸಮಯದಲ್ಲಿ ಅಹವಾಲು ನಡೆಯಲು ಒಪ್ಪಿಗೆ ನೀಡಿ, ಯೋಜನಾ ಪ್ರತಿಪಾದಕರು ಸಭೆಯಲ್ಲಿ ಭಾಗವಹಿಸುವ ಎಲ್ಲರಿಗೂ ಸಾರಿಗೆ ಸೌಲಭ್ಯವನ್ನು ನೀಡುವಂತೆ ಆದೇಶಿಸಿತು. ಜೊತೆಗೆ ಸಭೆಯ ಕಲಾಪವನ್ನು ಮೇಲ್ವಿಚಾರಣೆ ಮಾಡಿ, ವರದಿಯನ್ನು ಸಲ್ಲಿಸಲು ಸಮಿತಿಯೊಂದನ್ನು ಕೂಡ ಪ್ರಕಟಿಸಿತು. ಪ್ರಕಟಣೆ ನೀಡಿದ ದಿನಾಂಕದಂದು ಅಹವಾಲು ಸಭೆಯನ್ನು ನಡೆಸಲಾಯಿತು ಮತ್ತು ಯೋಜನೆಯ ಇಎಸಿ ಮೌಲ್ಯನಿರ್ಣಯದ ನಂತರ ಪಾರಿಸರಿಕ ಅನುಮತಿಯನ್ನು ಜನವರಿ ೨೦೧೧ರಂದು ನೀಡಲಾಯಿತು.

10 https://www.elaw.org/system/files/SompetaJudgment.pdf

11 http://www.infrawindow.com/news/national-green-tribunal-cancels-clearances-to-sompeta-power-project_3502/

ಕೋಸ್ಟಲ್ ಆಕ್ಷನ್ ನೆಟ್‌ವರ್ಕ್ (ಸಿಎಎನ್) ಸಂಸ್ಥೆಯು ಯೋಜನಾ ಪ್ರತಿಪಾದಕರಿಂದ ಇಐಎ ಪ್ರಕ್ರಿಯೆಯಲ್ಲಿ ಹಲವಾರು ಕಾರ್ಯವಿಧಾನದ ಲೋಪಗಳಾಗಿರುವುದನ್ನು ಉಲ್ಲೇಖಿಸಿ, ನವದೆಹಲಿಯ ರಾಷ್ಟ್ರೀಯ ಹಸಿರು ನ್ಯಾಯಪೀಠಕ್ಕೆ ದೂರು ಸಲ್ಲಿಸಿತು. ಇಐಎ ಕರಡು ವರದಿಗೆ ಹೋಲಿಸಿದರೆ ಅಂತಿಮ ಇಐಎ ವರದಿಯಲ್ಲಿ ಹಲವಾರು ಮಾರ್ಪಾಡುಗಳನ್ನು/ಸೇರ್ಪಡೆಗಳನ್ನು ಮಾಡಲಾಗಿದೆ ಮತ್ತು ಯೋಜನೆಯ ಪ್ರದೇಶವು ಅರೆಬಂಜರು ಭೂಮಿ ಎಂದು ತಪ್ಪಾಗಿ ಉಲ್ಲೇಖಿಸಲಾಗಿದೆ ಎಂದು ಸಿಎಎನ್ ಸಂಸ್ಥೆಯು ಆರೋಪಿಸಿತು. ಸರ್ಕಾರದ ದಾಖಲೆಗಳ ಪ್ರಕಾರ ಅದು ಜೌಗುಭೂಮಿ ಎಂಬುದು ಸುಸ್ಪಷ್ಟವಿತ್ತು. ಯೋಜನೆಯು ಆ ಪ್ರದೇಶದ ಕೃಷಿಯನ್ನು ತೀವ್ರವಾಗಿ ಹಾನಿಗೀಡು ಮಾಡುತ್ತದೆ ಎಂದೂ ಸಿಎಎನ್ ಸಂಸ್ಥೆಯು ಆರೋಪಿಸಿತು.

ಕರಡು ಮತ್ತು ಅಂತಿಮ ಇಐಎ ನಡುವೆ ಹೊಂದಾಣಿಕೆ ಇಲ್ಲವೆಂಬ ಅಂಶವನ್ನು ಪರಿಶೀಲಿಸಲು ಎನ್‌ಜಿಟಿಯ ಪ್ರಧಾನ ಪೀಠವು ಎಂಒಇಎಫ್‌ಗೆ ಕರಡು ಇಐಎ ವರದಿಯ ಒಂದು ವರದಿಯನ್ನು ನೀಡುವಂತೆ ಕೋರಿತು. ಸಚಿವಾಲಯವು ತನ್ನಲ್ಲಿ ಅಂತಹ ಯಾವುದೇ ದಾಖಲೆ ಇಲ್ಲವೆಂದು ಪ್ರತಿಕ್ರಿಯಿಸಿತು. ಅಪೀಲುದಾರರು ಸಲ್ಲಿಸಿದ ಕರಡು ಇಐಎ ವರದಿಯ ಪ್ರತಿಯನ್ನು ಬಳಸಿಕೊಂಡ ಪೀಠವು, ಕರಡು ಇಐಎ ವರದಿಗೆ ಹೋಲಿಸಿದರೆ ಅಂತಿಮ ಇಐಎ ವರದಿಯಲ್ಲಿ ಈ ಕೆಳಗಿನ ಸಮಸ್ಯೆಗಳನ್ನು ಮಾರ್ಪಾಡು ಮಾಡಲಾಗಿತ್ತು ಅಥವಾ ಭಾಗಶಃ ಉದ್ದೇಶಿಸಲಾಗಿತ್ತು ಎಂಬುದನ್ನು ಗಮನಿಸಿತು:

೧. ಕುಟುಂಬಗಳ ಹೆಸರುಗಳು ಮತ್ತು ಪ್ರತಿ ಎಕರೆ ಭೂಮಿಗೆ ನೀಡಲಾಗುವುದೆಂದು ಪ್ರಸ್ತಾಪಿಸಿದ/ನೀಡಲಾದ ಪರಿಹಾರದ ವಿವರಗಳೂ ಸೇರಿದಂತೆ, ಭೂ ಸ್ವಾಧೀನದ ವಿವರಗಳನ್ನು ಪೂರ್ಣವಾಗಿ ನೀಡಿರಲಿಲ್ಲ.

೨. ಸಿಎಸ್‌ಆರ್ ಘಟಕ - ಆಯವ್ಯಯದೊಂದಿಗೆ ನೀಡಲಾದ ಪರಿಕಲ್ಪನೆ ಪ್ರಸ್ತಾವನೆಯು ಇಐಎ ಕರಡು ವರದಿಯ ಭಾಗವಾಗಿರಲಿಲ್ಲ.

೩. ಸಮುದ್ರದ ಪರಿಸರದ ಮೇಲೆ ವಿವರವಾದ ಅಧ್ಯಯನ - ಎರಡೂ ಇಐಎ ವರದಿಗಳು ನಿರ್ವಹಣೆ ಯೋಜನೆ ಮತ್ತು ಆಯವ್ಯಯದ ವಿವರಗಳಿಲ್ಲದೇ ಕೇವಲ ಸಾರ್ವತ್ರಿಕ/ಸಾಮಾನ್ಯ ಸಂಕ್ಷಿಪ್ತ ಸಾರಾಂಶವನ್ನು ನೀಡಿದ್ದವು.

೪. ಸುತ್ತುವರಿದ ಗಾಳಿಯ ಗುಣಮಟ್ಟ - ಪಿ.ಎಂ. ೨.೫ ಮತ್ತು ಪಾದರಸದ ಕುರಿತ ದತ್ತಾಂಶಗಳನ್ನು ಇಐಎ ಕರಡು ವರದಿಯಲ್ಲಿ ಸೇರಿಸಿರಲಿಲ್ಲ.

೫. ಇಂಧನ ವಿಶ್ಲೇಷಣೆ - ಇಐಎ ಕರಡು ವರದಿಯಲ್ಲಿ ಭಾರ ಲೋಹಗಳ ಕುರಿತ ದತ್ತಾಶಗಳು ಇರಲಿಲ್ಲ.

ಆದರೆ ಪೀಠವು, ಈ ವ್ಯತ್ಯಾಸಗಳು ಪರಿಸರದ ಮೇಲೆ ಸಾಕಷ್ಟು ಪರಿಣಾಮವನ್ನೇನೂ ಬೀರುವುದಿಲ್ಲ ಎಂಬುದನ್ನು ಗಮನಿಸಿತು ಮತ್ತು ಪಾರಿಸರಿಕ ಅನುಮತಿಯನ್ನು ರದ್ದುಪಡಿಸಲು ಕಾರ್ಯವಿಧಾನದ ಲೋಪಗಳು ಒಂದೇ ಕಾರಣವಾಗಲಾರದು ಎಂದು ಗಮನಿಸಿತು. ಪೀಠವು ಮಾಡಿದ ಹಲವು ಗಮನಾರ್ಹ ವೀಕ್ಷಣೆಗಳು ಹೀಗಿವೆ:

- ಭೂಸ್ಥಳದ ಪರಿಸರವಿಜ್ಞಾನದ ಮೂಲಾಧಾರ ದತ್ತಾಂಶಗಳನ್ನು ಒಪ್ಪಂದದ ಕರಾರುಗಳನ್ನು ನೀಡುವ ಮೊದಲೇ ಸಂಗ್ರಹಿಸಲಾಗಿತ್ತು ಮತ್ತು ಇದರೊಂದಿಗೆ ಸಂಪೂರ್ಣವಾಗಿ ತಾಳೆಯಾಗುತ್ತಿರಲಿಲ್ಲ, ಅಂತಿಮ ಇಐಎ ವರದಿಯಲ್ಲಿ ದತ್ತಾಂಶ ಪರಿಷ್ಕರಣೆ/ಮಾರ್ಪಾಡು ಮಾಡಲಾಗಿದ್ದು, ಅದನ್ನು ಇಎಸಿ ಮೌಲ್ಯನಿರ್ಣಯಕ್ಕೆ ಬಳಸಿಕೊಳ್ಳಲಾಗಿತ್ತು.

- ಒಪ್ಪಂದದ ಕರಾರಿಗೆ ಸಮುದ್ರ ಪರಿಸರವಿಜ್ಞಾನದ ವರದಿ ಅಗತ್ಯವಿದ್ದರೂ, ತುಂಬ ಸಾಮಾನ್ಯವಾದ/ಸಾರ್ವತ್ರಿಕವಾದ ಸಂಕ್ಷಿಪ್ತ ಸಾರಾಂಶವನ್ನು ನೀಡಲಾಗಿತ್ತು ಮತ್ತು ಯಾವುದೇ ಪ್ರಸ್ತುತತೆ ಹೊಂದಿಲ್ಲದ, ಎಲ್ಲ ವಾಸ್ತವಾಂಶದಿಂದ ದೂರವಿದ್ದ ಅಂಶಗಳನ್ನು ಇಐಎ ವರದಿಯಲ್ಲಿ ಸೇರಿಸಲಾಗಿತ್ತು. ಇದು ಸಾರ್ವಜನಿಕ ಅಹವಾಲು ಸಭೆಯಲ್ಲಿ ಅಥವಾ ನಂತರದ ಇಎಸಿ ಮೌಲ್ಯನಿರ್ಣಯದಲ್ಲಿ ಲಭ್ಯವಿರಲಿಲ್ಲ.

- ಕರಡು ಮತ್ತು ಅಂತಿಮ, ಎರಡೂ ಇಐಎ ವರದಿಯು ಆಲಿವ್ ರಿಡ್ಲೆ ಆಮೆಗಳು ಅಲ್ಲಿರುವುದರ ಬಗ್ಗೆ ಪ್ರಾಥಮಿಕ ಅಥವಾ ದ್ವಿತೀಯ ದತ್ತಾಂಶಗಳನ್ನು ಒಳಗೊಂಡಿರಲಿಲ್ಲ. ತಮಿಳುನಾಡು ಮೀನುಗಾರಿಕೆ ಇಲಾಖೆಯ ವರದಿಯೊಂದರಲ್ಲಿ ಈ ಯೋಜನಾ ಸ್ಥಳವು ಆಮೆಗಳು ತಂಗುವ ಜಾಗವೆಂದು ಉಲ್ಲೇಖಿಸಿದ್ದರೂ, ಈ ಮಾಹಿತಿ ಇಐಎಗಳಲ್ಲಿ ಇರಲಿಲ್ಲ.

- ಯೋಜನೆಯ ಪ್ರಸ್ತಾಪಕರು ದೇಸೀ ಮತ್ತು ಆಮದಾದ ಕಲ್ಲಿದ್ದಲಿನ ಮಿಶ್ರಣವನ್ನು ಬಳಸುವುದಾಗಿ ಇಐಎಗಳಲ್ಲಿ ಪ್ರಸ್ತಾಪಿಸಿದ್ದರೂ, ಇಎಸಿಗೆ ಯೋಜನೆಯನ್ನು ಪ್ರಸ್ತುತಪಡಿಸುವ ಸಂದರ್ಭದಲ್ಲಿ ಯೋಜನಾ ಪ್ರಸ್ತಾಪಕರು ಆಮದಾದ ಕಲ್ಲಿದ್ದಲಿನ ಬಗ್ಗೆ ಮಾತ್ರ ಉಲ್ಲೇಖಿಸಿದ್ದರು. ಇಸಿ (ಪಾರಿಸರಿಕ ಅನುಮತಿ)ಯು ಶೇ. ೩೪ರಷ್ಟು ಬೂದಿ ಮೌಲ್ಯವಿರುವ ಕಲ್ಲಿದ್ದಲಿನ ಬಳಕೆಯನ್ನು ಉಲ್ಲೇಖಿಸಿತ್ತು - ಇದು ಪೂರ್ಣ ದೇಸೀ ಕಲ್ಲಿದ್ದಲು ಆಗಿರಬಹುದು (ದೇಸೀ ಕಲ್ಲಿದ್ದಲಿನ ಬೂದಿ ಮೌಲ್ಯ ಶೇ. ೩೦) ಮತ್ತು ದೇಸೀ ಕಲ್ಲಿದ್ದಲು ಗಾಳಿಯ ಮೇಲೆ ಬೀರುವ ಪರಿಣಾಮ (ಗಾಳಿ ಗುಣಮಟ್ಟ) ಆಮದಾದ ಕಲ್ಲಿದ್ದಲಿಗಿಂತ ಭಿನ್ನವಿದೆ ಎಂದು.
- ಕಾಮಗಾರಿ ಹಂತದಲ್ಲಿ ಬಳಕೆಯಾಗುವ ನೀರಿನ ಮೂಲವನ್ನು ಇಐಎ ವರದಿ ನಿರ್ದಿಷ್ಟಪಡಿಸಿರಲಿಲ್ಲ.

ಈ ವೀಕ್ಷಣೆಗಳ ನಂತರ, ಪೀಠವು ಅಂತಿಮ ಇಐಎ ವರದಿಯಲ್ಲಿ ಭೂಸ್ಥಳದ ಮತ್ತು ಸಮುದ್ರದ ಪರಿಸರ ವಿಜ್ಞಾನದ ಕುರಿತ ದತ್ತಾಂಶಗಳೊಂದಿಗೆ ಪರಿಷ್ಕರಣೆ ಮಾಡುವವರೆಗೂ ಪಾರಿಸರಿಕ ಅನುಮತಿಯನ್ನು ತಡೆಹಿಡಿಯುವಂತೆ ಆದೇಶ ನೀಡಿತು. ಪರಿಷ್ಕರಿಸಲಾದ ಇಐಎ ವರದಿಯನ್ನು ಎಂಒಇಎಫ್ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿ, ಇದಕ್ಕೆ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಯಿತು. ಜೊತೆಗೆ ಇಎಸಿಗೆ ಯೋಜನೆಯನ್ನು ಸಾರ್ವಜನಿಕರ ಹಿಮ್ಮಾಹಿತಿಯೊಂದಿಗೆ ಪರಿಷ್ಕರಿಸಿ, ಪಾರಿಸರಿಕ ಅನುಮತಿ ಕೊಡುವ ಕುರಿತು ಅದರ ಶಿಫಾರಸ್ಸನ್ನು ಎಂಒಇಎಫ್ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವಂತೆ ಹೇಳಲಾಯಿತು. ಯೋಜನೆ ಪ್ರಸ್ತಾಪಕರು ಪರಿಷ್ಕೃತ ಇಐಎಯನ್ನು ಸಲ್ಲಿಸಿದ ನಂತರ, ಎನ್‌ಜಿಟಿ ವಿಧಿಸಿದ್ದ ಎಲ್ಲ ನಿಯಮಗಳಿಗೂ ಅದು ಹೊಂದಾಣಿಕೆಯಾಗುತ್ತಿಲ್ಲ ಎನ್ನುವುದನ್ನು ಇಎಸಿಯು ಗಮನಿಸಿತು. ಯೋಜನೆಯಿಂದ ಆಲಿವ್ ರಿಡ್ಲೆ ಆಮೆಗಳ ಮೇಲಾಗುವ ಪರಿಣಾಮವನ್ನು ಕೂಡ ಅಧ್ಯಯನ ಮಾಡಿ, ಆಮೆಗಳ ಸಂರಕ್ಷಣೆಗೆ ದೀರ್ಘಕಾಲೀನ ಯೋಜನೆಯನ್ನು ರೂಪಿಸಬೇಕೆಂದು ಬೇಡಿಕೆ ಇಟ್ಟಿತು. ಪರಿಷ್ಕೃತ ಇಐಎ ವರದಿಯನ್ನು ಒಂದು ಅಫಿಡೆವಿಟ್ ಆಗಿ, ಯೋಜನಾ ಪ್ರತಿಪಾದಕ ಸಂಸ್ಥೆಯ ಅಧಿಕಾರಿಗಳು ಸಹಿ ಮಾಡಿ, ನೋಟರಿಯವರ ಸಹಿ ಪಡೆದು, ಸಲ್ಲಿಸಬೇಕೆಂದು ಇಎಸಿ ಹೇಳಿತು.

ಅಫಿಡೆವಿಟ್ ಸಲ್ಲಿಸಿದ ನಂತರ, ಮೂಲ ಅನುಮತಿಯಲ್ಲಿ ವಿಧಿಸಿದ್ದ ಷರತ್ತುಗಳೊಡನೆ ೧೩ ಹೆಚ್ಚುವರಿ ಕರಾರುಗಳನ್ನು ವಿಧಿಸಿ ಅನುಮತಿಯನ್ನು ನೀಡಲಾಯಿತು.

**ಸಾರ್ವಜನಿಕ ಅಹವಾಲು ಸಭೆ ಬಗ್ಗೆ ರಾಷ್ಟ್ರೀಯ ಹಸಿರು ನ್ಯಾಯಪೀಠದ ಅಭಿಪ್ರಾಯ**

"ನಮ್ಮ ಪರಿಗಣನೆಗೆ ಬಂದಿದ್ದ ಸಾರ್ವಜನಿಕ ಅಹವಾಲು ಸಭೆಯ ಹಲವಾರು ಸಿಡಿಗಳನ್ನು ವೀಕ್ಷಿಸಿದ ನಂತರ, ಸಭೆ ಕೇವಲ ಅಣಕ ಎಂದು ನಮಗೆ ಅನ್ನಿಸಿದೆ. ಕೇವಲ ಯೋಜನೆಗೆ ಬೆಂಬಲ ಅಥವಾ ವಿರೋಧ ಎಂದು ದಾಖಲಿಸಿಕೊಂಡಿದ್ದು ಬಿಟ್ಟರೆ ಅಹವಾಲು ಸಭೆಯು ಅಪ್ರಯೋಜಕ."

## 2.4 ಆಗಾಗ ಕೇಳುವ ಪ್ರಶ್ನೆಗಳು (ಎಫ್‌ಎಕ್ಯು)

**2.4.1 ಸಾಮಾನ್ಯ**

**2.4.2 ಹೊಸ ಸ್ಥಾವರಗಳಿಗೆ ಪಾರಿಸರಿಕ ಅನುಮತಿ ಮತ್ತು ಇಐಎ ಪ್ರಕ್ರಿಯೆ**

**2.4.3 ಸದ್ಯ ಇರುವ ಸ್ಥಾವರಗಳು**

**2.4.4 ಬೇರೆ ಅನುಮತಿಗಳು**

**2.4.5 ಸರಿಪಡಿಸುವಿಕೆ/ಪರಿಹರಿಸುವಿಕೆ**

### 2.4.1 ಸಾಮಾನ್ಯ

#### 2.4.1 (ಎ) ಕೈಗಾರಿಕಾ ವರ್ಗೀಕರಣ

ಪ್ರ: ಕೈಗಾರಿಕೆಗಳಲ್ಲಿ ಉಷ್ಣ ವಿದ್ಯುತ್ ಸ್ಥಾವರಗಳನ್ನು (ಟಿಪಿಪಿ) ಹೇಗೆ ವರ್ಗೀಕರಿಸಲಾಗಿದೆ?

ಉ: ಪರಿಸರ ಮತ್ತು ಅರಣ್ಯಗಳ ಸಚಿವಾಲಯ (ಎಂಒಇಎಫ್)ವು ಟಿಪಿಪಿಗಳನ್ನು ೧೭ ಕೆಂಪು ವರ್ಗದ ಕೈಗಾರಿಕೆಗಳಲ್ಲಿ ಒಂದೆಂದು ವರ್ಗೀಕರಿಸಿದೆ. ಕೆಂಪು ವರ್ಗ ಎನ್ನುವುದು ಅತ್ಯಂತ ಹೆಚ್ಚು ಮಾಲಿನ್ಯಕಾರಿ ಕೈಗಾರಿಕೆ ಎಂಬುದನ್ನು ಸೂಚಿಸುತ್ತದೆ.

ಪರಿಸರ ಅನುಮತಿಯನ್ನು ಪಡೆಯಲು -

- **ಎ ವರ್ಗದ ಯೋಜನೆಗಳು**

  ೫೦೦ ಮೆ.ವ್ಯಾ. ಕಲ್ಲಿದ್ದಲು/ಲಿಗ್ನೈಟ್/ನ್ಯಾಫ್ತಾ & ಅನಿಲ ಆಧರಿತ ಇಂಧನ

  ೫೦ ಮೆ.ವ್ಯಾ. ಪೆಟ್‌ಕೋಕ್, ಡೀಸೆಲ್ ಮತ್ತು ಎಲ್ಲ ಇತರೇ ಇಂಧನಗಳು, ರಿಫೈನರಿ ರೆಸಿಡ್ಯುಯಲ್ ತೈಲ ತ್ಯಾಜ್ಯವೂ ಸೇರಿದಂತೆ (ಬಯೋಮಾಸ್ ಹೊರತುಪಡಿಸಿ)

  ೨೦ ಮೆ.ವ್ಯಾ. ಬಯೋಮಾಸ್ ಆಧರಿತ ಅಥವಾ ಅಪಾಯಕಾರಿಯಲ್ಲದ ಮುನ್ಸಿಪಲ್ ಘನ ತ್ಯಾಜ್ಯವನ್ನು ಇಂಧನವಾಗಿ ಬಳಸುವ ಸ್ಥಾವರ

- **ಈ ಕೆಳಗಿನವು ಬಿ ವರ್ಗದ ಯೋಜನೆಗಳು**

  < ೫೦೦ ಮೆ.ವ್ಯಾ. ಕಲ್ಲಿದ್ದಲು/ಲಿಗ್ನೈಟ್/ನ್ಯಾಫ್ತಾ & ಅನಿಲ ಆಧರಿತ ಇಂಧನ

  < ೫೦ ಮೆ.ವ್ಯಾ. ಅಥವಾ > ೩ ಮೆ.ವ್ಯಾ. ಪೆಟ್‌ಕೋಕ್, ಡೀಸೆಲ್ ಮತ್ತು ಎಲ್ಲ ಇತರೇ ಇಂಧನಗಳು, ರಿಫೈನರಿ ರೆಸಿಡ್ಯುಯಲ್ ತೈಲ ತ್ಯಾಜ್ಯವೂ ಸೇರಿದಂತೆ (ಬಯೋಮಾಸ್ ಹೊರತುಪಡಿಸಿ)

  < ೨೦ ಮೆ.ವ್ಯಾ. ಅಥವಾ > ೧೫ ಮೆ.ವ್ಯಾ. ಬಯೋಮಾಸ್ ಆಧರಿತ ಅಥವಾ ಅಪಾಯಕಾರಿಯಲ್ಲದ ಮುನ್ಸಿಪಲ್ ಘನ ತ್ಯಾಜ್ಯವನ್ನು ಇಂಧನವಾಗಿ ಬಳಸುವ ಸ್ಥಾವರ

#### 2.4.1 (ಬಿ) ಸ್ಥಾವರಗಳ ಸ್ಥಳ

**ಪ್ರ: ಕರಾವಳಿ ತೀರದಲ್ಲಿಯೇ ಟಿಪಿಪಿಗಳ ತ್ವರಿತವೃದ್ಧಿಗೆ ಕಾರಣಗಳೇನು?**

ಉ: ಕರಾವಳಿ ತೀರದಲ್ಲಿ ಸ್ಥಾವರವನ್ನು ಸ್ಥಾಪಿಸುವುದರಿಂದ ಯೋಜನೆ ಪ್ರತಿಪಾದಕರಿಗೆ ಎರಡು ಮುಖ್ಯ ಲಾಭಗಳಿವೆ:

೧. ಬಂದರುಗಳ ಮೂಲಕ ಮತ್ತು ಕ್ಯಾಪ್ಟಿವ್ ಜೆಟ್ಟಿಗಳ ಮೂಲಕ ಆಮದಾಗುವ ಕಲ್ಲಿದ್ದಲಿನ ಸುಲಭ ಸಾಗಾಣಿಕೆ

೨. ಸಮುದ್ರ ನೀರಿನ ಸುಲಭಲಭ್ಯತೆ - ಬಾಯ್ಲರ್‌ಗೆ ಉಣಿಸಲು ಅಗತ್ಯವಾದ ಮತ್ತು ತಣ್ಣಗಾಗಿಸಲು ಬಳಸುವ ನೀರು, ಎರಡಕ್ಕೂ ಸ್ಥಳದಲ್ಲಿಯೇ ಸಮುದ್ರ ನೀರನ್ನು ಉಪ್ಪುರಹಿತವಾಗಿಸುವ ತಂತ್ರಜ್ಞಾನ ಬಳಸಿಕೊಂಡು ಸಮುದ್ರ ನೀರಿನ ಬಳಕೆ ಮಾಡಬಹುದು. ಇದು ಉಷ್ಣ ವಿದ್ಯುತ್ ಸ್ಥಾವರವನ್ನು ನಡೆಸಲು ಅಗತ್ಯವಾದ ತಾಜಾ/ಸಿಹಿ ನೀರಿನ ಅಗತ್ಯವನ್ನು ಕಡಿಮೆ ಮಾಡುತ್ತದೆ.

**ಪ್ರ: ಟಿಪಿಪಿಗಳು ಎಲ್ಲಿ ಇರಬೇಕೆಂಬ ಬಗ್ಗೆ ಏನಾದರೂ ನಿಯಮಾವಳಿಗಳಿವೆಯೇ?**

ಉ: ಹೌದು, ಇವೆ. ಟಿಪಿಪಿಗಳನ್ನು ಸ್ಥಾಪಿಸಲು ಮೂರು ಬಗೆಯ ಮಾನದಂಡಗಳನ್ನು ಗಮನಿಸಲಾಗುತ್ತದೆ. ಅವೆಂದರೆ:

೧. ಇಐಎ ಅಧಿಸೂಚನೆ, ೨೦೦೬ರಲ್ಲಿ ಪಟ್ಟಿ ಮಾಡಲಾದ ಮಾನದಂಡಗಳು

೨. ಕೇಂದ್ರ ಮಾಲಿನ್ಯ ನಿಯಂತ್ರಣಾ ಮಂಡಳಿ (ಸಿಪಿಸಿಬಿ)ಯ ಕೈಗಾರಿಕಾ ಯೋಜನಾಸ್ಥಳ ಮಾರ್ಗದರ್ಶನಗಳು

೩. ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ (ಎಸ್‌ಪಿಸಿಬಿ)ಯ ಯೋಜನಾ ಸ್ಥಳದ ನಿಬಂಧನೆಗಳು

ಇಐಎ ಅಧಿಸೂಚನೆ, ೨೦೦೬ರ ಪ್ರಕಾರ, ೫೦೦ ಮೆ.ವ್ಯಾ.ಗಿಂತ ಕಡಿಮೆ ಸಾಮರ್ಥ್ಯದ ಟಿಪಿಪಿಗಳು - ಇವಕ್ಕೆ ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (ಎಸ್‌ಇಐಎಎ)ವು ಪಾರಿಸರಿಕ ಅನುಮತಿಯನ್ನು ನೀಡುತ್ತದೆ - ಈ ಕೆಳಗಿನ ಪ್ರದೇಶಗಳಿಂದ ೧೦ ಕಿ.ಮೀ. ವ್ಯಾಪ್ತಿಯಲ್ಲಿದ್ದರೆ ಎಂಒಇಎಫ್‌ನಿಂದ ಅನುಮತಿಯನ್ನು ಪಡೆದುಕೊಳ್ಳಬೇಕಾಗುತ್ತದೆ:

- ವನ್ಯಜೀವಿ (ರಕ್ಷಣಾ) ಕಾಯಿದೆ ೧೯೭೨ರ ಅಡಿಯಲ್ಲಿ ಪ್ರಕಟಿಸಲಾದ ಸಂರಕ್ಷಿತ ಪ್ರದೇಶಗಳು
- ಕೇಂದ್ರ ಮಾಲಿನ್ಯ ನಿಯಂತ್ರಣಾ ಮಂಡಳಿಯು ಆಗಾಗ ಪ್ರಕಟಿಸುವ ಅತಿಯಾಗಿ ಮಾಲಿನ್ಯಗೊಂಡ ಪ್ರದೇಶಗಳು
- ನಿರ್ದಿಷ್ಟ ಅಧಿಸೂಚನೆ ಅಡಿಯಲ್ಲಿ ಬರುವ ಪರಿಸರ-ಸಂವೇದಿ ಪ್ರದೇಶಗಳು
- ಅಂತರ-ರಾಜ್ಯ ಗಡಿಗಳು ಮತ್ತು ಅಂತಾರಾಷ್ಟ್ರೀಯ ಗಡಿಗಳು

ಅಕ್ಟೋಬರ್ ೨೦೧೩ರಲ್ಲಿ, ಸಿಪಿಸಿಬಿಯು ಈ ಕೆಳಗಿನ ಪ್ರದೇಶಗಳನ್ನು ಅತಿಹೆಚ್ಚು ಮಾಲಿನ್ಯಯುತ ಎಂದು ಗುರುತಿಸಿದೆ:

- ಅಂಕ್ಲೇಶ್ವರ್ (ಗುಜರಾತ್)
- ಚಂದ್ರಾಪುರ್ (ಮಹಾರಾಷ್ಟ್ರ)
- ಪಾಲಿ (ರಾಜಾಸ್ತಾನ)
- ವಾಟ್ವಾ (ಗುಜರಾತ್)
- ವೆಲ್ಲೋರ್ (ತಮಿಳುನಾಡು)
- ನಜಾಫ್‌ಗರ್ ಡ್ರೈನ್ ಬೇಸಿನ್ (ದೆಹಲಿ)
- ಜೋಧ್‌ಪುರ್ (ರಾಜಾಸ್ತಾನ)

ಈ ಪ್ರದೇಶಗಳಲ್ಲಿ ಟಿಪಿಪಿಗಳನ್ನು ಸ್ಥಾಪಿಸಲಾಗದು.

ಇದರ ಹೊರತಾಗಿ, ರಾಜ್ಯ ಸರ್ಕಾರಗಳು ಕೂಡ ಅಭಿವೃದ್ಧಿ ಚಟುವಟಿಕೆಗಳನ್ನು ನಿರ್ಬಂಧಿಸಲಾದ ಸ್ಥಳಗಳ ಪಟ್ಟಿಯನ್ನು ಮಾಡಿವೆ.
**ಕರ್ನಾಟಕದಲ್ಲಿ ಯಾವುದೇ ಹೊಸ ಕೈಗಾರಿಕೆಗಳನ್ನು ಈ ಕೆಳಗಿನ ನದಿಗಳ ದಂಡೆಯಿಂದ ೧.೫ ಕಿ.ಮೀ. ವ್ಯಾಪ್ತಿಯಲ್ಲಿ ಸ್ಥಾಪಿಸುವಂತಿಲ್ಲ:**

- ಕಾವೇರಿ, ಕಬಿನಿ, ಅರ್ಕಾವತಿ, ಶಿಂಷಾ, ಪೆನ್ನಾರ್, ಹೇಮಾವತಿ, ಲಕ್ಷ್ಮಣತೀರ್ಥ, ಗುಂಡಾಲ್ ನದಿ, ಲೋಕಪಾವನಿ, ಪಾಲಾರ್, ತುಂಗಭದ್ರಾ, ಕೃಷ್ಣ, ಭೀಮಾ, ವರದಾ, ಘಟಪ್ರಭಾ, ಮಲಪ್ರಭಾ, ವೇದಾವತಿ, ಕಾರಂಜಾ, ಹಗರಿ.
- ಪಶ್ಚಿಮಕ್ಕೆ ಹರಿಯುವ ಎಲ್ಲ ತೊರೆಗಳು/ನದಿಗಳು
- ಋತುಮಾನಿಕವಾಗಿ ಅಥವಾ ವರ್ಷದುದ್ದಕ್ಕೂ ನೀರು ಇರುವ ಎಲ್ಲ ತೊರೆಗಳು/ನದಿಗಳು
- ಎಲ್ಲ ಪ್ರಮುಖ ಜಲಾಶಯಗಳು
- ಕುಡಿಯುವ ಮೇಲ್ಮೈ ನೀರು ಮೂಲಗಳು
- ಎಲ್ಲ ಪ್ರಮುಖ ನೀರಾವರಿ ನಾಲೆಗಳು
- ಯಾವುದೇ ನೀರಿನ ಮೂಲವು ಕುಡಿಯುವ ನೀರಿನ ಮೂಲವಾಗಿದ್ದರೆ, ಆಗ ಕೈಗಾರಿಕೆಯು ಎಷ್ಟು ದೂರದಲ್ಲಿದ್ದರೆ ಮಾಲಿನ್ಯಯುತ ತ್ಯಾಜ್ಯದ ನೀರು ಬಿಡುವುದರಿಂದ ಈ ನೀರಿನ ಮೇಲೆ ದುಷ್ಪರಿಣಾಮ ಬೀರುವುದಿಲ್ಲವೋ, ಅಷ್ಟು ದೂರದಲ್ಲಿ ಸ್ಥಾಪಿಸಬಹುದು
- ಟಿಪಿಪಿಗಳನ್ನು ಮುನ್ಸಿಪಲ್/ಸಿಟಿ ಮಿತಿಯಲ್ಲಿ ಮತ್ತು ವಾಸಸ್ಥಾನ ಪ್ರದೇಶಗಳ ಬಳಿ ಸ್ಥಾಪಿಸಲು ಅನುಮತಿಯಿಲ್ಲ.[12]

ತಮಿಳುನಾಡು ಎಸ್‌ಪಿಸಿಬಿಯು ಕೆಲವು ನದಿಗಳ ದಡದಿಂದ ೧ ಕಿ.ಮೀ. ವ್ಯಾಪ್ತಿಯಲ್ಲಿ (ಈ ಕೆಳಗೆ ಅಂತರ್ಜಾಲ ಕೊಂಡಿಯನ್ನು ನೀಡಲಾಗಿದೆ) ಮತ್ತು ಕಾವೇರಿ ಮತ್ತು ಅದರ ಉಪನದಿಗಳು, ಪೆನ್ನಿಯಾರ್, ಪಾಲಾರ್, ವಾಯ್‌ಗೈ ಮತ್ತು ತಾಮ್ರಪರ್ಣಿ ನದಿಗಳ ದಡದಿಂದ ೫ ಕಿ.ಮೀ. ವ್ಯಾಪ್ತಿಯಲ್ಲಿ ಅತಿಯಾಗಿ ಮಾಲಿನ್ಯಗೊಳಿಸುವ ಕೈಗಾರಿಕೆಗಳ ಸ್ಥಾಪನೆಯನ್ನು (ಟಿಪಿಪಿಗಳನ್ನೂ ಸೇರಿಸಿ) ನಿಷೇಧಿಸಿ, ಒಂದು ಆದೇಶವನ್ನು ಹೊರಡಿಸಿದೆ.

{http://www.tnpcb.gov.in/GO1.html

http://www.pcboac.tn.nic.in/Docu/GOs.pdf}.

ಆಂಧ್ರ ಪ್ರದೇಶ ಎಸ್‌ಪಿಸಿಬಿಯು ಯಾವುದೇ ಕೈಗಾರಿಕೆಯ ಸ್ಥಳದ ಗಡಿಯು ರಾಷ್ಟ್ರೀಯ ಹೆದ್ದಾರಿಯಿಂದ ೧೦೦ ಮೀ, ರಾಜ್ಯ ಹೆದ್ದಾರಿಯಿಂದ ೫೦ ಮೀ, ಗ್ರಾಮದ ರಸ್ತೆಗಳಿಂದ ೨೫ ಮೀ. ದೂರ ಇರಬೇಕೆಂದು ಆದೇಶಿಸಿದೆ. ಈ ಮಾರ್ಗದರ್ಶನಗಳು ಕೈಗಾರಿಕಾ ವಲಯದೊಳಗೆ ಇರುವ ಪ್ಲಾಂಟ್‌ಗಳಿಗೆ ಅನ್ವಯಿಸುವುದಿಲ್ಲ.[13]

ಯೋಜನಾಸ್ಥಳದ ಮಾರ್ಗದರ್ಶನಗಳ ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಆಯಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಲ್ಲಿ ಪರಿಶೀಲಿಸಿರಿ.

**ಪ್ರ: ಸಮಗ್ರ ಪರಿಸರ ಮಾಲಿನ್ಯ ಸೂಚಿ (Comprehensive Environment Pollution Index) ಎಂದರೇನು? ಇದು ಟಿಪಿಪಿಗಳ ಸ್ಥಳವನ್ನು ಹೇಗೆ ಪರಿಣಾಮಿಸುತ್ತದೆ?**

ಉ: ಸಿಇಪಿಐ ಎಂದರೆ ಒಂದು ನಿರ್ದಿಷ್ಟ ಸ್ಥಳದಲ್ಲಿ ಪಾರಿಸರಿಕ ಗುಣಮಟ್ಟದ ಸ್ವರೂಪವನ್ನು ಸೂಚಿಸುವ ಒಂದು ಸಂಖ್ಯೆ. ಸಿಇಪಿಐ ಸಂಖ್ಯೆಯನ್ನು ಕಾಲದಿಂದ ಕಾಲಕ್ಕೆ ಎಸ್‌ಪಿಸಿಬಿಯು ಲೆಕ್ಕಹಾಕುತ್ತದೆ. ಇದು ಅತಿಹೆಚ್ಚು ಮಾಲಿನ್ಯಗೊಂಡ ಪ್ರದೇಶಗಳು ಮತ್ತು ಕೈಗಾರಿಕಾ ಸಮುಚ್ಚಯಗಳನ್ನು, ಅಲ್ಲಿಯ ಗಾಳಿ, ನೆಲ ಮತ್ತು ನೀರನ್ನು ಮೇಲ್ವಿಚಾರಣೆ ಮಾಡುವ ಮೂಲಕ ಗುರುತಿಸಲಿಕ್ಕಾಗಿ ಇದನ್ನು ಲೆಕ್ಕಹಾಕಲಾಗುತ್ತದೆ. ಸಿಇಪಿಐ ಸಂಖ್ಯೆಯು, ಈಗಾಗಲೇ ಮಾಲಿನ್ಯಗೊಂಡ ಸ್ಥಿತಿಯಿಂದಾಗಿ ಕೈಗಾರಿಕಾ ಅಭಿವೃದ್ಧಿ ಚಟುವಟಿಕೆಗಳನ್ನು ನಿರ್ಬಂಧಿಸಲಾದ ಪ್ರದೇಶಗಳನ್ನು ಗುರುತಿಸಲು ಒಂದು ಬಹಳ ಮಹತ್ವವಾದ ಸಾಧನವಾಗಿದೆ.

12 http://kspcb.gov.in/sitingguidelines.html

13 http://www.appcb.ap.nic.in/cm/siting.htm

೨೦೧೦ರಲ್ಲಿ, ಎಂಒಇಎಫ್ ಹೊಸ ಯೋಜನೆಗಳ ಸ್ಥಳಗಳು ೪೩ ಅತಿಹೆಚ್ಚು ಮಾಲಿನ್ಯಯುತ ಪ್ರದೇಶದಲ್ಲಿದ್ದರೆ, ಆ ಯೋಜನೆಗಳ ಪಾರಿಸರಿಕ ಅನುಮತಿಯ ಪರಿಗಣನೆಗೆ ತಾತ್ಕಾಲಿಕ ತಡೆ ವಿಧಿಸಿದೆ. ಸೆಪ್ಟೆಂಬರ್ ೨೦೧೩ರಲ್ಲಿ ಈ ಸಂಖ್ಯೆಯನ್ನು ೭ ಕೈಗಾರಿಕಾ ಸಮುಚ್ಚಯಗಳಿಗೆ ಇಳಿಸಲಾಗಿತ್ತು. ತಾತ್ಕಾಲಿಕ ತಡೆ ವಿಧಿಸಿರುವ ಪ್ರದೇಶಗಳಲ್ಲಿ ಟಿಪಿಪಿಯನ್ನು ಸ್ಥಾಪಿಸಲಾಗದು.

### 2.4.1 (ಸಿ) ಕಲ್ಲಿದ್ದಲಿನ ಸಾಗಾಣಿಕೆ

**ಪ್ರ: ಕಲ್ಲಿದ್ದಲನ್ನು ಬಂದರಿನಿಂದ ವಿದ್ಯುತ್ ಸ್ಥಾವರದ ಸ್ಥಳಕ್ಕೆ ಸಾಮಾನ್ಯವಾಗಿ ಹೇಗೆ ಸಾಗಾಣಿಕೆ ಮಾಡಲಾಗುವುದು?**

ಉ: ರಸ್ತೆ, ರೈಲು ಅಥವಾ ಮುಚ್ಚಿದ ಕನ್ವೇಯರ್ ಬೆಲ್ಟ್ ಮೂಲಕ ಸಾಗಾಣಿಕೆ ಮಾಡಲಾಗುವುದು. ಕಲ್ಲಿದ್ದಲಿನ ಸಾಗಾಣಿಕೆಯು ಬಹಳ ದೂರವನ್ನು ಕ್ರಮಿಸಬೇಕು ಎಂದಾದರೆ, ಯೋಜನಾ ಪ್ರತಿಪಾದಕರು ಸ್ಥಳಕ್ಕೆ ರೈಲು ಸಾರಿಗೆಯ ಸಾಧ್ಯತೆಯನ್ನು ಪಡೆದುಕೊಳ್ಳುವ ಕುರಿತು ನಿರೀಕ್ಷಿಸಬಹುದು. ಮೂಲಸ್ಥಳದಲ್ಲಿ ವ್ಯಾಗನ್‌ಗಳಿಗೆ ಹೇರಿಸುವುದನ್ನು ಹೆಚ್ಚಿನ ವೇಳೆ ಸಿಲೋ/ಕನ್ವೇಯರ್ ಬೆಲ್ಟ್ ಮೂಲಕ ಮಾಡಲಾಗುವುದು.

## 2.4.2 ಹೊಸ ಸ್ಥಾವರಗಳಿಗೆ ಪಾರಿಸರಿಕ ಅನುಮತಿ ಮತ್ತು ಇಐಎ ಪ್ರಕ್ರಿಯೆ

### 2.4.2 (ಎ) ಸಾರ್ವಜನಿಕ ಸಮಾಲೋಚನಾ ಪ್ರಕ್ರಿಯೆ

ಸಾರ್ವಜನಿಕ ಸಮಾಲೋಚನಾ ಪ್ರಕ್ರಿಯೆಯಲ್ಲಿ ಪರಿಣಾಮಕಾರಿ ಭಾಗವಹಿಸುವಿಕೆ ಅಧ್ಯಾಯವನ್ನು ನೋಡಿ

### 2.4.2 (ಬಿ) ಪಾರಿಸರಿಕ ಅನುಮತಿಗೆ ಮೊದಲು

**ಪ್ರ: ಯೋಜನಾ ಸ್ಥಳಕ್ಕೆ ಸಂಬಂಧಿಸಿದಂತೆ, ಪಾರಿಸರಿಕ ಅನುಮತಿಗೆ ಮೊದಲು ಯಾವ ಚಟುವಟಿಕೆಗಳಲ್ಲಿ ಯೋಜನಾ ಪ್ರತಿಪಾದಕರು ತೊಡಗಿಸಿಕೊಳ್ಳಬಹುದು?**

ಉ: ಪಾರಿಸರಿಕ ಅನುಮತಿಗೆ ಮೊದಲು ಎಂಒಇಎಫ್[13] ಸುತ್ತೋಲೆಯ ಪ್ರಕಾರ ಈ ಕೆಳಗಿನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಒಪ್ಪಿಗೆ ಇದೆ:

- ಯೋಜನಾ ಸ್ಥಳದ ಅತಿಕ್ರಮಣವನ್ನು ತಡೆಯಲು ಸ್ಥಳದ ಸುತ್ತಲೂ ಬೇಲಿ ನಿರ್ಮಾಣ
- ಕಾವಲುಗಾರರಿಗೆ ತಾತ್ಕಾಲಿಕ ಶೆಡ್‌ಗಳ ನಿರ್ಮಾಣ

**ಪ್ರ: ಒಂದು ಸ್ಥಾವರವು ಪಾರಿಸರಿಕ ಅನುಮತಿ ಪಡೆಯಲು ಸಾಮಾನ್ಯವಾಗಿ ಎಷ್ಟು ಸಮಯ ತೆಗೆದುಕೊಳ್ಳುತ್ತದೆ?**

ಉ: ಅದು ಸ್ಥಾವರದ ಗಾತ್ರವನ್ನು ಅವಲಂಬಿಸಿದೆ. ಪಾರಿಸರಿಕ ಅನುಮತಿಗೆ ಅರ್ಜಿ ಸಲ್ಲಿಸಿದ ನಂತರ, ಅದನ್ನು ಪಡೆಯಲು ಸಾಮಾನ್ಯವಾಗಿ ಒಂದರಿಂದ ಒಂದೂವರೆ ವರ್ಷ ಸಮಯ ತೆಗೆದುಕೊಳ್ಳುತ್ತದೆ. ಈ ಕೆಳಗಿನವು ಇಐಎ ಅಧಿಸೂಚನೆಯ ಪ್ರಕಾರ ಕಾಲಮಿತಿಗೊಳಪಟ್ಟ ಚಟುವಟಿಕೆಗಳಾಗಿವೆ:

- **ಒಪ್ಪಂದದ ಕರಾರು ನೀಡಿಕೆ:** ಯೋಜನಾ ಪ್ರತಿಪಾದಕರು ಅರ್ಜಿ ಸಲ್ಲಿಸಿದ ೬೦ ದಿನಗಳ ಒಳಗೆ ನೀಡಲಾಗುವುದು
- **ಸಾರ್ವಜನಿಕ ಅಹವಾಲು ನಡೆಸುವುದು:** ಯೋಜನಾ ಪ್ರತಿಪಾದಕರಿಂದ ಸಾರ್ವಜನಿಕ ಅಹವಾಲು ನಡೆಸಲು ಕೋರಿಕೆ ಸ್ವೀಕರಿಸಿದ ೪೫ ದಿನಗಳ ಒಳಗೆ ಎಸ್‌ಪಿಸಿಬಿಯು ಅಹವಾಲು ಸಭೆ ನಡೆಸಿ, ಎಂಒಇಎಫ್/ಎಸ್‌ಇಐಎಎಗೆ ಸಭೆಯ ವರದಿ ಸಲ್ಲಿಸತಕ್ಕದ್ದು.
- **ಪಾರಿಸರಿಕ ಅನುಮತಿ (ಇಸಿ) ನೀಡಿಕೆ:** ಯೋಜನಾ ಪ್ರತಿಪಾದಕರು ಅಂತಿಮ ಇಐಎ ಸಲ್ಲಿಸಿದ ೧೦೫ ದಿನಗಳ ಒಳಗಾಗಿ ನೀಡಲಾಗುವುದು.

13 http://envfor.nic.in/downloads/public-information/Act-prior-EC.pdf

### 2.4.2 (ಸಿ) ಕಲ್ಲಿದ್ದಲು ಮಿಶ್ರಣ ಮತ್ತು ಕಲ್ಲಿದ್ದಲು ಪೂರೈಕೆ ವ್ಯವಸ್ಥೆ (ಕೋಲ್ ಲಿಂಕೇಜ್)

**ಪ್ರ: ಒಂದು ನಿರ್ದಿಷ್ಟ ಕಲ್ಲಿದ್ದಲು ಮಿಶ್ರಣಕ್ಕೆ ಪಾರಿಸರಿಕ ಅನುಮತಿಯನ್ನು ಪಡೆದುಕೊಂಡ ನಂತರ, ಅದನ್ನು ಬದಲಿಸಬೇಕೆಂದಾದರೆ, ಯೋಜನಾ ಪ್ರತಿಪಾದಕರು ಏನು ಮಾಡಬೇಕು?**

ಉ: ಯೋಜನಾ ಪ್ರತಿಪಾದಕರು ಹೊಸ ಇಂಧನ ಮಿಶ್ರಣಕ್ಕಾಗಿ ಮತ್ತೆ ತಾಜಾ ಇಸಿಗೆ ಅರ್ಜಿ ಸಲ್ಲಿಸಬೇಕಾಗುತ್ತದೆ (ಇದನ್ನು ಇಐಎ ಅಧಿಸೂಚನೆಯಲ್ಲಿ [ 2 (iii)] ವಿಧಿಸಲಾಗಿದೆ.)

**ಪ್ರ: ಪಾರಿಸರಿಕ ಅನುಮತಿಯನ್ನು ಪಡೆದುಕೊಳ್ಳುವ ಮೊದಲು ಕಲ್ಲಿದ್ದಲು ಪೂರೈಕೆಗೆ ವ್ಯವಸ್ಥೆ ಮಾಡಿಕೊಳ್ಳಬಹುದೇ?**

ಉ: ಹೌದು, ಮಾಡಿಕೊಳ್ಳಬೇಕು. ಹಾಗೆ ನೋಡಿದರೆ ಅದು ಪಾರಿಸರಿಕ ಅನುಮತಿಯನ್ನು ಪಡೆದುಕೊಳ್ಳಲು ಒಂದು ಪೂರ್ವಭಾವಿ ಅಗತ್ಯ. ಕಲ್ಲಿದ್ದಲಿನ ಮೂಲದ ಕುರಿತ ಅರಣ್ಯ & ಪಾರಿಸರಿಕ ಅನುಮತಿಯ ಸ್ಥಿತಿಗತಿಯನ್ನು - ಅದು ಪೂರೈಕೆಗೆ ಕೊಂಡಿಯಾಗಿರುವ ಕಲ್ಲಿದ್ದಲು ಗಣಿಯಾಗಿರಬಹುದು ಅಥವಾ ಕಲ್ಲಿದ್ದಲು ಬ್ಲಾಕ್ ಆಗಿರಬಹುದು - ಇಐಎಯಲ್ಲಿ ನಿರ್ದಿಷ್ಟಪಡಿಸಬೇಕು. ಆಮದು ಮಾಡಿಕೊಂಡ ಕಲ್ಲಿದ್ದಲನ್ನು ಬಳಸುವುದಾದರೆ, ಕಲ್ಲಿದ್ದಲು ಪೂರೈಕೆದಾರರು ಮತ್ತು ಯೋಜನಾ ಪ್ರತಿಪಾದಕರ ನಡುವಣ ಒಪ್ಪಂದವನ್ನು (ಎಂಒಯು) ಇಐಎ ವರದಿಯಲ್ಲಿ ಸೇರಿಸುವ ಅಗತ್ಯವಿದೆ.[14]

ಕಲ್ಲಿದ್ದಲು ಪೂರೈಕೆ ವ್ಯವಸ್ಥೆಯನ್ನು ನಿರ್ದಿಷ್ಟ ಗಣಿಯ ಮೂಲಕ ಅಥವಾ ಒಂದಿಷ್ಟು ಗಣಿಗಳ ಗುಂಪಿನಿಂದ ಅಥವಾ ಕಲ್ಲಿದ್ದಲು ಸಚಿವಾಲಯದ ಅಥವಾ ಇಂಧನ ಪೂರೈಕೆ ಒಪ್ಪಂದದ ಸ್ಥಾಯಿ ಕೊಂಡಿ ಸಮಿತಿಯು ಒಪ್ಪಿಗೆ ನೀಡಿರುವ ಒಂದು ಮೀಸಲಿಟ್ಟ ಕಲ್ಲಿದ್ದಲು ಬ್ಲಾಕ್‌ನ ಮೂಲಕ ಮಾಡಿಕೊಳ್ಳಬಹುದು.

**ಪ್ರ: ಯಾವ ಕಲ್ಲಿದ್ದಲು ಗುಣಮಟ್ಟ/ವಿಧ (ಕಲ್ಲಿದ್ದಲು ಮಾನದಂಡಗಳು)ವನ್ನು ಆಧರಿಸಿ ಇಸಿಯನ್ನು ನೀಡಲಾಗಿತ್ತೋ, ಅದಕ್ಕಿಂತ ಭಿನ್ನ ಗುಣಮಟ್ಟ/ವಿಧದ ಕಲ್ಲಿದ್ದಲು ಅಗತ್ಯವಿದ್ದರೆ, ಯೋಜನಾ ಪ್ರತಿಪಾದಕರು ಏನು ಮಾಡಬೇಕು?**

ಉ: ಕಲ್ಲಿದ್ದಲು ಮಾನದಂಡಗಳು ಬದಲಾದರೆ, ಯೋಜನಾ ಪ್ರತಿಪಾದಕರು ಅದನ್ನು ಎಂಒಇಎಫ್‌ನ ಗಮನಕ್ಕೆ ತರಬೇಕು. ಎಂಒಇಎಫ್ ಅದನ್ನು ಮೌಲ್ಯಮಾಪನ ಮಾಡಿ, ಅಗತ್ಯವಿದ್ದರೆ ಹೊಸ ಮತ್ತು ಹೆಚ್ಚುವರಿ ಕರಾರುಗಳನ್ನು ಸೇರಿಸುತ್ತಾರೆ.

### 2.4.2 (ಡಿ) ಇಐಎ ಪ್ರಕ್ರಿಯೆಯಲ್ಲಿ ಸಾರ್ವಜನಿಕ ಪ್ರಾಧಿಕಾರಗಳು

**ಪ್ರ: ಯಾವ ಸಾರ್ವಜನಿಕ ಪ್ರಾಧಿಕಾರಗಳು/ಸರ್ಕಾರಿ ಕಚೇರಿಗಳು ಇಸಿ ಪ್ರಕ್ರಿಯೆಯಲ್ಲಿ ಒಳಗೊಂಡಿವೆ?**

ಉ: ಎಂಒಇಎಫ್ ಮತ್ತು ಎಸ್‌ಇಐಎಎಗಳು ಪಾರಿಸರಿಕ ಅನುಮತಿಯನ್ನು ನೀಡುವ ನಿಯಂತ್ರಕ ಪ್ರಾಧಿಕಾರಗಳಾಗಿವೆ. ಎ ವರ್ಗದ ಯೋಜನೆಗಳಿಗೆ ಎಂಒಇಎಫ್ ಅನುಮತಿ ನೀಡುತ್ತದೆ, ಎಸ್‌ಇಐಎಎ ಬಿ ವರ್ಗದ ಯೋಜನೆಗಳಿಗೆ ಅನುಮತಿಯನ್ನು ನೀಡುತ್ತದೆ.

ಎಂಒಇಎಫ್‌ನಿಂದ ಎಸ್‌ಪಿಸಿಬಿಗೆ ಸಾರ್ವಜನಿಕ ಸಮಾಲೋಚನೆಯನ್ನು ನಡೆಸುವ ಕಾರ್ಯವನ್ನು ವಹಿಸಿಕೊಡಲಾಗಿದ್ದು, ನಂತರ ಎಸ್‌ಪಿಸಿಬಿಯು ಸಾರ್ವಜನಿಕ ಸಮಾಲೋಚನೆಯ ವರದಿಯನ್ನು ಸಲ್ಲಿಸುತ್ತದೆ.

**ಪ್ರ: ಎಸ್‌ಇಐಎಎ ರಾಜ್ಯದ ಸರ್ಕಾರದ ಒಂದು ಮಂಡಳಿಯೇ ಅಥವಾ ಕೇಂದ್ರ ಸರ್ಕಾರದ ಮಂಡಳಿಯೇ?**

ಉ: ಇದು ಕೇಂದ್ರ ಸರ್ಕಾರದ ಮಂಡಳಿಯಾಗಿದೆ. ಆದರೆ ಅದರ ಸದಸ್ಯ ಕಾರ್ಯದರ್ಶಿ ಮತ್ತು ಅಧ್ಯಕ್ಷರನ್ನು ಆಯಾ ರಾಜ್ಯ ಸರ್ಕಾರಗಳು ನೇಮಿಸುತ್ತವೆ. ಸದಸ್ಯ ಕಾರ್ಯದರ್ಶಿಯು ಆಯಾ ರಾಜ್ಯ ಸರ್ಕಾರಗಳಿಗೆ ಸೇವೆ ಸಲ್ಲಿಸುವ ಅಧಿಕಾರಿಯಾಗಿರುತ್ತಾರೆ.

---

14 http://moef.nic.in/downloads/public-information/Coal-blocks.pdf

### 2.4.2 (ಇ) ಪ್ರಾದೇಶಿಕ ಭಾಷೆಯಲ್ಲಿ ಲಭ್ಯವಿರುವ ದಾಖಲೆಗಳು

**ಪ್ರ: ಇಐಎ ಪ್ರಕ್ರಿಯೆಯಲ್ಲಿ, ಇಂಗ್ಲಿಷ್ ಜೊತೆಗೆ, ಪ್ರಾದೇಶಿಕ (ಸ್ಥಳೀಯ) ಭಾಷೆಯಲ್ಲಿ ಲಭ್ಯವಿರುವ ದಾಖಲೆಗಳು ಯಾವುವು?**

ಉ: ಪ್ರಾದೇಶಿಕ (ಸ್ಥಳೀಯ) ಭಾಷೆಯಲ್ಲಿ ಲಭ್ಯವಿರುವ ದಾಖಲೆಗಳು ಹೀಗಿವೆ:

೧. ಸಾರ್ವಜನಿಕ ಅಹವಾಲು ಸಭೆಗೆ ಮೊದಲೇ, ಕರಡು ಇಐಎ ಸಂಕ್ಷಿಪ್ತ ಸಾರಾಂಶ.

೨. ಸಾರ್ವಜನಿಕ ಅಹವಾಲು ಸಭೆಯಲ್ಲಿ ಸಾರ್ವಜನಿಕರು ಎತ್ತಿದ ಸಮಸ್ಯೆಗಳ ಮತ್ತು ಯೋಜನಾ ಪ್ರತಿಪಾದಕರು ನೀಡಿದ ಪ್ರತಿಕ್ರಿಯೆಗಳ ಒಂದು ಹೇಳಿಕೆ. ಇದನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕ್ರೋಡೀಕರಿಸುತ್ತದೆ.

### 2.4.2 (ಎಫ್) ಸ್ಥಳ ಭೇಟಿ

**ಪ್ರ: ಯಾವುದೇ ಸಮೀಕ್ಷೆ ಅಥವಾ ಅಧ್ಯಯನ ಮಾಡಲು ಯಾರು ಯೋಜನಾ ಸ್ಥಳಕ್ಕೆ ಭೇಟಿ ನೀಡುತ್ತಾರೆ?**

ಉ: ಮಾನ್ಯತೆ ಹೊಂದಿರುವ ಇಐಎ ಸಮಾಲೋಚಕರು ಪ್ರಸ್ತಾಪಿತ ಯೋಜನಾ ಸ್ಥಳದ ಹಾಗೂ ಅಕ್ಕಪಕ್ಕದ ಪ್ರದೇಶಗಳ ಸಮೀಕ್ಷೆಗಳನ್ನು ಮಾಡುತ್ತಾರೆ. ಎನ್‌ಜಿಟಿ ಆದೇಶವೊಂದರ ಪ್ರಕಾರ,[15] ಇಐಎ ಸಮಾಲೋಚಕರು ಆ ಪ್ರದೇಶದ ಸಮಾಜೋ-ಆರ್ಥಿಕ ದತ್ತಾಂಶಗಳ ಕುರಿತು ಒಂದಿಷ್ಟು ಪ್ರಾಥಮಿಕ ದತ್ತಾಂಶ/ಮಾಹಿತಿಗಳನ್ನು ಸಂಗ್ರಹಿಸುತ್ತಾರೆ ಮತ್ತು ಪರಿಸರ ನಿರ್ವಹಣಾ ಯೋಜನೆಯನ್ನು ರೂಪಿಸಲು ಯೋಜನಾ ಸ್ಥಳದಲ್ಲಿರುವ ಜನರ ಮೂಲಭೂತ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳಲು ಪ್ರಾಥಮಿಕ ಸಮೀಕ್ಷೆಯನ್ನು ನಡೆಸುತ್ತಾರೆ. ಒಪ್ಪಂದದ ಕರಾರಿನಲ್ಲಿ ಯೋಜನಾ ಸ್ಥಳದ ಸುತ್ತಮುತ್ತ ಇಐಎಗಾಗಿ ಎಷ್ಟು ದೂರದಲ್ಲಿ ಸಮೀಕ್ಷೆ ಮಾಡಬೇಕೆಂಬುದನ್ನು ಕಟ್ಟುನಿಟ್ಟಾಗಿ ವಿಧಿಸಲಾಗಿರುತ್ತದೆ.

**ಪ್ರ: ಇಎಸಿ/ಎಸ್‌ಇಎಸಿ ಸದಸ್ಯರು ಯಾವಾಗ ಸ್ಥಳ ಭೇಟಿಗೆ ಹೋಗಬಹುದು?**

ಉ: ಇಎಸಿಯ ಉಪ-ಸಮಿತಿಯು ಇಸಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿಯಾದರೂ ಸ್ಥಳ ಭೇಟಿಗೆ ಹೋಗಬಹುದು. ಇದನ್ನು ಸಾಮಾನ್ಯವಾಗಿ ಟಿಒಆರ್ ನೀಡುವ ಮೊದಲು ಮತ್ತು/ಅಥವಾ ಕರಡು ಇಐಎ ಸಲ್ಲಿಸಿದ ನಂತರ ನಡೆಸಬಹುದು.

### 2.4.2 (ಜಿ) ಒಪ್ಪಂದದ ಕರಾರುಗಳು (ಟಿಒಆರ್)

**ಪ್ರ: ಒಪ್ಪಂದದ ಕರಾರುಗಳನ್ನು ಮತ್ತು ಇಐಎ ವ್ಯಾಪ್ತಿಯನ್ನು ಯಾರು ರೂಪಿಸುತ್ತಾರೆ?**

ಉ: ಇಎಸಿ/ಎಸ್‌ಇಎಸಿ ರೂಪಿಸುತ್ತಾರೆ.

ಇಎಸಿ/ಎಸ್‌ಇಎಸಿ ನೀಡಿದ ಒಪ್ಪಂದದ ಕರಾರು ಇಐಎಯ ಪ್ರಮಿತಿಗಳನ್ನು [ಉದಾ: ಅಧ್ಯಯನದ ಕಾಲಾವಧಿ (ಋತುಗಳ ಸಂಖ್ಯೆಗಳು)], ಅಧ್ಯಯನದ ವ್ಯಾಪ್ತಿ (ಪ್ರಸ್ತಾಪಿತ ಯೋಜನಾ ಸ್ಥಳದ ಸುತ್ತಲೂ ಎಷ್ಟು ಕಿ.ಮೀ.) ಇತ್ಯಾದಿಗಳನ್ನು ನಿರ್ಧರಿಸುತ್ತದೆ.

### 2.4.2 (ಎಚ್) ಅಂತಿಮ ಇಐಎ

**ಪ್ರ: ಕರಡು ಇಐಎ ಮತ್ತು ಅಂತಿಮ ಇಐಎ ನಡುವೆ ಎಷ್ಟರ ಮಟ್ಟಿನ ವ್ಯತ್ಯಾಸಕ್ಕೆ ಆಸ್ಪದವಿದೆ?**

ಉ: ಅಂತಿಮ ಇಐಎ ವರದಿಯು ಕರಡು ವರದಿಗಿಂತ ತುಂಬ ವ್ಯತ್ಯಾಸವಾಗುವಂತಿಲ್ಲ. ಸಾರ್ವಜನಿಕ ಸಮಾಲೋಚನೆಯ ಭಾಗವಾಗಿ ಗುರುತಿಸಲಾದ ಬದಲಾವಣೆಗಳನ್ನು ಮಾಡಲು ಮಾತ್ರ ಆಸ್ಪದವಿದೆ.

ಸಾರ್ವಜನಿಕ ಅಹವಾಲು ಸಭೆಗೆ ಮೊದಲು ಸಿದ್ಧಗೊಳಿಸಿ, ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿದ ಇಐಎ ವರದಿಯನ್ನು ಕರಡು ಇಐಎ ವರದಿ ಎನ್ನುತ್ತಾರೆ. ಅದು ಎಲ್ಲ ಮೂಲಾಧಾರ ಅಧ್ಯಯನದ ಮಾಹಿತಿಯನ್ನು,

15 Link to Judgment:http://www.indiankanoon.org/doc/161693875/

ಪರಿಸರದ ಮೇಲಾಗುವ ದುಷ್ಪರಿಣಾಮಗಳನ್ನು ಕಡಿಮೆಗೊಳಿಸುವ/ತಗ್ಗಿಸುವ ಕ್ರಮಗಳನ್ನು ಮತ್ತು ಒಪ್ಪಂದದ ಕರಾರಿನಲ್ಲಿ ವಿಧಿಸಲಾದ ಯಾವುದೇ ವಿಶೇಷವಾದ ಅಧ್ಯಯನ, ಎಲ್ಲವನ್ನೂ ಒಳಗೊಂಡಿರಬೇಕು.

ಸಾರ್ವಜನಿಕ ಸಮಾಲೋಚನಾ ಪ್ರಕ್ರಿಯೆ ನಂತರ ಇಐಎ ವರದಿಯನ್ನು ಪರಿಷ್ಕರಿಸಿ, ಸಾರ್ವಜನಿಕರ ಕಾಳಜಿಗಳನ್ನು ಮತ್ತು ಈ ಕಾಳಜಿಗಳನ್ನು ಉದ್ದೇಶಿಸಲು ತೆಗೆದುಕೊಳ್ಳುವ ಹೆಚ್ಚುವರಿ ಕ್ರಮಗಳನ್ನು ಒಳಗೊಂಡು, ಸಲ್ಲಿಸಲಾಗುವ ವರದಿಯೇ ಅಂತಿಮ ಇಐಎ. ಒಪ್ಪಂದದ ಕರಾರಿನಲ್ಲಿ ನಿರ್ದೇಶಿಸಿದ ಹಾಗೆ ಸಾರ್ವಜನಿಕ ಸಮಾಲೋಚನಾ ಪ್ರಕ್ರಿಯೆಯ ನಂತರ ಮೂಲಾಧಾರ ದತ್ತಾಂಶದಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಬಾರದು, ಆದರೆ ಯಾವುದಾದರೂ ವಿಶೇಷ ಅಧ್ಯಯನದ ಮಾಹಿತಿಯನ್ನು ಸೇರಿಸಬಹುದು.

**ಪ್ರ: ಯೋಜನಾ ಸ್ಥಳದ ಪ್ರಸ್ತುತ ಪಾರಿಸರಿಕ ಸ್ಥಿತಿಯನ್ನು ಅಧ್ಯಯನ ಮಾಡಲಾಗುವುದೇ?**

ಉ: ಹೌದು! ಪ್ರಸ್ತಾಪಿತ ಯೋಜನಾ ಸ್ಥಳದ ಪರಿಸರ ಮತ್ತು ಅದರ ಅಕ್ಕಪಕ್ಕದ ಪ್ರದೇಶವನ್ನು ಮೂಲಾಧಾರ ಮಾಹಿತಿ ಅಧ್ಯಯನದ ಭಾಗವಾಗಿ ಮಾನ್ಯತೆ ಪಡೆದ ಇಐಎ ಸಮಾಲೋಚಕರು ಕೈಗೆತ್ತಿಕೊಳ್ಳುತ್ತಾರೆ. ಇಐಎ ಅಧ್ಯಯನಕ್ಕೆ ಪರಿಗಣಿಸಬೇಕಾದ ಅಧ್ಯಯನದ ಪ್ರದೇಶವನ್ನು ಎಂಒಇಎಫ್/ಎಸ್ಇಐಎಎನಿಂದ ನೀಡಲಾದ ಒಪ್ಪಂದದ ಕರಾರಿನಲ್ಲಿ ಹೇಳಲಾಗುತ್ತದೆ. ಇಐಎ ವರದಿಯು ಪರಿಸರದ ವಿವಿಧ ಘಟಕಗಳ ಮೌಲ್ಯಮಾಪನವನ್ನು ಒಳಗೊಂಡಿದ್ದು, ಸುತ್ತುವರಿದ ಗಾಳಿಯ ಶಬ್ದ, ಅಂತರ್ಜಲ ನೀರು, ಜೀವವಿಜ್ಞಾನ, ಭೂಮಿ, ಸಮಾಜೋ-ಆರ್ಥಿಕ ಅಂಶಗಳು ಸೇರಿದಂತೆ ಒಟ್ಟು ೧೨ ಅಂಶಗಳನ್ನು ಒಳಗೊಂಡಿದ್ದು, ಇವನ್ನು ೧೨ ಕಾರ್ಯಕಾರಿ ಕ್ಷೇತ್ರಗಳು ಎನ್ನಲಾಗುತ್ತದೆ.

**ಪ್ರ: ಇಐಎ ಅಧ್ಯಯನವನ್ನು ನಡೆಸಲು ಸಾಮಾನ್ಯವಾಗಿ ಎಷ್ಟು ಸಮಯ ಹಿಡಿಯುತ್ತದೆ?**

ಉ: ಅದು ಒಪ್ಪಂದದ ಕರಾರಿನಲ್ಲಿ ನಿರ್ದಿಷ್ಟಪಡಿಸಿದ ಅಧ್ಯಯನದ ವ್ಯಾಪ್ತಿಯನ್ನು ಅವಲಂಬಿಸಿರುತ್ತದೆ. ಇಐಎ ಅಧ್ಯಯನವು ಕನಿಷ್ಠ ೩ ತಿಂಗಳು (ಒಂದು ಋತು) ಅಥವಾ ೧ ವರ್ಷದವರೆಗೆ ಸಮಯ ತೆಗೆದುಕೊಳ್ಳುತ್ತದೆ.

**ಪ್ರ: ಅಂತಿಮ ಇಐಎ ವರದಿಯು ಸಾರ್ವಜನಿಕರ ಪರಿವೀಕ್ಷಣೆಗೆ ಲಭ್ಯವಿರುತ್ತದೆಯೇ?**

ಉ: ಎಂಒಇಎಫ್ ಆಗಸ್ಟ್ ೨೦೦೩ರಲ್ಲಿ ಹೊರಡಿಸಲಾದ ಒಂದು ಸುತ್ತೋಲೆಯ ಪ್ರಕಾರ ಎಂಒಇಎಫ್/ಎಸ್ಇಐಎಎ ಅಂತಿಮ ಇಐಎ ವರದಿಯನ್ನು ಪಾರಿಸರಿಕ ಅನುಮತಿ ನೀಡುವ ಮೊದಲು ತಮ್ಮ ಜಾಲತಾಣದಲ್ಲಿ ಅಪ್‌ಲೋಡ್ ಮಾಡಬೇಕಾಗುತ್ತದೆ. ಅಂತಿಮ ಇಐಎದಲ್ಲಿ ಏನಾದರೂ ಆಕ್ಷೇಪಣಾರ್ಹ ಭಾಗಗಳಿದ್ದರೆ, ಸಾರ್ವಜನಿಕರು ಅದನ್ನು ಎಂಒಇಎಫ್ ಗಮನಕ್ಕೆ ತರಬಹುದಾಗಿದೆ ಅಥವಾ ಎನ್ಜಿಟಿಯಲ್ಲಿ ಮೊಕದ್ದಮೆ ಹೂಡಬಹುದು.

### 2.4.2 (ಐ) ಇಐಎ ಸಮಾಲೋಚಕರು

**ಪ್ರ: ಇಐಎ ಸಮಾಲೋಚಕರ ಅಗತ್ಯವೇನು ಮತ್ತು ಅವರ ಜವಾಬ್ದಾರಿಗಳೇನು?**

ಉ: ಒಂದು ಪ್ರಸ್ತಾಪಿತ ಸ್ಥಾವರದ ಪಾರಿಸರಿಕ ಪರಿಣಾಮಗಳನ್ನು ಮೌಲ್ಯಮಾಪನ ಮಾಡಲು, ಯೋಜನಾ ಪ್ರತಿಪಾದಕರು ಶಿಕ್ಷಣ ಮತ್ತು ತರಬೇತಿಯ ರಾಷ್ಟ್ರೀಯ ಪ್ರಮಾಣೀಕರಣ ಮಂಡಳಿ(ಎನ್‌ಎಬಿಇಟಿ)/ಭಾರತೀಯ ಗುಣಮಟ್ಟ ಮಂಡಳಿ (ಕ್ಯುಸಿಐ)ಯಿಂದ ಮಾನ್ಯತೆ ಪಡೆದಿರುವ ಸಮಾಲೋಚಕರ ಸೇವೆಯನ್ನು ಪಡೆದುಕೊಳ್ಳಬೇಕಾಗುತ್ತದೆ.

ಯೋಜನೆಯೊಂದರ ಇಐಎ ವರದಿಯನ್ನು ಮಾನ್ಯತೆ ಪಡೆದ ಸಮಾಲೋಚಕರು ಮಾಡದಿದ್ದರೆ, ಅದನ್ನು ಅನುಮತಿಗೆ ಪರಿಗಣನೆ ಮಾಡುವುದಿಲ್ಲ. ಟಿಪಿಪಿ ಒಂದಕ್ಕೆ ಇಐಎ ನಡೆಸುವ ಕಾರ್ಯವನ್ನು ವಹಿಸಿಕೊಂಡ ಸಮಾಲೋಚಕರು ಆ ನಿರ್ದಿಷ್ಟ ವಲಯದಲ್ಲಿ ಮಾನ್ಯತೆ ಪಡೆದಿರಬೇಕು.

ಈ ಕೆಳಗಿನ ಕೊಂಡಿಯಲ್ಲಿ ಮಾನ್ಯತೆ ಪಡೆದಿರುವ ಸಮಾಲೋಚಕರ ಪಟ್ಟಿಯನ್ನು ನೋಡಬಹುದಾಗಿದೆ:

http://nabet.qci.org.in/environment/pop.asp?file=documents/Annexure7.pdf

**ಪ್ರ: ಯೋಜನೆಯ ಇಐಎ ಸಮಾಲೋಚಕ ತಂಡದಲ್ಲಿ ಯಾರೆಲ್ಲ ಇರುತ್ತಾರೆ ಮತ್ತು ತಂಡದ ಪಾತ್ರವೇನು?**

ಉ: ಯೋಜನೆಯ ಇಐಎ ಸಮಾಲೋಚಕ ತಂಡದ ನೇತೃತ್ವವನ್ನು ಇಐಎ ಪ್ರಕ್ರಿಯೆಗಳು, ನಿಯಮಗಳು ಮತ್ತು ಕಾಯಿದೆಗಳು, ವಲಯದ ಕುರಿತ ಜ್ಞಾನ, ವಲಯಕ್ಕೆ ಸಂಬಂಧಿಸಿದಂತೆ ಸಂಭವನೀಯ ಪಾರಿಸರಿಕ ಪರಿಣಾಮಗಳು ಮತ್ತು ಇಐಎ ತಂಡವನ್ನು ಆಯ್ಕೆ ಮಾಡಿಕೊಂಡು, ಮಾರ್ಗದರ್ಶನ ನೀಡುವ, ಯೋಜನೆ ರೂಪಿಸುವ ನಾಯಕತ್ವದ ಗುಣಗಳಿರುವ ಇಐಎ ಸಂಯೋಜಕರೊಬ್ಬರು ವಹಿಸಿಕೊಳ್ಳುತ್ತಾರೆ.

ಇಐಎ ಸಂಯೋಜಕರಲ್ಲದೇ, ತಂಡವು ೧೨ ನಿರ್ದಿಷ್ಟಪಡಿಸಿದ ಕ್ಷೇತ್ರಗಳಿಗೆ ಕಾರ್ಯಕಾರಿ ಕ್ಷೇತ್ರ ತಜ್ಞರನ್ನು (ಎಫ್‌ಎಇ) ಒಳಗೊಂಡಿರುತ್ತದೆ.

ಈ ಕ್ಷೇತ್ರಗಳು ಹೀಗಿವೆ:

೧. ಭೂಮಿ ಬಳಕೆ

೨. ವಾಯು ಮಾಲಿನ್ಯ ಮೇಲ್ವಿಚಾರಣೆ, ಸಂರಕ್ಷಣೆ ಮತ್ತು ನಿಯಂತ್ರಣ

೩. ಪವನಶಾಸ್ತ್ರ, ವಾಯು ಗುಣಮಟ್ಟ ಮಾದರಿ ಮತ್ತು ಊಹೆ/ಅಂದಾಜು

೪. ಜಲ ಮಾಲಿನ್ಯ ಮೇಲ್ವಿಚಾರಣೆ, ಸಂರಕ್ಷಣೆ ಮತ್ತು ನಿಯಂತ್ರಣ

೫. ಪರಿಸರವಿಜ್ಞಾನ ಮತ್ತು ಜೀವವೈವಿಧ್ಯತೆ

೬. ಶಬ್ದ ಮತ್ತು ಕಂಪನ

೭. ಸಮಾಜೋ-ಆರ್ಥಿಕ ಅಂಶಗಳು

೮. ಜಲವಿಜ್ಞಾನ, ಅಂತರ್ಜಲ ಮತ್ತು ನೀರಿನ ಸಂರಕ್ಷಣೆ

೯. ಭೂವಿಜ್ಞಾನ

೧೦. ಮಣ್ಣು ಸಂರಕ್ಷಣೆ

೧೧. ಅಪಾಯಗಳು ಮತ್ತು ಹಾನಿಯ ನಿರ್ವಹಣೆ

೧೨. ಘನ ಮತ್ತು ಅಪಾಯಕಾರಿ ತ್ಯಾಜ್ಯ ನಿರ್ವಹಣೆ (ಮುನ್ಸಿಪಲ್ ಘನ ತ್ಯಾಜ್ಯವನ್ನೂ ಒಳಗೊಂಡು)

ತಜ್ಞರ ಕನಿಷ್ಠ ಅರ್ಹತೆಗಳ ಬಗ್ಗೆ ಈ ಕೊಂಡಿಯಲ್ಲಿ ನೀಡಲಾಗಿದೆ:

http://nabet.qci.org.in/environment/pop.asp?file=documents/EIA_Scheme.pdf&heading=About%20EIA%20Consultant%20Organizations%20Scheme

ತಂಡದ ಸದಸ್ಯರು, ಅಗತ್ಯವಾದ ಅರ್ಹತಾ ಮಾನದಂಡಗಳ ಜೊತೆಗೆ, ಇಐಎ ಸಂಯೋಜಕರು ಹಾಗೂ ಕಾರ್ಯಕಾರಿ ಕ್ಷೇತ್ರದ ತಜ್ಞರೂ ಆಗಿರಬಹುದು. ಒಬ್ಬರು ತಜ್ಞರು ಕಾರ್ಯಕಾರಿ ಕ್ಷೇತ್ರದ ತಜ್ಞರಾಗಿ ಗರಿಷ್ಠ ೪ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಬಹುದಾಗಿದೆ ಅಥವಾ ಒಬ್ಬರು ಇಐಎ ಸಂಯೋಜಕರು ಹೆಚ್ಚೆಂದರೆ ೫ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಬಹುದಾಗಿದೆ.

## 2.4.2 (ಜೆ) ಪರಿಸರ ಅನುಮತಿ ನೀಡಿದ ನಂತರ

**ಪ್ರ: ಒಮ್ಮೆ ಇಸಿ ನೀಡಿದ ನಂತರ, ಯೋಜನಾ ಪ್ರತಿಪಾದಕರು ಸ್ಥಾವರದ ನಿರ್ಮಾಣವನ್ನು ಪ್ರಾರಂಭಿಸಬಹುದೇ?**
ಉ: ಇಲ್ಲ! ಯೋಜನಾ ಪ್ರತಿಪಾದಕರು ಆಯಾ ಎಸ್‌ಪಿಸಿಬಿಗೆ 'ಸ್ಥಾಪನೆಗೆ ಒಪ್ಪಿಗೆ' ಕೋರಿ, ಅರ್ಜಿಯನ್ನು ಸಲ್ಲಿಸಬೇಕು. ಅದನ್ನು ಪಡೆದುಕೊಂಡ ನಂತರ, ಸ್ಥಾವರದ ನಿರ್ಮಾಣವನ್ನು ಪ್ರಾರಂಭ ಮಾಡಬಹುದು.

ಸ್ಥಾವರದಲ್ಲಿ ಕಾರ್ಯಾಚರಣೆಗಳನ್ನು ಆರಂಭಿಸುವ ಮೊದಲು, ಎಸ್‌ಪಿಸಿಬಿಯಿಂದ 'ಕಾರ್ಯಾಚರಣೆಗೆ ಒಪ್ಪಿಗೆ'ಯನ್ನು ಪಡೆದುಕೊಳ್ಳಬೇಕಾಗುತ್ತದೆ.

## 2.4.2 (ಕೆ) ಚಿಮಣಿ ಎತ್ತರ

**ಪ್ರ: ಚಿಮಣಿ ಎತ್ತರಕ್ಕೆ ಏನಾದರೂ ಮಾನದಂಡಗಳಿವೆಯೇ?**

ಉ: ಉಷ್ಣ ವಿದ್ಯುತ್ ಸ್ಥಾವರಗಳಿಗೆ ಅಗತ್ಯವಾದ ಚಿಮಣಿಯ ಎತ್ತರವನ್ನು ೧೯೮೬ರ ಪರಿಸರ ಸಂರಕ್ಷಣಾ ಕಾಯಿದೆಯ ಅಡಿಯಲ್ಲಿ ಅಧಿಸೂಚನೆ ಹೊರಡಿಸಲಾಗಿದೆ.

| | | |
|---|---|---|
| ಸ್ಥಾವರದ ಸಾಮರ್ಥ್ಯ | : | ಚಿಮಣಿ ಎತ್ತರ |
| > ೫೦೦ ಮೆ.ವ್ಯಾ. | : | ೨೭೫ ಮೀಟರಗಳು |
| ೨೧೦ ಮೆ.ವ್ಯಾ. - ೫೦೦ ಮೆ.ವ್ಯಾ. | : | ೨೨೦ ಮೀಟರ್‌ಗಳು |
| ೨೧೦ ಮೆ.ವ್ಯಾ.ಗಿಂತ ಕಡಿಮೆ ಇದ್ದರೆ | : | ಎತ್ತರ =೧೪ ಕ್ಯು ೦.೩ (ಕ್ಯು ಎಂದರೆ ಗಂಧಕದ |

ಡಯಾಕ್ಸೈಡ್ ($SO_2$) ಕೆ.ಜಿ./ಗಂಟೆಗೆ ಹೊರಸೂಸುವಿಕೆ ಮತ್ತು ಎತ್ತರವು ಮೀಟರ್‌ಗಳಲ್ಲಿ)

## 2.4.2 (ಎಲ್) ಅನುಮತಿ ಇರುವ ಮಾಲಿನ್ಯದ ಮಟ್ಟ

**ಪ್ರ: ಟಿಪಿಪಿಗಳಿಗೆ ಅನುಮತಿ ಇರುವ ಮಾಲಿನ್ಯದ ಮಟ್ಟ ಎಷ್ಟು?**

ಉ: ಪರಿಸರ ಸಂರಕ್ಷಣಾ ಕಾಯಿದೆ ೧೯೮೬ರ ಅಡಿಯಲ್ಲಿ ಮತ್ತು ಕಾಲಕಾಲಕ್ಕೆ ಹೊರಡಿಸಲಾದ ಅಧಿಸೂಚನೆಗಳಲ್ಲಿ ಪಾರಿಸರಿಕ ಮಾಲಿನ್ಯಕಾರಕಗಳ ಹೊರಸೂಸುವಿಕೆ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ವಿವಿಧ ಪ್ರಮಿತಿಗಳ ಒಂದು ಕ್ರೋಡೀಕರಣವನ್ನು ಉಷ್ಣ ವಿದ್ಯುತ್ ಸ್ಥಾವರಗಳ ತಾಂತ್ರಿಕ ಇಐಎ ಮಾರ್ಗದರ್ಶಿ ಕೈಪಿಡಿಯ ಅನುಬಂಧಗಳಲ್ಲಿ ನೋಡಬಹುದಾಗಿದೆ. ಕೈಪಿಡಿಯನ್ನು ಈ ಜಾಲತಾಣದಲ್ಲಿ ಪಡೆದುಕೊಳ್ಳಬಹುದು: http://environmentclearance.nic.in/writereaddata/Form-1A/HomeLinks/TGM_Thermal%20Power%20Plants_010910_NK.pdf

## 2.4.2 (ಎಂ) ಭೂ ಸ್ವಾಧೀನ

**ಪ್ರ: ಯೋಜನಾ ಪ್ರತಿಪಾದಕರು ಯಾವ ಹಂತದಲ್ಲಿ ಯೋಜನೆಗೆ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಬಲ್ಲರು?**

ಉ: ಯೋಜನಾ ಪ್ರತಿಪಾದಕರು ಪಾರಿಸರಿಕ ಅನುಮತಿಗೆ ಅರ್ಜಿ ಸಲ್ಲಿಸುವ ಮೊದಲೇ ಭೂ ಸ್ವಾಧೀನಪಡಿಸಿಕೊಳ್ಳಲು ಆರಂಭಿಸಬಹುದು. ಆದರೆ ಯೋಜನೆಗೆ ಅಗತ್ಯವಾದ ಎಲ್ಲ ಭೂಮಿಯನ್ನೂ ಯೋಜನಾ ಪ್ರತಿಪಾದಕರು ಈ ಹಂತದಲ್ಲಿ ಕೊಳ್ಳುವುದು ಕಡ್ಡಾಯವೇನಲ್ಲ. ಇದು ಮಾನ್ಯತೆ ಪಡೆದ ಇಐಎ ಸಮಾಲೋಚನ ಸಂಸ್ಥೆಯು ಸಂಭಾವ್ಯ ಸಮಾಜೋ-ಆರ್ಥಿಕ ಸಮಸ್ಯೆಗಳು ಮತ್ತು ಪುನಸ್ಥಾಪನೆ & ಪುನರ್ವಸತಿಗಾಗಿ ವಿಚಾರಣೆ ನಡೆಸಬೇಕಾದ ಒಂದು ಪ್ರದೇಶವಾಗಿದೆ.

**ಪ್ರ: ಯೋಜನೆಗೆ ಅಗತ್ಯವಾದ ಭೂಮಿಯ ದರವನ್ನು ಹೇಗೆ ನಿರ್ಧರಿಸಲಾಗುತ್ತದೆ?**

ಉ: ಇತ್ತೀಚೆಗೆ ಬಂದ ಒಂದು ಕಾಯಿದೆ, ಭೂ ಸ್ವಾಧೀನ, ಪುನಸ್ಥಾಪನೆ ಮತ್ತು ಪುನರ್ವಸತಿಯಲ್ಲಿ ನ್ಯಾಯಬದ್ಧ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು, ೨೦೧೩ರ ಅಡಿಯಲ್ಲಿ ಪರಿಹಾರ ಲೆಕ್ಕಹಾಕಲಿಕ್ಕೆ ಒಂದು ಸೂತ್ರವಿದೆ ಮತ್ತು ಜಿಲ್ಲಾಧಿಕಾರಿಯವರು ಇದಕ್ಕೆ ಅಗತ್ಯವಾದ ಕಾರ್ಯವಿಧಾನ ಅನುಸರಿಸಲಾಗುತ್ತಿದೆ ಎಂಬುದನ್ನು ಖಾತ್ರಿಪಡಿಸಬೇಕಾಗುತ್ತದೆ.

## 2.4.3 ಸದ್ಯ ಇರುವ ಸ್ಥಾವರಗಳು

**ಪ್ರ: ಹಸಿರುಕ್ಷೇತ್ರ (ಗ್ರೀನ್‌ಫೀಲ್ಡ್) ಯೋಜನೆ ಮತ್ತು ಕಂದುಕ್ಷೇತ್ರ (ಬ್ರೌನ್‌ಫೀಲ್ಡ್) ಯೋಜನೆ ನಡುವೆ ವ್ಯತ್ಯಾಸಗಳೇನು?**

ಉ: ಪ್ರಸ್ತಾಪಿತ ಯೋಜನೆಯು ಆ ಸ್ಥಳದಲ್ಲಿ ಹೊಸದಾಗಿದ್ದರೆ, ಆಗ ಅದನ್ನು ಒಂದು ಹಸಿರುಕ್ಷೇತ್ರ ಯೋಜನೆ ಎಂದು ಕರೆಯಲಾಗುತ್ತದೆ. ಅಂತಹ ಯೋಜನೆಗೆ ಆ ಯೋಜನಾ ಪ್ರದೇಶದಲ್ಲಿ ಮೂಲಾಧಾರ ಅಧ್ಯಯನ ಮಾಡುವುದು ಅಗತ್ಯವಿದೆ ಮತ್ತು ಯೋಜನೆಯ ಕಾರ್ಯಾಚರಣೆಯ ನಂತರ ನಿರೀಕ್ಷಿತ ಬದಲಾವಣೆಗಳೊಂದಿಗೆ ಪರಿಣಾಮ ಮೌಲ್ಯಮಾಪನ ಹಾಗೂ ದುಷ್ಪರಿಣಾಮ ತಗ್ಗಿಸಲು ಅಗತ್ಯವಿರುವ ಕ್ರಮಗಳ ಅಧ್ಯಯನವೂ ಅಗತ್ಯವಿರುತ್ತದೆ.

ಕಂದುಕ್ಷೇತ್ರ ಯೋಜನೆ ಎಂದರೆ ಈಗಾಗಲೇ ಕಾರ್ಯಾಚರಣೆಯಲ್ಲಿರುವ ಯೋಜನಾ ಸ್ಥಳದ ವಿಸ್ತರಣೆ. ಅಂತಹ ಯೋಜನೆಗಳಿಗೆ, ಮೂಲಾಧಾರ ಅಧ್ಯಯನಗಳು ಈಗಾಗಲೇ ಇರುವ ದುಷ್ಪರಿಣಾಮ ತಗ್ಗಿಸುವ/ಕಡಿಮೆಮಾಡುವ ಕ್ರಮಗಳ ಪರಿಣಾಮಕಾರಿತ್ವವನ್ನು ಒಳಗೊಳ್ಳಬೇಕು, ಜೊತೆಗೆ ಇದು ಎಲ್ಲ ಇಸಿ ಸ್ಥಿತಿಗಳ ಅನುವರ್ತನೆ ಸ್ಥಿತಿಗತಿ, ಸಮಗ್ರ ಪರಿಣಾಮ ಮೌಲ್ಯಮಾಪನದೊಂದಿಗೆ ನಿರೀಕ್ಷಿತ ಬದಲಾವಣೆ ಹಾಗೂ ದುಷ್ಪರಿಣಾಮ ತಗ್ಗಿಸಲು/ಕಡಿಮೆಮಾಡಲು ಅಗತ್ಯವಿರುವ ಕ್ರಮಗಳು, ಇವುಗಳನ್ನೂ ಒಳಗೊಂಡಿರಬೇಕು.

**ಪ್ರ: ಸ್ಥಾಪಿಸಲಾದ ಸ್ಥಾವರಗಳ ಮೇಲ್ವಿಚಾರಣೆಯನ್ನು ಹೇಗೆ ಮಾಡಲಾಗುತ್ತದೆ?**

ಉ: ಎಸ್‌ಪಿಸಿಬಿಯು ಟಿಪಿಪಿಗಳೂ ಸೇರಿದಂತೆ ಎಲ್ಲ ಕೈಗಾರಿಕೆಗಳ ನಿಯತಕಾಲಿಕ ತಪಾಸಣೆಗಳನ್ನು ನಡೆಸಬೇಕು,ಕೈಗಾರಿಕೆಗಳುಒಪ್ಪಿತಹೊರಸೂಸುವಿಕೆಮಟ್ಟಗಳಿಗೆಅನುಗುಣವಾಗಿಕಾರ್ಯನಿರ್ವಹಿಸುತ್ತಿವೆಯೇ ಮತ್ತು ಪಾರಿಸರಿಕ ಅನುಮತಿಯಲ್ಲಿ ವಿಧಿಸಲಾದ ಬೇರೆ ಕರಾರುಗಳನ್ನು ಪಾಲಿಸುತ್ತಿವೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ತಪಾಸಣೆ ಮಾಡಲಾಗುತ್ತದೆ.

ಯೋಜನಾ ಪ್ರತಿಪಾದಕರು ಈ ಕೆಳಗಿನ ಅನುವರ್ತನೆ ವರದಿಗಳನ್ನು ಸಲ್ಲಿಸಬೇಕು:

- ಎಸ್‌ಪಿಸಿಬಿಗೆ ತ್ರೈಮಾಸಿಕ ಮೇಲ್ವಿಚಾರಣಾ ವರದಿ
- ಎಂಒಇಎಫ್‌ನ ಪ್ರಾದೇಶಿಕ ಕಚೇರಿಗೆ ಅರ್ಧ ವಾರ್ಷಿಕ ಅನುವರ್ತನೆ ಸ್ಥಿತಿಗತಿ ವರದಿ
- ಕೇಂದ್ರ ವಿದ್ಯುತ್ ಪ್ರಾಧಿಕಾರಕ್ಕೆ ನಿರ್ದಿಷ್ಟಪಡಿಸಿದ (ಹಾರು ಬೂದಿ ಬಳಕೆ ನಿಯಮದಡಿಯಲ್ಲಿ) ನಮೂನೆಯಲ್ಲಿ ಒಂದು ವಾರ್ಷಿಕ ವರದಿಯನ್ನು ಸಲ್ಲಿಸಬೇಕು ಮತ್ತು ಒಂದು ಪ್ರತಿಯನ್ನು ಎಸ್‌ಪಿಸಿಬಿಗೆ ಕಳುಹಿಸಬೇಕು.
- ಎಸ್‌ಪಿಸಿಬಿಗೆ ವಾರ್ಷಿಕ ಪಾರಿಸರಿಕ ಹೇಳಿಕೆ ವರದಿ
- ಎಸ್‌ಪಿಸಿಬಿ ಕೇಳುವ ಹೆಚ್ಚುವರಿ ವರದಿಗಳು (ಸಾರ್ವಜನಿಕರ ದೂರುಗಳನ್ನು ಆಧರಿಸಿ)

**ಪ್ರ: ಅನುವರ್ತನೆ ವರದಿಯು ಏನೇನನ್ನು ಒಳಗೊಂಡಿರಬೇಕು? ಅವುಗಳನ್ನು ಲಭ್ಯಪಡಿಸಿಕೊಳ್ಳುವುದು ಹೇಗೆ?**

ಉ: ಪ್ರತಿಯೊಂದು ಟಿಪಿಪಿಗೆ ನೀಡುವ ಪಾರಿಸರಿಕ ಅನುಮತಿಯು ಪಾಲಿಸಲೇಬೇಕಾದ ಕೆಲವು ನಿರ್ದಿಷ್ಟ ಷರತ್ತುಗಳನ್ನು ಒಳಗೊಂಡಿರುತ್ತದೆ ಮತ್ತು ಎಂಒಇಎಫ್‌ಗೆ/ಎಸ್‌ಇಐಎಎಗೆ ಸಲ್ಲಿಸಲಾದ ಅನುವರ್ತನಾ ವರದಿಯಲ್ಲಿ ಅವುಗಳನ್ನು ದೃಢೀಕರಿಸಲಾಗಿರುತ್ತದೆ. ಈ ವರದಿಗಳು ಸಾರ್ವಜನಿಕ ವಲಯದಲ್ಲಿ ಲಭ್ಯವಿರಬೇಕು ಮತ್ತು ಇತೀಚಿನ ಅನುವರ್ತನಾ ವರದಿಯು ಎಂಒಇಎಫ್/ಎಸ್‌ಇಐಎಎ ಜಾಲತಾಣದಲ್ಲಿ ಲಭ್ಯವಿರಬೇಕು.

ಸಾರ್ವಜನಿಕರು ಕೋರಿಕೆ ಸಲ್ಲಿಸಿದರೆ ಎಂಒಇಎಫ್/ಎಸ್‌ಇಐಎಎ ಯಾವುದೇ ಅನುವರ್ತನಾ ವರದಿಯ ಪ್ರತಿಯು ದೊರೆಯುವಂತೆ ಮಾಡುತ್ತದೆ.

**ಪ್ರ: ಸಾರ್ವಜನಿಕರು ಪಡೆದುಕೊಳ್ಳಬಹುದಾದ ಬೇರೆ ದಾಖಲೆಗಳು ಯಾವುವು?**

ಉ: ಎ) ಎಸ್‌ಪಿಸಿಬಿಗೆ ಸಲ್ಲಿಸಲಾದ ತ್ರೈಮಾಸಿಕ ಅನುವರ್ತನಾ ವರದಿ

ಬಿ) ಎಸ್‌ಪಿಸಿಬಿಗೆ ಸಲ್ಲಿಸಲಾದ ವಾರ್ಷಿಕ ಪಾರಿಸರಿಕ ಹೇಳಿಕೆ ವರದಿ

ಸಿ) ಕೇಂದ್ರೀಯ ವಿದ್ಯುತ್ ಪ್ರಾಧಿಕಾರಕ್ಕೆ ಸಲ್ಲಿಸಲಾದ ಮತ್ತು ಎಸ್‌ಪಿಸಿಬಿಗೆ & ಎಂಒಇಎಫ್‌ಗೆ ಪ್ರತಿ ನೀಡಲಾದ ವಾರ್ಷಿಕ ಹಾರು ಬೂದಿ ಬಳಕೆ ವರದಿ

## 2.4.4 ಬೇರೆ ಅನುಮತಿಗಳು

### 2.4.4 (ಎ) ಕರಾವಳಿ ನಿಯಂತ್ರಕ ವಲಯ (ಸಿಆರ್‌ಜಡ್) ಅನುಮತಿ

**ಪ್ರ: ಸಿಆರ್‌ಜಡ್ ಅನುಮತಿ ಎಂದರೇನು ಮತ್ತು ಇಐಎ ಪ್ರಕ್ರಿಯೆಗೆ ಅದರ ಪ್ರಸ್ತುತತೆ ಏನು?**

ಉ: ಕರಾವಳಿಗೆ ತುಂಬ ಹತ್ತಿರವಿರುವ ಯೋಜನೆಗಳಿಗೆ ಸಿಆರ್‌ಜಡ್ ಅನುಮತಿಯ ಅಗತ್ಯವಿರುತ್ತದೆ.

೨೦೧೧ರ ಸಿಆರ್‌ಜಡ್ ಅಧಿಸೂಚನೆ, ಎಲ್ಲೆಲ್ಲಿ ಸಿಆರ್‌ಜಡ್ ಪಡೆದುಕೊಳ್ಳುವುದು ಅಗತ್ಯವಿದೆ ಎಂಬುದನ್ನು ನಿರ್ದಿಷ್ಟಪಡಿಸುತ್ತದೆ. ಪ್ರಸ್ತಾಪಿತ ಟಿಪಿಪಿ ಯೋಜನಾ ಸ್ಥಳವು ಸಿಆರ್‌ಜಡ್ ಒಳಗೆ ಇರುವುದಾದರೆ, ಆಗ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ ಶಿಫಾರಸುಗಳಿಗೆ ಅನುಗುಣವಾಗಿ ಸಿಆರ್‌ಜಡ್ ಅನುಮತಿಗೆ ಯೋಜನೆಯ ಪಾರಿಸರಿಕ ಅನುಮತಿಯನ್ನು ಒಳಪಡಿಸಲಾಗುವುದು. ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ ಸಭೆಯ ನಡಾವಳಿಗಳು - ಅದರ ಜಾಲತಾಣದಲ್ಲಿ ನಡಾವಳಿಯನ್ನು ಅಪ್‌ಲೋಡ್ ಮಾಡಲಾಗುವುದು - ಒಂದು ಯೋಜನೆಯನ್ನು ಸಿಆರ್‌ಜಡ್ ಅನುಮತಿಗೆ ಶಿಫಾರಸು ಮಾಡಲಾಗಿದೆಯೇ ಎಂಬುದನ್ನು ಬಹಿರಂಗಪಡಿಸುತ್ತದೆ.

### 2.4.4 (ಬಿ) ಅರಣ್ಯ ಅನುಮತಿ

**ಪ್ರ: ಅರಣ್ಯ ಅನುಮತಿಯನ್ನು ಯಾರು ನೀಡುತ್ತಾರೆ?**

ಉ: ಯೋಜನಾ ಸ್ಥಳವು ಅರಣ್ಯ ಭೂಮಿಯನ್ನು ಬಳಕೆ ಮಾಡಿಕೊಳ್ಳುತ್ತಿದ್ದರೆ, ಅರಣ್ಯ ಸಂರಕ್ಷಣಾ ಕಾಯಿದೆ, ೧೯೮೦ರ ಅನುಚ್ಛೇದ ೨ರ ಅಡಿಯಲ್ಲಿ ಅರಣ್ಯ ಅನುಮತಿಯನ್ನು ಕೇಂದ್ರ ಸರ್ಕಾರವು ಅರಣ್ಯ ಅನುಮತಿಯನ್ನು ನೀಡುತ್ತದೆ.

### 2.4.4 (ಸಿ) ಹೆಚ್ಚಿನ ಅನುಮತಿಗಳು

**ಪ್ರ: ಎಂಒಇಎಫ್‌ನ ಇಸಿಯ ಹೊರತಾಗಿ, ಬೇರೆ ಏನು ಅನುಮತಿಗಳು ಬೇಕಾಗುತ್ತವೆ?**

ಉ: ಅಗತ್ಯವಿರುವ ಬೇರೆ ಅನುಮತಿಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ:

೧. ಪಂಚಾಯಿತಿ ವ್ಯಾಪ್ತಿಯಲ್ಲಿ ಟಿಪಿಪಿಯನ್ನು ಸ್ಥಾಪಿಸಲು ಪಂಚಾಯಿತಿಯಿಂದ ನಿರಾಕ್ಷೇಪಣಾ ಪತ್ರ

೨. ಸಂಬಂಧಿತ ಎಸ್‌ಪಿಸಿಬಿಯಿಂದ ಯೋಜನೆ ಸ್ಥಾಪನೆ ಮತ್ತು ಕಾರ್ಯಾಚರಣೆ ಮಾಡಲು ಒಪ್ಪಿಗೆ

೩. ವರ್ಷವಿಡೀ ಹರಿಯುವ ನದಿಯು ಸ್ಥಾವರಕ್ಕೆ ನೀರಿನ ಮೂಲವಾದರೆ, ಅದರಿಂದ ನೀರು ತೆಗೆದುಕೊಳ್ಳಲು ರಾಜ್ಯ ಜಲ ಪ್ರಾಧಿಕಾರದಿಂದ ಮಂಜೂರಾತಿ

೪. ಚಿಮಣಿಯ ಎತ್ತರಕ್ಕೆ ಭಾರತೀಯ ವಿಮಾನನಿಲ್ದಾಣ ಪ್ರಾಧಿಕಾರದಿಂದ ಅನುಮತಿ ಪಡೆದುಕೊಳ್ಳುವುದು

೫. ರೈಲ್ವೆ ಹಳಿಗಳಿಗಾಗಿ/ ರೈಲ್ವೆ ಸೈಡಿಂಗ್ಗಾಗಿ ಭಾರತೀಯ ರೈಲ್ವೆಯಿಂದ ಒಪ್ಪಿಗೆ

### 2.4.5 ಸರಿಪಡಿಸುವಿಕೆ/ಪರಿಹರಿಸುವಿಕೆ

**ಪ್ರ: ಸ್ಥಾವರವೊಂದರ ಇಸಿ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ಅಂಶದ ಕುರಿತ ದೂರುಗಳನ್ನು ಎಲ್ಲಿ ನೀಡಬಹುದು?**

ಉ: ಇಐಎ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಯಾವುದೇ ಉಲ್ಲಂಘನೆ ನಡೆದರೆ, ಅದನ್ನು ಎಂಒಇಎಫ್‌ಗೆ ವರದಿ ಮಾಡಬಹುದು. ಯೋಜನೆಯೊಂದಕ್ಕೆ ಉಲ್ಲಂಘನೆಗಳೊಂದಿಗೆ ಇಸಿಯನ್ನು ನೀಡಿದರೆ, ಅದನ್ನು ರಾಷ್ಟ್ರೀಯ ಹಸಿರು ನ್ಯಾಯಪೀಠದಲ್ಲಿ ಪ್ರಶ್ನಿಸಬೇಕು.

**ಪ್ರ: ಸದ್ಯ ಇರುವ ಟಿಪಿಪಿಯ ಕುರಿತು, ಉದ್ಯೋಗ, ಸಿಎಸ್‌ಆರ್ ಮತ್ತು ಇತರೆ ಷರತ್ತುಗಳನ್ನು ಪಾಲಿಸದಿದ್ದರೆ ದೂರುಗಳನ್ನು ಎಲ್ಲಿ ನೀಡಬೇಕು?**

ಉ: ಇಸಿಯಲ್ಲಿ ವಿಧಿಸಲಾದ ಷರತ್ತುಗಳನ್ನು ಪಾಲಿಸದಿದ್ದರೆ, ಅದನ್ನು ಕೂಡಲೇ ಎಂಒಇಎಫ್ ಮತ್ತು ಎಸ್‌ಪಿಸಿಬಿಯ ಗಮನಕ್ಕೆ ತರಬೇಕು.

**ಪ್ರ: ರಾಷ್ಟ್ರೀಯ ಹಸಿರು ನ್ಯಾಯಪೀಠ (ಎನ್‌ಜಿಟಿ) ಎಂದರೇನು?**

ಉ: ಎನ್‌ಜಿಟಿ ಎಂದರೆ ಅರೆ-ನ್ಯಾಯಾಂಗ ಅಂಗವಾಗಿದ್ದು, ಪಾರಿಸರಿಕ ರಕ್ಷಣೆ ಮತ್ತು ಅರಣ್ಯಗಳ **ಹಾಗೂ** ಇನ್ನಿತರ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ನ್ಯಾಯನಿರ್ಣಯ ಮಾಡಲು ಸ್ಥಾಪಿತವಾಗಿದೆ. ನ್ಯಾಯಪೀಠವು ಸಭೆ ಸೇರುವ ಪ್ರಧಾನ ಸ್ಥಳವು ನವದೆಹಲಿಯಾಗಿದ್ದು, ಭೋಪಾಲ್ (ಕೇಂದ್ರ ವಲಯ), ಪುಣೆ (ಪಶ್ಚಿಮ ವಲಯ), ಕೊಲ್ಕೊತ (ಪೂರ್ವ ವಲಯ) ಮತ್ತು ಚೆನ್ನೈ (ದಕ್ಷಿಣ ವಲಯ), ಹಸಿರು ನ್ಯಾಯಪೀಠವು ಸಭೆ ಸೇರುವ ಇನ್ನುಳಿದ ನಾಲ್ಕು ಸ್ಥಳಗಳಾಗಿವೆ.

ಪ್ರ: ಎನ್‌ಜಿಟಿಗೆ ದೂರು ಸಲ್ಲಿಸಲು/ಮೊಕದ್ದಮೆ ಹೂಡಲು ಏನಾದರೂ ಕಾಲಮಿತಿ ಇದೆಯೇ?

ಉ: ಹೌದು, ಇದೆ. ಎನ್‌ಜಿಟಿಯಲ್ಲಿ ಹೂಡುವ ಮೊಕದ್ದಮೆಗಳು ಸಮಯಮಿತಿ ಹೊಂದಿವೆ ಮತ್ತು ಏನಾದರೂ ಪ್ರಕರಣಗಳು/ಉಲ್ಲಂಘನೆಗಳು ಜರುಗಿದ ೩೦ ದಿನಗಳ ಒಳಗೆ ಮೊಕದ್ದಮೆ ಹೂಡಬೇಕು, ವಿಳಂಬಕ್ಕೆ ಸೂಕ್ತ ಸಮರ್ಥನೆಗಳು ಇದ್ದಲ್ಲಿ ೯೦ ದಿನಗಳವರೆಗೆ ವಿಸ್ತರಿಸಲಾಗುವುದು. ಅಂದರೆ ಯಾವುದೇ ಯೋಜನೆಗೆ ನೀಡಲಾದ ಇಸಿ ವಿರುದ್ಧ ಯಾರಾದರೂ ಅಪೀಲು ನೀಡುವುದಾದಲ್ಲಿ, ಏನಾದರೂ ಅಸಾಧಾರಣ ಅಪವಾದಗಳ ಹೊರತಾಗಿ, ಇಸಿ ನೀಡಿದ ೩೦ ದಿನಗಳ ಒಳಗೆ ಅಪೀಲು ಸಲ್ಲಿಸಬೇಕು.

## 2.5 ರಾಷ್ಟ್ರೀಯ ಹಸಿರು ನ್ಯಾಯಪೀಠದ ಆದೇಶಗಳನ್ನು ಸಬಲಗೊಳಿಸುವುದು

I. ಏಳು ದಿನಗಳ ಒಳಗೆ ಎಂಒಇಎಫ್/ಎಸ್‌ಇಐಎಎ ಜಾಲತಾಣದಲ್ಲಿ ಪಾರಿಸರಿಕ ಅನುಮತಿಯನ್ನು ಅಪ್‌ಲೋಡ್ ಮಾಡುವುದು

II. ಎಂಒಇಎಫ್ ಜಾಲತಾಣದಲ್ಲಿ ಪಾರಿಸರಿಕ ಅನುಮತಿಯನ್ನು ಅಪ್‌ಲೋಡ್ ಮಾಡಿದ ದಿನಾಂಕವನ್ನು ಎನ್‌ಜಿಟಿಗೆ ದೂರು ಸಲ್ಲಿಸಲು ಸೀಮಿತ ಅವಧಿ ಎಂದು ಲೆಕ್ಕ ಹಾಕಲು ಬಳಸಿಕೊಳ್ಳಲಾಗುತ್ತದೆ.

III. ಎಂಒಇಎಫ್ ಯೋಜನೆಯೊಂದರ ಕುರಿತಾದ ಎಲ್ಲ ಪ್ರಸ್ತುತತೆ ಇರುವ ಮಾಹಿತಿಗಳು ಸಾರ್ವಜನಿಕರಿಗೆ ದೊರೆಯುವಂತೆ ಮಾಡಬೇಕು.

IV. ಪಾರಿಸರಿಕವಾಗಿ ಸೂಕ್ಷ್ಮ ಪರಿಸರ ವ್ಯವಸ್ಥೆಗಳಿಗೆ ಸಮೀಪವಿರುವ ಸ್ಥಾವರಗಳಿಗೆ ಸಂಚಿತ ಪರಿಣಾಮ ಮೌಲ್ಯಮಾಪನವು ಅಗತ್ಯವಿದೆ.

V. ಒಪ್ಪಂದದ ಕರಾರುಗಳಿಗೆ ಇಐಎ ಬದ್ಧವಾಗುವುದನ್ನು ಎಂಒಇಎಫ್ ಖಾತ್ರಿಪಡಿಸಬೇಕಿದೆ.

V I. ಸಾರ್ವಜನಿಕ ಅಹವಾಲು ಸಭೆ ನಡೆಸುವುದರ ಕುರಿತ ಎನ್‌ಜಿಟಿ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

V II. ಸಾರ್ವಜನಿಕ ಅಹವಾಲು ಸಭೆಯು ಕೇವಲ ಯೋಜನಾ ಸ್ಥಳದ ಹತ್ತಿರದಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಮಾತ್ರವಲ್ಲ.

V III. ಎಸ್‌ಪಿಸಿಬಿಯು ಯೋಜನೆಯ ಮಾಹಿತಿಯನ್ನು ತನ್ನ ಜಾಲತಾಣದಲ್ಲಿ ಪ್ರಕಟಿಸಬೇಕು.

IX. ಒಪ್ಪಂದದ ಕರಾರಿನಲ್ಲಿ ಕಲ್ಲಿದ್ದಲಿನ ವಿಕಿರಣ ಪಟುತ್ವವನ್ನು ಸೇರಿಸಬೇಕು.

X. ಯೋಜನಾ ಸ್ಥಳದ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಸಾರ್ವಜನಿಕ ಅಹವಾಲು ಸಭೆ ನಡೆಸಬೇಕು.

XI. ಅಂತಿಮ ಇಐಎಯು ಸ್ಥಳೀಯ ಜನರ ಕಾಳಜಿಗಳನ್ನು ಹೇಗೆ ಬಗೆಹರಿಸುತ್ತದೆ ಎಂದು ಇಎಸಿಯು ಸಮಗ್ರ ಶೋಧನೆ ನಡೆಸಬೇಕು.

XII. ಇಐಎ ಕರಡು ಮತ್ತು ಅಂತಿಮ ವರದಿಯ ನಡುವೆ ತುಂಬ ವ್ಯತ್ಯಾಸಗಳಿಗೆ ಆಸ್ಪದವಿಲ್ಲ.

XIII. ಇಐಎ ವರದಿಯಲ್ಲಿ ಸಮಾಜೋ-ಆರ್ಥಿಕ ದತ್ತಾಂಶಗಳಿಗೆ ಪ್ರಾಥಮಿಕ ದತ್ತಾಂಶಗಳಿರಲೇಬೇಕು.

XIV. ಎಂಒಇಎಫ್ ಇಎಸಿಯ ಮೌಲ್ಯನಿರ್ಣಯ ಪ್ರಕ್ರಿಯೆಯನ್ನು ಪರಿಶೀಲಿಸುವುದು

### I. ಏಳು ದಿನಗಳ ಒಳಗೆ ಎಂಒಇಎಫ್/ಎಸ್‌ಇಐಎಎ ಜಾಲತಾಣದಲ್ಲಿ ಪಾರಿಸರಿಕ ಅನುಮತಿಯನ್ನು ಅಪ್‌ಲೋಡ್ ಮಾಡುವುದು

1. ಎಂಒಇಎಫ್/ಎಸ್‌ಇಐಎಎ ಜಾಲತಾಣದಲ್ಲಿ ಯೋಜನೆಯೊಂದಕ್ಕೆ ನೀಡಲಾದ ಪಾರಿಸರಿಕ ಅನುಮತಿಯನ್ನು ಸಾಧ್ಯವಿದ್ದಷ್ಟು ಬೇಗನೆ, ಇಸಿಯನ್ನು ನೀಡಲಾದ ೭ ದಿನಗಳ ಒಳಗೆ ಅಪ್‌ಲೋಡ್ ಮಾಡಬೇಕು.

2. ಎಂಒಇಎಫ್/ಎಸ್‌ಇಐಎಎ ಜಾಲತಾಣವನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಿಸುತ್ತ, ನಿರ್ವಹಣೆ ಮಾಡಬೇಕು.

3. ಎಂಒಇಎಫ್ ವಿಧಿಸಿದ ಇಸಿ ಷರತ್ತುಗಳಲ್ಲಿ ಒಂದು ಎಂದರೆ ನೀಡಲಾದ ಅನುಮತಿಯನ್ನು ಇಐಎ ಅಧಿಸೂಚನೆ ೨೦೦೬ರ ಪ್ರಕಾರ ಎಲ್ಲ ಭಾಗೀದಾರರಿಗೆ ವ್ಯಾಪಕವಾಗಿ ಪ್ರಚಾರ ಮಾಡಬೇಕು ಎನ್ನುವುದು.

**ಪ್ರಕರಣ ವಿವರಗಳು: ೨೦೧೩ರ ಮೇಲ್ಮನವಿ ೧**

ಪರಿಸರ ಸಚಿವಾಲಯ & ಇತರರ ವಿರುದ್ಧ ಮೇಧಾ ಪಾಟ್ಕರ್ ಮತ್ತು ಇನ್ನೊಬ್ಬರು

**ತೀರ್ಪಿನ ಕೊಂಡಿ:**

http://www.indiaenvironmentportal.org.in/files/file/pench%20thermal%20project_11July2013_final_order-1.pdf

ತೀರ್ಪಿನ ದಿನಾಂಕ : ಜುಲೈ ೧೧, ೨೦೧೩

## II. ಎಂಒಇಎಫ್ ಜಾಲತಾಣದಲ್ಲಿ ಪಾರಿಸರಿಕ ಅನುಮತಿಯನ್ನು ಅಪ್‌ಲೋಡ್ ಮಾಡಿದ ದಿನಾಂಕವನ್ನು ಎನ್‌ಜಿಟಿಗೆ ದೂರು ಸಲ್ಲಿಸಲು ಸೀಮಿತ ಅವಧಿ ಎಂದು ಲೆಕ್ಕ ಹಾಕಲು ಬಳಸಿಕೊಳ್ಳಲಾಗುತ್ತದೆ.

೧. ಎನ್‌ಜಿಟಿಗೆ ದೂರು ಸಲ್ಲಿಸಲು ಇರುವ ಸೀಮಿತ ಅವಧಿಯು (ಎನ್‌ಜಿಟಿ ಕಾಯಿದೆಯ ೧೬ನೇ ಪರಿಚ್ಛೇದದ ಅಡಿಯಲ್ಲಿ) ಆದೇಶವನ್ನು ಸಂವಹನ ಮಾಡಲಾದ ದಿನಾಂಕದಿಂದ ಶುರುವಾಗುತ್ತದೆ.

ಇದು ಈ ಕೆಳಗಿನ ದಿನಕ್ಕೆ ಸಂಬಂಧಿಸಿರುತ್ತದೆ:

ಎಂಒಇಎಫ್ ಇಸಿಯನ್ನು ತನ್ನ ಜಾಲತಾಣದಲ್ಲಿ ಅಪ್‌ಲೋಡ್ ಮಾಡುತ್ತದೆ, ಇದು ಯಾವುದೇ ರೀತಿಯ ಅಡೆತಡೆ ಇಲ್ಲದೇ ಡೌನ್‌ಲೋಡ್ ಮಾಡಿಕೊಳ್ಳುವ ರೀತಿಯಲ್ಲಿರುತ್ತದೆ ಮತ್ತು ಆದೇಶವನ್ನು ನೋಟಿಸ್ ಬೋರ್ಡ್ ಮೇಲೆ ಹಾಕಿದ ದಿನ

ಅಥವಾ

ಯೋಜನಾ ಪ್ರತಿಪಾದಕರು ಅನುಮತಿಯನ್ನು ತಮ್ಮ ಜಾಲತಾಣದಲ್ಲಿ ಸುಲಭವಾಗಿ ಡೌನ್‌ಲೋಡ್ ಮಾಡಿಕೊಳ್ಳುವ ರೀತಿಯಲ್ಲಿ ಅಪ್‌ಲೋಡ್ ಮಾಡುತ್ತಾರೆ ಮತ್ತು ಪತ್ರಿಕೆಗಳಲ್ಲಿ ಈ ವಿಚಾರವನ್ನು ಪ್ರಕಟಿಸುತ್ತಾರೆ.

**ಪ್ರಕರಣ ವಿವರಗಳು: ಮೇಲೆ ಉಲ್ಲೇಖಿಸಿದ ೨೦೧೩ರ ಮೇಲ್ಮನವಿ ೯ ಪರಿಶೀಲನಾ ಅರ್ಜಿ**

ಪರಿಸರ ಸಚಿವಾಲಯ & ಇತರರ ವಿರುದ್ಧ ಮೇಧಾ ಪಾಟ್ಕರ್ ಮತ್ತು ಇನ್ನೊಬ್ಬರು

ತೀರ್ಪಿನ ಕೊಂಡಿ:

http://www.greentribunal.gov.in/judgment/9_2013(RA)_28Nov2013_final_order.pdf

ತೀರ್ಪಿನ ದಿನಾಂಕ : ನವೆಂಬರ್ ೨೮, ೨೦೧೩

## III. ಎಂಒಇಎಫ್ ಯೋಜನೆಯೊಂದರ ಕುರಿತಾದ ಎಲ್ಲ ಪ್ರಸ್ತುತತೆ ಇರುವ ಮಾಹಿತಿಗಳು ಸಾರ್ವಜನಿಕರಿಗೆ ದೊರೆಯುವಂತೆ ಮಾಡಬೇಕು.

## IV. ಪಾರಿಸರಿಕವಾಗಿ ಸೂಕ್ಷ್ಮ ಪರಿಸರ ವ್ಯವಸ್ಥೆಗಳಿಗೆ ಸಮೀಪವಿರುವ ಸ್ಥಾವರಗಳಿಗೆ ಸಂಚಿತ ಪರಿಣಾಮ ಮೌಲ್ಯಮಾಪನವು ಅಗತ್ಯವಿದೆ.

೧. ಎಂಒಇಎಫ್ ತನ್ನ ಜಾಲತಾಣದಲ್ಲಿ ಇಐಎ ವರದಿ ಮತ್ತು ಯೋಜನೆಯ ಮೌಲ್ಯನಿರ್ಣಯದ ಸಮಯದಲ್ಲಿ ಪರಿಗಣಿಸಲಾದ ಸಾರ್ವಜನಿಕ ಅಹವಾಲು ವರದಿಯಲ್ಲದೇ ಬೇರೆ ಪ್ರಸ್ತುತತೆ ಇರುವ ಎಲ್ಲ ಮಾಹಿತಿಗಳನ್ನೂ ತನ್ನ ಜಾಲತಾಣದಲ್ಲಿ ಲಭ್ಯವಾಗುವಂತೆ ಮಾಡಬೇಕು - ನಿರ್ದಿಷ್ಟ/ವಿಶೇಷ ಅಧ್ಯಯನಗಳ ಸಂಕ್ಷಿಪ್ತ ಸಾರಾಂಶಗಳೂ ಸೇರಿದಂತೆ ಎಲ್ಲ ಮಾಹಿತಿಗಳು ಲಭ್ಯವಾಗುವಂತೆ ಮಾಡಬೇಕು.

೨. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಎಸ್‌ಪಿಸಿಬಿ) ತನ್ನ ಜಾಲತಾಣದಲ್ಲಿ ಸಾರ್ವಜನಿಕ ಅಹವಾಲು ಸಭೆಯ ಕಲಾಪಗಳು, ಸ್ಥಾಪನೆಗೆ ಒಪ್ಪಿಗೆ ಮತ್ತು ಕಾರ್ಯಾಚರಣೆಗೆ ಒಪ್ಪಿಗೆ, ಅನುವರ್ತನಾ ಸ್ಥಿತಿಗತಿ ಇತ್ಯಾದಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಕಟಿಸಿ, ಅದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಬೇಕು.

೩. ಯೋಜನಾ ಪ್ರತಿಪಾದಕರು ಯೋಜನೆಗೆ ಸಂಬಂಧಿಸಿದಂತೆ ಮಾಡಿದ ನಿರ್ದಿಷ್ಟ/ವಿಶೇಷ ಅಧ್ಯಯನಗಳ ಸಂಕ್ಷಿಪ್ತ ಸಾರಾಂಶಗಳೂ ಸೇರಿದಂತೆ ಪಾರಿಸರಿಕ ಅನುಮತಿಯ ಅನುವರ್ತನಾ ಸ್ಥಿತಿಯನ್ನು ಅಪ್‌ಲೋಡ್ ಮಾಡಬೇಕು, ಜೊತೆಗೆ ಇದೆಲ್ಲವನ್ನು ನಿಯತಕಾಲಿಕವಾಗಿ ಪರಿಷ್ಕರಣೆ ಮಾಡುತ್ತಿರಬೇಕು.

೪. ಮುನ್ನೆಚ್ಚರಿಕೆ ತತ್ವ ಮತ್ತು ಸುಸ್ಥಿರ ಅಭಿವೃದ್ಧಿ ಮಾರ್ಗೋಪಾಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ದುಷ್ಪರಿಣಾಮ ತಗ್ಗಿಸುವ/ಕಡಿಮೆಗೊಳಿಸುವ ಸೂಕ್ತವಾದ ಕ್ರಮಗಳನ್ನು ಸಲಹೆ ಮಾಡಲು ಸಂಚಿತ ಪರಿಣಾಮ ಮೌಲ್ಯಮಾಪನ ಅಧ್ಯಯನಗಳನ್ನು ಮಾಡಬೇಕು, ಜೊತೆಗೆ ಪಿಚಾವರಂ ಕಾಂಡಲು/

ಮ್ಯಾಂಗ್ರೂವ್ಸ್‌ನ ಪಾರಿಸರಿಕವಾಗಿ ಸೂಕ್ಷ್ಮವಾಗಿರುವ ಪಾರಿಸರಿಕ-ವ್ಯವಸ್ಥೆಯ ಮೇಲೆ ಮತ್ತು ಹತ್ತಿರದ ಜೈವಿಕ ಸಮುದ್ರ ಪರಿಸರಕ್ಕೆ ಪ್ರತಿಕೂಲ ಪರಿಣಾಮಗಳಾಗುವುದನ್ನು ತಡೆಯಲು ಪಾರಿಸರಿಕ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು.

**ಪ್ರಕರಣ ವಿವರಗಳು:** ಮೇಲ್ಮನವಿ ಸಂಖ್ಯೆ ೧೭ ಎಫ್ ೨೦೧೧ (ಟಿ), ಎನ್‌ಇಎಎ ನಂ ೨೦೧೧ರ ೨೦ ಟಿ ಪರಿಸರ ಸಚಿವಾಲಯ & ಇತರರ ವಿರುದ್ಧ ಮುರುಗಂದಮ್ ಮತ್ತು ಇನ್ನೊಬ್ಬರು

**ತೀರ್ಪಿನ ಕೊಂಡಿ:**

http://www.ercindia.org/files/EIA-Review-TPP/judgments/NGT_Muruganandam.pdf

ತೀರ್ಪಿನ ದಿನಾಂಕ : ಮೇ ೨೩, ೨೦೧೨

## V. ಒಪ್ಪಂದದ ಕರಾರುಗಳಿಗೆ ಇಐಎ ಬದ್ಧವಾಗುವುದನ್ನು ಎಂಒಇಎಫ್ ಖಾತ್ರಿಪಡಿಸಬೇಕಿದೆ.

## VI. ಸಾರ್ವಜನಿಕ ಅಹವಾಲು ಸಭೆಗೆ ಸಲಹೆಗಳು

೧. ಸಾರ್ವಜನಿಕ ಅಹವಾಲು ಸಭೆ ನಡೆಸಲಿಕ್ಕಾಗಿ, ಕರಡು ಇಐಎ ವರದಿಯನ್ನು ತನ್ನ ಜಾಲತಾಣದಲ್ಲಿ ಪ್ರಕಟಿಸುವ ಮೊದಲು, ಅದರಲ್ಲಿ ಒಪ್ಪಂದದ ಕರಾರುಗಳನ್ನು ಸೂಕ್ತವಾಗಿ ಪಾಲಿಸಲಾಗಿದೆ ಎಂಬುದನ್ನು ಪರೀಕ್ಷಿಸಿಕೊಳ್ಳಲು ಎಂಒಇಎಫ್ ಒಂದು ಕಟ್ಟುನಿಟ್ಟಾದ ಪ್ರಕ್ರಿಯೆ ವಿಧಾನವನ್ನು ರೂಪಿಸಬೇಕು.

೨. ಅಂತಿಮ ಇಐಎ ವರದಿಯನ್ನು ಇಎಸಿಯ ಮುಂದೆ ಮೌಲ್ಯನಿರ್ಣಯಕ್ಕೆ ಇಡುವ ಮೊದಲು, ಯೋಜನೆಗೆ ನೀಡಲಾದ ಒಪ್ಪಂದದ ಕರಾರು, ಕರಡು ಇಐಎ ಮತ್ತು ಸಾರ್ವಜನಿಕ ಅಹವಾಲು ಸಂದರ್ಭದಲ್ಲಿ ಮಾಡಿದ ಸಲಹೆಗಳು, ಇವುಗಳನ್ನು ಇಟ್ಟುಕೊಂಡು ಅಂತಿಮ ಇಐಎ ವರದಿಯನ್ನು ಎಂಒಇಎಫ್ ಮೌಲ್ಯಮಾಪನ ಮಾಡಬೇಕು.

೩. ಪರಿಸರ ರಕ್ಷಣೆ ಕಾಯಿದೆ ಅಡಿಯಲ್ಲಿ ಯೋಜನೆಗೆ ಅಗತ್ಯವಾದ ಎಲ್ಲ ಅನುಮತಿಗಳನ್ನು ಒಂದೇ ಬಾರಿಗೆ ನೀಡುವುದನ್ನು ಎಂಒಇಎಫ್ ಪರಿಗಣಿಸಬೇಕು, ಏಕೆಂದರೆ ಒಂದೊಂದು ಅನುಮತಿ ಒಮ್ಮೊಮ್ಮೆ ಎಂಬಂತೆ ತುಂಡುತುಂಡಾಗಿ ನೀಡಿದರೆ, ಯೋಜನೆಯ ಮೌಲ್ಯಮಾಪನದಲ್ಲಿ ಪಾರಿಸರಿಕವಾಗಿ ಮತ್ತು ಪರಿಸರವಿಜ್ಞಾನಕ್ಕೆ ಸಂಬಂಧಿಸಿದಂತೆ ಸಮಗ್ರವಾಗದೇ, ಅಪೂರ್ಣವಾಗುವ/ಲೋಪಗಳಾಗುವ ಸಾಧ್ಯತೆ ಇರುತ್ತದೆ.

೪. ಒಪ್ಪಂದದ ಕರಾರಿಗೆ ಮತ್ತು ಕರಡು ಇಐಎ ವರದಿ ನಡುವೆ ಯಾವುದೇ ರೀತಿಯ ಗೊಂದಲವನ್ನು ತಪ್ಪಿಸಲು, ಕರಡು ಇಐಎ ವರದಿಯ ಮಂಜೂರಾತಿಗೆ ಅಗತ್ಯವಾದ ಕಾರ್ಯವಿಧಾನವನ್ನು ಪರಿಚಯಿಸುವ ಅಗತ್ಯವಿದೆ.

೫. ಸಾರ್ವಜನಿಕ ಅಹವಾಲು ಪ್ರಕ್ರಿಯೆಯನ್ನು ಎಂಒಇಎಫ್ ಸಬಲಗೊಳಿಸುವ ಅಗತ್ಯವಿದೆ ಮತ್ತು ಈ ಕೆಳಗಿನ ಸಲಹೆಗಳನ್ನು ಪರಿಗಣಿಸಿ, ಅದನ್ನು ಹೆಚ್ಚು ಅರ್ಥಪೂರ್ಣಗೊಳಿಸುವ ಅಗತ್ಯವಿದೆ.

ಎ) ಕರಡು ಇಐಎ ವರದಿಯನ್ನು ಯೋಜನಾ ಪ್ರತಿಪಾದಕರು ಸಾರ್ವಜನಿಕ ಅಹವಾಲು ಸಭೆಗೆ ಹಾಜರಿದ್ದ ಎಲ್ಲ ಜನರ ಎದುರಿನಲ್ಲಿ, ಒಂದೊಂದೇ ಅಂಶದ ಹಾಗೆ ಪ್ರಸ್ತುತಪಡಿಸಬೇಕು.

ಬಿ) ಗ್ರಾಮ ಪಂಚಾಯಿತಿ, ಗ್ರಾಮ ಸಮಿತಿಗಳು, ಶಾಸಕರು ಮತ್ತು ಸಂಸದರು, ಇನ್ನಿತರ ಸ್ಥಳೀಯ ಸಂಸ್ಥೆಗಳ ನಾಯಕರು ಅಹವಾಲು ಸಭೆಯಲ್ಲಿ ಹಾಜರಿರುವಂತೆ ಕೋರಬೇಕು. ಅವರು ಯೋಜನೆಯ ಕುರಿತು ಅಥವಾ ಕಾರ್ಯಸಾಧ್ಯತೆ ಕುರಿತು ಮಾತನಾಡಬಹುದು ಅಥವಾ ತಮ್ಮ ಲಿಖಿತ ಪ್ರತಿನಿಧಿತ್ವವನ್ನು ಸಲ್ಲಿಸಬಹುದು.

ಸಿ) ಸಾರ್ವಜನಿಕ ಅಹವಾಲು ಸಭೆಯು ಕರಡು ಇಐಎ ವರದಿಯಲ್ಲಿ ಮತ್ತು ಅದಕ್ಕೆ ಪೂರಕವಾಗಿ ಎತ್ತಲಾದ ಸಮಸ್ಯೆಗಳಿಗೆ ಕಟ್ಟುನಿಟ್ಟಾಗಿ ಸೀಮಿತವಿರಬೇಕು

ಡಿ) ಅಹವಾಲು ಸಭೆಯಲ್ಲಿ ಮಾತನಾಡಲು ಬಯಸುವ ವ್ಯಕ್ತಿಗಳಿಗೆ ತಮ್ಮ ಹೆಸರುಗಳನ್ನು ಸೂಚಿಸಲಾದ ನಮೂನೆಯಲ್ಲಿ, ಹೆಸರು, ತಂದೆ/ಗಂಡನ ಹೆಸರು, ಗ್ರಾಮದ ಹೆಸರು, ತಾಲ್ಲೂಕು/ತಹಸೀಲ್, ಅವರಿಗಿರುವ ಜಮೀನಿನ ಪ್ರಮಾಣ ಮತ್ತು ಅವರು ಮಾತನಾಡಲು ಬಯಸುವ ವಿಷಯ ಇತ್ಯಾದಿ ವಿವರಗಳನ್ನು ಬರೆಯುವಂತೆ ಕೋರಬಹುದು.

ಇ) ಅಹವಾಲು ಸಭೆಯು ನಡೆಯುತ್ತಿರುವಾಗ ಯಾವುದೇ ಪಕ್ಷದ ಬಾವುಟಗಳನ್ನು ಹಿಡಿದುಕೊಂಡು ಹಾಲ್‌ನೊಳಗೆ ಬರಲು ಯಾವುದೇ ವ್ಯಕ್ತಿಗೆ ಆಸ್ಪದವಿಲ್ಲ ಮತ್ತು ಪಕ್ಷದ ಘೋಷಣೆಗಳನ್ನು ಕೂಗಲು ಆಸ್ಪದವಿಲ್ಲ.

ಎಫ್) ಮಾತನಾಡಲು ಬಯಸದ ವ್ಯಕ್ತಿಗಳನ್ನು, ಪ್ರತ್ಯೇಕವಾಗಿ ಮಾತನಾಡಲು ಬಯಸುವ ವ್ಯಕ್ತಿಗಳ ಹಿಂದೆ ಕೂರುವಂತೆ/ನಿಲ್ಲುವಂತೆ ಹೇಳಬಹುದು.

ಜಿ) ಮಾತನಾಡಲು ಹೆಸರು ನೀಡಿದವರನ್ನು ಒಬ್ಬೊಬ್ಬರಾಗಿ ಸಭೆಯ ವೇದಿಕೆಗೆ ಕರೆದು, ಅವರಿಗೆ ಮಾತನಾಡಲು ಬಯಸಿದ ವಿಷಯದ ಮೇಲೆ ಸುಮಾರು ೫ ನಿಮಿಷಗಳವರೆಗೆ ಮಾತನಾಡಲು ಆಸ್ಪದ ಕೊಡಬೇಕು.

ಎಚ್) ಸಾರ್ವಜನಿಕ ಅಹವಾಲು ಸಭೆಯನ್ನು ನಡೆಸುವ ಪ್ರಾಧಿಕಾರವು, ಅಹವಾಲು ಸಭೆಯನ್ನು ನಡೆಸಲು ಅಗತ್ಯವಿರುವ ಪ್ರತಿಯೊಂದೂ ಚಿಕ್ಕಪುಟ್ಟ ಕಾರ್ಯವಿಧಾನಗಳಲ್ಲಿಯೂ ಸಕ್ರಿಯ ಭಾಗ ತೆಗೆದುಕೊಳ್ಳಬೇಕೆಂದು ಕೇಳಬಹುದು.

ಐ) ಕೊನೆಯಲ್ಲಿ, ಯೋಜನೆಯ ಪರ ಅಥವಾ ವಿರುದ್ಧ ಎಲ್ಲ ದೃಷ್ಟಿಕೋನಗಳನ್ನು ವಿಷಯವಾರು/ ಸಮಸ್ಯೆವಾರು ವರ್ಗೀಕರಿಸಿ, ಅದಕ್ಕೆ ಯೋಜನಾ ಪ್ರತಿಪಾದಕರು ಸಂಕ್ಷಿಪ್ತವಾಗಿ ಉತ್ತರಿಸಬಹುದು.

ಜೆ) ಸಾರ್ವಜನಿಕ ಅಹವಾಲು ಸಭೆಯನ್ನು ನಡೆಸುವ ಪ್ರಾಧಿಕಾರವು, ಇಐಎ ಅಧಿಸೂಚನೆ, ೨೦೦೬ರ ಪ್ರಕಾರ ಸಭೆಯ ನಡಾವಳಿಯನ್ನು ಸಿದ್ಧಪಡಿಸಿ, ಸಾರ್ವಜನಿಕರಿಗೆ ತಿಳಿಯುವಂತೆ ಮಾಡುತ್ತದೆ.

ಕೆ) ಸಾರ್ವಜನಿಕ ಅಹವಾಲು ಸಭೆಯಲ್ಲಿ ಎತ್ತಲಾದ ಪ್ರತಿಯೊಂದೂ ಸಮಸ್ಯೆಯನ್ನು ಉದ್ದೇಶಿಸಿ, ಅದಕ್ಕೆ ಯೋಜನಾ ಪ್ರತಿಪಾದಕರು ನೀಡಿದ ಉತ್ತರವನ್ನು ಜೊತೆಗಿಟ್ಟು ಕೋಷ್ಟಕದ ರೂಪದಲ್ಲಿ ಸಭೆ ನಡಾವಳಿಯನ್ನು ಸಿದ್ಧಪಡಿಸಬೇಕು.

ಎಲ್) ಯೋಜನೆಯು ಒಂದು ವಿಜ್ಞಾನ ಮತ್ತು ತಾಂತ್ರಿಕ ಸಮಸ್ಯೆಗಳ ಜ್ಞಾನವು ಅಗತ್ಯವಿರುವ ಒಂದು ಪ್ರಸ್ತುತಿ/ಮಂಡನೆ ಅಥವಾ ಸ್ಪಷ್ಟೀಕರಣವನ್ನು ಒಳಗೊಂಡರೆ, ಒಬ್ಬರು ಪರಿಸರ ತಜ್ಞರು ಅಥವಾ ವಿಜ್ಞಾನಿಯನ್ನು ಆಹ್ವಾನಿಸಿ, ಸಾರ್ವಜನಿಕರ ಎದುರು ಈ ಕುರಿತು ಮಾತನಾಡುವಂತೆ ಕೇಳಿಕೊಳ್ಳಬೇಕು ಮತ್ತು ಆ ವಿಷಯದ ಕುರಿತು ಅವರ ದೃಷ್ಟಿಕೋನಗಳನ್ನು ಬರಹ ರೂಪದಲ್ಲಿ ಸಲ್ಲಿಸಬೇಕು.

೬. ಇಎಸಿ ನಡಾವಳಿಯಲ್ಲಿ ಸಾರ್ವಜನಿಕ ಅಹವಾಲು ಸಭೆಯಲ್ಲಿ ಎತ್ತಲಾದ ಮತ್ತು ಸಭೆಯ ಮುಂದೆ ಇಡಲಾದ ಪ್ರತೀ ಸಮಸ್ಯೆಯ ಸ್ವೀಕೃತಿ ಅಥವಾ ಅದರ ವಿರುದ್ಧಕ್ಕೆ ವಿವರವಾದ ಕಾರಣಗಳನ್ನು ಒಳಗೊಂಡಿರಬೇಕು

೭. ಸಾರ್ವಜನಿಕ ಅಹವಾಲು ಸಭೆಯಲ್ಲಿ ನಡೆಸುವಲ್ಲಿ ಅಳವಡಿಸಿಕೊಳ್ಳಬೇಕಾದ ಕಾರ್ಯವಿಧಾನಗಳ ಇನ್ನಷ್ಟು ಪರಿಷ್ಕರಣೆಗಾಗಿ ಈ ಸಲಹೆಗಳನ್ನು ಇಎಸಿ ಮುಂದಿಡುವುದನ್ನು ಎಂಒಇಎಫ್ ಪರಿಗಣಿಸಬೇಕಿದೆ.

**ಪ್ರಕರಣ ವಿವರಗಳು: ಮೇಲ್ಮನವಿ ಸಂಖ್ಯೆ ೨೦೧೧ರ ೧೨**

ಪರಿಸರ ಸಚಿವಾಲಯ **&** ಇತರರ ವಿರುದ್ಧ ಓಸ್ಸಿ ಫರ್ನಾಂಡಿಸ್ ಮತ್ತು ಇನ್ನೊಬ್ಬರು

**ತೀರ್ಪಿನ ಕೊಂಡಿ:**

http://www.greentribunal.gov.in/judgment/12-2011(AP)_30May2012_final_order.pdf

**ತೀರ್ಪಿನ ದಿನಾಂಕ:** ಮೇ ೩೦, ೨೦೧೨

## VII. ಸಾರ್ವಜನಿಕ ಅಹವಾಲು ಸಭೆಯು ಕೇವಲ ಯೋಜನಾ ಸ್ಥಳದ ಹತ್ತಿರದಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಮಾತ್ರವಲ್ಲ.

## VIII. ಎಸ್‌ಪಿಸಿಬಿಯು ಯೋಜನೆಯ ಮಾಹಿತಿಯನ್ನು ತನ್ನ ಜಾಲತಾಣದಲ್ಲಿ ಪ್ರಕಟಿಸಬೇಕು.

೨೦೦೬ರ ಇಐಎ ಅಧಿಸೂಚನೆಯು ಯೋಜನಾ ಸ್ಥಳದ ಹತ್ತಿರದಲ್ಲಿ ವಾಸವಾಗಿರದ ವ್ಯಕ್ತಿಗಳು ಸಾರ್ವಜನಿಕ ಅಹವಾಲು ಸಭೆಯಲ್ಲಿ ಭಾಗವಹಿಸುವುದನ್ನು ತಡೆಯುವುದಿಲ್ಲ ಅಥವಾ ನಿಷೇಧಿಸುವುದಿಲ್ಲ - ಅವರಿಗೂ ಭಾಗವಹಿಸಲು ಆಸ್ಪದವಿದೆ ಮತ್ತು ಯೋಜನೆಯ ವಿರುದ್ಧ ಅಥವಾ ಪರವಾಗಿ ತಮ್ಮ ದೃಷ್ಟಿಕೋನಗಳನ್ನು ವ್ಯಕ್ತಪಡಿಸುವ ಅವಕಾಶವಿದೆ.

೧. ಸ್ಥಳೀಯವಾಗಿ ದುಷ್ಪರಿಣಾಮಕ್ಕೊಳಪಡುವ ಜನರು ಸಾರ್ವಜನಿಕ ಅಹವಾಲು ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೆ, ತಮ್ಮ ಪ್ರತಿಕ್ರಿಯೆಗಳನ್ನು ಲಿಖಿತ ರೂಪದಲ್ಲಿಯೂ ನೀಡಬಹುದು.

೨. ಇಐಎ ಅಧಿಸೂಚನೆಯು ಸ್ಥಾವರದಿಂದ ದೂರದಲ್ಲಿ ವಾಸಿಸುವ ವ್ಯಕ್ತಿಗಳು ಸಾರ್ವಜನಿಕ ಅಹವಾಲು ಸಭೆಯಲ್ಲಿ ಭಾಗವಹಿಸುವುದನ್ನು ನಿಷೇಧಿಸುವುದಿಲ್ಲ.

೩. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಜಾಲತಾಣವು ಸಾರ್ವಜನಿಕ ಅಹವಾಲು ಸಭೆ ನಡೆಸಲು ಆಲೋಚಿಸಲಾಗಿರುವ ಯೋಜನೆ ಅಥವಾ ಚಟುವಟಿಕೆಗೆ ಪ್ರಸ್ತುತತೆ ಇರುವ ಮಾಹಿತಿಯನ್ನು ಪ್ರಕಟಿಸದಿದ್ದರೆ, ಅದು ಸ್ಥಳೀಯ ಜನಸಮುದಾಯಕ್ಕೆ ಅಸಮರ್ಪಕ ನೋಟಿಸ್ ನೀಡಿದ್ದಕ್ಕೆ ಸಮನಾಗಿದ್ದು, ಆ ಮೂಲಕ ಸಾರ್ವಜನಿಕ ಅಹವಾಲು ಸಭೆಯನ್ನು ಅನೂರ್ಜಿತಗೊಳಿಸಿದಂತೆ ಆಗುತ್ತದೆ.

**ಪ್ರಕರಣ ವಿವರಗಳು: ರಿಟ್ ಪಿಟಿಶನ್ (ಸಿವಿಲ್) ಸಂಖ್ಯೆ ೨೦೦೯ರ ೯೩೧೭**

ಪರಿಸರ ಸಚಿವಾಲಯ **&** ಇತರರ ವಿರುದ್ಧ ಸಮರ್ಥ್ ಟ್ರಸ್ಟ್ ಮತ್ತು ಇನ್ನೊಬ್ಬರು

**ತೀರ್ಪಿನ ಕೊಂಡಿ:**

http://indiankanoon.org/doc/1050363/

**ತೀರ್ಪಿನ ದಿನಾಂಕ:** ಮೇ ೨೮, ೨೦೧೦

## IX. ಒಪ್ಪಂದದ ಕರಾರಿನಲ್ಲಿ ಕಲ್ಲಿದ್ದಲಿನ ಸಂಭಾವ್ಯ ವಿಕಿರಣಪಟುತ್ವದ ಅಂಶವನ್ನು ಸೇರಿಸಬೇಕು.

## X. ೧೦. ಯೋಜನಾ ಸ್ಥಳದ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಸಾರ್ವಜನಿಕ ಅಹವಾಲು ಸಭೆ ನಡೆಸಬೇಕು.

೧. ಪರಿಸರ ಮತ್ತು ಅರಣ್ಯಗಳ ಸಚಿವಾಲಯವು ಭವಿಷ್ಯದ ಎಲ್ಲ ಯೋಜನೆಗಳಿಗೆ, ಯೋಜನಾ ಪ್ರತಿಪಾದಕರು ಸ್ಥಾವರಕ್ಕೆ ಬಳಸಲು ಪ್ರಸ್ತಾಪಿಸಲಾಗಿರುವ ಕಲ್ಲಿದ್ದಲಿನ ಸಂಭಾವ್ಯ ವಿಕಿರಣಪಟುತ್ವದ ಮಟ್ಟದ ಕುರಿತಾದ ವಿವರಗಳನ್ನು ಸಲ್ಲಿಸುವಂತೆ ಕೇಳುವುದನ್ನು ಒಪ್ಪಂದದ ಕರಾರಿನಲ್ಲಿ ಸೇರಿಸಬೇಕು.

೨. ಸಾರ್ವಜನಿಕ ಅಹವಾಲು ಸಭೆಯನ್ನು ಯೋಜನಾ ಸ್ಥಳಕ್ಕೆ ತುಂಬ ಹತ್ತಿರದಲ್ಲಿಯೇ, ಹೆಚ್ಚೆಂದರೆ ೧ ಕಿ.ಮೀ. ವ್ಯಾಪ್ತಿಯಲ್ಲಿಯೇ ನಡೆಸುವುದು ಅಪೇಕ್ಷಣೀಯ.

೩. ಸಾರ್ವಜನಿಕ ಅಹವಾಲು ಸಭೆಗೆ ಭಾಗವಹಿಸಲು ಜನರನ್ನು ಆಹ್ವಾನಿಸುವ ಸುತ್ತೋಲೆಯನ್ನು ಸ್ಪಷ್ಟವಾದ ಪದಗಳಲ್ಲಿ ಬರೆದಿರಬೇಕು. ಯಾವುದೇ ರೀತಿಯ ಗೊಂದಲವಾಗುವಂತಹ ಅಥವಾ ಅಸಮರ್ಪಕ ಪದಗಳ ಬಳಕೆಯನ್ನು ತಪ್ಪಿಸುವಂತೆ ಸಂಬಂಧಿಸಿದ ಅಧಿಕಾರಿಗಳು ಎಚ್ಚರಿಕೆ ತೆಗೆದುಕೊಳ್ಳಬೇಕು.

**ಪ್ರಕರಣ ವಿವರಗಳು: ಮೇಲ್ಮನವಿ ಸಂಖ್ಯೆ ೨೦೧೧ರ (ಟಿ) ಸಂಖ್ಯೆ ೭**

ಪರಿಸರ ಸಚಿವಾಲಯ & ಇತರರ ವಿರುದ್ಧ ಕೃಷಿ ವಿಗ್ಯಾನ್ ಆರೋಗ್ಯ ಸಂಸ್ಥಾ ಮತ್ತು ಇನ್ನೊಬ್ಬರು

**ತೀರ್ಪಿನ ಕೊಂಡಿ:**

http://www.ercindia.org/files/Koradi%201.pdf

**ತೀರ್ಪಿನ ದಿನಾಂಕ:** ಸೆಪ್ಟೆಂಬರ್ ೨೦, ೨೦೧೧

## XI. ಇಎಸಿಯು ಅಂತಿಮ ಇಐಎಯು ಸ್ಥಳೀಯ ಜನರ ಕಾಳಜಿಗಳನ್ನು ಹೇಗೆ ಬಗೆಹರಿಸುತ್ತದೆ ಎಂದು ಪರಿಶೀಲನೆ ನಡೆಸಬೇಕು.

ಇಎಸಿಯು ಅಂತಿಮ ಇಐಎಯ ವಿವರವಾದ ಪರಿಶೀಲನೆ ನಡೆಸಬೇಕು ಮತ್ತು ಸಾರ್ವಜನಿಕ ವಲಯದ ಸದಸ್ಯರು ಎತ್ತಿದ ಆಕ್ಷೇಪಣೆಗಳನ್ನು ಯೋಜನಾ ಪ್ರತಿಪಾದಕರು ಹೇಗೆ ಉದ್ದೇಶಿಸಿದ್ದಾರೆ ಎಂದು ಉಲ್ಲೇಖಿಸಬೇಕು.

**ಪ್ರಕರಣ ವಿವರಗಳು: ಮೇಲ್ಮನವಿ ಸಂಖ್ಯೆ ೧೦/೨೦೧೧ (ಟಿ)**

ಪರಿಸರ ಸಚಿವಾಲಯ & ಇತರರ ವಿರುದ್ಧ ಜೀತ್ ಸಿಂಗ್ ಕನ್ವರ್ ಮತ್ತು ಇನ್ನೊಬ್ಬರು

**ತೀರ್ಪಿನ ಕೊಂಡಿ:**

http://www.indiankanoon.org/doc/16871829/

**ತೀರ್ಪಿನ ದಿನಾಂಕ:** ಏಪ್ರಿಲ್ ೧೬, ೨೦೧೩,

## XII. ಇಐಎ ಕರಡು ಮತ್ತು ಅಂತಿಮ ವರದಿಯ ನಡುವೆ ತುಂಬ ವ್ಯತ್ಯಾಸಗಳಿಗೆ ಆಸ್ಪದವಿಲ್ಲ.

ಎಂಒಇಎಫ್‌ಗೆ ಸಲಹೆಗಳು:

೧. ಎಂಒಇಎಫ್ ಕರಡು ಇಐಎಯನ್ನು ಯೋಜನಾ ಪ್ರತಿಪಾದಕರು ಒಪ್ಪಂದದ ಕರಾರುಗಳಿಗೆ ಅನುಗುಣವಾಗಿ ಸಿದ್ಧಪಡಿಸಿದ್ದಾರೆ ಎಂದು ಪರಿಶೀಲಿಸಿಕೊಳ್ಳಲು ಒಂದು ಪ್ರಕ್ರಿಯೆ ವಿಧಾನವನ್ನು ರೂಪಿಸುವುದು.

೨. ಎಂಒಇಎಫ್ ಕರಡು ಇಐಎಯು ಒಪ್ಪಂದದ ಕರಾರುಗಳಿಗೆ ಅನುಗುಣವಾಗಿದೆ ಎಂದು ಖಾತ್ರಿಪಡಿಸಿಕೊಂಡು, ನಂತರ ಅದನ್ನು ಸಾರ್ವಜನಿಕ ಅಹವಾಲು ಸಭೆ ನಡೆಸುವ ಮೊದಲು ತನ್ನ ಜಾಲತಾಣದಲ್ಲಿ ಪ್ರಕಟಿಸಬೇಕು.

೩. ಯೋಜನಾ ಪ್ರತಿಪಾದಕರು ಸಿದ್ಧಪಡಿಸಿದ ಕರಡು ಇಐಎ ವರದಿಯು ಮೊದಲು ನೀಡಲಾದ ಒಪ್ಪಂದದ ಕರಾರುಗಳಿಗೆ ಸಮನ್ವಯ ಹೊಂದಿಲ್ಲದಿದ್ದರೆ, ಅದನ್ನು ತಿರಸ್ಕರಿಸಬಹುದು ಮತ್ತು ಹೊಸದಾಗಿ ಕರಡು ಇಐಎ ಸಿದ್ಧಪಡಿಸುವಂತೆ ಕೇಳಬಹುದು.

೪. ಸಾರ್ವಜನಿಕ ಅಹವಾಲು ಸಭೆಯನ್ನು ನಡೆಸಿ, ಅಂತಿಮ ಇಐಎ ವರದಿಯನ್ನು ಸಲ್ಲಿಸಿದ ನಂತರ, ಎಂಒಇಎಫ್ ಅದು ಒಪ್ಪಂದದ ಕರಾರುಗಳಿಗೆ ಅನುಗುಣವಾಗಿದೆಯೇ ಮತ್ತು ಸಾರ್ವಜನಿಕ ಅಹವಾಲು ಸಭೆಯ ಕಲಾಪಗಳಿಗೆ ಅನುಗುಣವಾಗಿದೆಯೇ ಎಂದು ಮೌಲ್ಯಮಾಪನ ಮಾಡುವುದು.

೫. ಕರಡು ಮತ್ತು ಅಂತಿಮ ಇಐಎ ವರದಿಯ ನಡುವೆ ತುಂಬ ವ್ಯತ್ಯಾಸಗಳು ಇರದಂತೆ ಮಾಡಲು ಎಂಒಇಎಫ್ ಗಮನ ಕೊಡಬಹುದು, ಯೋಜನೆಗೆ ಸಂಬಂಧಿಸಿದ ಕೆಲವು ಆಂತರಿಕ ತಾಂತ್ರಿಕ ಮತ್ತು ವೈಜ್ಞಾನಿಕ ಮಾಹಿತಿಯನ್ನು ಮತ್ತು ಪಾರಿಸರಿಕ ಮತ್ತು ಪರಿಸರ ವಿಜ್ಞಾನ ಆಸಕ್ತಿಗೆ ಪೂರಕವಾಗಿರುವ ಸಂಗತಿಗಳನ್ನು ಹೊರತುಪಡಿಸಿದರೆ, ಬೇರೆ ವ್ಯತ್ಯಾಸಗಳು ಇರದಂತೆ ಎಂಒಇಎಫ್ ಕಾಳಜಿ ತೆಗೆದುಕೊಳ್ಳಬಹುದು.

೬. ಪಾರಿಸರಿಕ ಅನುಮತಿ ನೀಡುವ ಮೊದಲು, ಅಂತಿಮ ಇಐಎ ವರದಿಯನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಪ್ರದರ್ಶಿಸುವ ವಿಚಾರವನ್ನು ಎಂಒಇಎಫ್ ಪರಿಗಣಿಸಬೇಕು - ಇಎಸಿಗೆ ಮೊದಲು ಆ ಕುರಿತ ವಿಚಾರಣೆಗಳನ್ನು/ ಪ್ರತಿನಿಧಿತ್ವಗಳನ್ನು ಮಾಡಲು ಅನುಕೂಲವಾಗುತ್ತದೆ.

೭. ಸಾರ್ವಜನಿಕ ಅಹವಾಲು ಸಭೆಯನ್ನು ಎಂಒಇಎಫ್ ಇಐಎ ಕರಡು ವರದಿಯನ್ನು ಸ್ವೀಕರಿಸಿದ ೪೫ ದಿನಗಳ ಒಳಗೆ ನಡೆಸಲಾಗಿಲ್ಲ ಎಂದರೆ ಅಹವಾಲು ಸಭೆಯು ಅನೂರ್ಜಿತಗೊಂಡಿದೆ ಎಂದು ಹೇಳಲಾಗದು.

**ಪ್ರಕರಣ ವಿವರಗಳು: ಮೇಲ್ಮನವಿ ಸಂಖ್ಯೆ ೨೦/೨೦೧೧ (ಟಿ)**

ಎಸ್‌ಇಐಎಎ & ಇತರರ ವಿರುದ್ಧ ರಮೇಶ್ ಅಗರವಾಲ್ ಮತ್ತು ಇನ್ನೊಬ್ಬರು

**ತೀರ್ಪಿನ ಕೊಂಡಿ:**

http://www.indiankanoon.org/doc/59958653/

ತೀರ್ಪಿನ ದಿನಾಂಕ: ಮೇ ೩೧, ೨೦೧೨

## XIII. ಇಐಎ ವರದಿಯಲ್ಲಿ ಸಮಾಜೋ-ಆರ್ಥಿಕ ದತ್ತಾಂಶಗಳಿಗೆ ಪ್ರಾಥಮಿಕ ದತ್ತಾಂಶಗಳಿರಲೇಬೇಕು

ಇಐಎ ಕರಡು ವರದಿಯನ್ನು ಸಿದ್ಧಪಡಿಸುವಾಗ, ಪಾರಿಸರಿಕ ಸಮಾಲೋಚಕರು ಯೋಜನಾ ಪ್ರದೇಶದಲ್ಲಿ ಸಮಾಜೋ ಆರ್ಥಿಕ ದತ್ತಾಂಶಗಳಿಗೆ ಸಂಬಂಧಿಸಿದ ಪ್ರಾಥಮಿಕ ಮಾಹಿತಿಗಳನ್ನು ಸಂಗ್ರಹಿಸಬೇಕು ಮತ್ತು ಯೋಜನಾ ಪ್ರದೇಶದಲ್ಲಿ ಜನರ ಮೂಲಭೂತ ಅಗತ್ಯಗಳನ್ನು ಅರ್ಥ ಮಾಡಿಕೊಂಡು, ಅದಕ್ಕೆ ಅನುಗುಣವಾದ ಪಾರಿಸರಿಕ ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸಲು ಆರಂಭಿಕ ಸಮೀಕ್ಷೆಗಳನ್ನು ನಡೆಸಬೇಕು.

**ಪ್ರಕರಣ ವಿವರಗಳು: ಮೇಲ್ಮನವಿ ಸಂಖ್ಯೆ ೨೫, ೨೦೧೧**

ಗುಜರಾತ್ ರಾಜ್ಯ ಮಟ್ಟದ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರದ ವಿರುದ್ಧ ವಿನೋದ್ ಆರ್ ಪಟೇಲ್ ಮತ್ತು ಇನ್ನೊಬ್ಬರು

**ತೀರ್ಪಿನ ಕೊಂಡಿ:**

http://www.indiankanoon.org/doc/161693875/

ತೀರ್ಪಿನ ದಿನಾಂಕ: ಡಿಸೆಂಬರ್ ೧೮, ೨೦೧೨

## XIV. ಎಂಒಇಎಫ್ ಇಎಸಿಯ ಮೌಲ್ಯನಿರ್ಣಯ ಪ್ರಕ್ರಿಯೆಯನ್ನು ಪರಿಶೀಲಿಸುವುದು

೧. ತಜ್ಞ ಮೌಲ್ಯನಿರ್ಣಯ ಸಮಿತಿ(ಇಐಸಿ)ಯು ತನ್ನ ಸದಸ್ಯರೊಂದಿಗೆ ನಡೆಸಿದ ತಾಂತ್ರಿಕ ಚರ್ಚೆಯ ವಿವರಗಳನ್ನು ದಾಖಲಿಸಿ, ನಿರ್ವಹಣೆ ಮಾಡಬೇಕು. ಸಮಿತಿಯ ಪ್ರತಿಯೊಬ್ಬರೂ ಸದಸ್ಯರು ವ್ಯಕ್ತಪಡಿಸಿದ ದೃಷ್ಟಿಕೋನಗಳು, ಅಭಿಪ್ರಾಯಗಳು, ಟಿಪ್ಪಣಿಗಳು ಮತ್ತು ಸಲಹೆಗಳನ್ನು ವ್ಯವಸ್ಥಿತವಾದ ನಮೂನೆ/ವಿಧಾನದಲ್ಲಿ ದಾಖಲಿಸುವುದು ಅತ್ಯಗತ್ಯವಿದೆ.

೨. ಇಎಸಿಯಿಂದ ಯಾವುದಾದರೂ ವಿಷಯವನ್ನು ಬಹುಮತದಿಂದ ನಿರ್ಧರಿಸಲು ಸಾಧ್ಯವಾಗದಿದ್ದರೆ, ಅದಕ್ಕೆ ವಿಶೇಷ ಟಿಪ್ಪಣಿಯನ್ನು ಸಿದ್ಧಪಡಿಸಿ, ಬಹುಸಂಖ್ಯಾತರ ದೃಷ್ಟಿಕೋನಗಳನ್ನು ಒಪ್ಪಲು ಇರುವ ವೈಜ್ಞಾನಿಕ ಕಾರಣಗಳನ್ನು ದಾಖಲಿಸಿ, ಅದನ್ನು ಭವಿಷ್ಯದ ಉಲ್ಲೇಖಕ್ಕಾಗಿ ಕಾಯ್ದಿಡಬೇಕು.

೩. ಇಎಸಿ ಸಭೆಗಳ ನಡಾವಳಿಗಳು ಅಪರೂಪಕ್ಕೊಮ್ಮೆ ಪರಿಗಣನೆಗೆಂದು ಸಲ್ಲಿಸಿದ್ದ ಸಾರ್ವಜನಿಕ ಅಹವಾಲು ಸಭೆಯ ವಿಡಿಯೋ ಚಿತ್ರೀಕರಣವನ್ನು ನೋಡಿದ್ದರ ಕುರಿತು ನಿರ್ದಿಷ್ಟ ಉಲ್ಲೇಖವನ್ನು ಮಾಡಬಹುದು. ಇಎಸಿ ಇದನ್ನು ಟಿಪ್ಪಣಿ ಮಾಡಿಕೊಂಡು, ಈ ಕುರಿತ ಸಭೆಯ ದೃಷ್ಟಿಕೋನವನ್ನು ನಡಾವಳಿಯಲ್ಲಿ ಸೇರಿಸಬೇಕು.

೪. ಸಾರ್ವಜನಿಕ ಅಹವಾಲು ಸಭೆಯಲ್ಲಿ ಎತ್ತಲಾದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಇಎಸಿಗೆ ತನ್ನ ಮೌಲ್ಯನಿರ್ಣಯ ಪ್ರಕ್ರಿಯೆಯನ್ನು ಪರಿಶೀಲನೆ ಮಾಡಲು ಮತ್ತು ಮೊದಲಿನ ಮೌಲ್ಯನಿರ್ಣಯದ ಅವಧಿಯಲ್ಲಿ ಏನಾದರೂ ಅಂಶಗಳು ಬಿಟ್ಟುಹೋಗಿದ್ದರೆ ಅದಕ್ಕೆ ಗಮನ ಕೊಡುವಂತೆ ಹಾಗೂ ಅಗತ್ಯಬಿದ್ದರೆ ಹೆಚ್ಚುವರಿ ಕರಾರುಗಳನ್ನು ವಿಧಿಸುವಂತೆ ನಿರ್ದೇಶಿಸಲಾಗಿದೆ.

೫. ಪಾರಿಸರಿಕ ಅನುಮತಿ ವರದಿಯಲ್ಲಿ ಸಾಮಾನ್ಯ ಷರತ್ತುಗಳನ್ನು ಕನಿಷ್ಠವಾಗಿ ವಿಧಿಸುವಂತೆ ಮತ್ತು ಪ್ರತಿಯೊಂದೂ ಪ್ರಕರಣಕ್ಕೆ ಆಯಾ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಸಮಸ್ಯೆಗಳನ್ನು ಉದ್ದೇಶಿಸುವ ಅಗತ್ಯವನ್ನು ಹಾಗೂ ಅದರ ಕಾರ್ಯಸಾಧ್ಯತೆಯನ್ನು ಪ್ರತಿಫಲಿಸುವ ಷರತ್ತುಗಳನ್ನು ವಿಧಿಸುವಂತೆ ಎಂಒಇಎಫ್‌ಗೆ ನಿರ್ದೇಶಿಸಲಾಗಿದೆ.

೬. ಇಎಸಿಯ ಸಮಗ್ರಶೋಧನ ಪ್ರಕ್ರಿಯೆ ವಿಧಾನವನ್ನು ಎಂಒಇಎಫ್ ಪರಿಶೀಲಿಸಬೇಕು ಮತ್ತು ಭವಿಷ್ಯದಲ್ಲಿ ಹೆಚ್ಚು ವಿಶದವಾದ ದಾಖಲೀಕರಣ ಮಾಡಿ, ಅದನ್ನು ನಿರ್ವಹಿಸಬೇಕಾಗಿದೆ. ಎಲ್ಲ ಭವಿಷ್ಯದ ಮೌಲ್ಯನಿರ್ಣಯ ಪ್ರಕ್ರಿಯೆಗಳಲ್ಲಿ ಈ ಅಂಶಕ್ಕೆ ಸಂಪೂರ್ಣ ಅನುವರ್ತನೆಯನ್ನು ಖಾತ್ರಿಪಡಿಸಲು ಇಎಸಿಯ ಅಧ್ಯಕ್ಷರಿಗೆ ನಿರ್ದೇಶಿಸಲಾಗಿದೆ.

**ಪ್ರಕರಣ ವಿವರಗಳು: ಮೇಲ್ಮನವಿ ಸಂಖ್ಯೆ ೯, ೨೦೧೧**

ದಿ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರ ವಿರುದ್ಧ ಸಮತಾ ಮತ್ತು ಇನ್ನೊಬ್ಬರು

ತೀರ್ಪಿನ ಕೊಂಡಿ:

http://www.greentribunal.gov.in/judgment/92011(SZ)(Ap)_13Dec2013_final_order.pdf

ತೀರ್ಪಿನ ದಿನಾಂಕ: ೧೩ ಡಿಸೆಂಬರ್, ೨೦೧೩

## 2.6 ಪರಿಸರ ಮತ್ತು ಅರಣ್ಯಗಳ ಸಚಿವಾಲಯದ ಮಹತ್ವದ ಸುತ್ತೋಲೆಗಳು

2.6.1 ಮಾಹಿತಿ ಸಲ್ಲಿಸುವಿಕೆ ಮತ್ತು ಲಭ್ಯತೆ

2.6.2 ಕಲ್ಲಿದ್ದಲು ಸಂಪರ್ಕಗಳು

2.6.3 ಅಲ್ಟ್ರಾ ಮೆಗಾ ವಿದ್ಯುತ್ ಯೋಜನೆಗಳು (ಯುಎಂಪಿಪಿ)

2.6.4 ಇ.ಸಿ./ಎಫ್.ಸಿ./ಸಿ.ಆರ್. ಜಡ್. ಗಳ ಉಲ್ಲಂಘನೆಗಳು

2.6.5 ಸಾರ್ವಜನಿಕ ಅಹವಾಲು

2.6.6 ಪ್ರಸ್ತುತ ಇರುವ ಯೋಜನೆಗಳ ಮೇಲ್ವಿಚಾರಣೆ

2.6.7 ಒಂದೇ ಭೂಮಿಯಲ್ಲಿರುವ ಯೋಜನೆಗಳು

2.6.8 ಕಾರ್ಪೊರೇಟ್ ಪರಿಸರ ನೀತಿ

2.6.9 ಇಸಿ ನೀಡುವ ಮೊದಲು ಒಪ್ಪಿಗೆ ಇರುವ ಚಟುವಟಿಕೆಗಳು

2.6.10 ಯೋಜನೆಯ ವಿಸ್ತರಣೆ

2.6.11 ಒಪ್ಪಂದದ ಕರಾರಿನ ಊರ್ಜಿತತೆ

2.6.12 ಅಂತರ ಸಂಬಂಧವಿರುವ ಯೋಜನೆಗಳು

### 2.6.1 ಮಾಹಿತಿ ಸಲ್ಲಿಸುವಿಕೆ ಮತ್ತು ಲಭ್ಯತೆ

**ಜಾಲತಾಣದಲ್ಲಿ ಅಪ್ಲೋಡ್ ಮಾಡುವುದು:**

ಒಪ್ಪಂದದ ಕರಾರು, ನಮೂನೆ ೧ ಮತ್ತು ಕಾರ್ಯಸಾಧ್ಯತೆ-ಪೂರ್ವ ವರದಿಗಳನ್ನು ಎಂಒಇಎಫ್ ಜಾಲತಾಣದಲ್ಲಿ ಯೋಜನಾ ಪ್ರತಿಪಾದಕರಿಗೆ ತಿಳಿಸುವ ಮೊದಲೇ ಅಪ್ಲೋಡ್ ಮಾಡಬೇಕು. ಇದು ಸಂಬಂಧಿತ ನಿರ್ದೇಶಕರು ಮತ್ತು ವಿಭಾಗೀಯ ಇಎಸಿಯ ಸದಸ್ಯರ ಕಾರ್ಯದರ್ಶಿಯವರ ಜವಾಬ್ದಾರಿಯಾಗಿರುತ್ತದೆ. ಆ ಅಧಿಕಾರಿಯು ಇಸಿಯನ್ನು ಯೋಜನಾ ಪ್ರತಿಪಾದಕರಿಗೆ ತಿಳಿಸುವ ಮೊದಲೇ ಇಐಎ, ಇಎಂಪಿ, ಸಾರ್ವಜನಿಕ ಅಹವಾಲು ಸಭೆಯ ನಡಾವಳಿ, ಇಎಸಿ ಸಭೆಯ ನಡಾವಳಿ ಮತ್ತು ಇಸಿಯನ್ನು ಎಂಒಇಎಫ್ ಜಾಲತಾಣದಲ್ಲಿ ಅಪ್ಲೋಡ್ ಮಾಡುವುದನ್ನು ಖಾತ್ರಿಪಡಿಸಬೇಕು.

ಆದೇಶದ ದಿನಾಂಕ: ಆಗಸ್ಟ್ ೨೯, ೨೦೧೩

ಕೊಂಡಿ: http://www.MoEF.nic.in/sites/default/files/OM-reg-sTorage-of-files-29.8.13.pdf

**ಹೆಚ್ಚುವರಿ ಮಾಹಿತಿಯ ಸಲ್ಲಿಸುವಿಕೆ:**

ಇಎಸಿಯು ಯೋಜನಾ ಪ್ರತಿಪಾದಕರಿಗೆ ಏನಾದರೂ ಮಾಹಿತಿಯನ್ನು ಸಲ್ಲಿಸುವಂತೆ ಕೇಳಿದರೆ, ಅದನ್ನು ಇಎಸಿ ಸಭೆಯು ನಡೆದ ದಿನಾಂಕದಿಂದ ೬ ತಿಂಗಳ ಒಳಗೆ ಸಲ್ಲಿಸಬೇಕು. ಈ ಅವಧಿಯ ನಂತರ, ಮಾಹಿತಿಯನ್ನು ಸಲ್ಲಿಸದಿದ್ದರೆ, ಯೋಜನೆಯನ್ನು ಬಾಕಿ ಇರುವ ಯೋಜನೆಗಳ ಪಟ್ಟಿಯಿಂದ ತೆಗೆದು ಹಾಕಲಾಗುವುದು.

ಇಎಸಿಯು ಮಾಹಿತಿಯನ್ನು ಕೋರಿ, ಮೂರರಿಂದ ಆರು ತಿಂಗಳಿನವರೆಗೆ ಅದು ಬಾಕಿ ಉಳಿದರೆ, ಯೋಜನಾ ಪ್ರತಿಪಾದಕರಿಗೆ ಒಂದು ತಿಂಗಳಿನ ಒಳಗೆ ಮಾಹಿತಿ ಒದಗಿಸುವಂತೆ ಒಂದು ನೆನಪಿನಪತ್ರವನ್ನು ಕಳಿಸಲಾಗುವುದು. ಯೋಜನಾ ಪ್ರತಿಪಾದಕರು ಒದಗಿಸಲು ವಿಫಲರಾದರೆ, ಯೋಜನೆಯನ್ನು ಬಾಕಿ ಉಳಿದ ಯೋಜನೆಗಳ ಪಟ್ಟಿಯಿಂದ ತೆಗೆದು ಹಾಕಲಾಗುವುದು.

ದಿನಾಂಕ: ೩೦ ಅಕ್ಟೋಬರ್, ೨೦೧೨

ಕೊಂಡಿ: http://MoEF.nic.in/assets/ia-30102012.pdf

## ಯೋಜನೆಯ ದಾಖಲೆಗಳ ಸಾಫ್ಟ್ ಪ್ರತಿಗಳ ಸಲ್ಲಿಕೆ

ಯೋಜನಾ ಪ್ರತಿಪಾದಕರು ಮುದ್ರಿತ ಪ್ರತಿಗಳ ಜೊತೆಗೆ ಈ ಕೆಳಗಿನ ದಾಖಲೆಗಳ ಪಿಡಿಎಫ್ ರೂಪದ ಸಾಫ್ಟ್ ಪ್ರತಿಗಳನ್ನು ಕೂಡ ಎಂಒಇಎಫ್/ಎಸ್‌ಇಐಎಎಗೆ ಸಲ್ಲಿಸಬೇಕು.

- ನಮೂನೆ ೧
- ಕಾರ್ಯಸಾಧ್ಯತೆ-ಪೂರ್ವ ವರದಿ
- ಒಪ್ಪಂದದ ಕರಡು
- ಇಐಎ
- ಇಐಎ ಯೋಜನೆಗಳಿಗೆ ತುಂಬಲಾದ ಪ್ರಶ್ನಾವಳಿ
- ಸಾರ್ವಜನಿಕ ಅಹವಾಲು ಸಭೆಯ ಕಲಾಪಗಳು
- ಇಎಸಿಯ ಸೂಚನೆಗೆ ಅನುಗುಣವಾಗಿ ಕೈಗೆತ್ತಿಕೊಂಡ ಎಲ್ಲ ಅಧ್ಯಯನ ವರದಿಗಳು
- ಇಎಸಿಗೆ ಯೋಜನಾ ಪ್ರತಿಪಾದಕರು ಸಲ್ಲಿಸಿದ ಯಾವುದೇ ಹೆಚ್ಚುವರಿ ಮಾಹಿತಿ

ಎಂಒಇಎಫ್/ಎಸ್‌ಇಐಎಎ ಜಾಲತಾಣಗಳಲ್ಲಿ ಈ ದಾಖಲೆಗಳನ್ನು ಅಪ್ಲೋಡ್ ಮಾಡುವುದಕ್ಕೆ ಇದು ಅನುಕೂಲ ಮಾಡಿಕೊಡುತ್ತದೆ. ಸಾಫ್ಟ್ ಮತ್ತು ಮುದ್ರಿತ ಪ್ರತಿಗಳಿಲ್ಲದೇ ಸಲ್ಲಿಸಲಾದ ಯಾವುದೇ ಮಾಹಿತಿಯನ್ನು ಅಪೂರ್ಣ ಎಂದು ಪರಿಗಣಿಸಲಾಗುವುದು ಮತ್ತು ಅದನ್ನು ಪ್ರಕ್ರಿಯೆಗೊಳಿಸಲಾಗುವುದಿಲ್ಲ. ಇಎಸಿಯ ಸದಸ್ಯ ಕಾರ್ಯದರ್ಶಿಯವರು ಮತ್ತು ಎಸ್‌ಇಐಎಎ ಈ ದಾಖಲೆಗಳನ್ನು ಇಎಸಿ/ಎಸ್‌ಇಎಸಿ ಸ್ಥಳ ಭೇಟಿ ವರದಿಗಳೊಂದಿಗೆ ಅಪ್ಲೋಡ್ ಮಾಡಬೇಕು.

ದಿನಾಂಕ: ಮಾರ್ಚ್ ೨೦, ೨೦೧೨

ಕೊಂಡಿ: http://envfor.nic.in/downloads/public-information/order-20032012-a.pdf

## ಸರಿಯಾದ ಮತ್ತು ಮೂಲ ಮಾಹಿತಿ ಒದಗಿಸುವುದು:

ಇಐಎಯಲ್ಲಿ ಸರಿಯಾದ ದತ್ತಾಂಶಗಳನ್ನು ಸಲ್ಲಿಸುವ ಹೊಣೆಯು ಯೋಜನಾ ಪ್ರತಿಪಾದಕರ ಮೇಲೆ ಇದೆ, ಏಕೆಂದರೆ ಒಂದು ಇಐಎದ ವಿಷಯವಸ್ತುವನ್ನು ಇನ್ನೊಂದರ ಮಾಹಿತಿಗೆ ಹೋಲಿಸಿ ಅಥವಾ ದತ್ತಾಂಶವನ್ನು ನಕಲುಪ್ರತಿ ಮಾಡಲಾಗಿದೆಯೇ ಎಂದು ಪರಿಶೀಲಿಸುವುದು ಎಂಒಇಎಫ್ ಅಥವಾ ಇಎಸಿಗೆ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಆದ್ದರಿಂದ ಯೋಜನಾ ಪ್ರತಿಪಾದಕರು ಇಐಎ ವರದಿಯಲ್ಲಿ, ಇಐಎ ವಿಷಯವಸ್ತುವಿನ ಒಡೆತನ ತೆಗೆದುಕೊಳ್ಳುವುದಾಗಿ ವಾಗ್ದಾನ ಮಾಡುವ ಪತ್ರವೊಂದನ್ನು ಸಲ್ಲಿಸಬೇಕು. ಯಾವುದೇ ಹಂತದಲ್ಲಿ ಇಐಎದಲ್ಲಿರುವ ದತ್ತಾಂಶಗಳನ್ನು ಬೇರೆ ವರದಿಗಳಿಂದ ಹೊರತೆಗೆಯಲಾಗಿದೆ ಎಂಬುದು ಎಂಒಇಎಫ್ನ ಗಮನಕ್ಕೆ ತಂದರೆ, ಯೋಜನೆಯನ್ನು ತಕ್ಷಣವೇ ತಿರಸ್ಕರಿಸಲಾಗುವುದು. ನಂತರ ಯೋಜನಾ ಪ್ರತಿಪಾದಕರು ಹೊಸ ಇಸಿಗೆ ಅರ್ಜಿ ಸಲ್ಲಿಸಬೇಕು. ಒಂದು ನಕಲುಪ್ರತಿ ಮಾಡಲಾದ ಇಐಎ ವರದಿಯನ್ನು ಆಧರಿಸಿ ಇಸಿಯನ್ನು ನೀಡಿದ್ದರೆ, ಅದನ್ನು ರದ್ದುಪಡಿಸಲಾಗುವುದು. ಈ ಸಂದರ್ಭದಲ್ಲಿಯೂ ಇಸಿಗೆ ಹೊಸದಾಗಿ ಕಾರ್ಯವಿಧಾನವನ್ನು ಆರಂಭಿಸಬೇಕಾಗುತ್ತದೆ.

ಹಾಗೆಯೇ, ಇಐಎ ಸಮಾಲೋಚಕರನ್ನು ಮಾನ್ಯತೆ ಪಡೆದಿರುವ ಸಮಾಲೋಚಕರ ಪಟ್ಟಿಯಿಂದ ಕೈಬಿಡಲಾಗುವುದು.

ದಿನಾಂಕ: ಅಕ್ಟೋಬರ್ ೫, ೨೦೧೧

ಕೊಂಡಿ: http://envfor.nic.in/downloads/public-information/OM_IA_ownershipEIA.pdf

### 2.6.2 ಕಲ್ಲಿದ್ದಲು ಪೂರೈಕೆ ವ್ಯವಸ್ಥೆ ಅಥವಾ ಕಲ್ಲಿದ್ದಲು ಸಂಪರ್ಕ

ದೇಶೀ ಕಲ್ಲಿದ್ದಲಿನ ಮೇಲೆ ಅವಲಂಬಿಸಿದ ಉಷ್ಣ ವಿದ್ಯುತ್ ಸ್ಥಾವರಗಳು ಇಸಿ/ಎಫ್ಸಿ ಹೊಂದಿರುವ ಕೋಲ್ ಇಂಡಿಯಾ ಅಥವಾ ಸಿಂಗಾರೇನಿ ಕೋಲೆರೀಸ್ ಕಂಪನಿಯ ಕಲ್ಲಿದ್ದಲು ಸಮೂಹಗಳಿಂದ ಕಲ್ಲಿದ್ದಲನ್ನು ಪಡೆದುಕೊಳ್ಳುತ್ತವೆ,

ಇಐಎ/ಎಂಪಿಯಲ್ಲಿ ಕಲ್ಲಿದ್ದಲಿನ ಕ್ಯಾಲೋರಿಫಿಕ್ ಮೌಲ್ಯ, ಬೂದಿ ಮತ್ತು ಗಂಧಕದ ಪ್ರಮಾಣವನ್ನು ಉಲ್ಲೇಖಿಸಿದಾಗ ಮಾತ್ರವೇ ಇಸಿಗೆ ಪ್ರಸ್ತಾವನೆಯನ್ನು ಪರಿಗಣಿಸಲಾಗುತ್ತದೆ. ಪ್ರಸ್ತಾಪಿತ ಯೋಜನೆಯೊಂದಕ್ಕೆ ಅನುಮತಿ ನೀಡಲು ಕಲ್ಲಿದ್ದಲು ಪೂರೈಕೆ ವ್ಯವಸ್ಥೆ ಅಥವಾ ಸಂಪರ್ಕವು ಒಂದು ಪೂರ್ವಅಗತ್ಯವಾಗಿದೆ. ಕಲ್ಲಿದ್ದಲು ಸಚಿವಾಲಯದ ಸ್ಥಾಯಿ ಸಂಪರ್ಕ ಸಮಿತಿಯು ನಿಗದಿಪಡಿಸಿದಂತೆ ಇಂಧನ ಪೂರೈಕೆ ಒಪ್ಪಂದ ಅಥವಾ ಒಂದು ನಿರ್ದಿಷ್ಟ ಗಣಿ/ಗಣಿಗಳ ಸಮೂಹ/ಮೀಸಲು ಕಲ್ಲಿದ್ದಲು ಘಟಕದ ಸಂಪರ್ಕ ಪಡೆದಿರುವುದು ಅಗತ್ಯವಿದೆ. ಈ ಸಂಪರ್ಕದ ವಿವರಗಳಲ್ಲಿ ಕಲ್ಲಿದ್ದಲಿನ ಕ್ಯಾಲೋರಿಫಿಕ್ ಮೌಲ್ಯವಲ್ಲದೇ, ಬೂದಿ ಮತ್ತು ಗಂಧಕದ ಪ್ರಮಾಣವನ್ನೂ ಒದಗಿಸಬೇಕು. ಯೋಜನೆಗೆ ಇಐಎ ಸಿದ್ಧಪಡಿಸುವಾಗ ಕಲ್ಲಿದ್ದಲಿನ ಈ ಗುಣಲಕ್ಷಣಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು.

ನಂತರ, ಕಲ್ಲಿದ್ದಲಿನ ಈ ಮಾನದಂಡಗಳಲ್ಲಿ ಏನಾದರೂ ಬದಲಾವಣೆಯಾದರೆ, ಅದನ್ನು ಎಂಒಇಎಫ್ಗೆ ತಿಳಿಸಿ, ಇಸಿ ಕರಾರುಗಳನ್ನು ಪುನಾಪರಿಶೀಲನೆ ಮಾಡಬೇಕು ಮತ್ತು ಅದರ ಸಮರ್ಪಕತೆಯನ್ನು ಪರೀಕ್ಷಿಸಬೇಕು. ಇವುಗಳು ಗಂಧಕದ ಆಕ್ಸೈಡ್ ಹೊರಸೂಸುವುದನ್ನು ನಿಯಂತ್ರಿಸಲು ಹೊರಸೂಸುವ ಅನಿಲವನ್ನು ಗಂಧಕರಹಿತವಾಗಿಸುವುದೂ ಸೇರಿದಂತೆ ಹೆಚ್ಚುವರಿ ಕರಾರುಗಳನ್ನು ವಿಧಿಸುವುದನ್ನು ಒಳಗೊಂಡಿರಬಹುದು.

ದಿನಾಂಕ: ೧೯ ಏಪ್ರಿಲ್ ೨೦೧೨

ಕೊಂಡಿ: http://envfor.nic.in/downloads/public-information/notif-20042012.pdf

ಕಲ್ಲಿದ್ದಲಿನ ಪೂರೈಕೆ ವ್ಯವಸ್ಥೆ ಅಥವಾ ಸಂಪರ್ಕದ ಕುರಿತ ವಿವರಗಳನ್ನು ಇಐಎ ವರದಿಯಲ್ಲಿ ನೀಡುವುದು ಅಗತ್ಯವಿದೆ, ಆದರೆ ಒಪ್ಪಂದದ ಕರಾರುಗಳನ್ನು ನೀಡುವ ಅಗತ್ಯವಿಲ್ಲ.

ದಿನಾಂಕ: ೧೯ ಜನವರಿ ೨೦೧೧

ಕೊಂಡಿ: http://envfor.nic.in/downloads/public-information/Cir-19-01-2011.pdf

## 2.6.3 ಅಲ್ಟ್ರಾ ಮೆಗಾ ವಿದ್ಯುತ್ ಯೋಜನೆಗಳು (ಯುಎಂಪಿಪಿ)

ಅತಿಕ್ರಮಿಸಬಾರದ ಪ್ರದೇಶಗಳು ಎಂದರೆ ಅಂತಹ ಪ್ರದೇಶಗಳಲ್ಲಿ ಕೆಲವೊಂದು ಕೈಗಾರಿಕಾ ಚಟುವಟಿಕೆಗಳನ್ನು ನಡೆಸುವುದಕ್ಕೆ ಆಸ್ಪದವಿಲ್ಲ ಎಂದರ್ಥ. ಯುಎಂಪಿಪಿಗೆ ಸಂಪರ್ಕ ಹೊಂದಿರುವ ಒಂದು ಕಲ್ಲಿದ್ದಲು ಘಟಕವು ಅತಿಕ್ರಮಿಸಬಾರದ ಪ್ರದೇಶದಲ್ಲಿ ಇಲ್ಲ ಎಂದರೆ, ಯುಎಂಪಿಪಿಗೆ ಇಸಿಯನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುವುದು, ಅದನ್ನು ಕಲ್ಲಿದ್ದಲು ಹಂಚಿಕೆಗೆ ಅತ್ಯಗತ್ಯವಾಗಿರುವ ಇಸಿ ಮತ್ತು ಹಂತ ೧ ಎಫ್ಸಿಗೆ ಕೊಂಡಿಯಾಗಿಸುವುದಿಲ್ಲ.

ಆಮದಾದ ಕಲ್ಲಿದ್ದಲನ್ನು ಬಳಸುವ ಯುಎಂಪಿಪಿಗಳಿಗೆ, ಈ ಕೆಳಗಿನ ಮಾನದಂಡಗಳು ಕಡ್ಡಾಯವಾಗಿವೆ:

| | |
|---|---|
| ಒಟ್ಟು ಕ್ಯಾಲೋರಿಫಿಕ್ ಮೌಲ್ಯ (ಕಿ.ಕ್ಯಾಲರಿ/ಕೆಜಿ) - | ೫೦೦೦ ಕನಿಷ್ಠ; |
| ಬೂದಿ ಪ್ರಮಾಣ - | ೧೨% ಗರಿಷ್ಠ |
| ಗಂಧಕದ ಪ್ರಮಾಣ- | ೦.೮ % |

ಇಸಿ ಊರ್ಜಿತತೆಯು ಈ ಕೆಳಗಿನ ಮಾನದಂಡಗಳಿಗೆ ಬದ್ಧವಾಗಿರುವುದಕ್ಕೆ ಒಳಪಟ್ಟಿರುತ್ತದೆ.

ಈ ಯೋಜನೆಗಳಿಗೆ ಇಐಎ/ಇಎಂಪಿಯು ಈ ಕೆಳಗಿನ ವಿವರಗಳನ್ನು ಕೂಡ ಒಳಗೊಂಡಿರಬೇಕು:

- ಆಮದಾದ ಕಲ್ಲಿದ್ದಲಿಗೆ ಅಗತ್ಯವಾದ ಬಂದರು, ಜೆಟ್ಟಿ, ರೈಲ್ವೆ ಲೈನ್
- ಬಂದರಿನ ಕಲ್ಲಿದ್ದಲು ನಿಭಾಯಿಸುವ ಸಾಮರ್ಥ್ಯ
- ಬಂದರಿನಿಂದ ಸ್ಥಾವರಕ್ಕೆ ಕಲ್ಲಿದ್ದಲಿನ ಸಾಗಾಣಿಕೆ

ಆದೇಶ ೧ರ ದಿನಾಂಕ: ೩೦ ಡಿಸೆಂಬರ್ ೨೦೧೩

ಕೊಂಡಿ: http://MoEF.nic.in/sites/default/files/OM%2030.12.2013.pdf

ಆದೇಶ ೨ರ ದಿನಾಂಕ: ಫೆಬ್ರವರಿ ೫, ೨೦೧೩

ಕೊಂಡಿ: http://MoEF.nic.in/assets/om-050513.pdf

## 2.6.4 ಇ.ಸಿ./ಎಫ್.ಸಿ./ಸಿ.ಆರ್. ಜಡ್. ಗಳ ಉಲ್ಲಂಘನೆಗಳು

- ಯೋಜನಾ ಪ್ರತಿಪಾದಕರು ಅರಣ್ಯವಲ್ಲದ ಭೂಮಿಯ ಮೇಲೆ ಯೋಜನೆಯನ್ನು ಸ್ಥಾಪಿಸುವ ಕಾರ್ಯಸಾಧ್ಯತೆಯನ್ನು ಪರಿಶೀಲಿಸಬೇಕು. ಅದು ಸಾಧ್ಯವಿಲ್ಲ ಎಂದಾದರೆ, ನಮೂನೆ ೧ನ್ನು ಸಲ್ಲಿಸುವ ಮೊದಲೇ ಅರಣ್ಯ ಭೂಮಿಯನ್ನು ಯೋಜನೆಗೆ ತಿರುಗಿಸುವುದಕ್ಕೆ ಮಂಜೂರಾತಿಗೆ ಒಂದು ಅರ್ಜಿಯನ್ನು ಸಲ್ಲಿಸಬೇಕು. ಅರಣ್ಯ ಭೂಮಿಯನ್ನು ಬೇರೆ ಉದ್ದೇಶಕ್ಕೆ ತಿರುಗಿಸುವುದಕ್ಕೆ (ಅರಣ್ಯ ಸಂರಕ್ಷಣಾ ಕಾಯಿದೆ, ೧೯೮೦ ಅಡಿಯಲ್ಲಿ) ಹಂತ ೧ ಮಂಜೂರಾತಿ ದೊರೆತ ನಂತರವಷ್ಟೆ ಇಸಿಯನ್ನು ನೀಡಲಾಗುವುದು.

- ಯೋಜನಾ ಪ್ರತಿಪಾದಕರು ಮೌಲಿಕ ಸಿ.ಆರ್.ಜಡ್. ಅಥವಾ ಎಫ್.ಸಿ. ಅಥವಾ ಇಸಿ ಇಲ್ಲದೆಯೇ ಅಥವಾ ಅಲ್ಲಿರುವ ಕರಾರುಗಳನ್ನು ಉಲ್ಲಂಘಿಸಿ, ನಿರ್ಮಾಣವನ್ನು ನಡೆಸಿದರೆ, ಅಗತ್ಯವಾದ ಅನುಮತಿ ದೊರೆಯುವವರೆಗೂ ಅಥವಾ ತಿದ್ದುಪಡಿ ದೊರೆಯುವರೆಗೂ ನಿರ್ಮಾಣ ಚಟುವಟಿಕೆಗಳನ್ನು ಅದಿರುವ ಹಂತದಲ್ಲಿಯೇ ಸ್ಥಗಿತಗೊಳಿಸುವಂತೆ ಎಂಒಇಎಫ್ ಆದೇಶ ಹೊರಡಿಸಬೇಕು.

- ಯೋಜನಾ ಪ್ರತಿಪಾದಕರು ತಮಗೆ ನೀಡಲಾದ ಸಿ.ಆರ್.ಜಡ್. /ಇಸಿಯಲ್ಲಿ ಸೂಚಿಸಲಾದ ಸಾಮರ್ಥ್ಯವನ್ನೂ ಮೀರಿ ಉತ್ಪಾದನೆಯಲ್ಲಿ ತೊಡಗಿಸಿಕೊಂಡರೆ, ಆಗ ಎಂ.ಒ.ಇ.ಎಫ್. ನ ಪ್ರತಿಪಾದಕರಿಗೆ ವಿಸ್ತರಿತ ಪ್ರಮಾಣಕ್ಕೆ ಅನುಮತಿಯನ್ನು ನೀಡುವವರೆಗೂ ಉತ್ಪಾದನೆಯನ್ನು ಮಂಜೂರಾತಿ ನೀಡಿದ ಸಾಮರ್ಥ್ಯಕ್ಕಷ್ಟೆ ಸೀಮಿತಗೊಳಿಸುವಂತೆ ಆದೇಶ ಹೊರಡಿಸಬೇಕು.

- ಸ್ಥಾವರವು ಸಿ.ಆರ್.ಜಡ್. /ಇಸಿಯಿಲ್ಲದೇ ಕಾರ್ಯಾಚರಣೆ ಮಾಡುತ್ತಿದ್ದರೆ, ಆಗ ಎಂ.ಒ.ಇ.ಎಫ್ ಅನುಮತಿಯನ್ನು ಪಡೆಯುವವರೆಗೂ ಉತ್ಪಾದನೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವಂತೆ ಆದೇಶ ಹೊರಡಿಸಬೇಕು.

- ಯೋಜನೆಯ ಆಧುನೀಕರಣ ಅಥವಾ ಉತ್ಪಾದನಾ ಮಿಶ್ರಣವನ್ನು ಬದಲಾವಣೆ ಮಾಡುವುದನ್ನು ಅನುಮತಿ ದೊರೆಯುವವರೆಗೂ ಎಂ.ಒ.ಇ.ಎಫ್. ಸ್ಥಗಿತಗೊಳಿಸಬೇಕು ಮತ್ತು ಆಧುನೀಕರಣ/ಬದಲಾವಣೆಗೆ ಮೊದಲಿನ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಬೇಕು.

ಎಂ.ಒ.ಇ.ಎಫ್.ಗೆ ಯೋಜನಾ ಪ್ರತಿಪಾದಕರಿಂದ ಈ ಕುರಿತ ಅನುವರ್ತನೆಗಳನ್ನು ಪಡೆದುಕೊಳ್ಳುವುದರ ಜೊತೆಗೆ ಸಕಾಲದಲ್ಲಿ ಈ ಆದೇಶಗಳನ್ನು ಹೊರಡಿಸುವ ಕಾರ್ಯವನ್ನು ವಹಿಸಿಕೊಡಲಾಗಿದೆ. ಮೇಲೆ ನೀಡಲಾದ ನಿರ್ದೇಶನಗಳ ಉಲ್ಲಂಘನೆಯಾದರೆ, ಯೋಜನಾ ಪ್ರತಿಪಾದಕರ ವಿರುದ್ಧ ಇಪಿಎ ೧೯೮೬ರ ಪ್ರಾವಧಾನಗಳ ಅಡಿಯಲ್ಲಿ ಕಾನೂನು ಕ್ರಮ ಜರುಗಿಸಬಹುದು ಮತ್ತು ಕೂಡಲೇ ಅನುಮತಿಗಳನ್ನು ತಿರಸ್ಕರಿಸಬಹುದು.

ಆದೇಶದ ದಿನಾಂಕ: ಜೂನ್ ೨೭, ೨೦೧೩

ಕೊಂಡಿ: http://www.MoEF.nic.in/sites/default/files/om-270613.pdf

### ಅನುಮತಿಯಿಲ್ಲದೇ ಕಾರ್ಯಾಚರಣೆ:

ಅಗತ್ಯವಾದ ಸಿ.ಆರ್.ಜಡ್. /ಇಸಿ ಇಲ್ಲದೆಯೇ ಸ್ಥಾವರವೊಂದು ಕಾರ್ಯನಿರ್ವಹಣೆ ಮಾಡುತ್ತಿರುವುದರ ಕುರಿತು ಎಂ.ಒ.ಇ.ಎಫ್. ದೂರುಗಳನ್ನು ಸ್ವೀಕರಿಸಿದರೆ, ದೂರಿನ ಸತ್ಯಾಸತ್ಯತೆಯನ್ನು ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರ, ರಾಜ್ಯ ಸರ್ಕಾರ ಅಥವಾ ಎಂ.ಒ.ಇ.ಎಫ್.ನ ಪ್ರಾದೇಶಿಕ ಕಚೇರಿಗಳು ಪರೀಕ್ಷಿಸುತ್ತವೆ. ೬೦ ದಿನಗಳಲ್ಲಿ, ಯೋಜನಾ ಪ್ರತಿಪಾದಕರು ವಿಷಯವನ್ನು (ಕಂಪನಿಗಳ) ನಿರ್ದೇಶಕರ ಮಂಡಳಿಗೆ ಅಥವಾ (ಟ್ರಸ್ಟಗಳ) ಸಿಇಒ ಅವರಲ್ಲಿ ತೆಗೆದುಕೊಂಡು ಹೋಗಬೇಕು ಮತ್ತು ಉಲ್ಲಂಘನೆಯನ್ನು ಪುನರಾವರ್ತಿಸುವುದಿಲ್ಲ ಎಂದು ಔಪಚಾರಿಕ ಒಪ್ಪಂದ ಮಾಡಿಕೊಳ್ಳಬೇಕು. ಇದೇ ವೇಳೆ, ಯೋಜನೆಯನ್ನು ಎಂ.ಒ.ಇ.ಎಫ್. ಪಟ್ಟಿಯಿಂದ ಕೈಬಿಡುತ್ತದೆ. ಯೋಜನಾ ಪ್ರತಿಪಾದಕರ ವಿವರಗಳನ್ನು ಮತ್ತು ಒಪ್ಪಂದದ ಒಂದು ಪ್ರತಿಯನ್ನು ಎಂ.ಒ.ಇ.ಎಫ್ ಜಾಲತಾಣದಲ್ಲಿ ಅಪ್ಲೋಡ್ ಮಾಡಬೇಕು.

೬೦ ದಿನಗಳಲ್ಲಿ ಯಾವುದೇ ಪ್ರತಿಕ್ರಿಯೆ ಬಾರದಿದ್ದರೆ, ಯೋಜನಾ ಪ್ರತಿಪಾದಕರಿಗೆ ಯೋಜನೆಯನ್ನು

ಕೈಗೆತ್ತಿಕೊಳ್ಳುವಲ್ಲಿ ಯಾವುದೇ ಆಸಕ್ತಿಯಿಲ್ಲ ಎಂದು ಭಾವಿಸಲಾಗುವುದು ಮತ್ತು ಕಡತವನ್ನು ಸ್ಥಗಿತಗೊಳಿಸಲಾಗುತ್ತದೆ. ಯೋಜನಾ ಪ್ರತಿಪಾದಕರಿಗೆ ಇನ್ನೂ ಯೋಜನೆಯಲ್ಲಿ ಆಸಕ್ತಿಯಿದ್ದರೆ, ಪ್ರಕ್ರಿಯೆಗಳನ್ನು ಹೊಸದಾಗಿ ಆರಂಭಿಸಬೇಕಾಗುತ್ತದೆ.

ಯೋಜನಾ ಪ್ರತಿಪಾದಕರ ಮೇಲೆ ಉಲ್ಲಂಘನೆಯ ಅವಧಿಗಾಗಿ ಕಾನೂನು ಕ್ರಮ ಜರುಗಿಸಲು ವಿಶ್ವಾಸಾರ್ಹ ಕ್ರಮಗಳನ್ನು ರಾಜ್ಯ ಸರ್ಕಾರವು ಆರಂಭಿಸಬೇಕಾಗುತ್ತದೆ. ನಂತರ ಎಂ.ಒ.ಇ.ಎಫ್.ಗೆ ತಾನು ತೆಗೆದುಕೊಂಡ ವಿಶ್ವಾಸಾರ್ಹ ಕ್ರಮಗಳ ಪುರಾವೆಯನ್ನು ಒದಗಿಸಬೇಕು.

ಉಲ್ಲಂಘನೆ/ಗಳ ಕುರಿತಾಗಿ ಕ್ರಮಗಳನ್ನು ತೆಗೆದುಕೊಂಡ ನಂತರ, ಅನುಮತಿಯನ್ನು ಪಡೆದುಕೊಳ್ಳಲು ಸಾಮಾನ್ಯವಾದ ಕಾರ್ಯವಿಧಾನಗಳನ್ನು ಅನುಸರಿಸಲಾಗುವುದು. ಆದಾಗ್ಯೂ, ಇಂತಹ ಪ್ರಕರಣಗಳಿಗೆ ಒಪ್ಪಂದದ ಕರಾರುಗಳನ್ನು ಅಥವಾ ಅನುಮತಿಯನ್ನು ನೀಡುವುದು ಯೋಜನಾ ಪ್ರತಿಪಾದಕರ ಹಕ್ಕಿನ ವಿಷಯವಾಗಿ ಉಳಿದಿರುವುದಿಲ್ಲ. ಉಲ್ಲಂಘನೆಯ ಸ್ವರೂಪವು ಗಂಭೀರವಾಗಿದ್ದರೆ, ಸಚಿವಾಲಯವು ಪ್ರಸ್ತಾವನೆಯನ್ನು ಸಾರಾಸಗಟಾಗಿ ತಿರಸ್ಕರಿಸಬಹುದು.

ದಿನಾಂಕ: ಡಿಸೆಂಬರ್ ೧೨, ೨೦೧೨

ಕೊಂಡಿ: http://MoEF.nic.in/assets/om-12122012-b.pdf

## 2.6.5 ಸಾರ್ವಜನಿಕ ಅಹವಾಲು ಸಭೆ

**ಪ್ರಚಾರ:**

ವಿವಿಧ ಯೋಜನೆಗಳಿಗೆ ಸಂಬಂಧಿಸಿದ ಅಹವಾಲುಗಳನ್ನು ಒಂದೇ ದಿನ ಒಂದೇ ಸಮಯದಲ್ಲಿ ನಡೆಸುವಂತಿಲ್ಲ. ಎರಡು ಅಹವಾಲುಗಳನ್ನು ಒಂದೇ ದಿನ ನಡೆಸಲು ನಿಗದಿ ಮಾಡಿದ್ದರೆ, ಆಗ ಎರಡರ ನಡುವೆ ಸಾಕಷ್ಟು ಕಾಲಾವಕಾಶ ನೀಡಿರಬೇಕು.

ಸಾರ್ವಜನಿಕ ಅಹವಾಲು ಸಭೆಯ ಕಲಾಪಗಳಲ್ಲಿ ಎಸ್ಪಿಸಿಬಿಯು ನೀಡಿದ ಪ್ರಚಾರದ ವಿವರಗಳನ್ನು ನೀಡಿರಬೇಕು.

ಎಸ್ಪಿಸಿಬಿಯು ಅನುಸರಿಸಿದ ಪ್ರಕ್ರಿಯೆಗಳು ಸಮರ್ಪಕವಾಗಿದ್ದವು ಎಂದು ಪ್ರಮಾಣೀಕರಣಗೊಳಿಸಬೇಕು.

ದಿನಾಂಕ: ಏಪ್ರಿಲ್ ೦೬, ೨೦೧೦

ಕೊಂಡಿ: http://envfor.nic.in/divisions/iass/Cir/pub_hear_EIA.pdf

## ವಿಶೇಷ ಆರ್ಥಿಕ ವಲಯಗಳಲ್ಲಿ (ಎಸ್.ಇ.ಜಡ್.) ಸಾರ್ವಜನಿಕ ಅಹವಾಲು ಸಭೆ:

ಇಡೀ ವಿಶೇಷ ಆರ್ಥಿಕ ವಲಯವು (ಎಸ್.ಇ.ಜಡ್.) ಒಂದು ಸಾರ್ವಜನಿಕ ಅಹವಾಲು ಸಭೆಯನ್ನು ನಡೆಸಿದರೆ, ಅದರ ಪ್ರತ್ಯೇಕ ಘಟಕಗಳು ಇನ್ನೊಂದು ಅಹವಾಲು ಸಭೆಯನ್ನು ನಡೆಸುವುದರಿಂದ ವಿನಾಯಿತಿ ನೀಡಬಹುದು. ಆದರೆ ಮೊದಲಿನ ಸಾರ್ವಜನಿಕ ಅಹವಾಲು ಸಭೆಯ ಸಮಯದಲ್ಲಿ ಎಸ್.ಇ.ಜಡ್.ನ ಭಾಗವಾಗಿರದಿದ್ದರೆ, ಯಾವುದೇ ಪ್ರತ್ಯೇಕ ಘಟಕ/ಪ್ರಕ್ರಿಯೆಗಳಿಗೆ ಹೊಸ ಅಹವಾಲು ಸಭೆಯನ್ನು ನಡೆಸಲೇಬೇಕು.

ದಿನಾಂಕ: ನವೆಂಬರ್ ೧, ೨೦೧೨

ಕೊಂಡಿ: http://MoEF.nic.in/assets/ia-01112012.pdf

**ಸಾರ್ವಜನಿಕ ಅಹವಾಲು ಸಭೆಯ ಕಲಾಪಗಳನ್ನು ಅಪ್ಲೋಡ್ ಮಾಡುವುದು:**

ಎಲ್ಲ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಗಳು/ಕೇಂದ್ರಾಡಳಿತ ಪ್ರದೇಶಗಳ ಮಾಲಿನ್ಯ ನಿಯಂತ್ರಣಾ ಸಮಿತಿಗಳು ನಿಯಮಿತವಾಗಿ ಮತ್ತು ಸೂಕ್ತ ಆದ್ಯತೆ ನೀಡಿ ತಮ್ಮ ಕಚೇರಿ ಜಾಲತಾಣಗಳಲ್ಲಿ ಸಾರ್ವಜನಿಕ ಅಹವಾಲು ಸಭೆಯ ಕಲಾಪಗಳನ್ನು ಪ್ರದರ್ಶಿಸಬೇಕು.

ದಿನಾಂಕ: ಮಾರ್ಚ್ ೨೦, ೨೦೧೨

ಕೊಂಡಿ: http://envfor.nic.in/downloads/public-information/order-20032012-b.pdf

### 2.6.6 ಪ್ರಸ್ತುತ ಇರುವ ಸ್ಥಾವರಗಳ ಮೇಲ್ವಿಚಾರಣೆ

ಪ್ರಸ್ತುತ ಇರುವ ಯೋಜನೆಗಳು ಇಸಿ ಕರಾರುಗಳನ್ನು ಪಾಲಿಸುತ್ತಿವೆಯೇ ಎಂಬುದನ್ನು ಮೇಲ್ವಿಚಾರಣೆ ಮಾಡಲು ಎಂಒಇಎಫ್ನ ಪ್ರಾದೇಶಿಕ ಕಚೇರಿಯು ಸ್ಥಳ ಭೇಟಿಯನ್ನು ಮಾಡಬೇಕು, ಜೊತೆಗೆ ಇಸಿ ಕರಾರುಗಳ ಪಾರದರ್ಶಕತೆಯ ಅನುವರ್ತನೆಯನ್ನೂ ಪರೀಕ್ಷಿಸಬೇಕು. ಇದನ್ನು ತಮ್ಮ ಮೇಲ್ವಿಚಾರಣಾ ವರದಿಯಲ್ಲಿ ಸೇರಿಸಬೇಕು.

ಇಸಿ ಪತ್ರಗಳಲ್ಲಿ ಪಾರದರ್ಶಕತೆಯ ಕರಾರು ಸಾಮಾನ್ಯವಾಗಿ ಅನುವರ್ತನಾ ಸ್ಥಿತಿಗತಿಯನ್ನು ಅಪ್ಲೋಡ್ ಮಾಡುವುದನ್ನು ಮತ್ತು ಯೋಜನಾ ಪ್ರತಿಪಾದಕರ ಜಾಲತಾಣದಲ್ಲಿ ದತ್ತಾಂಶಗಳನ್ನು ಮೇಲ್ವಿಚಾರಣೆ ಮಾಡುವುದನ್ನು ಒಳಗೊಂಡಿರುತ್ತದೆ. ಎಂ.ಒ.ಇ.ಎಫ್./ಎಸ್ಇಐಎಎ ಜಾಲತಾಣದಲ್ಲಿ ಇತ್ತೀಚಿನ ಅನುವರ್ತನಾ ವರದಿಯನ್ನು ಅಪ್ಲೋಡ್ ಮಾಡಬೇಕು. ಎಲ್ಲ ಅನುವರ್ತನಾ ವರದಿಗಳು ಸಾರ್ವಜನಿಕ ದಾಖಲೆಗಳಾಗಿರುತ್ತವೆ.

ದಿನಾಂಕ: ಆಗಸ್ಟ್ ೫, ೨೦೧೧

**ಕೊಂಡಿ:** http://envfor.nic.in/downloads/public-information/O.M-dated-05.08.2011.pdf

೫೦೦ ಮೆ.ವ್ಯಾ.ಗಿಂತ ಹೆಚ್ಚಿನ ಸಾಮರ್ಥ್ಯವಿರುವ ಪ್ರಸ್ತುತ ಇರುವ ಉಷ್ಣ ವಿದ್ಯುತ್ ಸ್ಥಾವರಗಳು ಚಿಮಣಿ ಹೊರಸೂಸುವಿಕೆ ಮತ್ತು ಸುತ್ತುವರಿದ ಗಾಳಿಯ ಗುಣಮಟ್ಟದ ಬಗ್ಗೆ ಒಂದು ನಿರಂತರವಾದ ಮೇಲ್ವಿಚಾರಣೆ ನಡೆಸಬೇಕು. ಹೊರಸೂಸುವಿಕೆಗಳು ಒಪ್ಪಿತ ಮಿತಿಯೊಳಗೇ ಇವೆ ಎಂಬುದನ್ನು ಖಾತ್ರಿಪಡಿಸಲು ಅಗತ್ಯವಾದ ರೀತಿಯಲ್ಲಿ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಎಸ್ಪಿಸಿಬಿಯು, ಎಂ.ಒ.ಇ.ಎಫ್. ನ ಪ್ರಾದೇಶಿಕ ಕಚೇರಿಗೆ ಆರು ತಿಂಗಳ ಮಾಸಿಕ ಮೇಲ್ವಿಚಾರಣಾ ವರದಿಯನ್ನು ಸಲ್ಲಿಸಬೇಕು ಮತ್ತು ಅದನ್ನು ಯೋಜನಾ ಪ್ರತಿಪಾದಕರ ಕಂಪನಿಯ ಜಾಲತಾಣದಲ್ಲಿ ಪ್ರದರ್ಶಿಸಬೇಕು. ಸುತ್ತುವರಿದ ಗಾಳಿಯ ಗುಣಮಟ್ಟದ ದತ್ತಾಂಶ ಮತ್ತು ಚಿಮಣಿ ಹೊರಸೂಸುವಿಕೆ ದತ್ತಾಂಶಗಳನ್ನು ಕಂಪನಿಯ ಮುಖ್ಯ ದ್ವಾರದ ಬಳಿಯಲ್ಲಿ ಸಾಮಾನ್ಯ ಸ್ಥಳದಲ್ಲಿ ಸಾರ್ವಜನಿಕ ವಲಯದಲ್ಲಿ ಪ್ರದರ್ಶಿಸಬೇಕು ಮತ್ತು ನಿರಂತರವಾಗಿ ಅದನ್ನು ಪರಿಷ್ಕರಣೆ ಮಾಡುತ್ತಿರಬೇಕು.

ದಿನಾಂಕ: ಏಪ್ರಿಲ್ ೭, ೨೦೧೧

**ಕೊಂಡಿ:** http://envfor.nic.in/downloads/public-information/Addtnl-Con-mega-prjt.pdf

### 2.6.7 ಒಂದೇ ಭೂಮಿಯಲ್ಲಿರುವ ಯೋಜನೆಗಳು

ಪಾರಿಸರಿಕ ಅನುಮತಿಗಾಗಿ ಅರ್ಜಿ ಸಲ್ಲಿಸಿದ ಎರಡು ಯೋಜನೆಗಳು ಒಂದೇ ಸ್ಥಳ/ಭೂಮಿಯಲ್ಲಿದ್ದರೆ, ಎರಡೂ ಯೋಜನೆಗಳನ್ನು ತಡೆಹಿಡಿಯಲಾಗುವುದು ಮತ್ತು ಆಯಾ ರಾಜ್ಯ ಸರ್ಕಾರಗಳಿಗೆ ಈ ಕುರಿತು ಸಲಹೆ ನೀಡುವಂತೆ ಕೇಳಲಾಗುವುದು. ರಾಜ್ಯ ಸರ್ಕಾರವು ಯಾವ ಯೋಜನೆಯ ಪರವಾಗಿರುತ್ತದೆಯೋ ಅದನ್ನು ಮೌಲ್ಯನಿರ್ಣಯಕ್ಕೆ ಪರಿಗಣಿಸಲಾಗುವುದು ಮತ್ತು ಇಐಎ ಕಾರ್ಯವಿಧಾನವನ್ನು ಸೂಕ್ತವಾಗಿ ಅನುಸರಣೆ ಮಾಡಲಾಗುವುದು.

ದಿನಾಂಕ: ಜೂನ್ ೮, ೨೦೧೧

**ಕೊಂಡಿ:** http://envfor.nic.in/downloads/public-information/App-rcvd-prcdr.pdf

### 2.6.8 ಕಾರ್ಪೊರೇಟ್ ಪರಿಸರ ನೀತಿ

ಎಲ್ಲ ಕೇಂದ್ರ ಸಾರ್ವಜನಿಕ ವಲಯದ ಘಟಕಗಳು ಮತ್ತು ೫೦೦ ಮೆ.ವ್ಯಾ.ಗಿಂತ ಅಧಿಕ ಸಾಮರ್ಥ್ಯವಿರುವ ಟಿಪಿಪಿಗಳು ಅರಣ್ಯ/ಪಾರಿಸರಿಕ ಅನುಮತಿ ಕರಾರುಗಳಿಗೆ ಬದ್ಧವಾಗಿರುವುದನ್ನು ಖಾತ್ರಿಪಡಿಸಲು ಕಾರ್ಪೊರೇಟ್ ಪರಿಸರ ನೀತಿಯನ್ನು ಅಳವಡಿಸಿಕೊಳ್ಳಬೇಕು. ಇಸಿ ಕರಾರುಗಳಲ್ಲಿ ಮತ್ತು ಎಫ್.ಸಿ. ಕರಾರುಗಳಲ್ಲಿ ಯಾವುದಾದರೂ ರೀತಿಯ ಉಲ್ಲಂಘನೆಗಳಾಗಿವೆ ಎಂಬುದನ್ನು ಸಚಿವಾಲಯ ಅಥವಾ ಬೇರಾವುದೇ ಸಾರ್ವಜನಿಕ ಪ್ರಾಧಿಕಾರವು ಕಂಡುಕೊಂಡರೆ, ಅದನ್ನು ಆ ಕಂಪನಿಗಳ ನಿರ್ದೇಶಕರ ಮಂಡಳಿಗೆ ತಿಳಿಸಬೇಕು. ಜೊತೆಗೆ ಇದನ್ನು ಯೋಜನಾ ಪ್ರತಿಪಾದಕರ ಜಾಲತಾಣದಲ್ಲಿ ಹಾಗೂ ವಾರ್ಷಿಕ ವರದಿಗಳಲ್ಲಿ ಪ್ರಕಟಿಸಬೇಕು. ಎಲ್ಲ ಯೋಜನಾ ಪ್ರಸ್ತಾವನೆಗಳಿಗೆ, ಇಎಸಿಯು ಕಾರ್ಪೊರೇಟ್ ಪರಿಸರ ನೀತಿಗೆ ಸಂಬಂಧಿಸಿದ ಅಂಶಗಳ ಕುರಿತು, ವಿಶೇಷವಾಗಿ ಅದಕ್ಕೆ ಬದ್ಧವಾಗಿರುವುದನ್ನು ಮತ್ತು ಸಮಗ್ರತೆ ಕುರಿತು ಎಚ್ಚರಿಕೆಯಿಂದ ಸಮಾಲೋಚಿಸಬೇಕು.

ದಿನಾಂಕ: ಏಪ್ರಿಲ್ ೨೬, ೨೦೧೧

ಕೊಂಡಿ: http://envfor.nic.in/downloads/public-information/corporate-env-res.pdf

## 2.6.9 ಇಸಿ ನೀಡುವ ಮೊದಲು ಒಪ್ಪಿಗೆ ಇರುವ ಚಟುವಟಿಕೆಗಳು

- ಅತಿಕ್ರಮಣವನ್ನು ತಡೆಗಟ್ಟಲು ಸ್ಥಳಕ್ಕೆ ಬೇಲಿ ಹಾಕುವುದು.
- ಭದ್ರತಾ ಸಿಬ್ಬಂದಿಗಳಿಗೆ ತಾತ್ಕಾಲಿಕ ಶೆಡ್ ನಿರ್ಮಾಣ ಮಾಡುವುದು.

ಇದನ್ನು ಹೊರತುಪಡಿಸಿ, ಬೇರೆ ಯಾವುದೇ ಚಟುವಟಿಕೆಗಳನ್ನು ನಡೆಸಿದರೆ, ಒಪ್ಪಂದದ ಕರಾರನ್ನು ಸ್ಥಗಿತಗೊಳಿಸಲಾಗುವುದು ಅಥವಾ ಹಿಂಪಡೆಯಲಾಗುವುದು ಮತ್ತು ಯೋಜನಾ ಪ್ರತಿಪಾದಕರ ವಿರುದ್ಧ ಪರಿಸರ ಸಂರಕ್ಷಣಾ ಕಾಯಿದೆ, ೧೯೮೬ರ ಪ್ರಾವಧಾನಗಳ ಅಡಿಯಲ್ಲಿ ಶಿಸ್ತು ಕ್ರಮ ಜರುಗಿಸಲಾಗುವುದು.

ದಿನಾಂಕ: ಆಗಸ್ಟ್ ೧೯, ೨೦೧೦

ಕೊಂಡಿ: http://envfor.nic.in/downloads/public-information/Act-prior-EC.pdf

## 2.6.10 ಯೋಜನೆಯ ವಿಸ್ತರಣೆ

ಯೋಜನೆಯೊಂದರ ಆರಂಭದ ಹಂತದ ಅನುಷ್ಠಾನವು ಶುರುವಾಗಿದ್ದರೆ ಮಾತ್ರ, ಯೋಜನೆಯ ವಿಸ್ತರಣೆಗೆ ಇಸಿ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು. ಮೊದಲಿನ ಹಂತಕ್ಕೆ ಇಸಿಯನ್ನು ಇನ್ನೂ ನೀಡಿರಲಿಲ್ಲ ಎಂದಾದರೆ, ಯೋಜನಾ ಪ್ರತಿಪಾದಕರು ಎಲ್ಲ ಹಂತಗಳನ್ನೂ ಸೇರಿಸಿ, ಹೊಸ ಇಸಿಗೆ ಅರ್ಜಿ ಹಾಕಬೇಕು, ಆಗ ಪಾರಿಸರಿಕ ಸಮಸ್ಯೆಗಳನ್ನು ಸಮಗ್ರ ರೀತಿಯಲ್ಲಿ ಮೌಲ್ಯಮಾಪನ ಮಾಡಲು ಸಾಧ್ಯವಾಗುತ್ತದೆ.

ದಿನಾಂಕ: ಮಾರ್ಚ್ ೨೨, ೨೦೧೦

ಕೊಂಡಿ: http://envfor.nic.in/divisions/iass/Cir/EXP_EC.pdf

ಯೋಜನಾ ಪ್ರತಿಪಾದಕರು ಪ್ರಸ್ತುತ ಇರುವ ಯೋಜನೆಯ ವಿಸ್ತರಣೆಗೆ ಇಸಿಗಾಗಿ ಅರ್ಜಿ ಹಾಕುತ್ತಿದ್ದರೆ, ಎಂಒಇಎಫ್ನ ಪ್ರಾದೇಶಿಕ ಕಚೇರಿಯಿಂದ ಇಸಿ ಕರಾರುಗಳ ಅನುವರ್ತನೆಗಾಗಿ ಒಂದು ಪ್ರಮಾಣೀಕೃತ ವರದಿಯನ್ನು ಸಲ್ಲಿಸಬೇಕು. ಈ ದಾಖಲೆಯಿಲ್ಲದೇ, ವಿಸ್ತರಣೆಯ ಅರ್ಜಿಯನ್ನು ಸ್ವೀಕರಿಸುವುದಿಲ್ಲ. ಯೋಜನೆಯ ವಿಸ್ತರಣೆಯ ಮೌಲ್ಯನಿರ್ಣಯದ ಕುರಿತ ಇಎಸಿ ಸಭೆಯಲ್ಲಿ ಅನುವರ್ತನಾ ವರದಿಯನ್ನು ಚರ್ಚಿಸಬೇಕು ಮತ್ತು ಅದನ್ನು ಸಮರ್ಪಕವಾಗಿ ತನ್ನ ನಡಾವಳಿಯಲ್ಲಿ ದಾಖಲಿಸಬೇಕು.

ದಿನಾಂಕ: ಮೇ ೩೦, ೨೦೧೨

ಕೊಂಡಿ: http://MoEF.nic.in/downloads/public-information/eia-300512.pdf

## 2.6.11 ಒಪ್ಪಂದದ ಕರಾರಿನ ಊರ್ಜಿತತೆ

ಒಪ್ಪಂದದ ಕರಾರನ್ನು ಇಐಎ/ಎಂಪಿ ವರದಿಗಳ ಸಲ್ಲಿಸುವಿಕೆಗೆ ೨ ವರ್ಷಗಳ ಊರ್ಜಿತತೆ ಅವಧಿಯೊಂದಿಗೆ ನೀಡಲಾಗಿರುತ್ತದೆ. ಸೂಕ್ತ ಸಮರ್ಥನೆಗಳ ಮತ್ತು ಇಎಸಿ/ಎಸ್ಇಎಸಿಯ ಒಪ್ಪಿಗೆ ಆಧಾರದ ಮೇಲೆ ಗರಿಷ್ಠ ಮಿತಿ ೩ ವರ್ಷಗಳವರೆಗೆ ವಿನಾಯಿತಿ ನೀಡಬಹುದು

ದಿನಾಂಕ: ಮಾರ್ಚ್ ೨೨, ೨೦೧೦

ಕೊಂಡಿ: http://envfor.nic.in/divisions/iass/Cir/TOR_EC.pdf

### 2.6.12 ಅಂತರ ಸಂಬಂಧವಿರುವ ಯೋಜನೆಗಳು

ಬಹು-ವಿಭಾಗಗಳ ಘಟಕಗಳು ಇರುವ ಸಮಗ್ರ ಮತ್ತು ಅಂತರ ಸಂಬಂಧವಿರುವ ಯೋಜನೆಗಳು ಒಂದೇ ಸಾಮಾನ್ಯ ಇಐಎ ವರದಿಯನ್ನು ಸಿದ್ಧಪಡಿಸಬೇಕು, ಪ್ರತೀ ವಿಭಾಗೀಯ ಇಎಸಿ/ಎಸ್‌ಇಎಸಿಗಳಿಂದ ಒಪ್ಪಂದದ ಕರಾರುಗಳನ್ನು ಪಡೆದುಕೊಂಡ ನಂತರ ಇದರಲ್ಲಿ ಪ್ರತಿಯೊಂದೂ ಘಟಕಗಳನ್ನು ಸಂಪೂರ್ಣವಾಗಿ ಒಳಗೊಳ್ಳಬೇಕು. ಪ್ರತಿಯೊಂದೂ ವಿಭಾಗೀಯ ಇಎಸಿ/ಎಸ್‌ಇಎಸಿಗಳಿಂದ ಸಾಮಾನ್ಯ ಇಐಎ ವರದಿಯನ್ನು ಸಂಚಯಿತವಾಗಿ ಪರಿಗಣಿಸಬೇಕು. ಅವರ ಶಿಫಾರಸುಗಳನ್ನು ಆಧರಿಸಿ, ನಿಯಂತ್ರಕ ಪ್ರಾಧಿಕಾರಗಳ ಏಕಕಾಲಿಕ ಮಂಜೂರಾತಿಯನ್ನು ಪಡೆಯಲು ಪ್ರಸ್ತಾವನೆಗಳನ್ನು ಪ್ರತ್ಯೇಕ ಕಡತಗಳಲ್ಲಿ ಪ್ರಕ್ರಿಯೆಗೊಳಿಸಲಾಗುವುದು.

ದಿನಾಂಕ: ಡಿಸೆಂಬರ್ ೨೪, ೨೦೧೦

ಕೊಂಡಿ: http://envfor.nic.in/downloads/public-information/integrated-interlinked-prjt.pdf

## 2.7 ಮಾಹಿತಿ ಹಕ್ಕು ಕಾಯಿದೆ (ಆರ್‌ಟಿಐ) ಬಳಸಿಕೊಂಡು ಇಸಿ ಮತ್ತು ಇಐಎ ಕುರಿತ ಮಾಹಿತಿ ಪಡೆಯುವುದು

2.7.1 ಇಸಿ/ಇಐಎ ದಾಖಲೆಗಳಿಗಾಗಿ ಅರ್ಜಿ ಸಲ್ಲಿಸುವುದು
2.7.2 ಆರ್‌ಟಿಐ ಅರ್ಜಿಗಳಿಗೆ ವಿಳಾಸಗಳು ಮತ್ತು ಹಣ ಪಾವತಿ ವಿಧಾನಗಳು
2.7.3 ಆರ್‌ಟಿಐ ಕುರಿತು ಆಗಾಗ ಕೇಳುವ ಪ್ರಶ್ನೆಗಳು
2.7.4 ಆರ್‌ಟಿಐ ಹರಿವುನಕ್ಷೆ(ಫ್ಲೋಚಾರ್ಟ್)
2.7.5 ಕೇಂದ್ರ ಸರ್ಕಾರದ ಮೇಲ್ಮನವಿ ನಮೂನೆ
2.7.6 ಎಂಒಇಎಫ್‌ನ ಅರ್ಜಿ ನಮೂನೆ

### 2.7.1 ಇಸಿ/ಇಐಎ ದಾಖಲೆಗಳಿಗಾಗಿ ಆರ್‌ಟಿಐ ಮೂಲಕ ಅರ್ಜಿ ಸಲ್ಲಿಸುವುದು

| ಹಂತ | ಸಾರ್ವಜನಿಕರಿಗೆ ಲಭ್ಯವಿರುವ ದಾಖಲೆ (ಕೋರಿಕೆ ಮೇರೆಗೆ) | ಆರ್‌ಟಿಐ ಅರ್ಜಿಯನ್ನು ಇಲ್ಲಿಗೆ ಕಳಿಸಿ (ಯೋಜನಾ ಸಾಮರ್ಥ್ಯ < ೫೦೦ ಮೆ.ವ್ಯಾ.) | | | ಆರ್‌ಟಿಐ ಅರ್ಜಿಯನ್ನು ಇಲ್ಲಿಗೆ ಕಳಿಸಿ (ಯೋಜನಾ ಸಾಮರ್ಥ್ಯ > ೫೦೦ ಮೆ.ವ್ಯಾ.) | | |
|---|---|---|---|---|---|---|---|
| | | ಪಿಐಬಿ | ಎಎ | ೨ನೇ ಮೇಲ್ಮನವಿ | ಪಿಐಬಿ | ಎಎ | ೨ನೇ ಮೇಲ್ಮನವಿ |
| ಒಪ್ಪಂದದ ಕರಾರು (ಟಿಒಆರ್) ನೀಡುವ ಮೊದಲು | ೧. ಯೋಜನಾ ಪ್ರತಿಪಾದಕರ ಟಿಒಆರ್ ಸೇರಿದಂತೆ ನಮೂನೆ ೧ ೨. ಕಾರ್ಯಸಾಧ್ಯತೆ-ಪೂರ್ವ ವರದಿ ೩. ಯೋಜನಾ ಪ್ರತಿಪಾದಕರಿಂದ ಹೆಚ್ಚಿನ ಮಾಹಿತಿ ೪. ಎಸ್‌ಇಎಸಿ/ಇಎಸಿಯ ಸಭೆಯ ದಿನಾಂಕ ನಮೂದಿಸಿದ ಎಸ್‌ಇಐಎಎ/ಎಂಒಇಎಫ್‌ನ ಪತ್ರ ೫. ಎಸ್‌ಇಎಸಿ/ಇಎಸಿಯ ಸ್ಥಳ ಭೇಟಿ ಮಾಡಿದ್ದರೆ, ಅದರ ವರದಿ | ಎಸ್‌ಇಐಎಎ | ಎಸ್‌ಇಐಎಎ | ಸಿಐಸಿ | ಎಂಒಇಎಫ್ | ಎಂಒಇಎಫ್ | ಸಿಐಸಿ |
| ಟಿಒಆರ್ ನೀಡಿದ ನಂತರ | ೬ ಎಸ್‌ಇಐಎಎ/ಎಂಒಇಎಫ್‌ನಿಂದ ನೀಡಲಾದ ಟಿಒಆರ್ | | | | | | |
| ಸಾರ್ವಜನಿಕ ಸಮಾಲೋಚನೆಯ ಪ್ರಕಟಣೆಯ ನಂತರ | ೮. ಯೋಜನಾ ಪ್ರತಿಪಾದಕರಿಂದ ಕರಡು ಇಐಎ ೯. ಯೋಜನಾ ಪ್ರತಿಪಾದಕರಿಂದ ಕರಡು ಇಐಎಯ ಸಂಕ್ಷಿಪ್ತ ವರದಿ | | | | | | |
| ಸಾರ್ವಜನಿಕ ಸಮಾಲೋಚನೆ ಪೂರ್ಣಗೊಂಡ ನಂತರ | ೧೦. ಕ್ರೋಡೀಕೃತ ಲಿಖಿತ ಪ್ರತಿಕ್ರಿಯೆಗಳು ೧೧. ಸಾರ್ವಜನಿಕ ಅಹವಾಲು ಸಭೆಯ ವರದಿ ೧೨. ಸಾರ್ವಜನಿಕ ಅಹವಾಲು ಸಭೆಯ ವಿಡಿಯೋ ಚಿತ್ರೀಕರಣ | ಎಸ್‌ಪಿಸಿಬಿ | ಎಸ್‌ಪಿಸಿಬಿ | ಎಸ್‌ಐಸಿ | ಎಸ್‌ಪಿಸಿಬಿ | ಎಸ್‌ಪಿಸಿಬಿ | ಎಸ್‌ಐಸಿ |
| ಇಸಿ ನೀಡುವ ಮೊದಲು/ಅರ್ಜಿಯ ತಿರಸ್ಕರಿಸುವಿಕೆ | ೧೩. ಯೋಜನಾ ಪ್ರತಿಪಾದಕರಿಂದ ಅಂತಿಮ ಇಎಸಿ ೧೪. ಟಿಒಆರ್‌ಗೆ ಅಂತಿಮ ಇಐಎ ಬದ್ಧವಾಗಿರುವುದರ ಕುರಿತು ಎಸ್‌ಇಐಎಎ/ಎಂಒಇಎಫ್‌ನ ವೀಕ್ಷಣೆಗಳು ೧೫. ಯೋಜನಾ ಪ್ರತಿಪಾದಕರೊಂದಿಗೆ ಎಸ್‌ಇಎಸಿ/ಇಎಸಿ ಸಭೆಯ ನಡಾವಳಿಗಳು ೧೬. ಎಸ್‌ಇಎಸಿ/ಇಎಸಿಯಿಂದ ಇಸಿಯನ್ನು ನೀಡಲು/ತಿರಸ್ಕರಿಸಲು ಶಿಫಾರಸುಗಳು | ಎಸ್‌ಇಐಎಎ | ಎಸ್‌ಇಐಎಎ | ಸಿಐಸಿ | ಎಂಒಇಎಫ್ | ಎಂಒಇಎಫ್ | ಸಿಐಸಿ |

| | | | | | | | |
|---|---|---|---|---|---|---|---|
| ಇಸಿ ನೀಡಿದ ನಂತರ | ೧೭. ಪಾರಿಸರಿಕ ಅನುಮತಿ<br>೧೮. ಯೋಜನಾ ಪ್ರತಿಪಾದಕರ ಮೇಲ್ವಿಚಾರಣಾ ವರದಿಗಳು | ಎಸ್ಇಐಎಎ | ಎಸ್ಇಐಎಎ | ಸಿಐಸಿ | ಎಂಒಇಎಫ್ | ಎಂಒಇಎಫ್ | ಸಿಐಸಿ |
| | ೧೯. ಎಸ್‌ಪಿಸಿಬಿಯ ತಪಾಸಣಾ ವರದಿಗಳು | ಎಸ್‌ಪಿಸಿಬಿ | ಎಸ್‌ಪಿಸಿಬಿ | ಎಸ್ಐಸಿ | ಎಸ್‌ಪಿಸಿಬಿ | ಎಸ್‌ಪಿಸಿಬಿ | ಎಸ್ಐಸಿ |

## 2.7.2 ಆರ್‌ಟಿಐ ಅರ್ಜಿಗಳಿಗೆ ವಿಳಾಸಗಳು ಮತ್ತು ಹಣಪಾವತಿ ವಿಧಾನಗಳು

| ಕಚೇರಿ | ವಿಳಾಸ | ಸ್ವೀಕೃತ ಪಾವತಿ ವಿಧಾನ | ಅರ್ಜಿ ಶುಲ್ಕ | ಮೇಲ್ಮನವಿ ಶುಲ್ಕ |
|---|---|---|---|---|
| ಎಂಒಇಎಫ್ | ಪರ್ಯಾವರಣ ಭವನ, ಸಿಜಿಒ ಸಂಕೀರ್ಣ, ಲೋಧಿ ರಸ್ತೆ, ನವದೆಹಲಿ - ೧೧೦೦೦೩ ದೂ.ಸಂ.: ೧೧-೨೪೩೬೨೦೬೪ | ನಗದು, ಪೋಸ್ಟಲ್ ಆರ್ಡರ್, ಪಿಎಒ ಎಂಒಇಎಫ್ ನವದೆಹಲಿ, ಇವರ ಹೆಸರಿಗೆ ಡಿಡಿ ಮತ್ತು ಚೆಕ್ | ರೂ. ೧೦ | ಏನೂ ಇಲ್ಲ |
| ಎಸ್ಇಐಎಎ, ಕರ್ನಾಟಕ | ೭ನೇ ಮಹಡಿ, ಎಂ.ಎಸ್. ಬಿಲ್ಡಿಂಗ್, ೪ನೇ ಹಂತ, ಬೆಂಗಳೂರು - ಕರ್ನಾಟಕ ೫೬೦೦೦೧. ದೂ.ಸಂ.: ೦೮೦-೨೨೦೩೨೪೯೭ | ಪೋಸ್ಟಲ್ ಆರ್ಡರ್ | ರೂ. ೧೦ | ಏನೂ ಇಲ್ಲ |
| ಎಸ್ಇಐಎಎ, ಆಂಧ್ರ ಪ್ರದೇಶ | ಪರ್ಯಾವರಣ ಭವನ, ಎ- III ಇಂಡಸ್ಟ್ರಿಯಲ್ ಎಸ್ಟೇಟ್, ಸನಾಥ್ ನಗರ, ಹೈದರಾಬಾದ್ - ೫೦೦೦೧೮ ದೂ.ಸಂ.: ೦೪೦-೨೩೮೮೭೫೯೪ | ನಗದು | ಸಾರ್ವಜನಿಕ ಕಚೇರಿ ಹಳ್ಳಿ: ಶುಲ್ಕವಿಲ್ಲ ಮಂಡಲ್: ೫ ರೂ. ಬೇರೆಯವರು: ೧೦ ರೂ. | ಏನೂ ಇಲ್ಲ |
| ಎಸ್ಇಐಎಎ, ಕೇರಳ | ಪಲ್ಲಿಮುಕ್ಕು, ಪೆಟ್ಟಾ (ಅಂಚೆ), ತ್ರಿವೆಂಡ್ರಂ ೬೯೫೦೨೪ - ಕೇರಳ ದೂ.ಸಂ. ೦೪೭೧-೨೭೪೨೨೬೪ | ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ, ಪರಿಸರ & ಹವಾಮಾನ ಬದಲಾವಣೆ ಇಲಾಖೆ ಹೆಸರಿನಲ್ಲಿ ಕೋರ್ಟ್ ಶುಲ್ಕ ಸ್ಟಾಂಪ್, ಬ್ಯಾಂಕರ್ಸ್ ಚೆಕ್ | ರೂ. ೧೦ | ಏನೂ ಇಲ್ಲ |
| ಎಸ್ಇಐಎಎ, ತಮಿಳು ನಾಡು | ೩ನೇ ಮಹಡಿ, ಪೆನಗಲ್ ಮಲಿಗೈ, ನಂ. ೧, ನೀಜೆಸ್ ರಸ್ತೆ, ಸೈದಾಪೇಟ್, ಚೆನ್ನೈ - ೬೦೦೦೧೫, ತಮಿಳು ನಾಡು ದೂ.ಸಂ.: ೦೪೪-೨೪೩೫೯೯೭೪ | ಕೋರ್ಟ್ ಶುಲ್ಕ ಸ್ಟಾಂಪ್, ಡಿಮ್ಯಾಂಡ್ ಡ್ರಾಫ್ಟ್ | ರೂ. ೧೦ | ಏನೂ ಇಲ್ಲ |

## 2.7.3 ಆರ್‌ಟಿಐ ಕುರಿತು ಆಗಾಗ ಕೇಳುವ ಪ್ರಶ್ನೆಗಳು

೧. ಮಾಹಿತಿ ಹಕ್ಕು (ಆರ್‌ಟಿಐ) ಕಾಯಿದೆ ಎಂದರೇನು?

೨. ಸಾರ್ವಜನಿಕ ಪ್ರಾಧಿಕಾರ ಎಂದರೆ ಯಾರು?

೩. ನಾವು ಕೇಳಿದ ಮಾಹಿತಿಯನ್ನು ನೀಡಲು ಯಾರು ಜವಾಬ್ದಾರರು?

೪. ಸಾರ್ವಜನಿಕ ಅಧಿಕಾರಿಗಳಿಗೆ ಬರೆದ ಪತ್ರ/ಪೆಟಿಶನ್ ಬರೆದಿದ್ದಕ್ಕಿಂತ ಆರ್‌ಟಿಐ ಅರ್ಜಿಯು ಹೇಗೆ ಭಿನ್ನವಿದೆ?

೫. ಆರ್‌ಟಿಐ ಅರ್ಜಿಗೆ ಪದಗಳ ಮಿತಿ ಇದೆಯೇ?

೬. ಆರ್‌ಟಿಐ ಅಡಿಯಲ್ಲಿ ಮಾಹಿತಿಯನ್ನು ಪಡೆಯಲು ನಾನೇನು ಮಾಡಬೇಕು?

೭. ಆರ್‌ಟಿಐ ಬಳಸಿಕೊಂಡು ಯಾವ ಮಾಹಿತಿಯನ್ನು ಪಡೆಯಬಹುದು?

೮. ಆರ್‌ಟಿಐ ಬಳಸಿಕೊಂಡು ಯಾವ ಮಾಹಿತಿಯನ್ನು ಪಡೆಯಲು ಸಾಧ್ಯವಿಲ್ಲ?

೯. ನಾನು ಯಾವ ಭಾಷೆಯಲ್ಲಿ ಮಾಹಿತಿ ಕೇಳಬಹುದು?

೧೦. ನನಗೆ ಬೇಕಾದ ಮಾಹಿತಿಯನ್ನು ನಾನು ಹೇಗೆ ನೋಡಬಹುದು/ಪ್ರತಿ ಮಾಡಿಕೊಳ್ಳಬಹುದು?

೧೧. ಕೇಳಿದ ಮಾಹಿತಿಯನ್ನು ಅಧಿಕಾರಿಗಳು ಹೇಗೆ ನೀಡುತ್ತಾರೆ?

೧೨. ಆರ್‌ಟಿಐ ಅಡಿಯಲ್ಲಿ ಮಾಹಿತಿ ಕೋರಲು ಏನಾದರೂ ನಮೂನೆಗಳು ಇವೆಯೇ?

೧೩. ನಾನು ಆರ್‌ಟಿಐ ಅನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬಹುದೇ?

೧೪. ಪ್ರತಿಕ್ರಿಯೆ ಪಡೆಯಲು ಇರುವ ಕಾಲ ಮಿತಿ ಏನು?

೧೫. ಆರ್‌ಟಿಐ ಅರ್ಜಿಯು ಸರಿಯಾದ ಸಾರ್ವಜನಿಕ ಅಧಿಕಾರಿ/ಕಚೇರಿಯನ್ನು ಉದ್ದೇಶಿಸಿಲ್ಲ ಎಂಬ ಕಾರಣಕ್ಕೆ ಅರ್ಜಿಯನ್ನು ಹಿಂತಿರುಗಿಸಬಹುದೇ?

೧೬. ಮಾಹಿತಿಯನ್ನು ಪಡೆಯಲು ನಾನು ಶುಲ್ಕವನ್ನು ನೀಡಬೇಕೆ?

೧೭. ನನ್ನ ಆರ್‌ಟಿಐ ಅರ್ಜಿಗೆ ಏನೂ ಪ್ರತಿಕ್ರಿಯೆ ಬರಲಿಲ್ಲವಾದರೆ ಏನು ಮಾಡಬೇಕು?

೧೮. ನನಗೆ ಕೊಟ್ಟ ಮಾಹಿತಿಯು ತಪ್ಪು/ಅಪೂರ್ಣ ಆಗಿದ್ದರೆ, ಏನು ಮಾಡಬೇಕು?

೧೯. ನನಗೆ ಮಾಹಿತಿ ನೀಡುವುದಕ್ಕೆ ನಿರಾಕರಿಸಬಹುದೇ?

೨೦. ಮೇಲ್ಮನವಿ ಪ್ರಾಧಿಕಾರದ ಪ್ರತಿಕ್ರಿಯೆಯಿಂದ ನನಗೆ ತೃಪ್ತಿಯಾಗದಿದ್ದರೆ ನಾನೇನು ಮಾಡಬಹುದು?

೨೧. ಎಸ್‌ಐಸಿ/ಸಿಐಸಿಯು ಕಾಲ ಮಿತಿಯಲ್ಲಿ ಒಂದು ಆದೇಶವನ್ನು ನೀಡುವುದಕ್ಕೆ ಬದ್ಧವಾಗಿದೆಯೇ?

೨೨. ನಾವು ಕೇಳಿದ ಮಾಹಿತಿಯನ್ನು ಕೊಡದ ಅಧಿಕಾರಿಗೆ ಏನಾಗುತ್ತದೆ?

**1. ಮಾಹಿತಿ ಹಕ್ಕು (ಆರ್‌ಟಿಐ) ಕಾಯಿದೆ ಎಂದರೇನು?**

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಕಾರ್ಯನಿರ್ವಹಣೆಯಲ್ಲಿ ಹೆಚ್ಚು ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ತರಲಿಕ್ಕಾಗಿ ಮಾಹಿತಿ ಹಕ್ಕು (ಆರ್‌ಟಿಐ) ಕಾಯಿದೆಯನ್ನು ೨೦೦೫ರಲ್ಲಿ ಜಾರಿಗೊಳಿಸಲಾಯಿತು. ಈ ಕಾಯಿದೆಯು ಭಾರತದ ಎಲ್ಲ ನಾಗರಿಕರಿಗೆ ಎರಡೂ ಸರ್ಕಾರಗಳ ಸಾರ್ವಜನಿಕ ಅಧಿಕಾರಿ/ಕಚೇರಿಗಳಿಂದ ಮಾಹಿತಿಯ ಲಭ್ಯತೆಯ ಹಕ್ಕನ್ನು ಖಾತ್ರಿಪಡಿಸುತ್ತದೆ.

**2. ಸಾರ್ವಜನಿಕ ಪ್ರಾಧಿಕಾರ ಎಂದರೆ ಯಾರು?**

ಸಾರ್ವಜನಿಕ ಪ್ರಾಧಿಕಾರ ಎಂದರೆ ಸಂವಿಧಾನದ ಮೂಲಕ, ಸಂಸತ್ತಿನ ಅಥವಾ ರಾಜ್ಯ ವಿಧಾನಸಭೆಯ ಕಾಯಿದೆಯೊಂದರ ಮೂಲಕ ರಚಿಸಲಾದ ಎಲ್ಲ ಪ್ರಾಧಿಕಾರಗಳು, ಸಂಸ್ಥೆಗಳು ಮತ್ತು ಸ್ವಯಂ-ಸರ್ಕಾರದ

ಸಂಸ್ಥೆಗಳು ಎಂದು. ಇದು ಹೆಚ್ಚಿನ ಭಾಗ ಸರ್ಕಾರದ ಒಡೆತನ, ನಿಯಂತ್ರಣ ಮತ್ತು ಹಣಕಾಸು ನೀಡುವ ಎಲ್ಲ ಸಂಸ್ಥೆಗಳು ಮತ್ತು ಸರ್ಕಾರದಿಂದ ಸಾಕಷ್ಟು ಹಣಕಾಸು ಒದಗಿಸುವ ಸರ್ಕಾರೇತರ ಸಂಸ್ಥೆಗಳ(ಎನ್‌ಜಿಒಗಳು)ನ್ನೂ ಒಳಗೊಂಡಿದೆ.

**3. ನಾವು ಕೇಳಿದ ಮಾಹಿತಿಯನ್ನು ನೀಡಲು ಯಾರು ಜವಾಬ್ದಾರರು?**

ಪ್ರತಿಯೊಂದೂ ಸಾರ್ವಜನಿಕ ಪ್ರಾಧಿಕಾರದಲ್ಲಿ ಇದೇ ಉದ್ದೇಶಕ್ಕಾಗಿ ನೇಮಿಸಲಾದ ಸಾರ್ವಜನಿಕ ಸಂಪರ್ಕಾಧಿಕಾರಿಯವರು ಕೇಳಿದ ಮಾಹಿತಿಯನ್ನು ನೀಡಬೇಕಾಗುತ್ತದೆ. ಆದ್ದರಿಂದ ಆರ್‌ಟಿಐ ಅರ್ಜಿಗಳನ್ನು ಅವರನ್ನು ಉದ್ದೇಶಿಸಿ ಬರೆಯಬೇಕಾಗುತ್ತದೆ. ಉಪ-ಜಿಲ್ಲೆ ಅಥವಾ ಉಪ-ವಿಭಾಗೀಯ ಹಂತದ ಸಾರ್ವಜನಿಕ ಕಚೇರಿಗಳಲ್ಲಿ, ಸಹಾಯಕ ಸಾರ್ವಜನಿಕ ಸಂಪರ್ಕಾಧಿಕಾರಿಯವರು ಅರ್ಜಿಗಳನ್ನು/ಅಪೀಲ್‌ಗಳನ್ನು ಸ್ವೀಕರಿಸಲು ಇರುತ್ತಾರೆ ಮತ್ತು ಅವರು ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ಕಳುಹಿಸುತ್ತಾರೆ.

**4. ಸಾರ್ವಜನಿಕ ಸಂಪರ್ಕಾಧಿಕಾರಿಗಳಿಗೆ ಬರೆದ ಪತ್ರ/ಪಿಟಿಶನ್ ಬರೆದಿದ್ದಕ್ಕಿಂತ ಆರ್‌ಟಿಐ ಅರ್ಜಿಯು ಹೇಗೆ ಭಿನ್ನವಿದೆ?**

ಮಾಹಿತಿಗಾಗಿ ಸಾಮಾನ್ಯವಾಗಿ ಬರೆಯುವ ಪತ್ರ/ಪಿಟಿಶನ್‌ಗಳ ಹಾಗಲ್ಲದೇ, ಆರ್‌ಟಿಐ ಕಾಯಿದೆಯು ಸಾರ್ವಜನಿಕ ಪ್ರಾಧಿಕಾರಕ್ಕೆ ಒಂದು ನಿಗದಿತ ಕಾಲ-ಮಿತಿಯಲ್ಲಿ ಸ್ವೀಕರಿಸಿದ ಕೋರಿಕೆಗೆ ಪ್ರತಿಕ್ರಿಯಿಸುವಂತೆ ಹೊಣೆಗಾರವಾಗಿಸುತ್ತದೆ.

ನಿಗದಿತ ಗಡುವಿನ ಒಳಗೆ ಸರಿಯಾದ ಮಾಹಿತಿಯನ್ನು ನೀಡದ ಅಧಿಕಾರಿಗೆ ಶಿಕ್ಷೆ ವಿಧಿಸಲು ಆಸ್ಪದವಿದೆ ಮತ್ತು ಅವರ ವಿರುದ್ಧ ಅಗತ್ಯವೆನ್ನಿಸಿದರೆ ಶಿಸ್ತು ಕ್ರಮ ಜರುಗಿಸಬಹುದು.

ಆರ್‌ಟಿಐ ಬಳಸಿಕೊಂಡು ನೀವು ಪಡೆಯಬಹುದಾದ ಮಾಹಿತಿಗಳ ಸ್ವರೂಪ ತುಂಬ ವಿಶಾಲವಾಗಿದೆ. ಕಾಯಿದೆಯ ಪ್ರಕಾರ, ಸಂಸತ್ತಿನಲ್ಲಿ ಮತ್ತು ರಾಜ್ಯ ಶಾಸನಸಭೆಗಳಲ್ಲಿ ನೀಡಲಾಗುವ ಯಾವುದೇ ಮಾಹಿತಿಯನ್ನೂ ಜನರಿಗೆ ಆರ್‌ಟಿಐ ಬಳಸಿಕೊಂಡು ಲಭ್ಯವಾಗುವಂತೆ ಮಾಡಬಹುದಾಗಿದೆ.

ಮಾಹಿತಿಯನ್ನು ಕೋರುತ್ತಿರುವ ವ್ಯಕ್ತಿ, ಮಾಹಿತಿಯನ್ನು ಕೇಳಲು ಕಾರಣಗಳನ್ನು ನೀಡುವ ಅಗತ್ಯವಿಲ್ಲ ಅಥವಾ ತಮ್ಮ ಸಂಪರ್ಕ ವಿಳಾಸಗಳನ್ನು ಹೊರತುಪಡಿಸಿದರೆ ಬೇರಾವುದೇ ವೈಯಕ್ತಿಕ ವಿವರಗಳನ್ನೂ ಅವರು ಹಂಚಿಕೊಳ್ಳುವ ಅಗತ್ಯವಿಲ್ಲ.

**5. ಆರ್‌ಟಿಐ ಅರ್ಜಿಗೆ ಪದಗಳ ಮಿತಿ ಇದೆಯೇ?**

ಹೌದು, ಇದೆ! ಅನುಬಂಧವನ್ನು ಹೊರತುಪಡಿಸಿ, ಕೇಂದ್ರ ಸಾರ್ವಜನಿಕ ಸಂಪರ್ಕಾಧಿಕಾರಿಯವರ ವಿಳಾಸ ಮತ್ತು ಅರ್ಜಿದಾರರ ವಿಳಾಸವೂ ಸೇರಿದಂತೆ, ಅರ್ಜಿಯು ೫೦೦ ಪದಗಳನ್ನು ಮೀರಬಾರದು. ಆದರೆ ಅರ್ಜಿಯು ೫೦೦ ಪದಗಳನ್ನು ಮೀರಿದೆ ಎಂಬ ಕಾರಣಕ್ಕೆ ನಿಮ್ಮ ಅರ್ಜಿಯನ್ನು ತಿರಸ್ಕರಿಸಲಾಗದು.

**6. ಆರ್‌ಟಿಐ ಅಡಿಯಲ್ಲಿ ಮಾಹಿತಿಯನ್ನು ಪಡೆಯಲು ನಾನೇನು ಮಾಡಬೇಕು?**

ನಿಮಗೆ ಬೇಕಿರುವ ಮಾಹಿತಿಯನ್ನು ಉಲ್ಲೇಖಿಸಿ, ಸಂಬಂಧಿಸಿದ ಸಾರ್ವಜನಿಕ ಪ್ರಾಧಿಕಾರಕ್ಕೆ ಸರಳವಾಗಿ ಪತ್ರ ಬರೆದು, ನಿಗದಿಪಡಿಸಿದ ಶುಲ್ಕದೊಂದಿಗೆ ಸಲ್ಲಿಸಿರಿ. ಅರ್ಜಿಯನ್ನು ಸಂಬಂಧಿಸಿದ ಸಾರ್ವಜನಿಕ ಪ್ರಾಧಿಕಾರದ ಸಾರ್ವಜನಿಕ ಸಂಪರ್ಕಾಧಿಕಾರಿಯನ್ನು ಉದ್ದೇಶಿಸಿ ಬರೆದಿರಬೇಕು. ಈ ಉದ್ದೇಶಕ್ಕೆ ಸಾರ್ವಜನಿಕ ಸಂಪರ್ಕಾಧಿಕಾರಿಯ ಹೆಸರು ಬರೆಯುವ ಅಗತ್ಯವಿಲ್ಲ. ಅರ್ಜಿಯನ್ನು ಸರಳವಾಗಿ ಸಾರ್ವಜನಿಕ ಸಂಪರ್ಕಾಧಿಕಾರಿಯನ್ನು ಉದ್ದೇಶಿಸಿ ಬರೆದರೆ ಸಾಕು. ನಿಮಗೆ ಪತ್ರ ಬರೆಯಲು ಆಗದಿದ್ದರೆ, ಸಂಬಂಧಿತ ಸಾರ್ವಜನಿಕ ಸಂಪರ್ಕಾಧಿಕಾರಿಯವರು ನಿಮಗೆ ಅರ್ಜಿಯನ್ನು ಬರೆಯಲು ಸಹಾಯ ಮಾಡುತ್ತಾರೆ.

**7. ಆರ್‌ಟಿಐ ಬಳಸಿಕೊಂಡು ಯಾವ ಮಾಹಿತಿಯನ್ನು ಪಡೆಯಬಹುದು?**

ಆರ್‌ಟಿಐ ಬಳಸಿಕೊಂಡು ಈ ಕೆಳಗಿನ ಮಾಹಿತಿಯನ್ನು ಪಡೆಯಬಹುದು:

- ದಾಖಲೆಗಳು, ರೆಕಾರ್ಡ್‌ಗಳು, ಮೆಮೋಗಳು, ಮಿಂಚಂಚೆಗಳು(ಇ-ಮೇಲ್‌ಗಳು), ಅಭಿಪ್ರಾಯಗಳು, ಸಲಹೆಗಳು, ಮಾಧ್ಯಮ ಬಿಡುಗಡೆ ಸುದ್ದಿಗಳು, ಆದೇಶಗಳು, ಲಾಗ್ ಬುಕ್‌ಗಳು, ಗುತ್ತಿಗೆಗಳು, ವರದಿಗಳು, ಕಾಗದಪತ್ರಗಳು, ಸುತ್ತೋಲೆಗಳು, ಮಾದರಿಗಳು, ಮಾಡೆಲ್‌ಗಳು ಇತ್ಯಾದಿ.
- ವಿದ್ಯುನ್ಮಾನ ರೂಪದಲ್ಲಿರುವ ದತ್ತಾಂಶಗಳು, ದಾಖಲೆಯ ಯಥಾಪ್ರತಿ.
- ಮೈಕ್ರೋಫಿಲ್ಮ್, ಮೈಕ್ರೋಫಿಶೆ ಅಥವಾ ಮೈಕ್ರೋಫಿಲ್ಮ್‌ನಲ್ಲಿರುವ ಚಿತ್ರಗಳ ನಕಲು ಪ್ರತಿ.

**8. ಆರ್‌ಟಿಐ ಬಳಸಿಕೊಂಡು ಯಾವ ಮಾಹಿತಿಯನ್ನು ಪಡೆಯಲು ಸಾಧ್ಯವಿಲ್ಲ?**

ಆರ್‌ಟಿಐ ಬಳಸಿಕೊಂಡು ಈ ಕೆಳಗಿನ ಮಾಹಿತಿಯನ್ನು ಪಡೆಯಲು ಸಾಧ್ಯವಿಲ್ಲ:

೧. ದೇಶದ ಏಕತೆ ಮತ್ತು ಸಮಗ್ರತೆಗೆ ಧಕ್ಕೆ ತರುವಂತಹ ಮಾಹಿತಿ

೨. ದೇಶದ ರಕ್ಷಣೆ, ರಾಜನೀತಿ, ವೈಜ್ಞಾನಿಕ ಮತ್ತು ಆರ್ಥಿಕ ಹಿತಾಸಕ್ತಿಗೆ ಸಂಬಂಧಿಸಿದ್ದು ಅಥವಾ ವಿದೇಶವೊಂದಕ್ಕೆ ಸಂಬಂಧಿಸಿದ್ದು ಅಥವಾ ಹಿಂಸೆಯನ್ನು ಪ್ರಚೋದಿಸುವಂಥದ್ದು,

೩. ಯಾವುದಾದರೂ ನ್ಯಾಯಾಲಯ, ಕಾಯಿದೆ ಅಥವಾ ನ್ಯಾಯಪೀಠದಿಂದ ಪ್ರಕಟಿಸಬಾರದು ಎಂದು ನಿಷೇಧಿಸಿದ್ದು,

೪. ಮಾಹಿತಿಯೊಂದನ್ನು ಬಹಿರಂಗಪಡಿಸುವುದು ನ್ಯಾಯಾಲಯ ನಿಂದನೆ ಆಗುವುದಾದರೆ,

೫. ಮಾಹಿತಿಯೊಂದನ್ನು ಬಹಿರಂಗಪಡಿಸುವುದು ಸಂಸತ್ತು ಅಥವಾ ರಾಜ್ಯ ವಿಧಾನಸಭೆಯ ಪ್ರಾವಧಾನಗಳ ಉಲ್ಲಂಘನೆಯನ್ನು ಉಂಟುಮಾಡುವುದಾದರೆ,

೬. ವಾಣಿಜ್ಯ ರಹಸ್ಯಗಳು ಮತ್ತು ಬೌದ್ಧಿಕ ಆಸ್ತಿಯನ್ನು ಒಳಗೊಂಡ ಮಾಹಿತಿಗಳು (ಇವುಗಳ ಬಹಿರಂಗಪಡಿಸುವಿಕೆಯು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ತುಂಬ ಒಳಿತಾಗುವ ಸಂದರ್ಭಗಳನ್ನು ಹೊರತುಪಡಿಸಿ), ಮೂರನೇ ಪಕ್ಷದ ಸ್ಪರ್ಧಾತ್ಮಕ ಸ್ಥಾನಕ್ಕೆ ಧಕ್ಕೆ ಉಂಟುಮಾಡುವ ಮಾಹಿತಿಗಳು,

೭. ಮಾಹಿತಿಯ ಬಹಿರಂಗಪಡಿಸುವಿಕೆಯು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ತುಂಬ ಒಳಿತಾಗುವುದಾದರೆ ಎಂಬುದನ್ನು ಹೊರತುಪಡಿಸಿ, ಇಬ್ಬರ ನಡುವಣ ಅತ್ಯಂತ ವಿಶ್ವಾಸಾರ್ಹ ವ್ಯವಹಾರಿಕ ಸಂಬಂಧದ ಕುರಿತ ಮಾಹಿತಿ,

೮. ವಿದೇಶೀ ಸರ್ಕಾರದಿಂದ ವಿಶ್ವಾಸಾರ್ಹವಾಗಿ ಪಡೆದುಕೊಂಡ ಮಾಹಿತಿಗಳು,

೯. ಮಾಹಿತಿಯ ಬಹಿರಂಗಪಡಿಸುವಿಕೆಯು ಯಾವುದೇ ವ್ಯಕ್ತಿಯ ಬದುಕು ಅಥವಾ ಸುರಕ್ಷತೆಗೆ ಅಪಾಯವೊಡ್ಡಬಹುದಾದರೆ,

೧೦. ತನಿಖಾ ಪ್ರಕ್ರಿಯೆಗೆ ಅಥವಾ ಅಪರಾಧಿಯ ದಸ್ತಗಿರಿಗೆ ಅಥವಾ ವಿಚಾರಣೆಗೆ ತಡೆ ಒಡ್ಡಬಹುದಾದರೆ

೧೧. ನಿರ್ಧಾರಗಳ ಕುರಿತ ಕ್ಯಾಬಿನೆಟ್ ಕಾಗದಪತ್ರಗಳು, ಅವನ್ನು ಸಾರ್ವಜನಿಕಗೊಳಿಸುವವರೆಗೆ,

೧೨. ಸಾರ್ವಜನಿಕ ಚಟುವಟಿಕೆ ಅಥವಾ ಹಿತಾಸಕ್ತಿಗೆ ಯಾವುದೇ ಸಂಬಂಧವಿಲ್ಲದ, ವೈಯಕ್ತಿಕ ಮಾಹಿತಿಗೆ ಸಂಬಂಧಪಟ್ಟಿದ್ದಾದರೆ, ಅಥವಾ ಖಾಸಗೀತನದ ಮೇಲೆ ಆಕ್ರಮಣವುಂಟು ಮಾಡುವುದಾದರೆ; ಇಂತಹ ಎಲ್ಲ ಮಾಹಿತಿಗಳನ್ನು ಪಡೆಯಲು ಸಾಧ್ಯವಿಲ್ಲ.

**9. ನಾನು ಯಾವ ಭಾಷೆಯಲ್ಲಿ ಮಾಹಿತಿ ಕೇಳಬಹುದು?**

ಮಾಹಿತಿಯನ್ನು ಇಂಗ್ಲಿಷ್, ಹಿಂದಿ ಅಥವಾ ಅರ್ಜಿ ಸಲ್ಲಿಸುತ್ತಿರುವ ಪ್ರದೇಶದ ಅಧಿಕೃತ ಭಾಷೆಯಲ್ಲಿ ಕೇಳಬಹುದು.

**1೦. ನನಗೆ ಬೇಕಾದ ಮಾಹಿತಿಯನ್ನು ನಾನು ಹೇಗೆ ನೋಡಬಹುದು/ಪ್ರತಿ ಮಾಡಿಕೊಳ್ಳಬಹುದು?**

- ಮಾಹಿತಿಯನ್ನು ಈ ಕೆಳಗಿನಂತೆ ಪಡೆಯಬಹುದು ಎಂದು ಆರ್‌ಟಿಐ ಕಾಯಿದೆಯು ನಿಗದಿಮಾಡಿದೆ:
- ಅಗತ್ಯವಿರುವ ದಾಖಲೆಗಳನ್ನು, ಹಸ್ತಪ್ರತಿಗಳನ್ನು ಮತ್ತು ರೆಕಾರ್ಡ್‌ಗಳನ್ನು ಪರಿಶೀಲಿಸುವುದು

  ಟಿಪ್ಪಣಿಗಳನ್ನು, ಪ್ರಮಾಣೀಕೃತ ದಾಖಲೆಗಳ ಪ್ರತಿಗಳನ್ನು ಅಥವಾ ಅವುಗಳ ಸಾರಾಂಶಗಳ ಪ್ರತಿಗಳನ್ನು ತೆಗೆದುಕೊಳ್ಳುವುದು
- ಸಾಮಗ್ರಿಗಳ ಪ್ರಮಾಣೀಕೃತ ಮಾದರಿಗಳನ್ನು ತೆಗೆದುಕೊಳ್ಳುವುದು
- ಮಾಹಿತಿಯನ್ನು ಸಿಡಿಗಳಲ್ಲಿ, ಟೇಪ್‌ಗಳಲ್ಲಿ, ವಿಡಿಯೋ ಕೆಸೆಟ್‌ಗಳಲ್ಲಿ, ಮುದ್ರಿತ ಪ್ರತಿಗಳಾಗಿ (ಕಂಪ್ಯೂಟರ್‌ನಲ್ಲಿ ಸಂಗ್ರಹಿಸಿದ ಮಾಹಿತಿ ಆದರೆ) ಅಥವಾ ಯಾವುದೇ ವಿದ್ಯುನ್ಮಾನ ರೀತಿಯಲ್ಲಿ

**11. ಅಧಿಕಾರಿಗಳು ಕೇಳಿದ ಮಾಹಿತಿಯನ್ನು ಹೇಗೆ ನೀಡುತ್ತಾರೆ?**

ಸಾರ್ವಜನಿಕ ಪ್ರಾಧಿಕಾರದ ಸಂಪನ್ಮೂಲಗಳನ್ನು ಸೂಕ್ತವಲ್ಲದ ರೀತಿಯಲ್ಲಿ ಬಳಕೆ ಮಾಡಿಕೊಂಡಂತೆ' ಆಗದಿದ್ದರೆ, ಅಥವಾ ನೀವು ಕೇಳಿದ ರೂಪದಲ್ಲಿ ಅದನ್ನು ಒದಗಿಸುವುದು ಆ ರೆಕಾರ್ಡ್‌ನ ಸುರಕ್ಷತೆಗೆ ಹಾನಿಕರವಲ್ಲದಿದ್ದರೆ, ನೀವು ಬಯಸಿದ ರೀತಿಯಲ್ಲಿಯೇ ಮಾಹಿತಿಯನ್ನು ಒದಗಿಸಲಾಗುವುದು,

**12. ಆರ್‌ಟಿಐ ಅಡಿಯಲ್ಲಿ ಮಾಹಿತಿ ಕೋರಲು ಏನಾದರೂ ನಮೂನೆಗಳು ಇವೆಯೇ?**

ಇಲ್ಲ! ಆರ್‌ಟಿಐ ಅರ್ಜಿ ಸಲ್ಲಿಸಲು ಯಾವುದೇ ನಿರ್ದಿಷ್ಟ ನಮೂನೆಯಿಲ್ಲ, ಆದರೆ ಅರ್ಜಿದಾರರು ಈ ಕೆಳಗಿನ ವಿವರಗಳನ್ನು ಸೇರಿಸುವುದು ಅಗತ್ಯವಿದೆ:

- ಅರ್ಜಿಯನ್ನು ಸಲ್ಲಿಸುವ ದಿನಾಂಕ
- ಸಂಬಂಧಿಸಿದ ಸಾರ್ವಜನಿಕ ಸಂಪರ್ಕಾಧಿಕಾರಿಯ ವಿಳಾಸ
- ಕೇಳಲಾದ ಮಾಹಿತಿ (ಇದನ್ನು ಅನುಕ್ರಮ ಸಂಖ್ಯೆ ನೀಡಿ ಕೇಳುವುದು ಅಥವಾ ಕೋಷ್ಟಕದ ರೂಪದಲ್ಲಿ ಉತ್ತರಗಳನ್ನು ಅದೇ ರೀತಿಯಾಗಿ ಕೊಡುವಂತೆ ಕೇಳುವುದು ಒಳ್ಳೆಯದು)
- ಯಾವ ರೂಪದಲ್ಲಿ ಮಾಹಿತಿಯನ್ನು ಕೇಳಲಾಗುತ್ತಿದೆ - ಮುದ್ರಿತ ಪ್ರತಿ, ಸಿಡಿ, ಇ-ಮೇಲ್
- ಹಣಪಾವತಿ ಅಫಿಕ್ಸ್/ಲಗತ್ತು
- ಪಾವತಿಯ ವಿಧಾನವನ್ನು ಉಲ್ಲೇಖಿಸಿ
- ಸಹಿ

ಹಲವಾರು ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆಗಳು ಆರ್‌ಟಿಐ ಕೋರಿಕೆಗಳಿಗೆ ಸೂಕ್ತವಾದ ನಮೂನೆಗಳನ್ನು ಸೂಚಿಸಿದ್ದಾರೆ. ಪರಿಸರ ಮತ್ತು ಅರಣ್ಯಗಳ ಸಚಿವಾಲಯವು ಸೂಚಿಸಿದ ನಮೂನೆಯನ್ನು ಈ ಕೊಂಡಿಯಿಂದ ಪಡೆದುಕೊಳ್ಳಬಹುದು:

http://envfor.nic.in/sites/default/files/app_pro.pdf

ಕೇಂದ್ರ ಮಾಹಿತಿ ಆಯೋಗವು ಕೂಡ ಒಂದು ಮೇಲ್ಮನವಿ ನಮೂನೆಯನ್ನು (appeal format) ಹೊಂದಿದೆ. ಆದರೆ ಇದನ್ನೇ ಅನುಸರಿಸಬೇಕು ಎಂದೇನೂ ಇಲ್ಲ ಮತ್ತು ಒಂದು ಅರ್ಜಿ/ಮೇಲ್ಮನವಿಯನ್ನು ಇದೇ ಕಾರಣಕ್ಕಾಗಿ ಮಾಹಿತಿ ಕೊಡದೇ ನಿರಾಕರಿಸುವಂತೆ ಇಲ್ಲ.

**13. ನಾನು ಆರ್‌ಟಿಐ ಅನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬಹುದೇ?**

ಇದು ಸಂಬಂಧಿಸಿದ ಸಾರ್ವಜನಿಕ ಪ್ರಾಧಿಕಾರವನ್ನು ಅವಲಂಬಿಸಿದೆ. ಕೇಂದ್ರ ಸರ್ಕಾರವು ಇತ್ತೀಚೆಗೆ ಆನ್‌ಲೈನ್ ಆರ್‌ಟಿಐ ಪೋರ್ಟಲ್ http://rtionline.gov.in/ ಆರಂಭಿಸಿದೆ. ಈ ಪೋರ್ಟಲ್‌ನಲ್ಲಿ ನೀವು ಆಯ್ದ ಕೇಂದ್ರ ಸರ್ಕಾರದ ಸಚಿವಾಲಯಗಳ ಆರ್‌ಟಿಐ ಅರ್ಜಿಗಳನ್ನು ಸಲ್ಲಿಸಲು ಆಸ್ಪದ ಕಲ್ಪಿಸುತ್ತದೆ.

ಕೆಲವು ರಾಜ್ಯಗಳು ಈ ಕುರಿತು ಜಾಲತಾಣವೊಂದನ್ನು ಆರಂಭಿಸುವ ಪ್ರಕ್ರಿಯೆಯಲ್ಲಿವೆ ಎಂದು ಹೇಳಲಾಗಿದೆ.

ಆರ್‌ಟಿಐ ಅಡಿಯಲ್ಲಿ ಕೇಳಿದ ಮಾಹಿತಿಯು ವ್ಯಕ್ತಿಯೊಬ್ಬರ ಬದುಕು ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದಾದರೆ, ಕೇಳಿದ ಮಾಹಿತಿಯನ್ನು ೪೮ ಗಂಟೆಗಳ ಒಳಗೆ ಒದಗಿಸಬೇಕು.

**14. ಆರ್‌ಟಿಐನಿಂದ ಪ್ರತಿಕ್ರಿಯೆ ಪಡೆಯಲು ಇರುವ ಕಾಲ ಮಿತಿ ಏನು?**

ಆರ್‌ಟಿಐ ಕೋರಿಕೆ ಸಲ್ಲಿಸಿದ ೩೦ ದಿನಗಳ ಒಳಗೆ ಸಂಬಂಧಿಸಿದ ಸಾರ್ವಜನಿಕ ಸಂಪರ್ಕಾಧಿಕಾರಿಯವರು ಮಾಹಿತಿಯನ್ನು ಒದಗಿಸಬೇಕು.
ಅರ್ಜಿಯನ್ನು ಸಹಾಯಕ ಸಂಪರ್ಕಾಧಿಕಾರಿಯವರಿಗೆ ಸಲ್ಲಿಸಿದ್ದರೆ, ಆಗ ಹೆಚ್ಚುವರಿ ೫ ದಿನಗಳನ್ನು ಪ್ರತಿಕ್ರಿಯೆ ಒದಗಿಸಲು ತೆಗೆದುಕೊಳ್ಳಲಾಗುವುದು.

ಆರ್‌ಟಿಐ ಅಡಿಯಲ್ಲಿ ಕೇಳಿದ ಮಾಹಿತಿಯು ವ್ಯಕ್ತಿಯೊಬ್ಬರ ಬದುಕು ಮತ್ತು ಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದಾದರೆ, ಕೇಳಿದ ಮಾಹಿತಿಯನ್ನು ೪೮ ಗಂಟೆಗಳ ಒಳಗೆ ಒದಗಿಸಬೇಕು.

**15. ಆರ್‌ಟಿಐ ಅರ್ಜಿಯು ಸರಿಯಾದ ಸಾರ್ವಜನಿಕ ಅಧಿಕಾರಿ/ಕಚೇರಿಯನ್ನು ಉದ್ದೇಶಿಸಿಲ್ಲ ಎಂಬ ಕಾರಣಕ್ಕೆ ಅರ್ಜಿಯನ್ನು ಹಿಂತಿರುಗಿಸಬಹುದೇ?**

ಇಲ್ಲ! ನೀವು ಯಾವ ಸಾರ್ವಜನಿಕ ಸಂಪರ್ಕಾಧಿಕಾರಿಯವರನ್ನು ಉದ್ದೇಶಿಸಿ ಮಾಹಿತಿ ಕೋರಿದ್ದೀರೋ ಅವರು, ಅದನ್ನು ಸಂಬಂಧಿತ ಸಾರ್ವಜನಿಕ ಸಂಪರ್ಕಾಧಿಕಾರಿಯವರಿಗೆ ನಿಮ್ಮ ಕೋರಿಕೆ ಪಡೆದ ೫ ದಿನಗಳ ಒಳಗೆ ಅರ್ಜಿಯನ್ನು ತಲುಪಿಸಬೇಕಾಗುತ್ತದೆ.

ಆರ್‌ಟಿಐ ಅರ್ಜಿಯನ್ನು ಕಳಿಸುವ ಮೊದಲು ಒಂದು ಪ್ರತಿಯನ್ನು ಮಾಡಿ, ನಿಮ್ಮೊಂದಿಗೆ ಇಟ್ಟುಕೊಳ್ಳಿ! ಆರ್‌ಟಿಐ ಅರ್ಜಿಗಳನ್ನು ರಿಜಿಸ್ಟರ್ಡ್ ಅಂಚೆ ಮೂಲಕ ಕಳುಹಿಸಿ, ನಿಮಗೆ ಅವರಿಂದ ಸ್ವೀಕೃತಿ ಪತ್ರ ದೊರೆಯುತ್ತದೆ.

**16. ಮಾಹಿತಿಯನ್ನು ಪಡೆಯಲು ನಾನು ಶುಲ್ಕವನ್ನು ನೀಡಬೇಕೆ?**

ಹೌದು! ರಾಜ್ಯ ಸರ್ಕಾರವು ಆಯಾ ರಾಜ್ಯ ಸರ್ಕರದ ಸಾರ್ವಜನಿಕ ಪ್ರಾಧಿಕಾರವು ಮಾಹಿತಿ ಒದಗಿಸಲಿಕ್ಕೆ ಎಷ್ಟು ಶುಲ್ಕ ಪಡೆಯಬೇಕೆಂಬುದನ್ನು ನಿರ್ಧರಿಸುತ್ತದೆ. ಕೇಂದ್ರ ಸರ್ಕಾರವು ಪ್ರತಿ ಅರ್ಜಿಗೆ ೧೦ ರೂ.ಗಳ ಶುಲ್ಕವನ್ನು ಪ್ರಕಟಿಸಿದೆ. ಮೇಲೆ ನೀಡಲಾದ ಕೋಷ್ಟಕ ೨ ಅನ್ನು ವಿವಿಧ ರಾಜ್ಯ ಸರ್ಕಾರಗಳು ಎಷ್ಟು ಶುಲ್ಕ ವಿಧಿಸುತ್ತವೆ ಮತ್ತು ಅದನ್ನು ಹೇಗೆ ಪಾವತಿಸಬೇಕು ಎಂಬುದನ್ನು ನೋಡಿ.

ನಿಮ್ಮಲ್ಲಿ ಬಡತನ ರೇಖೆಯ ಕೆಳಗಿನ ಕಾರ್ಡ್ (ಬಿಪಿಎಲ್ ಕಾರ್ಡ್) ಇದ್ದರೆ, ಆಗ ಆರ್‌ಟಿಐ ಶುಲ್ಕವನ್ನು ನೀಡಬೇಕಾಗಿಲ್ಲ, ಬಿಪಿಎಲ್ ಕಾರ್ಡಿನ ನಕಲುಪ್ರತಿಯೊಂದನ್ನು ಅರ್ಜಿಯೊಂದಿಗೆ ಸಲ್ಲಿಸಿ.

ಅರ್ಜಿ ಶುಲ್ಕದ ಹೊರತಾಗಿ, ನಿಮಗೆ ಕೊಡುವ ಮಾಹಿತಿಯನ್ನು ಮುದ್ರಿತ ಅಥವಾ ವಿದ್ಯುನ್ಮಾನ ರೂಪದಲ್ಲಿ ನೀಡಲು ಸಂಬಂಧಿತ ಕಚೇರಿ/ಇಲಾಖೆಯು ನಿಮಗೆ ಶುಲ್ಕವನ್ನು ವಿಧಿಸಬಹುದು. ಸಾಮಾನ್ಯವಾಗಿ ಹಲವಾರು ಪುಟಗಳಿರುವ ಮಾಹಿತಿಗೆ ಪ್ರತೀ ಪುಟಕ್ಕೆ ೨ ರೂ.ನಂತೆ ಶುಲ್ಕ ವಿಧಿಸಲಾಗುವುದು. ಮಾಹಿತಿಗಾಗಿ ವಿಧಿಸುವ ಯಾವುದೇ ಹೆಚ್ಚುವರಿ ಶುಲ್ಕದ ಕುರಿತು ಸಾರ್ವಜನಿಕ ಸಂಪರ್ಕಾಧಿಕಾರಿಯು ತಮ್ಮ ಪ್ರತಿಕ್ರಿಯೆಯಲ್ಲಿ ವಿವರವಾಗಿ ಬರೆದಿರುತ್ತಾರೆ.

ಮಾಹಿತಿಯನ್ನು ನಿಗದಿಪಡಿಸಿದ ೩೦ ದಿನಗಳ ಒಳಗೆ ನೀಡದಿದ್ದರೆ, ಆಗ ಮಾಹಿತಿಯನ್ನು ಶುಲ್ಕರಹಿತವಾಗಿ ಒದಗಿಸಬೇಕಾಗುತ್ತದೆ.

**17. ನನ್ನ ಆರ್‌ಟಿಐ ಅರ್ಜಿಗೆ ಏನೂ ಪ್ರತಿಕ್ರಿಯೆ ಬರಲಿಲ್ಲವಾದರೆ ಏನು ಮಾಡಬೇಕು?**

ಆಗ ನೀವು ಮೇಲ್ಮನವಿ ಸಲ್ಲಿಸುವುದು ಒಳ್ಳೆಯದು. ಈ ಮೇಲ್ಮನವಿಯನ್ನು ಮೇಲ್ಮನವಿ ಪ್ರಾಧಿಕಾರಕ್ಕೆ ಸಲ್ಲಿಸಬೇಕು, ಅವರಿಗೆ ಪ್ರತಿಯೊಂದೂ ಸಾರ್ವಜನಿಕ ಪ್ರಾಧಿಕಾರದಲ್ಲಿ ಆರ್‌ಟಿಐ ಮೇಲ್ಮನವಿಗಳನ್ನು ಪರಿಶೀಲಿಸಿ, ಕಾರ್ಯೋನ್ಮುಖವಾಗುವ ಕೆಲಸ ವಹಿಸಲಾಗಿದೆ. ನಿಮ್ಮ ಅರ್ಜಿಗೆ ಪ್ರತಿಕ್ರಿಯೆ ಬರಬಹುದಾಗಿದ್ದ ಸಮಯ ಕಳೆದ ನಂತರದ ೩೦ ದಿನಗಳ ಒಳಗೆ ಮೇಲ್ಮನವಿಯನ್ನು ಸಲ್ಲಿಸಬೇಕು. ಅಂದರೆ ಮೇಲ್ಮನವಿಯನ್ನು ನಿಮ್ಮ ಆರ್‌ಟಿಐ ಅರ್ಜಿಯು ಸಂಬಂಧಿಸಿದ ಕಚೇರಿ/ಇಲಾಖೆಯನ್ನು ತಲುಪಿದ ನಂತರದ ೩೦ರಿಂದ ೬೦ನೇ ದಿನದ ಒಳಗೆ ಸಲ್ಲಿಸಬೇಕು.

**18. ನನಗೆ ಕೊಟ್ಟ ಮಾಹಿತಿಯು ತಪ್ಪು/ಅಪೂರ್ಣ ಆಗಿದ್ದರೆ, ಏನು ಮಾಡಬೇಕು?**

ನೀವು ಆಗ ಮೇಲ್ಮನವಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಬೇಕು. ನೀವು ಪ್ರತಿಕ್ರಿಯೆ ಸ್ವೀಕರಿಸಿದ ೩೦ ದಿನಗಳ ಒಳಗೆ ಮೇಲ್ಮನವಿಯನ್ನು ಸಲ್ಲಿಸಬೇಕು. ವಿಳಂಬಕ್ಕೆ ಏನಾದರೂ ಸಮರ್ಥನೀಯ ಕಾರಣಗಳಿದ್ದರೆ, ಆಗ ಮೇಲ್ಮನವಿಯನ್ನು ನಿಗದಿಮಾಡಿದ್ದ ಸಮಯಾವಕಾಶದ ನಂತರವೂ ಸಲ್ಲಿಸಬಹುದಾಗಿದೆ.

**19. ನನಗೆ ಮಾಹಿತಿ ನೀಡುವುದಕ್ಕೆ ನಿರಾಕರಿಸಬಹುದೇ?**

ಖಂಡಿತವಾಗಿಯೂ! ಕೆಲವೊಂದು ಮಾಹಿತಿಯನ್ನು ಆರ್‌ಟಿಐ ಬಳಸಿಕೊಂಡು ಹಂಚಿಕೊಳ್ಳುವ ಅಗತ್ಯವಿಲ್ಲ. ಅಂತಹ ಸಮಯದಲ್ಲಿ ಮಾಹಿತಿ ನೀಡುವುದಕ್ಕೆ ನಿರಾಕರಿಸಬಹುದು. ಆದಾಗ್ಯೂ ಆರ್‌ಟಿಐ ಕಾಯಿದೆ ಅಡಿಯಲ್ಲಿ ಮಾಹಿತಿಯು ಲಭ್ಯವಾಗಬೇಕು ಎಂದು ನೀವು ಆಲೋಚಿಸುವುದಾದರೆ, ನೀವು ನಿರಾಕರಣೆಯ ವಿರುದ್ಧ ಮೇಲ್ಮನವಿ ಹೋಗಬಹುದು.

ನೀವು ಮೇಲ್ಮನವಿಯನ್ನು ಪ್ರತಿಕ್ರಿಯೆ ದೊರೆತ ೩೦ ದಿನಗಳ ಒಳಗೆ ಮೇಲ್ಮನವಿ ಪ್ರಾಧಿಕಾರಕ್ಕೆ ಸಲ್ಲಿಸಬೇಕು.

ಸಾರ್ವಜನಿಕ ಸಂಪರ್ಕಾಧಿಕಾರಿಯು ನಿಮ್ಮ ಕೋರಿಕೆಯಡಿ ಮಾಹಿತಿ ನೀಡಲು ನಿರಾಕರಿಸಿದರೆ, ಅವರ ಪ್ರತಿಕ್ರಿಯೆಯಲ್ಲಿ ನಿರಾಕರಣೆಗೆ ಕಾರಣಗಳು, ನಿರಾಕರಣೆಯ ವಿರುದ್ಧ ನೀವು ಹೇಗೆ ಮೇಲ್ಮನವಿ ಸಲ್ಲಿಸಬಹುದು ಮತ್ತು ಮೇಲ್ಮನವಿಯನ್ನು ಮೇಲ್ಮನವಿ ಪ್ರಾಧಿಕಾರದ ಯಾರಿಗೆ ಕಳುಹಿಸಬೇಕು ಎಂಬ ವಿವರಗಳು ಇರಬೇಕು.

**20. ಮೇಲ್ಮನವಿ ಪ್ರಾಧಿಕಾರದ ಪ್ರತಿಕ್ರಿಯೆಯಿಂದ ನನಗೆ ತೃಪ್ತಿಯಾಗದಿದ್ದರೆ ನಾನೇನು ಮಾಡಬಹುದು?**

ಅಂತಹ ಸಂದರ್ಭದಲ್ಲಿ, ನೀವು ಸಂಬಂಧಿಸಿದ ಕೇಂದ್ರ/ರಾಜ್ಯ ಮಾಹಿತಿ ಆಯೋಗಕ್ಕೆ ಎರಡನೇ ಮೇಲ್ಮನವಿ ಸಲ್ಲಿಸಬಹುದು. ಆರ್‌ಟಿಐ ಪ್ರತಿಕ್ರಿಯೆ ಅವಧಿಯ ಗಡುವು ಮುಗಿಯುವ ೯೦ ದಿನಗಳ ಒಳಗೆ ನೀವು ಮೇಲ್ಮನವಿಯನ್ನು ಸಲ್ಲಿಸಬೇಕು ಅಥವಾ ಮೇಲ್ಮನವಿಗೆ ಪ್ರತಿಕ್ರಿಯೆ ಸ್ವೀಕರಿಸಿದ ೯೦ ದಿನಗಳ ಒಳಗೆ ಸಲ್ಲಿಸಬೇಕು. ಈ ಸಮಯದ ನಂತರವೂ, ವಿಳಂಬಕ್ಕೆ ಸಮರ್ಥನೀಯ ಕಾರಣಗಳು ಇದ್ದರೆ, ಮೇಲ್ಮನವಿಯನ್ನು ಸಲ್ಲಿಸಬಹುದು.

**21. ಎಸ್‌ಐಸಿ/ಸಿಐಸಿಯು ಕಾಲ ಮಿತಿಯಲ್ಲಿ ಒಂದು ಆದೇಶವನ್ನು ನೀಡುವುದಕ್ಕೆ ಬದ್ಧವಾಗಿದೆಯೇ?**

ಇಲ್ಲ, ಎಸ್‌ಐಸಿ/ಸಿಐಸಿ ಆದೇಶಕ್ಕೆ ಕಾಲ ಮಿತಿಯಿಲ್ಲ.


**22. ಕೇಳಿದ ಮಾಹಿತಿಯನ್ನು ಕೊಡದ ಅಧಿಕಾರಿಗೆ ಏನಾಗುತ್ತದೆ?**

ಸಿಐಸಿ ಅಥವಾ ಎಸ್‌ಐಸಿಯು ಸಾರ್ವಜನಿಕ ಸಂಪರ್ಕಾಧಿಕಾರಿಯು ಈ ಕೆಳಗಿನಂತೆ ನಡೆದುಕೊಂಡಿದ್ದಾರೆ ಎಂದು ಕಂಡುಬಂದರೆ,

- ಆರ್‌ಟಿಐ ಅರ್ಜಿಯನ್ನು ತೆಗೆದುಕೊಳ್ಳಲು ಕಾರಣವಿಲ್ಲದೆಯೇ ನಿರಾಕರಿಸಿದರೆ,
- ನಿಗದಿಯಾದ ಸಮಯದೊಳಗೆ ಮಾಹಿತಿಯನ್ನು ಕೊಡಲು ಕಾರಣವಿಲ್ಲದೆಯೇ ನಿರಾಕರಿಸಿದರೆ,
- ವಿಳಂಬವಾದ ಮಾಹಿತಿ
- ಗೊತ್ತಿದ್ದೂ ತಪ್ಪು, ಅಪೂರ್ಣ ಮತ್ತು ತಪ್ಪುದಾರಿಗೆಳಸುವ ಮಾಹಿತಿ ನೀಡಿದರೆ,
- ಕೇಳಿದ ಮಾಹಿತಿಯನ್ನು ನಾಶ ಮಾಡಿದರೆ,
- ಯಾವುದೇ ರೀತಿಯಲ್ಲಿ ಮಾಹಿತಿಯನ್ನು ಒದಗಿಸುವುದಕ್ಕೆ ಅಡ್ಡಿಪಡಿಸಿದರೆ,

ಸಂಪರ್ಕಾಧಿಕಾರಿಯು ಅರ್ಜಿ ತೆಗೆದುಕೊಳ್ಳುವವರೆಗೆ ಅಥವಾ ಮಾಹಿತಿ ಒದಗಿಸುವವರೆಗೆ ಪ್ರತೀ ದಿನ ೨೫೦ ರೂ. ದಂಡವನ್ನು ವಿಧಿಸಬಹುದು. ಅವರಿಗೆ ವಿಧಿಸಬಹುದಾದ ಗರಿಷ್ಠ ದಂಡ ಎಂದರೆ ೨೫,೦೦೦ ರೂ.

### 2.7.4 ಆರ್‌ಟಿಐ ಹರಿವುನಕ್ಷೆ (ಫ್ಲೋಚಾರ್ಟ್)



## 2.7.5 ಕೇಂದ್ರ ಸರ್ಕಾರದ ಮೇಲ್ಮನವಿ ನಮೂನೆ೧. ಮೇಲ್ಮನವಿದಾರರ ಹೆಸರು ಮತ್ತು ವಿಳಾಸ:

೨. ಅರ್ಜಿಯನ್ನು ಉದ್ದೇಶಿಸಲಾಗಿರುವ ಕೇಂದ್ರ ಸಾರ್ವಜನಿಕ ಸಂಪರ್ಕಾಧಿಕಾರಿಯವರ ಹೆಸರು ಮತ್ತು ವಿಳಾಸ:

೩. ಅರ್ಜಿಗೆ ಪ್ರತಿಕ್ರಿಯೆ ನೀಡಿದ ಕೇಂದ್ರ ಸಾರ್ವಜನಿಕ ಸಂಪರ್ಕಾಧಿಕಾರಿಯವರ ಹೆಸರು ಮತ್ತು ವಿಳಾಸ:

೪. ಮೊದಲ ಮೇಲ್ಮನವಿ ಪ್ರಾಧಿಕಾರದ ಹೆಸರು ಮತ್ತು ವಿಳಾಸ:

೫. ಯಾರು ಮೊದಲ ಮೇಲ್ಮನವಿಯ ತೀರ್ಪು ನೀಡಿದರು?

೬. ಅರ್ಜಿಯ ವಿವರಗಳು:

೭. ಯಾವುದರ ವಿರುದ್ಧ ಮೇಲ್ಮನವಿ ಮಾಡಲಾಗುತ್ತಿದೆಯೋ, ಅದರ ಸಂಖ್ಯೆಗಳೂ ಸೇರಿದಂತೆ ಆದೇಶದ ವಿವರಗಳು, ಏನಾದರೂ ಇದ್ದಲ್ಲಿ,

೮. ಮೇಲ್ಮನವಿಗೆ ಕಾರಣವಾದ ಅಂಶಗಳು, ಸಂಕ್ಷಿಪ್ತವಾಗಿ

೯. ಕೇಳಲಾಗುತ್ತಿರುವ ಪರಿಹಾರ ಅಥವಾ ಕೋರಿಕೆ

೧೦. ಪರಿಹಾರ ಅಥವಾ ಕೋರಿಕೆಗೆ ಆಧಾರಗಳು

೧೧. ಮೇಲ್ಮನವಿಗೆ ಪ್ರಸ್ತುತತೆ ಇರುವ ಏನಾದರೂ ಬೇರೆ ಮಾಹಿತಿಗಳು

೧೨. ಮೇಲ್ಮನವಿದಾರರಿಂದ ಪರಿಶೀಲನೆ/ದೃಢೀಕರಣ

ಟಿಪ್ಪಣಿ**:**

ಇದೇ ನಮೂನೆಯನ್ನು ಅನುಸರಿಸುವುದು ಕಡ್ಡಾಯವೇನಲ್ಲ ಮತ್ತು ಈ ನಮೂನೆಯನ್ನು ಅನುಸರಿಸಲಿಲ್ಲ ಎಂದು ಒಂದು ಅರ್ಜಿ/ಮೇಲ್ಮನವಿಯನ್ನು ಮಾಹಿತಿ ಕೊಡದೇ ನಿರಾಕರಿಸುವಂತಿಲ್ಲ.

ಕೊಂಡಿ: ಈ ಮೇಲ್ಮನವಿ ನಮೂನೆಯು ಮಾಹಿತಿ ಹಕ್ಕು ನಿಯಮಗಳು, ೨೦೧೨ರ ಒಂದು ಭಾಗವಾಗಿದೆ. ಇದನ್ನು ಈ ಕೊಂಡಿಯಲ್ಲಿ ನೋಡಬಹುದು:

http://ccis.nic.in/WriteReadData/CircularPortal/D2/D02rti/1_35_2009-IR-1.pdf

## 2.7.6 ಎಂಒಇಎಫ್‌ನ ಅರ್ಜಿ ನಮೂನೆ

ಮಾಹಿತಿ ಹಕ್ಕು ಕಾಯಿದೆ, ೨೦೦೫ರ ಅಡಿಯಲ್ಲಿ ಅರ್ಜಿ ನಮೂನೆ

(ಅರ್ಜಿದಾರರು ಎರಡು ಅರ್ಜಿಗಳನ್ನು ತುಂಬಿ, ಒಂದನ್ನು ಪರ್ಯಾವರಣ ಭವನದಲ್ಲಿರುವ ಪರಿಸರ ಮತ್ತು ಅರಣ್ಯಗಳ ಸಚಿವಾಲಯದ ಸ್ವಾಗತಕಾರ/ತಿಗೆ ನೀಡಬೇಕು.

೧. ಎ) ಅರ್ಜಿದಾರರ ಹೆಸರು ಮತ್ತು ವಿಳಾಸ:

ಬಿ) ಇ-ಮೇಲ್ ವಿಳಾಸ:

ಸಿ) ದೂರವಾಣಿ/ಫ್ಯಾಕ್ಸ್ ಸಂಖ್ಯೆ:

೨. ಅರ್ಜಿಯನ್ನು ಸಲ್ಲಿಸಿದ ದಿನಾಂಕ:

೩. ವಿಷಯ:

೪. ಬೇಕಿರುವ ಮಾಹಿತಿಯ ವಿವರಗಳು:

೫. ಮಾಹಿತಿಗೆ ಸಂಬಂಧಿಸಿದ ಕಾಲಾವಧಿ:

೬. ಲಗತ್ತಿಸಲಾದ ಶುಲ್ಕ (ನಗದು/ಬ್ಯಾಂಕರ್ ಚೆಕ್)

೭. ಮಾಹಿತಿಯನ್ನು ಒದಗಿಸಬೇಕಾದ ದಿನಾಂಕ: (ಅರ್ಜಿಯನ್ನು ಸಲ್ಲಿಸಿದ ನಂತರ ೩೦ ದಿನಗಳು)

೮. ಮಾಹಿತಿಯನ್ನು ಹೇಗೆ ಕಳುಹಿಸಬೇಕೆಂದು ಅರ್ಜಿದಾರರು ಬಯಸುತ್ತಾರೆ:

ಎ) ಅಂಚೆಯ ಮೂಲಕ

ಬಿ) ಅವರೇ ಸ್ವತಃ ಬಂದು ತೆಗೆದುಕೊಳ್ಳುತ್ತಾರೆ

ಸಿ) ಇ-ಮೇಲ್ ಮೂಲಕ

ಡಿ) ಫ್ಯಾಕ್ಸ್ ಮೂಲಕ

ಅರ್ಜಿದಾರರ ಸಹಿ

ಅರ್ಜಿ ನಮೂನೆಯನ್ನು ಈ ಕೊಂಡಿಯಲ್ಲಿ ತೆಗೆದುಕೊಳ್ಳಬಹುದು: http://envfor.nic.in/sites/default/files/app_pro.pdf

# 3. ನವೀಕರಿಸಬಲ್ಲ ಶಕ್ತಿಮೂಲಗಳಿಗೆ ಬದಲಾಗುವುದು

**ನವೀಕರಿಸಬಲ್ಲ ಶಕ್ತಿಯು ಶಾಶ್ವತ ಮತ್ತು ನೈಸರ್ಗಿಕ ಸಂಪನ್ಮೂಲಗಳಾದ ಸೌರ, ಗಾಳಿ, ಸಸ್ಯಗಳು ಮತ್ತು ನೀರನ್ನು ಬಳಸಿಕೊಂಡು, ಸುಸ್ಥಿರ ಮತ್ತು ಸ್ವಚ್ಛ ಶಕ್ತಿಯನ್ನು ಉತ್ಪಾದಿಸುತ್ತವೆ. ನವೀಕರಿಸಬಲ್ಲ ಶಕ್ತಿಯ ಪಾರಿಸರಿಕ ಮತ್ತು ಆರ್ಥಿಕ ಲಾಭಗಳು ಹೀಗಿವೆ:**

- ಹಸಿರು ಮನೆ ಅನಿಲಗಳ ಹೊರಸೂಸುವಿಕೆ ಮತ್ತು ವಾಯುಮಾಲಿನ್ಯವಿಲ್ಲದೆಯೇ ಶಕ್ತಿಯ ಉತ್ಪಾದನೆ
- ಶಕ್ತಿ ವೈವಿಧ್ಯತೆಯು ಆಮದು ಇಂಧನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ
- ಉತ್ಪಾದನೆ, ಸ್ಥಾಪನೆ ಹಾಗೂ ಇನ್ನಿತರ ರೀತಿಯಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗಾವಕಾಶಗಳ ಸೃಷ್ಟಿ

## ನವೀಕರಿಸಬಲ್ಲ ಶಕ್ತಿಯ ಮೂಲಗಳು

ಸೌರ ಶಕ್ತಿ ಎಂದರೆ ಸೂರ್ಯನ ಬೆಳಕಿನ ಶಕ್ತಿಯನ್ನು ಬಳಸಿಕೊಂಡು ವಿದ್ಯುತ್ ಶಕ್ತಿಯನ್ನು ಉತ್ಪಾದಿಸುವುದು; ಇದನ್ನು ಕಟ್ಟಡಗಳನ್ನು ಬಿಸಿಗೊಳಿಸಲು, ತಂಪುಗೊಳಿಸಲು ಹಾಗೂ ಬೆಳಕಿಗೆ, ನೀರು ಬಿಸಿ ಮಾಡಲು ಮತ್ತು ಇನ್ನಿತರ ವಿವಿಧ ವಾಣಿಜ್ಯಕ ಮತ್ತು ಕೈಗಾರಿಕಾ ಉದ್ದೇಶಗಳಿಗೆ ಬಳಸಲಾಗುತ್ತದೆ.

ಪವನ ಶಕ್ತಿ ಎಂದರೆ ಗಾಳಿಯಲ್ಲಿರುವ ಶಕ್ತಿಯನ್ನು ವಿದ್ಯುತ್‌ಶಕ್ತಿ ಉತ್ಪಾದನೆಗೆ ಬಳಸಿಕೊಳ್ಳುವುದು; ಬ್ಯಾಟರಿ ಚಾರ್ಜ್ ಮಾಡುವುದು, ನೀರು ಪಂಪ್ ಮಾಡುವುದು, ಧಾನ್ಯಗಳನ್ನು ಹಿಟ್ಟು ಮಾಡಲು ಬಳಸಲಾಗುತ್ತದೆ. ಅನೇಕ ಟರ್ಬೈನ್‌ಗಳನ್ನು ಹತ್ತಿರದಲ್ಲಿ ನಿರ್ಮಿಸಿ, ಒಂದು ಗಾಳಿತೋಟವನ್ನು ರೂಪಿಸಿ, ಅದರಿಂದ ಬಳಕೆ-ವ್ಯಾಪ್ತಿಯ ಗ್ರಿಡ್ ವಿದ್ಯುತ್ ಉತ್ಪಾದನೆಗೆ ವಿದ್ಯುತ್ ಪೂರೈಸಲಾಗುತ್ತದೆ.

ಜೈವಿಕ ಶಕ್ತಿ ಎಂದರೆ ಸಸ್ಯಗಳು, ಕೃಷಿ ಮತ್ತು ಅರಣ್ಯದ ಉಳಿಕೆಗಳು, ಮುನ್ಸಿಪಲ್ ಮತ್ತು ಕೈಗಾರಿಕಾ ತ್ಯಾಜ್ಯದ ಸಾವಯವ ಭಾಗಗಳು ಇತ್ಯಾದಿಗಳನ್ನು ಬಳಸಿಕೊಂಡು ವಿದ್ಯುತ್ ಉತ್ಪಾದಿಸುವುದು. ಉದಾಹರಣೆಗೆ ಸಾವಿರಾರು ವರ್ಷಗಳಿಂದ ಕಟ್ಟಿಗೆಯನ್ನು ಶಾಖ ಒದಗಿಸಲಿಕ್ಕಾಗಿ ಬಳಸಲಾಗುತ್ತಿದೆ.

ಜಲ ವಿದ್ಯುತ್ ಶಕ್ತಿ ಎಂದರೆ ಹರಿಯುವ ನೀರನ್ನು ಬಳಸಿಕೊಂಡು, ವಿದ್ಯುತ್ ಉತ್ಪಾದನೆ ಮಾಡುವುದು ಮತ್ತು ನಮ್ಮಲ್ಲಿ ಬೃಹತ್ ಮತ್ತು ಸಣ್ಣ ಪ್ರಮಾಣದ ಜಲವಿದ್ಯುತ್ ಉತ್ಪಾದನೆ ತಂತ್ರಗಳು ಲಭ್ಯವಿವೆ.

ಭೂ-ಉಷ್ಣ ಶಕ್ತಿಯು ನೆಲದಿಂದ ದೊರೆಯುವ ಶಾಖವನ್ನು ಶಕ್ತಿಯ ಮೂಲವನ್ನಾಗಿ ಬಳಸಿಕೊಳ್ಳುತ್ತದೆ. ಭೂ-ಉಷ್ಣ ಶಕ್ತಿಯ ಮೂಲಗಳು ನೆಲದ ಮೇಲ್ಭಾಗದಿಂದ ಭೂಮಿಯ ಕೆಲವು ಮೈಲುಗಳ ಆಳದಲ್ಲಿ ದೊರೆಯುವ ಬಿಸಿನೀರು ಮತ್ತು ಬಿಸಿಬಂಡೆಗಳ ಶಾಖಶಕ್ತಿಯವರೆಗೆ ವ್ಯಾಪಿಸಿದೆ.

ಸಮುದ್ರ ಶಕ್ತಿಯು ಎರಡು ರೀತಿಯ ಶಕ್ತಿಯನ್ನು ಒಳಗೊಂಡಿದೆ: ಸೂರ್ಯನ ಬಿಸಿಲಿನಿಂದ ದೊರೆಯುವ ಉಷ್ಣ ಶಕ್ತಿ ಮತ್ತು ಅಲೆಗಳು ಹಾಗೂ ಉಬ್ಬರವಿಳಿತದಿಂದ ದೊರೆಯುವ ಯಾಂತ್ರಿಕ ಶಕ್ತಿ. ಸಮುದ್ರಗಳು ಭೂಮಿಯ ಸುಮಾರು ಶೇ. ೭೦ಕ್ಕೂ ಹೆಚ್ಚಿನ ಭಾಗವನ್ನು ಆವರಿಸಿದೆ, ಹೀಗಾಗಿ ಅವು ವಿಶ್ವದ ಅತಿದೊಡ್ಡ ಸೌರ ಸಂಗ್ರಹಗಳು. ಸೂರ್ಯನ ಬಿಸಿಲು ಸಮುದ್ರದ ಆಳವಾದ ನೀರಿಗಿಂತ ಮೇಲ್ಭಾಗದ ನೀರನ್ನು ಹೆಚ್ಚು ಬಿಸಿ ಮಾಡುತ್ತದೆ ಮತ್ತು ಉಷ್ಣತೆಯಲ್ಲಿರುವ ಈ ವ್ಯತ್ಯಾಸವು ಥರ್ಮಲ್ ಶಕ್ತಿಯನ್ನು ಉತ್ಪಾದಿಸುತ್ತದೆ.

## ನವೀಕರಿಸಬಲ್ಲ ವಿದ್ಯುತ್ ಶಕ್ತಿ ಯೋಜನೆಗಳು

### ಸಣ್ಣ ಪ್ರಮಾಣ:

ನವೀಕರಿಸಬಲ್ಲ ಶಕ್ತಿ ವ್ಯವಸ್ಥೆಗಳು ಅಥವಾ ಯಂತ್ರಗಳನ್ನು ವಿದ್ಯುತ್‌ಶಕ್ತಿಯನ್ನು ಬಳಸಲಾಗುವ ಸ್ಥಳಗಳಲ್ಲಿ ಅಳವಡಿಸಲಾಗುತ್ತದೆ. ಉದಾ: ಕಟ್ಟಡಗಳ ಮೇಲ್ಛಾವಣಿಗಳು. ಸಣ್ಣ ಪ್ರಮಾಣದ ನವೀಕರಿಸಬಲ್ಲ ಶಕ್ತಿ ತಂತ್ರಜ್ಞಾನಗಳು ಸ್ಥಳೀಕರಣಗೊಂಡಿರುತ್ತವೆ ಮತ್ತು ವಿಕೇಂದ್ರೀಕರಣಗೊಂಡಿರುತ್ತವೆ (ಅಂದರೆ ಅಪಾರ್ಟ್‌ಮೆಂಟ್‌ಗಳು, ಕೈಗಾರಿಕಾ ಘಟಕಗಳು, ಮನೋರಂಜನಾ ಕೇಂದ್ರಗಳು ಅಥವಾ ಸ್ಥಳೀಯ ಸಮುದಾಯದ ಅಗತ್ಯಗಳು, ಈ ರೀತಿಯ ಸ್ಥಳೀಯ ಅಗತ್ಯಗಳನ್ನು ಪೂರೈಸಲು ವಿದ್ಯುತ್‌ಶಕ್ತಿಯನ್ನು ಒದಗಿಸುವುದು ಅಥವಾ ತಣ್ಣಗಾಗಿಸುವುದು/ಬಿಸಿಮಾಡುವುದು).

ಸಣ್ಣ ಪ್ರಮಾಣದ ನವೀಕರಿಸಬಲ್ಲ ಶಕ್ತಿ ಉತ್ಪಾದನಾ ವ್ಯವಸ್ಥೆಗಳು ಈ ರೀತಿಯಾಗಿರುತ್ತವೆ: (೧) ವಿದ್ಯುತ್ ಗ್ರಿಡ್ ಒಳಗೆಯೇ ಸೇರಿಸುವುದು (ಅಂದರೆ ಭೌತಿಕವಾಗಿ ಸಂಪರ್ಕ ಕೊಡುವುದು), (೨) ಬಿಸಿಗೊಳಿಸುವ ಮತ್ತು/ಅಥವಾ ತಣ್ಣಗಾಗಿಸುವ ಒಂದು ಕೇಂದ್ರ ಸಂಪರ್ಕಜಾಲಕ್ಕೆ ಸೇರಿಸುವುದು ಅಥವಾ (೩) ಸ್ಟ್ಯಾಂಡ್ ಅಲೋನ್ ಆಗಿ ಆಫ್-ಗ್ರಿಡ್ ವ್ಯವಸ್ಥೆಯಲ್ಲಿ ಬಳಸುವುದು.



**ಕೆಲವು ಸಣ್ಣ ಪ್ರಮಾಣದ ತಂತ್ರಜ್ಞಾನಗಳು:**

**ಮೇಲ್ಛಾವಣಿ ಸೌರಶಕ್ತಿ:**

ಮೇಲ್ಛಾವಣಿ ಸೌರ ವಿದ್ಯುತ್‌ಶಕ್ತಿ ವ್ಯವಸ್ಥೆಯಲ್ಲಿ ಕಟ್ಟಡಗಳ ಮೇಲ್ಛಾವಣಿಯಲ್ಲಿ ಫೋಟೋವೊಲ್ಟಾಯಿಕ್ ಪ್ಯಾನೆಲ್‌ಗಳನ್ನು ಸ್ಥಾಪಿಸಿ, ಸೌರಶಕ್ತಿಯನ್ನು ವಿದ್ಯುತ್‌ಶಕ್ತಿಯನ್ನಾಗಿ ಪರಿವರ್ತಿಸಲಾಗುತ್ತದೆ.



**ಸಣ್ಣ ಪ್ರಮಾಣದ ಗಾಳಿ ಟರ್ಬೈನ್‌ಗಳು:**

"ಸಣ್ಣ ಗಾಳಿ ಟರ್ಬೈನ್" ಎಂದರೆ ಗೃಹ ಅಗತ್ಯಗಳಿಗೆ ಅಥವಾ ಸಣ್ಣ ಉದ್ಯಮದ ಅಗತ್ಯಗಳಿಗೆ ಹೊಂದುವಂತಹ ಟರ್ಬೈನ್‌ಗಳು ಎಂದು. ಅವು ೧೦೦ ಕಿ.ವ್ಯಾ.ಗಿಂತ ಕಡಿಮೆ ಇರುತ್ತವೆ ಮತ್ತು ಸಾಮಾನ್ಯವಾಗಿ ೧-೧೦ ಕಿ.ವ್ಯಾ. ವ್ಯಾಪ್ತಿಯಲ್ಲಿರುತ್ತವೆ.



**ಗೃಹಬಳಕೆಯ ನೀರು ಬಿಸಿಮಾಡುವ ಸೌರಶಕ್ತಿ ಫಲಕಗಳು**

ಗೃಹಬಳಕೆಯ ನೀರು ಬಿಸಿಮಾಡುವ ಸೌರಶಕ್ತಿ ಫಲಕಗಳನ್ನು ಸಾಮಾನ್ಯವಾಗಿ ಮನೆಗಳಲ್ಲಿ ಬಿಸಿ ನೀರು ಪೂರೈಕೆಗಾಗಿ ಬಳಸಲಾಗುತ್ತದೆ. ನೀರು ಬಿಸಿಮಾಡುವ ವ್ಯವಸ್ಥೆಯಲ್ಲಿ ಮೇಲ್ಛಾವಣಿಯಲ್ಲಿರುವ ಸೌರಶಕ್ತಿ ಫಲಕಗಳು ಸೌರಶಕ್ತಿಯ ಸಂಗ್ರಾಹಕಗಳಾಗಿರುತ್ತವೆ, ಅವು ಸೂರ್ಯನ ಬೆಳಕನ್ನು ಹೀರಿಕೊಂಡು, ಟ್ಯಾಂಕಿನಲ್ಲಿರುವ ನೀರನ್ನು ಬಿಸಿ ಮಾಡುತ್ತವೆ. ಈ ವ್ಯವಸ್ಥೆಯಲ್ಲಿ ಮೋಡ ಕವಿದ ವಾತಾವರಣವಿದ್ದಾಗ ಅಗತ್ಯಬಿದ್ದರೆ ಬಿಸಿ ಮಾಡಿಕೊಳ್ಳಲು ಒಂದು ಅನಿಲದ ಅಥವಾ ವಿದ್ಯುತ್ ಶಕ್ತಿಯ ಬೂಸ್ಟರ್ ಅನ್ನು ಕೂಡ ಅಳವಡಿಸಬಹುದು.



**ಹೀಟ್ ಪಂಪ್‌ಗಳು**

ಹೀಟ್ ಪಂಪ್ ತಂತ್ರಜ್ಞಾನವು ನಿಮ್ಮ ಮನೆಯಿಂದ ಅಥವಾ ಇನ್ನಾವುದೋ ಸ್ಥಳದಿಂದ ಶಾಖವನ್ನು ಹೊರಸಾಗಿಸಿ, ಅದನ್ನು ನೀರಿಗೆ ವರ್ಗಾಯಿಸುತ್ತದೆ. ಸೂರ್ಯನಿಂದಾಗಿ ಮನೆಯಲ್ಲಿ ಹೆಚ್ಚುವರಿ ಶಾಖ ಅಥವಾ ವಾತಾವರಣದಲ್ಲಿ ಹೆಚ್ಚುವರಿ ಶಾಖ ಉಂಟಾಗುವುದರಿಂದ, ಇದು ಇನ್ನೊಂದು ರೂಪದ ಸೌರ ಶಕ್ತಿ ನೀರು ಬಿಸಿ ಮಾಡುವ ವ್ಯವಸ್ಥೆಯೆಂದೇ ಹೇಳಬಹುದು.



**ವಾಣಿಜ್ಯ ಕೈಗಾರಿಕಾ ಸೌರ ಶಕ್ತಿ ನೀರು ಬಿಸಿಮಾಡುವ ವ್ಯವಸ್ಥೆಗಳು:** ಸೌರ ಉಷ್ಣ ಶಕ್ತಿಯ ಇನ್ನೊಂದು ಅತ್ಯುತ್ತಮ ಬಳಕೆ ಎಂದರೆ ವಾಣಿಜ್ಯಕ ಮತ್ತು ಸಣ್ಣ ಕೈಗಾರಿಕಾ ಬಳಕೆಗಳಿಗೆ ಇದನ್ನು ಬಳಸುವುದು. ಉದಾಹರಣೆಗೆ ಆಸ್ಪತ್ರೆಗಳು, ಲಾಂಡ್ರಿಗಳು, ಶಾಲೆಗಳು ಇತ್ಯಾದಿ.

**ತಂಪಾಗಿಸುವ ಸೌರ ವ್ಯವಸ್ಥೆಗಳು**

ಸೌರ ಶಕ್ತಿಯನ್ನು ಬಳಸಿಕೊಂಡು ಏರ್ ಕಂಡೀಶನಿಂಗ್ ಮಾಡುವ ವ್ಯವಸ್ಥೆಯನ್ನು ತಂಪಾಗಿಸುವ ಸೌರ ವ್ಯವಸ್ಥೆಗಳು ಎಂದು ಕರೆಯಲಾಗುವುದು. ನಿಷ್ಕ್ರಿಯ ಸೌರ ಶಕ್ತಿ, ಸೌರ ಉಷ್ಣ ಶಕ್ತಿ ಪರಿವರ್ತಕ ಮತ್ತು ಫೋಟೋ ವೋಲ್ಟಾಯಿಕ್ ಪರಿವರ್ತಕಗಳ (ಸೂರ್ಯನ ಬೆಳಕಿನಿಂದ ವಿದ್ಯುತ್ ಶಕ್ತಿ) ಮೂಲಕ ಈ ರೀತಿಯ ವ್ಯವಸ್ಥೆಯನ್ನು ರಚಿಸಲಾಗುತ್ತದೆ.



**ಸೌರಶಕ್ತಿ ಘಟಕ**



**ಪವನ ಶಕ್ತಿ ಘಟಕ**



**ಜೈವಿಕ ಶಕ್ತಿ ಘಟಕ**



**ಕಿರುಜಲವಿದ್ಯುತ್ ಘಟಕ**

**ಬೃಹತ್ ಪ್ರಮಾಣದ ನವೀಕರಿಸಬಲ್ಲ ಶಕ್ತಿ ವ್ಯವಸ್ಥೆಗಳು**

ವಿದ್ಯುತ್ ಗ್ರಿಡ್ ವ್ಯವಸ್ಥೆಗೆ ವಿದ್ಯುತ್‌ಶಕ್ತಿಯನ್ನು ಪೂರೈಸಬಲ್ಲ ನವೀಕರಿಸಬಲ್ಲ ಶಕ್ತಿ ವ್ಯವಸ್ಥೆಯನ್ನು ಸ್ಥಾಪಿಸಬಹುದು. ಗ್ರಿಡ್-ಇಂಟರಾಕ್ಟಿವ್ ನವೀಕರಿಸಬಲ್ಲ ಶಕ್ತಿ ಯೋಜನೆಗಳು ಪವನ ಶಕ್ತಿ, ಜೈವಿಕ ಮತ್ತು ಸೌರಶಕ್ತಿಯನ್ನು (೧ ಮೆ.ವ್ಯಾ.ಗಿಂತ ಅಧಿಕ) ಮತ್ತು ಸಣ್ಣ ಪ್ರಮಾಣದ ಜಲ ವಿದ್ಯುತ್ ಅನ್ನು (೨೫ ಮೆ.ವ್ಯಾ.ಗಿಂತ ಕಡಿಮೆ) ಆಧರಿಸಿರುತ್ತವೆ ಹಾಗೂ ಇವು ಹೆಚ್ಚಾಗಿ ಖಾಸಗಿ ಹೂಡಿಕೆಯಿಂದ ನಡೆಯುತ್ತಿದ್ದು, ಆಯಾ ರಾಜ್ಯಗಳ ವಿದ್ಯುತ್ ನಿಯಂತ್ರಣಾ ಆಯೋಗಗಳ (ಎಸ್‌ಇಆರ್‌ಸಿ) ದರ ನೀತಿಯಡಿ ಸ್ಥಾಪಿಸಲಾಗಿರುತ್ತದೆ.

೧. ಸಮುದಾಯ ಆಧರಿತ - ವಿಕೇಂದ್ರೀಕೃತ ಹಂಚಿಕೆಯ ಉತ್ಪಾದನೆ (ಡಿಸೆಂಟ್ರಲೈಜ್ಡ್ ಡಿಸ್ಟ್ರಿಬ್ಯೂಟೆಡ್ ಜನರೇಶನ್ - ಡಿಡಿಜಿ)

ವಿಕೇಂದ್ರೀಕೃತ ಹಂಚಿಕೆಯ ಉತ್ಪಾದನೆಯು ಸಣ್ಣ, ವಿಕೇಂದ್ರೀಕೃತ, ಆಫ್ ಗ್ರಿಡ್ ನವೀಕರಿಸಬಲ್ಲ ಶಕ್ತಿ ವ್ಯವಸ್ಥೆಯನ್ನು ಹೊಂದಿದ್ದು, ಎಲ್ಲಿ ಶಕ್ತಿ ಬಳಕೆಯಾಗುತ್ತದೆಯೋ ಆ ಸ್ಥಳದಲ್ಲಿಯೇ ಅಥವಾ ಅದರ ಹತ್ತಿರದಲ್ಲಿ ಸ್ಥಾಪಿಸಲಾಗಿರುತ್ತದೆ. ಆಫ್-ಗ್ರಿಡ್ (ವಿದ್ಯುತ್ ಜಾಲದ ಸಂಪರ್ಕವಿಲ್ಲದ) ಪ್ರದೇಶಗಳಲ್ಲಿರುವ ಹಳ್ಳಿಗಳಿಗೆ ಅಥವಾ ತುಂಬ ದೂರದಲ್ಲಿದ್ದು, ವಿದ್ಯುತ್ ಜಾಲದ ಸಂಪರ್ಕ ಹೊಂದಿಲ್ಲದ ಸ್ಥಳಗಳಿಗೆ ಈ ವ್ಯವಸ್ಥೆ ಸೂಕ್ತವಾಗಿರುತ್ತದೆ. ಈ ಸ್ಟ್ಯಾಂಡ್ ಅಲೋನ್ ವ್ಯವಸ್ಥೆಗಳು ಸ್ಥಳೀಯ ಉದ್ಯೋಗ, ಸ್ಥಳೀಯ ತ್ಯಾಜ್ಯಗಳ ಪುನರ್‌ಬಳಕೆ ಮತ್ತು ಸೌಲಭ್ಯ ಹಾಗೂ ಶಕ್ತಿಯ ಬಳಕೆಯಲ್ಲಿ ಸ್ಥಳೀಯ ನಿಯಂತ್ರಣಕ್ಕೆ ಆಸ್ಪದ ಕೊಡುವುದರಿಂದ ಹೆಚ್ಚು ಉಪಯುಕ್ತವೆನ್ನಿಸುತ್ತವೆ.

ಡಿಡಿಜಿ ವ್ಯವಸ್ಥೆಗಳು ಒಂದೇ ಮೂಲವನ್ನು ಅವಲಂಬಿಸಬಹುದು (ಉದಾಹರಣೆಗೆ ಕೇಂದ್ರೀಯ ಪವನ ಅಥವಾ ಸೌರಶಕ್ತಿ) ಅಥವಾ ಬಹುಮೂಲಗಳನ್ನು ಅವಲಂಬಿಸಬಹುದು (ಉದಾಹರಣೆಗೆ ಪವನ ಮತ್ತು ಸೌರಶಕ್ತಿ, ಎರಡನ್ನೂ ಸೇರಿಸುವುದು). ಡಿಡಿಜಿಯು ಸಾಂಪ್ರದಾಯಿಕ ವಿದ್ಯುತ್ ವ್ಯವಸ್ಥೆಯ ಸಾಮರ್ಥ್ಯವನ್ನು ವೃದ್ಧಿಸಲು ಅಥವಾ ಅದಕ್ಕೆ ಪರ್ಯಾಯವಾಗಿ ಬಳಕೆಯಾಗುತ್ತದೆ. ಇದು ಗ್ರಾಹಕರ ಕಡೆಯಿಂದ ಜಾಲಕ್ಕೆ ಸಂಪರ್ಕ ಹೊಂದಿದ ವಿದ್ಯುತ್ ಶಕ್ತಿ ಉತ್ಪಾದನಾ ಘಟಕಗಳಾಗಿದ್ದು, ಇದರಲ್ಲಿ ಸಾಗಾಣಿಕೆ ಮತ್ತು ಹಂಚಿಕೆ ನಷ್ಟಗಳು ತುಂಬ ಕಡಿಮೆ ಇರುತ್ತವೆ.



ಹಂಚಿಕೆಗೊಂಡ ಸೌರಶಕ್ತಿ ಘಟಕ



ಹಂಚಿಕೆಗೊಂಡ ಜೈವಿಕ ಅನಿಲ ಘಟಕ



ಹಂಚಿಕೆಗೊಂಡ ಪವನಶಕ್ತಿ ಘಟಕ

**ನವೀಕರಿಸಬಲ್ಲ ಶಕ್ತಿಯನ್ನು ಉತ್ತೇಜಿಸಲು ನೀತಿಗಳು ಮತ್ತು ಪ್ರೋತ್ಸಾಹಕಗಳು**

- **ನವೀಕರಿಸಬಲ್ಲ ಪೋರ್ಟ್‌ಫೋಲಿಯೋ ಮಾನದಂಡಗಳು (ಆರ್.ಪಿ.ಎಸ್)**

ನಮ್ಮ ದೇಶದ ವಿವಿಧ ರಾಜ್ಯಗಳು ನವೀಕರಿಸಬಲ್ಲ ಶಕ್ತಿಯನ್ನು ಪ್ರೋತ್ಸಾಹಿಸಲೆಂದು ಆರ್‌ಪಿಎಸ್ ಅನ್ನು ನೀಡುತ್ತಿವೆ. ಆರ್‌ಪಿಎಸ್ ಕಾರ್ಯವಿಧಾನವು ಸಾಮಾನ್ಯವಾಗಿ ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತವೆ:

ಎ) ವಿದ್ಯುತ್ ಪೂರೈಕೆ ಕಂಪನಿಗಳಿಗೆ ಅವು ಉತ್ಪಾದಿಸುವ ವಿದ್ಯುತ್ ಶಕ್ತಿಯಲ್ಲಿ ನಿಗದಿತ ಪ್ರಮಾಣವನ್ನು ನವೀಕರಿಸಬಲ್ಲ ಶಕ್ತಿ ಮೂಲದಿಂದ ಉತ್ಪಾದಿಸುವಂತೆ ಕರಾರು ಮಾಡುವುದು.

(ಬಿ) ಹಂಚಿಕೆ ಕಂಪನಿಗಳು ನವೀಕರಿಸಬಲ್ಲ ಶಕ್ತಿ ಮೂಲಗಳಿಂದ ವಿದ್ಯುತ್ ಖರೀದಿಸುವುದು. ಈ ಉದ್ದೇಶಕ್ಕಾಗಿ, ರಾಜ್ಯ ವಿದ್ಯುತ್ ನಿಯಂತ್ರಣಾ ಆಯೋಗಗಳು ಗ್ರಿಡ್‌ಗೆ ಪೂರೈಸಿದ ನವೀಕರಿಸಬಲ್ಲ ಶಕ್ತಿಗೆ ಈ ಮೊದಲೇ ಇರುವ ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ದರವನ್ನು ನೀಡುವಂತೆ ವಿದ್ಯುತ್ ಬಳಕೆ ಕಂಪನಿಗಳಿಗೆ ಕರಾರು ಮಾಡಿ, ನವೀಕರಿಸಬಲ್ಲ ಶಕ್ತಿಯ ಅಭಿವೃದ್ಧಿಗೆ ಪ್ರೋತ್ಸಾಹಿಸುತ್ತಿದೆ. ಯಾವ ರೀತಿಯ ಶಕ್ತಿ ಮೂಲಗಳನ್ನು ಬಳಸಿಕೊಳ್ಳಲಾಗಿದೆ ಎನ್ನುವುದನ್ನು ಅವಲಂಬಿಸಿ ಈ ದರಗಳು ವ್ಯತ್ಯಾಸವಾಗುತ್ತಿದ್ದು, ನವೀಕರಿಸಬಲ್ಲ ಶಕ್ತಿ ಉತ್ಪಾದಕರಿಗೆ ಅವರ ಯೋಜನೆಗಳಿಂದ ಒಂದು ನಿಗದಿತ ಆದಾಯ ಬರುವಂತೆ ಮಾಡುತ್ತದೆ.

- **ನವೀಕರಿಸಬಲ್ಲ ಶಕ್ತಿ ಪ್ರಮಾಣಪತ್ರಗಳು (ಆರ್‌ಇಸಿಗಳು)**

ನವೀಕರಿಸಬಲ್ಲ ಶಕ್ತಿಮೂಲಗಳನ್ನು ಹೆಚ್ಚು ಬಳಕೆ ಮಾಡಿಕೊಳ್ಳುವತ್ತ ಬದಲಾಗುವುದಕ್ಕೆ ನವೀಕರಿಸಬಲ್ಲ ಶಕ್ತಿ (ಆರ್‌ಇ) ಪ್ರಮಾಣಪತ್ರಗಳ ಮೂಲಕವೂ ಪ್ರೋತ್ಸಾಹಿಸಲಾಗುತ್ತಿದೆ. ಈ ಪ್ರಮಾಣಪತ್ರಗಳನ್ನು ನವೀಕರಿಸಬಲ್ಲ ಶಕ್ತಿ ಮೂಲಗಳಿಂದ ಉತ್ಪಾದಿಸಲಾದ ತಂತ್ರಜ್ಞಾನ ಮತ್ತು ಪಾರಿಸರಿಕ ಗುಣಲಕ್ಷಣಗಳಿಗೆ ನೀಡಲಾಗುತ್ತದೆ ಮತ್ತು ಇದು ಉತ್ಪಾದಿಸಲಾದ ವಿದ್ಯುತ್‌ಗಿಂತ ಭಿನ್ನವಾಗಿರುತ್ತದೆ. ಪ್ರಮಾಣಪತ್ರಗಳನ್ನು ನೀಡಲು ಪರಿಗಣಿಸುವ ಗುಣಲಕ್ಷಣಗಳು ಭೌತಿಕ ವಿದ್ಯುತ್‌ಶಕ್ತಿಗಿಂತ ಭಿನ್ನವಿರುತ್ತದೆ ಮತ್ತು ಆರ್‌ಇಸಿಯನ್ನು ಮೊದಲನೆಯದರಲ್ಲಿ ನೀಡಲಾಗುತ್ತದೆ. ಇದರ ಪರಿಣಾಮವೆಂದರೆ, ಮಾರಲಿಕ್ಕೆ ಅಥವಾ ವ್ಯವಹರಿಸಲಿಕ್ಕೆ ಎರಡು ಉತ್ಪನ್ನಗಳು ಲಭ್ಯವಿರುತ್ತವೆ, ಒಂದು ನವೀಕರಿಸಬಲ್ಲ ಶಕ್ತಿ (ಆರ್‌ಇ) ಪ್ರಮಾಣಪತ್ರಗಳು ಮತ್ತು ಇನ್ನೊಂದು ಉತ್ಪಾದನೆಯಾದ ವಿದ್ಯುತ್. ೧ ನವೀಕರಿಸಬಲ್ಲ ಶಕ್ತಿ ಪ್ರಮಾಣಪತ್ರ ಎಂದರೆ ನವೀಕರಿಸಬಲ್ಲ ಶಕ್ತಿ ಮೂಲದಿಂದ ತಯಾರಾದ ೧ ಮೆ.ವ್ಯಾ. ಶಕ್ತಿಯನ್ನು ಪ್ರತಿನಿಧಿಸುತ್ತದೆ. ವ್ಯಾಪಾರ ಅಥವಾ ಹೂಡಿಕೆ ಮಾಡುವುದಕ್ಕೆ ಆಸಕ್ತಿ ಇರುವವರು ಆರ್‌ಇ ಪ್ರಮಾಣಪತ್ರಗಳನ್ನು ಪಡೆದುಕೊಳ್ಳುವುದಕ್ಕಾಗಿ ಆರ್‌ಇ ವಿದ್ಯುತ್‌ನ್ನು ಬಳಕೆ ಮಾಡಬೇಕಾದ ಅಗತ್ಯವಿಲ್ಲ.

- **ಒಟ್ಟು ಮೀಟರ್ ವ್ಯವಸ್ಥೆ (ನೆಟ್ ಮೀಟರಿಂಗ್)**

ಒಟ್ಟು ಮೀಟರ್ ವ್ಯವಸ್ಥೆಯು ನವೀಕರಿಸಬಲ್ಲ ಶಕ್ತಿಯಿಂದ ಸ್ಥಳದಲ್ಲಿಯೇ ಮೇಲ್ಛಾವಣಿ ವ್ಯವಸ್ಥೆಗಳ ಮೂಲಕ (ಸೌರಶಕ್ತಿ ಫಲಕಗಳು ಅಥವಾ ಗಾಳಿಮಿಲ್ಲುಗಳು) ವಿದ್ಯುತ್ ಉತ್ಪಾದನೆ ಮಾಡುವುದನ್ನು ಪ್ರೋತ್ಸಾಹಿಸುತ್ತಿದ್ದು, ಈ ವಿದ್ಯುತ್‌ಶಕ್ತಿಯನ್ನೂ ಗ್ರಿಡ್‌ಗೆ ಪೂರೈಸಬಹುದಾಗಿದೆ. ಜನರೇಟರ್‌ಗಳು ಗ್ರಿಡ್‌ಗೆ ಪೂರೈಸಿದ ವಿದ್ಯುತ್ ಪ್ರಮಾಣಕ್ಕೆ ಅನುಗುಣವಾಗಿ ಹಣ ಪಡೆಯುತ್ತವೆ. ಒಟ್ಟು ಮೀಟರ್ ವ್ಯವಸ್ಥೆಯು ಜನರೇಟರ್‌ಗಳ ವಿದ್ಯುತ್‌ಶಕ್ತಿ ಮೀಟರ್‌ಗಳು ಸ್ಥಳದಲ್ಲಿ ಬಳಕೆಯಾದ ವಿದ್ಯುತ್‌ನ ಪ್ರಮಾಣ ಮತ್ತು ಗ್ರಿಡ್‌ಗೆ ಪೂರೈಕೆಯಾದ ಪ್ರಮಾಣದ ಲೆಕ್ಕ ಇಡುತ್ತವೆ. ಉತ್ಪಾದನೆಯಾದ ವಿದ್ಯುತ್ ಸ್ಥಳದ ಅಗತ್ಯಗಳನ್ನು ಸರಿದೂಗಿಸಲು ಸಾಕಾಗದಿದ್ದರೆ, ಆಗ ಗ್ರಿಡ್‌ನಿಂದ ವಿದ್ಯುತ್‌ನ್ನು ಪಡೆದು, ಬಳಕೆ ಮಾಡಿಕೊಳ್ಳಬಹುದಾಗಿದೆ.

**ಮುಕ್ತ ಲಭ್ಯತೆ**

ಮುಕ್ತ ಲಭ್ಯತೆಯು ವಿದ್ಯುತ್‌ಶಕ್ತಿಯ ಬೃಹತ್ ಬಳಕೆದಾರರಿಗೆ (೧ ಮೆ.ವ್ಯಾ. ಮತ್ತು ಅದಕ್ಕಿಂತಲೂ ಹೆಚ್ಚಿಗೆ ಲೋಡ್‌ಗೆ ಸಂಪರ್ಕ ಹೊಂದಿರುವವರು) ಮುಕ್ತ ಮಾರುಕಟ್ಟೆಯಲ್ಲಿ ಅಥವಾ ನವೀಕರಿಸಬಲ್ಲ ಶಕ್ತಿ ಮೂಲದಿಂದ ವಿದ್ಯುತ್‌ಶಕ್ತಿಯನ್ನು ಅಗ್ಗದ ದರದಲ್ಲಿ ಕೊಂಡುಕೊಳ್ಳಲು ಆಸ್ಪದ ಕಲ್ಪಿಸುತ್ತದೆ. ೨೦೦೩ರ ವಿದ್ಯುತ್ ಕಾಯಿದೆಯು ಪರವಾನಗಿದಾರರಿಗೆ ಸರ್‌ಚಾರ್ಜ್ ಪಾವತಿಯೊಂದಿಗೆ ಸಾಗಾಣಿಕೆ ಮತ್ತು ಹಂಚಿಕೆ ಸಂಪರ್ಕಜಾಲಗಳಿಗೆ ಮುಕ್ತ ಲಭ್ಯತೆಗೆ ಆಸ್ಪದ ಕಲ್ಪಿಸುತ್ತದೆ; ಜೊತೆಗೆ ಲೈನ್‌ಗಳನ್ನು ಬಳಸುವ ಮುಕ್ತ ಲಭ್ಯತೆ ಗ್ರಾಹಕರಿಂದ ತಮಗಾಗುವ ಆದಾಯದ ನಷ್ಟಕ್ಕೆ ಪರಿಹಾರವಾಗಿ ಪಾವತಿಗೆ ಆಸ್ಪದವನ್ನು ಕಲ್ಪಿಸಿದೆ.

ಇಲ್ಲಿ ಮುಖ್ಯವಿಚಾರವೆಂದರೆ ಗ್ರಾಹಕರು ಈಗಿರುವ ವಿದ್ಯುತ್ ಬಳಕೆ ಏಕಸ್ವಾಮ್ಯದಿಂದ ವಿದ್ಯುತ್‌ಶಕ್ತಿಯನ್ನು ಕೊಳ್ಳುವುದಕ್ಕೆ ಬದಲಿಗೆ ಹಲವಾರು ಸ್ಪರ್ಧಾತ್ಮಕ ವಿದ್ಯುತ್ ಕಂಪನಿಗಳಿಂದ ವಿದ್ಯುತ್ ಖರೀದಿಸಲು ಸಾಧ್ಯವಾಗಬೇಕು ಎನ್ನುವುದು. ಇದರಿಂದ ರೋಗಗ್ರಸ್ಥ ಉದ್ಯಮಗಳಾದ ಜವಳಿ, ಸಿಮೆಂಟ್ ಮತ್ತು ಉಕ್ಕು ಕೈಗಾರಿಕಾ ಘಟಕಗಳಂತಹ ಬೃಹತ್ ಬಳಕೆದಾರರಿಗೆ ಸ್ಪರ್ಧಾತ್ಮಕವಾದ ದರಗಳಲ್ಲಿ ನಿಯಮಿತವಾದ ವಿದ್ಯುತ್ ಪೂರೈಕೆಯಾಗುತ್ತದೆ ಮತ್ತು ಅದು ವಿದ್ಯುತ್ ಮಾರುಕಟ್ಟೆಯ ವಹಿವಾಟನ್ನೂ ವೃದ್ಧಿಸುತ್ತದೆ.

- **ಸಬ್ಸಿಡಿಗಳು**

ಹೊಸ ಮತ್ತು ನವೀಕರಿಸಬಲ್ಲ ಶಕ್ತಿ ಸಚಿವಾಲಯವು ಭಾರತೀಯ ನವೀಕರಿಸಬಲ್ಲ ಶಕ್ತಿ ಅಭಿವೃದ್ಧಿ ಏಜೆನ್ಸಿ ನಿಯಮಿತ (ಐಆರ್‌ಇಡಿಎ) ಮತ್ತು ರಾಜ್ಯ ಸರ್ಕಾರಗಳ ಮೂಲಕ ನವೀಕರಿಸಬಲ್ಲ ಶಕ್ತಿ ಅಭಿವೃದ್ಧಿಯನ್ನು ಪ್ರೋತ್ಸಾಹಿಸಲು ಅನುದಾನಗಳು, ಸಾಲಗಳು, ರಿಯಾಯಿತಿಗಳು ಮತ್ತು ತೆರಿಗೆ ವಿನಾಯಿತಿಗಳು ಇನ್ನಿತರ ಹಣಕಾಸು ಪ್ರೋತ್ಸಾಹಕ ಅಥವಾ ಉತ್ತೇಜಕಗಳನ್ನು ನೀಡುತ್ತದೆ.

- **ಉತ್ಪಾದನೆ ಆಧರಿತ ಪ್ರೋತ್ಸಾಹಕ (ಜಿಬಿಐ)**

ಭಾರತ ಸರ್ಕಾರವು ಉತ್ಪಾದನೆ ಆಧರಿತ ಪ್ರೋತ್ಸಾಹಕದ ಮೂಲಕ ಗ್ರಿಡ್-ಸಂಪರ್ಕವಿರುವ ಪವನ ಮತ್ತು ಸೌರ ವಿದ್ಯುತ್ ಯೋಜನೆಗಳಿಂದ ಉತ್ಪಾದನೆಯಾಗುವ ಹೆಚ್ಚುವರಿ ವಿದ್ಯುತ್ ಶಕ್ತಿಯ ಯೋಜನೆಯನ್ನು ಪರಿಚಯಿಸಿ, ಅದಕ್ಕೆ ಪ್ರೋತ್ಸಾಹಕಗಳನ್ನು ನೀಡುತ್ತದೆ. ಈ ಯೋಜನೆಯಡಿಯಲ್ಲಿ, ಗ್ರಿಡ್‌ಗೆ ಪೂರೈಸಿದ ವಿದ್ಯುತ್ ಪ್ರಮಾಣಕ್ಕೆ ಫೀಡ್ ಇನ್ ದರ ಪಾವತಿಯ ಜೊತೆಗೆ ಪವನ ಮತ್ತು ಸೌರಶಕ್ತಿಯ ಉತ್ಪಾದಕರಿಗೆ ಗ್ರಿಡ್-ಆರ್ಥಿಕ ಪ್ರೋತ್ಸಾಹಧನಗಳನ್ನು ನೀಡಲಾಗುವುದು. ಈ ಯೋಜನೆಯಡಿಯಲ್ಲಿ, ೪ ವರ್ಷಕ್ಕಿಂತ ಕಡಿಮೆಯಿಲ್ಲದ ಅವಧಿಗೆ ಹಾಗೂ ಗರಿಷ್ಠ ೧೦ ವರ್ಷಗಳಿಗೆ ಪ್ರತಿ ಮೆ.ವ್ಯಾ.ಗೆ ೧೦೦ ಲಕ್ಷದ ಮಿತಿಯಲ್ಲಿ, ಪವನ ವಿದ್ಯುತ್ ಉತ್ಪಾದಕರಿಗೆ ಗ್ರಿಡ್‌ಗೆ ಪೂರೈಸುವ ವಿದ್ಯುತ್‌ಗೆ ಪ್ರತಿ ಯುನಿಟ್‌ಗೆ ೦.೫೦ ಒಂದು ಜಿಬಿಐ ಅನ್ನು ನೀಡಲಾಗುವುದು.

- **ಹೆಚ್ಚಿಸಿದ ಮೌಲ್ಯಕುಸಿತ (Accelerated Depreciation)**

ಹೆಚ್ಚಿಸಿದ ಮೌಲ್ಯಕುಸಿತ (Accelerated Depreciation)ಎಂದರೆ ಒಂದು ಕಂಪನಿಯು ಹಣಕಾಸು ಲೆಕ್ಕಪತ್ರ ಅಥವಾ ತೆರಿಗೆ ಉದ್ದೇಶಗಳಿಗಾಗಿ ಒಂದು ನಿಗದಿತ ಆಸ್ತಿಯ ಮೌಲ್ಯವನ್ನು ಈ ಮೊದಲಿನ ವರ್ಷಗಳಿಗಿಂತ ನಂತರದ ಪ್ರತೀವರ್ಷಗಳಲ್ಲಿ ಗಣನೆಗೆ ತೆಗೆದುಕೊಂಡ ಮೌಲ್ಯಕುಸಿತದ ಮೊತ್ತವು ಇನ್ನಷ್ಟು ಕುಸಿತವಾಗುವಂತೆ ಮಾಡುವ ಹಲವಾರು ವಿಧಾನಗಳಲ್ಲಿ ಒಂದಾಗಿದೆ. ಹಣಕಾಸು ಲೆಕ್ಕಪತ್ರದ ಉದ್ದೇಶಗಳಿಗೆ ಹೆಚ್ಚಿಸಿದ ಮೌಲ್ಯಕುಸಿತವು ಆರಂಭಿಕ ವರ್ಷಗಳಿಗಿಂತ ಹೆಚ್ಚು ಉತ್ಪಾದಕವಾಗುತ್ತದೆ ಎಂದು ನಿರೀಕ್ಷಿಸಲಾಗಿದ್ದು, ಮೌಲ್ಯಕುಸಿತದ ವೆಚ್ಚವು ಪ್ರತೀ ವರ್ಷ ಆಸ್ತಿಯ ಉಪಯುಕ್ತತೆಯನ್ನು ಬಳಸಿಕೊಳ್ಳಲಾಗಿದೆ ಎಂಬುದನ್ನು ಹೆಚ್ಚು ನಿಖರವಾಗಿ ಪ್ರತಿನಿಧಿಸುತ್ತದೆ. ತೆರಿಗೆ ಉದ್ದೇಶಗಳಿಗಾಗಿ, ಹೆಚ್ಚಿಸಿದ ಮೌಲ್ಯಕುಸಿತವು, ಮುಂಬರುವ ವರ್ಷಗಳಲ್ಲಿ ಹೆಚ್ಚಿಸಿದ ತೆರಿಗೆ ಅರ್ಹ ಆದಾಯಕ್ಕೆ ಪ್ರತಿಯಾಗಿ, ಪ್ರಸ್ತುತ ವರ್ಷಗಳಲ್ಲಿ ತೆರಿಗೆ ಅರ್ಹ ಆದಾಯವನ್ನು ಕಡಿಮೆಗೊಳಿಸುವ ಮೂಲಕ ಕಾರ್ಪೊರೇಟ್ ಆದಾಯ ತೆರಿಗೆಗಳನ್ನು ಮುಂದೂಡುವ ಒಂದು ವಿಧಾನವನ್ನು ಒದಗಿಸುತ್ತದೆ. ಇದು ಒಂದು ಮೌಲಿಕ ತೆರಿಗೆ ಉತ್ತೇಜಕವಾಗಿದ್ದು, ಉದ್ಯಮಗಳಿಗೆ ಹೊಸ ಆಸ್ತಿಯನ್ನು ಖರೀದಿಸುವಂತೆ ಪ್ರೋತ್ಸಾಹಿಸುತ್ತದೆ.

ಸೌರ ವಿದ್ಯುತ್ ಉತ್ಪಾದನೆಯಲ್ಲಿ, ಸೌರ ವಿದ್ಯುತ್ ಉತ್ಪಾದನಾ ಮಾರುಕಟ್ಟೆಯನ್ನು ಪ್ರವೇಶಿಸುವ ಉದ್ಯಮಿಗಳನ್ನು ಪ್ರೋತ್ಸಾಹಿಸಲು, ಭಾರತ ಸರ್ಕಾರವು ಸೌರ ವಿದ್ಯುತ್ ಉತ್ಪಾದನಾ ಘಟಕವೊಂದನ್ನು ಸ್ಥಾಪಿಸಿದ ವರ್ಷದಲ್ಲಿ ೮೦% ಮೌಲ್ಯಕುಸಿತವನ್ನು ಘೋಷಿಸಲು ಆಸ್ಪದ ನೀಡಿದೆ.

**ವಿದ್ಯುತ್ ಕಾಯಿದೆ ೨೦೦೩, ರಾಷ್ಟ್ರೀಯ ವಿದ್ಯುತ್ ನೀತಿ ೨೦೦೫ ಮತ್ತು ರಾಷ್ಟ್ರೀಯ ದರ ನೀತಿ, ಇವುಗಳಲ್ಲಿ ನವೀಕರಿಸಬಲ್ಲ ಶಕ್ತಿಯ ಪ್ರಸ್ತಾಪ:**

| | |
|---|---|
| ವಿದ್ಯುತ್ ಕಾಯಿದೆ ೨೦೦೩ | ಪೀಠಿಕೆ (ಪುಟ ಸಂಖ್ಯೆ ೧) ವಿದ್ಯುತ್ ಶಕ್ತಿಯ ಉತ್ಪಾದನೆ, ಸಾಗಾಣಿಕೆ, ಹಂಚಿಕೆ, ವ್ಯಾಪಾರ, ಬಳಕೆಗೆ ಸಂಬಂಧಿಸಿದಂತೆ ಮತ್ತು ವಿದ್ಯುತ್ ಉದ್ಯಮದ ಅಭಿವೃದ್ಧಿಗೆ ಅನುಕೂಲಕರವಾದ ಕ್ರಮಗಳನ್ನು ತೆಗೆದುಕೊಳ್ಳಲು, ..., ಪರಿಣಾಮಕಾರಿ ಮತ್ತು ಪಾರಿಸರಿಕವಾಗಿ ಹಾನಿಕರವಲ್ಲದ ನೀತಿಗಳ ಉತ್ತೇಜನೆ, ಈ ಎಲ್ಲದಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನು ಕ್ರೋಡೀಕರಿಸುವ ಒಂದು ಕಾಯಿದೆ... |
| ನವೀಕರಿಸಬಲ್ಲ ಶಕ್ತಿ ಉತ್ತೇಜಿಸಲು ನಿಯಂತ್ರಕಗಳ ಆದೇಶ | ಪರಿಚ್ಛೇದ ೨ (೪೭): ಸಾಗಾಣಿಕೆ ಮಾರ್ಗಗಳು ಅಥವಾ ಹಂಚಿಕೆ ವ್ಯವಸ್ಥೆ ಅಥವಾ ಅಂತಹ ಮಾರ್ಗಗಳೊಂದಿಗೆ ಸಂಬಂಧಿತ ಸೌಲಭ್ಯಗಳು ಅಥವಾ ಯಾವುದೇ ಅಪ್ರಾಪ್ರಿಯೇಟ್ ಕಮಿಶನ್ ನಿರ್ದಿಷ್ಟಪಡಿಸಿದ ನಿಯಮಾವಳಿಗಳಿಗೆ ಅನುಗುಣವಾಗಿ ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿದ ಯಾವುದೇ ವ್ಯಕ್ತಿ ಅಥವಾ ಗ್ರಾಹಕ ಅಥವಾ ಯಾವುದೇ ಪರವಾನಗಿದಾರರಿಗೆ ತಾರತಮ್ಯ-ರಹಿತ ಒದಗಿಸುವಿಕೆ... ವಿದ್ಯುತ್‌ಶಕ್ತಿ ಕಾಯಿದೆ ೨೦೦೩ರ ಪರಿಚ್ಛೇದ ೮೬ ಹೀಗೆ ಹೇಳುತ್ತದೆ - ರಾಜ್ಯ ಆಯೋಗವು ನವೀಕರಿಸಬಲ್ಲ ಶಕ್ತಿ ಮೂಲಗಳಿಂದ ವಿದ್ಯುತ್‌ಶಕ್ತಿಯ ಸಹಉತ್ಪಾದನೆ ಮತ್ತು ಉತ್ಪಾದನೆಯನ್ನು ಗ್ರಿಡ್‌ನೊಂದಿಗೆ ಸಂಪರ್ಕಕ್ಕಾಗಿ ಮತ್ತು ಯಾವುದೇ ವ್ಯಕ್ತಿಗೆ ವಿದ್ಯುತ್‌ಶಕ್ತಿಯ ಮಾರಾಟಕ್ಕಾಗಿ ಸೂಕ್ತ ಕ್ರಮಗಳನ್ನು ಒದಗಿಸುವ ಮೂಲಕ ಉತ್ತೇಜಿಸುತ್ತದೆ, ಜೊತೆಗೆ ಅಂತಹ ಮೂಲಗಳಿಂದ ವಿದ್ಯುತ್‌ಶಕ್ತಿಯ ಖರೀದಿಗಾಗಿ, ಹಂಚಿಕೆ ಪರವಾನಗಿದಾರರ ಪ್ರದೇಶದಲ್ಲಿ ವಿದ್ಯುತ್‌ಶಕ್ತಿಯ ಒಟ್ಟು ಬಳಕೆಯ ಶೇಕಡಾವಾರನ್ನು ನಿರ್ದಿಷ್ಟಪಡಿಸಲು ಕ್ರಮಗಳನ್ನು ರೂಪಿಸುತ್ತದೆ. ಪರಿಚ್ಛೇದ ೬೧ (ಎಚ್) ದರ ನಿರ್ಣಯಕ್ಕೆ ನಿಯಮಗಳು ಮತ್ತು ಕರಾರುಗಳನ್ನು ಅಪ್ರಾಪ್ರಿಯೇಟ್ ಕಮಿಶನ್ ನಿರ್ದಿಷ್ಟಪಡಿಸುತ್ತದೆ ಮತ್ತು ಈ ಕೆಳಗಿನವುಗಳ ಮಾರ್ಗದರ್ಶನದಡಿಯಲ್ಲಿ ಹೀಗೆ ಮಾಡುತ್ತದೆ: (h) ನವೀಕರಿಸಬಲ್ಲ ಶಕ್ತಿ ಮೂಲಗಳಿಂದ ವಿದ್ಯುತ್‌ಶಕ್ತಿಯ ಸಹಉತ್ಪಾದನೆ ಮತ್ತು ಉತ್ಪಾದನೆ (i) ರಾಷ್ಟ್ರೀಯ ವಿದ್ಯುತ್ ನೀತಿ ಮತ್ತು ರಾಷ್ಟ್ರೀಯ ದರ ನೀತಿ |

| | |
|---|---|
| ರಾಷ್ಟ್ರೀಯ ವಿದ್ಯುತ್ ನೀತಿ | ೫.೨.೨೦ ಅಸಾಂಪ್ರದಾಯಿಕ ಶಕ್ತಿ ಮೂಲಗಳ ಕಾರ್ಯಸಾಧ್ಯ ಸಾಮರ್ಥ್ಯವು, ಮುಖ್ಯವಾಗಿ ಕಿರು ಜಲ, ಪವನ ಮತ್ತು ಜೈವಿಕ ಶಕ್ತಿ ಮೂಲಗಳ ಸಾಮರ್ಥ್ಯವನ್ನು ಹೆಚ್ಚುವರಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹುಟ್ಟುಹಾಕಲು ಸಂಪೂರ್ಣವಾಗಿ ಬಳಸಿಕೊಳ್ಳಬೇಕಿದೆ. ಒಟ್ಟು ವಿದ್ಯುತ್‌ಶಕ್ತಿಯಲ್ಲಿ ಅಸಾಂಪ್ರದಾಯಿಕ ಶಕ್ತಿ ಮೂಲಗಳ ಒಟ್ಟಾರೆ ಪಾಲನ್ನು ಹೆಚ್ಚಿಸುವ ದೃಷ್ಟಿಯಿಂದ, ಸೂಕ್ತ ಉತ್ತೇಜನಕಾರಿ ಕ್ರಮಗಳ ಮೂಲಕ ಖಾಸಗಿ ವಲಯದ ಭಾಗೀದಾರಿಕೆಯನ್ನು ಪ್ರೋತ್ಸಾಹಿಸಲು ಪ್ರಯತ್ನಗಳನ್ನು ಮಾಡಲಾಗುವುದು. |
| ರಾಷ್ಟ್ರೀಯ ದರ ನೀತಿ | ೬.೪ ವಿದ್ಯುತ್‌ಶಕ್ತಿಯ ವೆಚ್ಚದ ಅರ್ಥದಲ್ಲಿ, ಸಾಂಪ್ರದಾಯಿಕ ಮೂಲಗಳೊಂದಿಗೆ ಅಸಾಂಪ್ರದಾಯಿಕ ತಂತ್ರಜ್ಞಾನಗಳು ಸ್ಪರ್ಧೆ ನಡೆಸಲು ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಆದ್ದರಿಂದ ವಿತರಣಾ ಕಂಪನಿಗಳು ಅಪ್ರಾಪ್ರಿಯೇಟ್ ಕಮಿಶನ್ ನಿರ್ಧರಿಸಿದ ರಿಯಾಯಿತಿಯ ದರದಲ್ಲಿ ಸಂಗ್ರಹ ಮಾಡಬೇಕಿದೆ. ೨. ... ಅದೇ ರೀತಿಯ ಅಸಾಂಪ್ರದಾಯಿಕ ಮೂಲಗಳಿಂದ ಶಕಿಯನ್ನು ಒದಗಿಸುವ ಪೂರೈಕೆದಾರರ ನಡುವೆ, ಭವಿಷ್ಯದ ಅಗತ್ಯಗಳಿಗಾಗಿ ಹಂಚಿಕೆ ಪರಿವಾನಗಿದಾರರಿಂದ ನಡೆಯುವ ಅಂತಹ ಸಂಗ್ರಹಣೆಯು, ಸಾಧ್ಯವಿದ್ದಷ್ಟೂ ಸ್ಪರ್ಧಾತ್ಮಕ ಹರಾಜು/ಬಿಡ್ಡಿಂಗ್ ಪ್ರಕ್ರಿಯೆಯ ಮೂಲಕ ನಡೆಯಬೇಕು... |

## ನವೀಕರಿಸಬಲ್ಲ ಶಕ್ತಿಯನ್ನು ಉತ್ತೇಜಿಸುವ ಸಂಸ್ಥೆಗಳು

| ಸಂಸ್ಥೆ | ಉದ್ದೇಶ | ವಿವರಗಳು | ವಿಳಾಸ |
|---|---|---|---|
| ಹೊಸ ಮತ್ತು ನವೀಕರಿಸಬಲ್ಲ ಶಕ್ತಿ ಸಚಿವಾಲಯ (ಎಂಎನ್‌ಆರ್‌ಇ) | ಹೊಸ ಮತ್ತು ನವೀಕರಿಸಬಲ್ಲ ಶಕ್ತಿಗೆ ಸಂಬಂಧಿಸಿದ ಎಲ್ಲ ವಿಚಾರಗಳಿಗೆ ಭಾರತ ಸರ್ಕಾರದ ನೋಡಲ್ ಸಚಿವಾಲಯ | ಗ್ರಾಮೀಣ, ನಗರ, ಕೈಗಾರಿಕಾ ಮತ್ತು ವಾಣಿಜ್ಯ ವಲಯಗಳಲ್ಲಿ ಸಾಗಿಸಬಲ್ಲ ಮತ್ತು ಸ್ಥಿರ ಸಾಧನಗಳು, ಹೊಸ ಮತ್ತು ನವೀಕರಿಸಬಲ್ಲ ಶಕಿ ವ್ಯವಸ್ಥೆಗಳು /ಸಾಗಾಣಿಕೆಗೆ ಸಾಧನಗಳು, ಸಂಶೋಧನೆ, ವಿನ್ಯಾಸ, ಅಭಿವೃದ್ಧಿ, ತಯಾರಿಕೆ ಮತ್ತು ಸ್ಥಾಪನೆಗೆ ಆಸ್ಪದ ಕಲ್ಪಿಸುವುದು | ಬ್ಲಾಕ್ - ೧೪, ಸಿಜಿಒ ಸಂಕೀರ್ಣ, ಲೋಧಿ ರಸ್ತೆ, ನವದೆಹಲಿ - ೧೧೦೦೦೩, ಭಾರತ ದೂ.ಸಂ.:+೯೧-೧೧-೨೪೩೬೨೭೭೨ ಇ.ಮೇಲ್: secy-mnre@nic.in/ |
| ಭಾರತೀಯ ನವೀಕರಿಸಬಲ್ಲ ಶಕ್ತಿ ಅಭಿವೃದ್ಧಿ ಏಜೆನ್ಸಿ ನಿಯಮಿತ (ಐಆರ್‌ಇಡಿಎ) | ನವೀಕರಿಸಬಲ್ಲ ಶಕ್ತಿ ಮತ್ತು ಶಕ್ತಿ ದಕ್ಷತೆ/ಸಂರಕ್ಷಣಾ ಯೋಜನೆಗಳಿಗೆ ಹಣಕಾಸು ಸಹಾಯವನ್ನು ಉತ್ತೇಜಿಸುವುದು, ಅಭಿವೃದ್ಧಿಪಡಿಸುವುದು ಮತ್ತು ವಿಸ್ತರಿಸುವುದು | ವಿದ್ಯುತ್ ಉತ್ಪಾದನೆ ಮತ್ತು /ಅಥವಾ ಶಕ್ತಿಯನ್ನು ಹೊಸ ಮತ್ತು ನವೀಕರಿಸಬಲ್ಲ ಮೂಲಗಳ ಮೂಲಕ ಉತ್ಪಾದಿಸುವ ಮತ್ತು ಶಕ್ತಿ ಕ್ಷಮತೆ ಮೂಲಕ ಶಕ್ತಿ ಸಂರಕ್ಷಿಸುವ ನಿರ್ದಿಷ್ಟ ಯೋಜನೆಗಳಿಗೆ ಮತ್ತು ಕಾರ್ಯಕ್ರಮಗಳಿಗೆ ಹಣಕಾಸು ಸಹಾಯವನ್ನು ನೀಡುವುದು | ೩ನೇ ಮಹಡಿ, ಆಗಸ್ಟ್ ಕ್ರಾಂತಿ ಭವನ, ಭಿಕೈಜಿಕಾಮಾ ಸ್ಥಳ, ನವದೆಹಲಿ - ೧೧೦೦೦೬ ದೂ.ಸಂ.: +೯೧ ೧೧ ೨೬೭೧೭೪೦೦ - ೪೧೨ ಫ್ಯಾಕ್ಸ್: +೯೧ ೧೧ ೨೬೭೧೭೪೧೬ ಇ.ಮೇಲ್: cmd@ireda.gov.in |
| ನವೀಕರಿಸಬಲ್ಲ ಶಕ್ತಿ ಅಭಿವೃದ್ಧಿ ಏಜೆನ್ಸಿಗಳು | ನವೀಕರಿಸಬಲ್ಲ ಶಕ್ತಿಯನ್ನು ಉತ್ತೇಜಿಸಲು ರಾಜ್ಯ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತದೆ. ಎಂಎನ್‌ಆರ್‌ಇ ಕೆಳಗೆ ಕೆಲಸ ಮಾಡುತ್ತದೆ ಮತ್ತು ಅದರ ನೀತಿಗಳು ಹಾಗೂ ಆಯಾ ರಾಜ್ಯಗಳ ನೀತಿಯಿಂದ ಮಾರ್ಗದರ್ಶನ ಪಡೆಯುತ್ತದೆ. | ಹೊಸ ಮತ್ತು ನವೀಕರಿಸಬಲ್ಲ ಶಕ್ತಿ ಮೂಲಗಳ ಬಳಕೆಯನ್ನು (ಎನ್‌ಆರ್‌ಎಸ್‌ಇ) ಉತ್ತೇಜಿಸುವುದು ಮತ್ತು ಆ ನಿಟ್ಟಿನಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಶಕ್ತಿ ಸಂರಕ್ಷಣಾ ಚಟುವಟಿಕೆಗಳನ್ನು ಉತ್ತೇಜಿಸುವುದು ನವೀಕರಿಸಬಲ್ಲ ಶಕ್ತಿ ಮೂಲಗಳ ಕುರಿತ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು. | ಕರ್ನಾಟಕ ನವೀಕರಿಸಬಲ್ಲ ಶಕ್ತಿ ಅಭಿವೃದ್ಧಿ ಏಜೆನ್ಸಿ, ನಂ. ೩೯, ಶಾಂತಿಗೃಹ, ಭಾರತ್ ಸ್ಕೌಟ್ಸ್ & ಗೈಡ್ಸ್ ಕಟ್ಟಡ, ಅರಮನೆ ರಸ್ತೆ ದೂ.ಸಂ.: (೦೮೦)೨೨೨೦೭೮೫೧/೨೨೨೦೮೧೦೯/೯೪೮೦೬೯೧೦೪೧. ಫ್ಯಾಕ್ಸ್: ೦೮೦-೨೨೨೫೭೩೯೯ ಇಮೇಲ್: kredlnce@yahoo.co.in/ |

| ಸಂಸ್ಥೆ | ಉದ್ದೇಶ | ವಿವರಗಳು | ವಿಳಾಸ |
|---|---|---|---|
| | | | ತಮಿಳು ನಾಡು ನವೀಕರಿಸಬಲ್ಲ ಶಕ್ತಿ ಅಭಿವೃದ್ಧಿ ಏಜೆನ್ಸಿ, ಇ.ವಿ.ಕೆ. ಸಂಪತ್ ಮಾಲಿಗೈ, ೫ನೇ ಮಹಡಿ, ನಂ.೬೮, ಕಾಲೇಜು ರಸ್ತೆ, ಚೆನ್ನೈ - ೬೦೦೦೦೬ ತಮಿಳು ನಾಡು<br>ದೂ.ಸಂ.: ೦೪೪ ೨೮೨೨೪೮೩೦ & ೨೮೨೩೬೫೯೨<br>ಫ್ಯಾಕ್ಸ್: ೨೮೨೨ ೨೯೭೧<br>ಇಮೇಲ್: info@teda.in/<br>ಕೇರಳ ಅಸಾಂಪ್ರದಾಯಿಕ ಶಕ್ತಿ ಮತ್ತು ಗ್ರಾಮೀಣ ತಂತ್ರಜ್ಞಾನ ಏಜೆನ್ಸಿ<br>ಪೋಲೀಸ್ ಪರೇಡ್ ಗ್ರೌಂಡ್, ತೈಕಾಡ್, ತಿರುವನಂತಪುರಂ - ೬೯೫೦೧೪<br>ದೂ.ಸಂ.: (೦೪೭೧)೨೩೨೯೮೫೪, ೨೩೩೮೦೭೭, ೨೩೩೪೧೨೨, ೨೩೩೩೧೨೪ &೨೩೩೧೮೦೩<br>ಫ್ಯಾಕ್ಸ್: (೦೪೭೧)೨೩೨೯೮೫೩<br>ಮಿಂಚಂಚೆ: director@anert.in/<br>ಆಂಧ್ರಪ್ರದೇಶ ಅಸಾಂಪ್ರದಾಯಿಕ ಶಕ್ತಿ ಅಭಿವೃದ್ಧಿ ನಿಗಮ ನಿಯಮಿತ (ಎನ್‌ಇಡಿಸಿಎಪಿ)<br>೫-೮-೨೦೭/೨, ಪಿಸ್ಗಾಹ್ ಸಂಕೀರ್ಣ, ನಾಂಪಲ್ಲಿ, ಹೈದರಾಬಾದ್ - ೫೦೦೦೦೧<br>ದೂ.ಸಂ.: (೦೪೦)೨೩೨೦ ೨೩೯೧<br>ಫ್ಯಾಕ್ಸ್: (೦೪೦)೨೩೨೦೧೬೬೬<br>ಮಿಂಚಂಚೆ: info@nedcap.gov.in, nedcap@ap.nic.in |
| ರಾಜ್ಯ ವಿದ್ಯುತ್ ನಿಯಂತ್ರಣಾ ಆಯೋಗ | ವಿದ್ಯುತ್ ದರಗಳ ಸುಧಾರಣೆ, ಸಬ್ಸಿಡಿಗಳ ಕುರಿತು ಪಾರದರ್ಶಕ ನೀತಿಗಳು, ಪರಿಣಾಮಕಾರಿ ಮತ್ತು ಪಾರಿಸರಿಕವಾಗಿ ಹಾನಿಕರವಲ್ಲದ ನೀತಿಗಳ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದರ ಜೊತೆಗೆ ಪ್ರಾಸಂಗಿಕವಾದ ವಿಚಾರಗಳಿಗೆ ಉತ್ತೇಜನೆ. | ನವೀಕರಿಸಬಲ್ಲ ಶಕ್ತಿ ಪ್ರೋತ್ಸಾಹಕ್ಕೆ ವಿದ್ಯುತ್ ನಿಯಂತ್ರಣಾ ಆಯೋಗಕ್ಕೆ ಪರಿಚ್ಛೇದ ೮೪(೧) ಆದೇಶಿಸುತ್ತದೆ. | ಕರ್ನಾಟಕ: ೬ & ೭ನೇ ಮಹಡಿ, ಮಹಾಲಕ್ಷ್ಮಿ ಛೇಂಬರ್ಸ್, ಎಂ ಜಿ ರಸ್ತೆ, ಬೆಂಗಳೂರು - ೫೬೦ ೦೦೧ ಫೋನ್: (೦೮೦) ೨೫೩೨೦೨೧೩ / ೨೧೪, ೨೫೩೨೦೩೩೯, ೨೫೩೨೩೭೬೫ ೦೮೦-೨೫೩೨೦೩೩೮, ಮಿಂಚಂಚೆ: kerc35@bsnl.in/ |

| ಸಂಸ್ಥೆ | ಉದ್ದೇಶ | ವಿವರಗಳು | ವಿಳಾಸ |
|---|---|---|---|
| | | | ತಮಿಳು ನಾಡು: ನಂ. ೧೯ಎ, ರುಕ್ಮಿಣಿ ಲಕ್ಷ್ಮೀಪತಿ ಸಲೈ, ಎಗ್ಮೋರ್, ಚೆನ್ನೈ - ೬೦೦ ೦೦೮. ಫೋನ್: (೦೪೪) ೨೮೪೧೧೩೭೬, ೨೮೪೧೧೩೭೮, ೨೮೪೧೧೩೭೯ ಫ್ಯಾಕ್ಸ್: (೦೪೪) ೨೮೪೧೧೩೭೭. ಮಿಂಚಂಚೆ: tnerc@nic.in ಆಂಧ್ರ ಪ್ರದೇಶ: ೪ & ೫ನೇ ಮಹಡಿ, ೧೧-೪-೬೬೦, ಸಿಂಗಾರೇನಿ ಭವನ್, ರೆಡ್ ಹಿಲ್ಸ್, ಹೈದರಾಬಾದ್ ೫೦೦ ೦೦೪ ಫೋನ್: (೦೪೦) ೨೩೩೯೭೩೮೧ ಫ್ಯಾಕ್ಸ್: (೦೪೦) ೨೩೩೯೭೩೭೮ & ೨೩೩೯೭೪೮೯ ಮಿಂಚಂಚೆ: chmn@aperc.gov.in/<br><br>ಕೇರಳ: ಕೆ.ಪಿ.ಎಫ್.ಸಿ. ಭವನಂ, ಸಿ.ವಿ. ರಾಮನ್ ಪಿಳ್ಳೈ ರಸ್ತೆ, ವೆಲ್ಲಯಾಂಬಳಂ, ತಿರುವನಂತಪುರಂ, ಕೇರಳ ೬೯೫೦೧೦ ಫೋನ್: (೦೪೭೧) ೨೭೩೫೫೪೪ ಫ್ಯಾಕ್ಸ್: ೦೪೭೧) ೨೭೩೫೫೯೯ ಮಿಂಚಂಚೆ: ಞseಡಿಛಿRseಡಿಛಿಞeಡಿಚಿಟಚಿ.oಡಿg kserc@erckerala.org> |

## ಅನುಬಂಧಗಳು

## ಅನುಬಂಧ A : ನಮೂನೆ 1 ಮಾದರಿ

**1. ಮೂಲಭೂತ ಮಾಹಿತಿ**

- ಯೋಜನೆಯ ಹೆಸರು:
- ಸ್ವರೂಪ:
- ಉದ್ದೇಶಿತ ಸಾಮರ್ಥ್ಯ
- ಹತ್ತಿರದ ಪಟ್ಟಣ/ನಗರ/ರೈಲ್ವೆ ನಿಲ್ದಾಣ/ವಿಮಾನ ನಿಲ್ದಾಣ, ಜೊತೆಗೆ ಕಿ.ಮೀ.ಗಳಲ್ಲಿ ಎಷ್ಟು ದೂರ
- ಗ್ರಾಮ ಪಂಚಾಯಿತಿ/ಜಿಲ್ಲಾ ಪಂಚಾಯಿತಿ/ಮುನ್ಸಿಪಾಲ್ಟಿ/ಸ್ಥಳೀಯ ಸಂಸ್ಥೆ, ಅಂಚೆ ವಿಳಾಸ ಮತ್ತು
- ದೂರವಾಣಿ ಸಂಖ್ಯೆಯೊಂದಿಗೆ:
- ಈ ಕೆಳಗಿನವುಗಳಿಂದ ಯೋಜನೆಗೆ ಮಂಜೂರಾತಿ ಅಥವಾ ಪರವಾನಗಿ ಬೇಕಿದ್ದರೆ, ಆ ವಿವರಗಳು

  ಎ. ಅರಣ್ಯ (ಸಂರಕ್ಷಣಾ) ಕಾಯಿದೆ ೧೯೮೦

  ಬಿ. ವನ್ಯಜೀವಿ (ಸಂರಕ್ಷಣಾ) ಕಾಯಿದೆ ೧೯೭೨ ಮತ್ತು

  ಸಿ. ಸಿಆರ್‌ಜಡ್ ಅಧಿಸೂಚನೆ ೧೯೯೧
- ಬೇರೆ ಯಾವುದಾದರೂ ಪರ್ಯಾಯ ಸ್ಥಳವನ್ನು ಪರಿಶೀಲಿಸಿದ್ದರೆ, ಟೋಪೋ ಶೀಟ್ ಜೊತೆಗೆ ಆ ವಿವರಗಳು:
- ಅಂತರಸಂಬಂಧವಿರುವ ಯೋಜನೆಗಳು ಮತ್ತು ಅಂತರಸಂಬಂಧವಿರುವ ಯೋಜನೆಗಳಿಗೆ ಸಲ್ಲಿಸಿದ ಅರ್ಜಿಯ ವಿವರಗಳು:
- ಅರ್ಜಿದಾರರ ಹೆಸರು, ವಿಳಾಸ ಮತ್ತು ಹುದ್ದೆ:
- ಸ್ಥಳಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆದೇಶ/ನೀತಿಯ ಕುರಿತ ಮಾಹಿತಿ

ಎ. ಅರಣ್ಯ ಭೂಮಿ

ಬಿ. ಯೋಜನೆ/ಭೂಮಿಯ ವಿರುದ್ಧ ಬಾಕಿ ಇರುವ ಯಾವುದೇ ಮೊಕದ್ದಮೆಯ ವಿವರಗಳು

ಚಟುವಟಿಕೆ ವಿವರಗಳು

- ನಿರ್ಮಾಣ - ಯೋಜನೆಯ ಕಾರ್ಯಾಚರಣೆ ಅಥವಾ ಕಾರ್ಯಾಚರಣೆ ನಿಲ್ಲಿಸುವುದು ಆ ಪ್ರದೇಶದಲ್ಲಿ ಭೌತಿಕ ಬದಲಾವಣೆಗಳನ್ನು ಉಂಟು ಮಾಡುವ ಕಾರ್ಯಗಳನ್ನು ಒಳಗೊಂಡಿರುತ್ತದೆ - ಭೌಗೋಳಿಕತೆ, ಭೂಬಳಕೆ, ನೀರಿನ ಮೂಲಗಳು ಮತ್ತು ಇತರೆ.
- ಭೂ ಬಳಕೆಯಲ್ಲಿ ಶಾಶ್ವತ ಅಥವಾ ತಾತ್ಕಾಲಿಕ ಬದಲಾವಣೆ
- ಭೂ ಬಳಕೆಯ ತೀವ್ರತೆ ಹೆಚ್ಚಳದೊಂದಿಗೆ ಕವರ್ ಅಥವಾ ಟೋಪೋಗ್ರಫಿ (ಸ್ಥಳೀಯ ಭೂಬಳಕೆ ಯೋಜನೆಗೆ ಅನುಗುಣವಾಗಿ)

- ಪ್ರಸ್ತುತ ಇರುವ ಭೂಮಿಯನ್ನು ತೆರವುಗೊಳಿಸುವುದು
- ಸಸ್ಯಗಳು ಮತ್ತು ಕಟ್ಟಡಗಳು
- ಹೊಸ ರೀತಿಯ ಭೂ ಬಳಕೆಯನ್ನು ಹುಟ್ಟುಹಾಕುವುದು
- ನಿರ್ಮಾಣ-ಪೂರ್ವ ವಿಚಾರಣೆಗಳು - ಕೊಳವೆಬಾವಿಗಳು, ಮಣ್ಣು ಪರೀಕ್ಷೆ ಮತ್ತು ಇತರೆ
- ನಿರ್ಮಾಣ ಕಾಮಗಾರಿ
- ಕೆಡವಿಹಾಕುವ ಕೆಲಸಗಳು
- ನಿರ್ಮಾಣ ಕಾಮಗಾರಿ ಕೆಲಸಗಳಿಗೆ ಅಥವಾ ಕಾಮಗಾರಿ ಕೆಲಸಗಾರರ ಮನೆಗಳಿಗೆ ತಾತ್ಕಾಲಿಕ ಸ್ಥಳ ಬಳಕೆ
- ತಳಮಟ್ಟದ ಕಟ್ಟಡಗಳ ನಿರ್ಮಾಣಗಳ ಮೇಲೆ ಅಥವಾ ಲೀನಿಯರ್ ನಿರ್ಮಾಣಗಳು ಸೇರಿದಂತೆ ನಡೆಯುವ ನೆಲಮಟ್ಟದ ಕಾರ್ಯಗಳು
- ಕತ್ತರಿಸುವುದು ಮತ್ತು ತುಂಬುವುದು ಅಥವಾ ಅಗೆಯುವುದು
- ಗಣಿಗಾರಿಕೆ, ಸುರಂಗ ತೋಡುವುದು ಸೇರಿದಂತೆ ನೆಲದಾಳದ ಕೆಲಸಗಳು
- ಪುನರ್ ನವೀಕರಣ  ಕೆಲಸಗಳು
- ಹೂಳೆತ್ತುವುದು
- ಸಮುದ್ರದಡದ ಕಟ್ಟಡಗಳು
- ಉತ್ಪಾದನೆ ಮತ್ತು ತಯಾರಿಕೆ ಪ್ರಕ್ರಿಯೆಗಳು
- ಸರಕುಗಳು ಅಥವಾ ಸಾಮಗ್ರಿಗಳ ಸಂಗ್ರಹದ ಸೌಲಭ್ಯಗಳು
- ಘನ ತ್ಯಾಜ್ಯ ಅಥವಾ ದ್ರವ ತ್ಯಾಜ್ಯದ ಸಂಸ್ಕರಣೆ ಅಥವಾ ವಿಲೇವಾರಿಗೆ ಸೌಲಭ್ಯಗಳು
- ಕಾರ್ಯಾಚರಣೆಯಲ್ಲಿರುವ ಕೆಲಸಗಾರರಿಗೆ ದೀರ್ಘಕಾಲೀನ ಮನೆಗಳಿಗೆ ಸೌಲಭ್ಯಗಳು
- ಹೊಸ ರಸ್ತೆ
- ನಿರ್ಮಾಣ ಅಥವಾ ಕಾರ್ಯಾಚರಣೆಯ ಸಮಯದಲ್ಲಿ ರೈಲು ಅಥವಾ ಸಮುದ್ರ ಸಾರಿಗೆ
- ಹೊಸ ಅಥವಾ ಮಾರ್ಪಾಡು ಮಾಡಿದ ಮಾರ್ಗಗಳು ಮತ್ತು ನಿಲ್ದಾಣಗಳು, ಬಂದರುಗಳು, ವಿಮಾನನಿಲ್ದಾಣಗಳು ಇತ್ಯಾದಿ ಸೇರಿದಂತೆ ಹೊಸ ರಸ್ತೆ, ರೈಲು, ವಾಯುಮಾರ್ಗ, ಜಲಮಾರ್ಗ ಅಥವಾ ಬೇರೆ ಸಾರಿಗೆ ಸೌಕರ್ಯ
- ಟ್ರಾಫಿಕ್ ಓಡಾಟದಲ್ಲಿ ಬದಲಾವಣೆ ತರುವಂತಹ ಸದ್ಯ ಇರುವ ಸಾರಿಗೆ ಮಾರ್ಗಗಳ ಅಥವಾ ಸೌಕರ್ಯಗಳನ್ನು ಕೊನೆಗೊಳಿಸುವುದು ಅಥವಾ ಬೇರೆಡೆ ತಿರುಗಿಸುವುದು
- ಹೊಸ ಅಥವಾ ಬೇರೆಡೆ ತಿರುಗಿಸಿದ ಸಾಗಾಣಿಕೆ ಲೈನ್‌ಗಳು ಅಥವಾ ಪೈಪ್‌ಲೈನ್‌ಗಳು
- ಅಡ್ಡಿಪಡಿಸುವುದು/ತಡೆಯುವುದು/ಅಡ್ಡಗಾಲುವೆ
- ನೀರಿನ ಹರಿವಿಗೆ ಅಥವಾ ಜಲಕುಹರಗಳ ಜಲವಿಜ್ಞಾನಕ್ಕೆ ಮಾರ್ಪಾಡು ಅಥವಾ ಬೇರೆ ಬದಲಾವಣೆಗಳು
- ಹಳ್ಳ/ತೊರೆಗಳು ಅಡ್ಡಹಾಯುವಿಕೆ
- ನೆಲ ಅಥವಾ ಮೇಲ್ಮೈ ನೀರಿಗೆ ಅಡ್ಡಿ ಅಥವಾ ವರ್ಗಾವಣೆ
- ನೀರಿನ ಮೂಲಗಳಲ್ಲಿ ಅಥವಾ ಭೂಮಿಯ ಮೇಲ್ಭಾಗದಲ್ಲಿ ಬದಲಾವಣೆಗಳು ಆಗಿ, ಅವು ಒಳಚರಂಡಿ ಅಥವಾ ನೀರು ಹರಿಯುವಿಕೆಗೆ ಪರಿಣಾಮ ಬೀರುವುದು
- ನಿರ್ಮಾಣ ಕಾಮಗಾರಿಗೆ ಸಿಬ್ಬಂದಿಗಳ ಅಥವಾ ಸಾಮಗ್ರಿಗಳ ಸಾಗಾಣಿಕೆ; ಕಾರ್ಯಾಚರಣೆ ಅಥವಾ

ಕಾರ್ಯಾಚರಣೆ ನಿಲ್ಲಿಸುವುದು, ದೀರ್ಘಕಾಲೀನವಾಗಿ ಕೆಡವಿಹಾಕುವುದು ಅಥವಾ ಕಾರ್ಯಾಚರಣೆ ನಿಲ್ಲಿಸುವುದು ಅಥವಾ ಪುನಸ್ಥಾಪನೆ ಕೆಲಸಗಳು

- ಕಾರ್ಯಾಚರಣೆ ನಿಲ್ಲಿಸುವಾಗ ಸದಾಕಾಲ ಚಟುವಟಿಕೆ ನಡೆಯುವುದು, ಅದು ಪರಿಸರದ ಮೇಲೆ ಪ್ರಭಾವ ಬೀರಬಹುದು
- ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಜನರು ಆ ಪ್ರದೇಶದ ಒಳಬರುವುದು
- ಪರಕೀಯ ಜಾತಿ ಸಸ್ಯಗಳ/ಪ್ರಾಣಗಳ ಪರಿಚಯ
- ದೇಸಿ ತಳಿಗಳ ಅಥವಾ ವಂಶವಾಹಿ ವೈವಿಧ್ಯತೆ ನಾಶ
- ಬೇರಾವುದೇ ಚಟುವಟಿಕೆಗಳು

**2. ಮೂಲ ಮಾಹಿತಿ ಮತ್ತು ದತ್ತಾಂಶ ಸೇರಿದಂತೆ ಸ್ವಾಭಾವಿಕ ಸಂಪನ್ಮೂಲಗಳ ಬಳಕೆ**

- ಭೂಮಿ - ವಿಶೇಷವಾಗಿ ಅಭಿವೃದ್ಧಿಯಾಗದ ಅಥವಾ ಕೃಷಿ ಭೂಮಿ - ಹೆಕ್ಟೇರ್‌ಗಳಲ್ಲಿ
- ನೀರು - ನಿರೀಕ್ಷಿತ ಮೂಲ ಮತ್ತು ಅದರ ಸದ್ಯದ ಬಳಕೆದಾರರು - ಪ್ರತೀದಿನಕ್ಕೆ ಕಿಲೋಲೀಟರ್ ಯುನಿಟ್‌ಗಳಲ್ಲಿ
- ಮೆಟ್ರಿಕ್ ಟನ್ನುಗಳಲ್ಲಿ ಖನಿಜಗಳು
- ಕಾಮಗಾರಿ ಸಾಮಗ್ರಿಗಳು - ಕಲ್ಲು, ಶಿಲೆಗಳು, ಮರಳು, ಮಣ್ಣು - ನಿರೀಕ್ಷಿತ ಮೂಲ - ಮೆಟ್ರಿಕ್ ಟನ್ನುಗಳಲ್ಲಿ
- ಅರಣ್ಯ ಮತ್ತು ಮರಮಟ್ಟು ಮೂಲ ಮೆಟ್ರಿಕ್ ಟನ್ನುಗಳಲ್ಲಿ
- ಶಕ್ತಿ - ವಿದ್ಯುತ್ ಮತ್ತು ಇಂಧನಗಳು, ಮೂಲ ಮತ್ತು ಸದ್ಯದ ಬಳಕೆದಾರರನ್ನು ಒಳಗೊಂಡಂತೆ - ಇಂಧನ ಮೆಟ್ರಿಕ್ ಟನ್ನುಗಳಲ್ಲಿ ಮತ್ತು ವಿದ್ಯುತ್ ಮೆಗಾವ್ಯಾಟ್‌ಗಳಲ್ಲಿ.
- ಇನ್ನಾವುದಾದರೂ ನೈಸರ್ಗಿಕ ಸಂಪನ್ಮೂಲಗಳು (ಸಮರ್ಪಕ ಸ್ಟ್ಯಾಂಡರ್ಡ್ ಯುನಿಟ್ ಬಳಸಿರಿ)

**3. ಮನುಷ್ಯರ ಆರೋಗ್ಯ ಅಥವಾ ಪರಿಸರಕ್ಕೆ ಹಾನಿಕಾರಕವಾದ ವಸ್ತುಗಳ ಸಂಗ್ರಹಣೆ, ಸಾರಿಗೆ, ನಿಭಾವಣೆ ಅಥವಾ ಉತ್ಪಾದನೆ**

- ಕಾಯಿಲೆಗಳು ಆಗುವಿಕೆಯಲ್ಲಿ ಬದಲಾವಣೆಗಳು
- ಕಾಯಿಲೆಗಳ ವಾಹಕಗಳನ್ನು ಪ್ರಭಾವಿಸುತ್ತದೆ (ಉದಾ: ಕೀಟ ಅಥವಾ ನೀರಿನಿಂದ ಹುಟ್ಟುವ ಕಾಯಿಲೆಗಳು)
- ಜನರ ಯೋಗಕ್ಷೇಮವನ್ನು ಪ್ರಭಾವಿಸುತ್ತದೆ (ಉದಾ: ಜೀವನದ ಗುಣಮಟ್ಟಗಳನ್ನು ಬದಲಿಸುವದರಿಂದ)
- ಯೋಜನೆಯಿಂದ ಹಾನಿಗೀಡಾಬಹುದಾದ ದುರ್ಬಲ ಗುಂಪುಗಳ ಜನರು (ಉದಾ: ಆಸ್ಪತ್ರೆಯಲ್ಲಿರುವ ರೋಗಿಗಳು, ಮಕ್ಕಳು ಮತ್ತು ವಯಸ್ಸಾದವರು ಇತ್ಯಾದಿ)
- ಬೇರೆ ಯಾವುದಾದರೂ ಕಾರಣಗಳು

**4. ನಿರ್ಮಾಣ/ಕಾರ್ಯಾಚರಣೆ/ಕಾರ್ಯಾಚರಣೆ ನಿಲ್ಲಿಸುವ ಸಮಯದಲ್ಲಿ ಘನ ತ್ಯಾಜ್ಯದ ಉತ್ಪಾದನೆ**

- ಹಾಳು ಮಾಡುವುದು
- ಅತಿಯಾದ ಹೊರೆ ಅಥವಾ ಗಣಿ ತ್ಯಾಜ್ಯ
- ಮುನ್ಸಿಪಲ್ ತ್ಯಾಜ್ಯ (ಮನೆಗಳ ಅಥವಾ ವಾಣಿಜ್ಯವಹಿವಾಟಿನಲ್ಲಿ ಉಂಟಾಗುವ ತ್ಯಾಜ್ಯ)
- ಹಾನಿಕಾರಕ/ಅಪಾಯಕಾರಿ ತ್ಯಾಜ್ಯಗಳು (ಹಾನಿಕಾರಕ ತ್ಯಾಜ್ಯ ನಿರ್ವಹಣಾ ನಿಯಮಗಳ ಪ್ರಕಾರ)
- ಬೇರೆ ಕೈಗಾರಿಕಾ ಪ್ರಕ್ರಿಯೆಗಳ ತ್ಯಾಜ್ಯ

- ಹೆಚ್ಚುವರಿ ಉತ್ಪನ್ನ
- ಒಳಚರಂಡಿ ರಾಡಿ ನೀರು ಅಥವಾ ದ್ರವ ತ್ಯಾಜ್ಯ ಸಂಸ್ಕರಣೆಯಿಂದ ಹೊರಬರುವ ಬೇರೆ ರಾಡಿನೀರು
- ನಿರ್ಮಾಣ ಅಥವಾ ಕೆಡವಿ ಹಾಕುವಾಗ ಬರುವ ತ್ಯಾಜ್ಯ
- ಹೆಚ್ಚುವರಿ ಯಂತ್ರಗಳು ಅಥವಾ ಸಾಧನಗಳು
- ಮಾಲಿನ್ಯಗೊಂಡ ಮಣ್ಣು ಅಥವಾ ಬೇರೆ ಸಾಮಗ್ರಿಗಳು
- ಕೃಷಿ ತ್ಯಾಜ್ಯ
- ಬೇರೆ ಘನ ತ್ಯಾಜ್ಯ

**5. ಮಾಲಿನ್ಯಕಾರಕಗಳು ಅಥವಾ ಬೇರೆ ಯಾವುದೇ ಹಾನಿಕಾರಕ, ವಿಷಕಾರಿ ಅಥವಾ ಅನಾರೋಗ್ಯಕರ ವಸ್ತುಗಳನ್ನು ಗಾಳಿಗೆ ಬಿಡುವುದು**

- ಸ್ಥಿರ ಅಥವಾ ಜಂಗಮ/ಚಲನೆಯಲ್ಲಿರುವ ಮೂಲಗಳಿಂದ ಪಳೆಯುಳಿಕೆ ಇಂಧನಗಳ ದಹನದಿಂದ ಹೊರಸೂಸುವ ಅನಿಲಗಳು
- ಉತ್ಪಾದನಾ ಪ್ರಕ್ರಿಯೆಗಳಿಂದ ಹೊರಸೂಸುವ ಅನಿಲಗಳು
- ಸಂಗ್ರಹ ಅಥವಾ ಸಾಗಾಣಿಕೆಯೂ ಸೇರಿದಂತೆ ಸಾಮಗ್ರಿಗಳನ್ನು ನಿಭಾಯಿಸುವಾಗ ಹೊರಸೂಸುವ ಅನಿಲಗಳು
- ಘಟಕ ಮತ್ತು ಸಲಕರಣೆಯೂ ಸೇರಿದಂತೆ ನಿರ್ಮಾಣ ಚಟುವಟಿಕೆಗಳಿಂದ ಹೊರಸೂಸುವ ಅನಿಲಗಳು
- ನಿರ್ಮಾಣ ಸಾಮಗ್ರಿ, ಒಳಚರಂಡಿ ಮತ್ತು ತ್ಯಾಜ್ಯವೂ ಸೇರಿದಂತೆ ಸಾಮಗ್ರಿಗಳನ್ನು ನಿಭಾಯಿಸುವಾಗ ಬರುವ ದೂಳು ಅಥವಾ ವಾಸನೆ
- ತ್ಯಾಜ್ಯ ಸುಡುವುದರಿಂದ ಹೊರಸೂಸುವ ಅನಿಲಗಳು
- ತ್ಯಾಜ್ಯವನ್ನು ತೆರೆದ ಪ್ರದೇಶದಲ್ಲಿ ಸುಡುವಾಗ ಹೊರಸೂಸುವ ಅನಿಲಗಳು (ಉದಾ ಎಲೆ/ಕಡ್ಡಿಗಳ ಗುಪ್ಪೆ, ಕಾಮಗಾರಿಯ ಉಳಿಕೆ ವಸ್ತುಗಳು ಇತ್ಯಾದಿ)
- ಬೇರೆ ಯಾವುದೇ ಮೂಲದಿಂದ ಹೊರಸೂಸುವ ಅನಿಲಗಳು

**6. ಶಬ್ದ ಮತ್ತು ಕಂಪನ ಹುಟ್ಟುಹಾಕುವುದು; ಬೆಳಕು ಮತ್ತು ಶಾಖ ಹೊರಸೂಸುವುದು**

- ವಿವಿಧ ಸಾಧನಗಳ ಕಾರ್ಯಾಚರಣೆಯಿಂದ (ಉದಾ: ಯಂತ್ರಗಳು, ವೆಂಟಿಲೇಶನ್ ಘಟಕ, ಕ್ರಶರ್‌ಗಳು)
- ಕೈಗಾರಿಕೆ ಅಥವಾ ಅಂಥಹುದೇ ಬೇರೆ ಪ್ರಕ್ರಿಯೆಗಳಿಂದ
- ನಿರ್ಮಾಣ ಅಥವಾ ಕೆಡವಿಹಾಕುವುದು
- ಸಿಡಿಸುವುದು ಅಥವಾ ಗುದ್ದೆಹಾಕುವುದು
- ನಿರ್ಮಾಣ ಅಥವಾ ಕಾರ್ಯಾಚರಣೆಯಲ್ಲಿರುವ ಟ್ರಾಫಿಕ್
- ಬೆಳಕು ಅಥವಾ ತಂಪಾಗಿಸುವ ವ್ಯವಸ್ಥೆಗಳು
- ಬೇರೆ ಯಾವುದೇ ರೀತಿಯ ಮೂಲಗಳಿಂದ

**7. ಭೂಮಿ ಅಥವಾ ನೀರಿನ ಮಾಲಿನ್ಯದ ಅಪಾಯ**

- ಮಾಲಿನ್ಯಕಾರಕಗಳನ್ನು ನೆಲ/ಚರಂಡಿನೀರು/ಮೇಲ್ಮೈ ನೀರು/ಅಂತರ್ಜಲ/ಸಮುದ್ರತೀರದ ನೀರು/ಸಮುದ್ರಕ್ಕೆ ಬಿಡುವುದು
- ಹಾನಿಕಾರಕ/ಅಪಾಯಕಾರಿ ವಸ್ತುಗಳನ್ನು ನಿಭಾಯಿಸುವುದು, ಸಂಗ್ರಹಿಸುವುದು, ಬಳಸುವುದು ಅಥವಾ ಕೆಳಗೆ ಚೆಲ್ಲುವುದರಿಂದ

- ಚರಂಡಿ ಅಥವಾ ಬೇರೆ ರೀತಿಯ ದ್ರವ ತ್ಯಾಜ್ಯಗಳನ್ನು ನೀರು ಅಥವಾ ಭೂಮಿಗೆ ಹೊರಬಿಡುವುದರಿಂದ (ಹೊರಬಿಡಲಿಕ್ಕೆ ನಿರೀಕ್ಷಿತ ವಿಧಾನ ಮತ್ತು ಸ್ಥಳ)
- ಗಾಳಿಗೆ ಹೊರಬಿಟ್ಟ ಮಾಲಿನ್ಯಕಾರಕಗಳು ನೀರು ಅಥವಾ ಭೂಮಿಯ ಮೇಲೆ ಸಂಗ್ರಹಗೊಳ್ಳುವುದರಿಂದ
- ಈ ಮೂಲಗಳಿಂದ ದೀರ್ಘಕಾಲದವರೆಗೆ ಮಾಲಿನ್ಯಕಾರಕಗಳು ಪರಿಸರದಲ್ಲಿ ಸೇರಿಕೆಯಾಗುವುದು
- ಬೇರೆ ಮೂಲಗಳಿಂದ

**8. ನಿರ್ಮಾಣದ ಸಂದರ್ಭದಲ್ಲಿ ಅಥವಾ ಕಾರ್ಯಾಚರಣೆಯ ಸಂದರ್ಭದಲ್ಲಿ ಮನುಷ್ಯರ ಆರೋಗ್ಯ ಅಥವಾ ಪರಿಸರದ ಮೇಲೆ ದುಷ್ಪರಿಣಾಮ ಬೀರುವ ಅಪಘಾತಗಳ ಅಪಾಯ**

- ಸಿಡಿಸುವಿಕೆ, ಕೆಳಚೆಲ್ಲುವುದು, ಬೆಂಕಿ ಇತ್ಯಾದಿಗಳಿಂದ
- ದಾಸ್ತಾನು ನಿಭಾಯಿಸುವಾಗ ಅಥವಾ ಹಾನಿಕಾರಕ ವಸ್ತುಗಳ ಉತ್ಪಾದನೆಯಿಂದ
- ಪಾರಿಸರಿಕ ಹಾನಿಗಳಾದ ಭೂಕಂಪ, ನೆರೆ/ಪ್ರವಾಹ ಇತ್ಯಾದಿ ನೈಸರ್ಗಿಕ ವಿಕೋಪಗಳೂ ಸೇರಿದಂತೆ ಬೇರೆ ಯಾವುದೇ ಕಾರಣಗಳು

**9. ಪಾರಿಸರಿಕ ಪರಿಣಾಮಗಳಿಗೆ ಕಾರಣವಾಗಬಲ್ಲ ಅಥವಾ ಆ ಪ್ರದೇಶದಲ್ಲಿ ಸಂಚಯಿತ ಪರಿಣಾಮಗಳನ್ನು ಬೀರುವ ಸಂಭಾವ್ಯತೆಯುಳ್ಳ ಅಂಶಗಳು**

- ಪೂರಕ ಅಭಿವೃದ್ಧಿಗೆ ಕಾರಣವಾಗುವ ಅಥವಾ ಯೋಜನೆಯಿಂದ ಪ್ರೇರಿತಗೊಂಡ ಅಭಿವೃದ್ಧಿಯು ಪರಿಸರದ ಮೇಲೆ ಬೀರುವ ಪರಿಣಾಮ (ಉದಾ: ಬೆಂಬಲಿಸುವ ಮೂಲಸೌಕರ್ಯ, ರಸ್ತೆಗಳು, ವಿದ್ಯುತ್ ಪೂರೈಕೆ, ತ್ಯಾಜ್ಯ ಅಥವಾ ತ್ಯಾಜ್ಯ ನೀರು ಸಂಸ್ಕರಣೆ ಇತ್ಯಾದಿ
- ಗೃಹನಿರ್ಮಾಣ ಅಭಿವೃದ್ಧಿ
- ಸಾರ ತೆಗೆಯುವ ಉದ್ಯಮಗಳು
- ಪೂರೈಕೆ ಉದ್ಯಮಗಳು
- ಇತರೆ
- ಆ ಸ್ಥಳದ ಬಳಕೆಯ ಮುಗಿದ ನಂತರದ ಬಳಕೆಯು ಪರಿಸರದ ಮೇಲೆ ದುಷ್ಪರಿಣಾಮ ಬೀರಬಹುದು
- ನಂತರದ ಅಭಿವೃದ್ಧಿಗಳಿಗೆ ಒಂದು ನಿದರ್ಶನವನ್ನು ಸ್ಥಾಪಿಸುತ್ತದೆ
- ಹತ್ತಿರದಲ್ಲಿ ಇದೇ ರೀತಿಯ ಪರಿಣಾಮಗಳನ್ನು ಬೀರುವ ಈಗಾಗಲೇ ಇರುವ ಅಥವಾ ಯೋಜಿಸಲಾದ ಬೇರೆ ಯೋಜನೆಗಳಿಂದಾಗಿ ಸಂಚಯಿತ ಪರಿಣಾಮಗಳಿಗೆ ಕಾರಣವಾಗುತ್ತದೆ

**10. ಪಾರಿಸರಿಕ ಸಂವೇದನಾಶೀಲತೆ**

- ಅಂತಾರಾಷ್ಟ್ರೀಯ ಒಪ್ಪಂದಗಳ ಅಡಿಯಲ್ಲಿ ಸಂರಕ್ಷಿತ ಪ್ರದೇಶಗಳು; ಪಾರಿಸರಿಕ ಭೂದೃಶ್ಯ, ಸಾಂಸ್ಕೃತಿಕ ಅಥವಾ ಬೇರೆ ಸಂಬಂಧಿತ ಮೌಲ್ಯಗಳಿಗಾಗಿ ರಾಷ್ಟ್ರೀಯ ಅಥವಾ ಸ್ಥಳೀಯ ಶಾಸನಗಳು
- ಪಾರಿಸರಿಕ ಕಾರಣಗಳಿಗಾಗಿ ಸಂವೇದನಾಶೀಲವಾಗಿರುವ ಅಥವಾ ಮುಖ್ಯವಾಗಿರುವ ಪ್ರದೇಶಗಳು - ಜೌಗುನೆಲಗಳು, ನೀರಿನ ಹರಿವು ಅಥವಾ ಬೇರೆ ನೀರಿನ ಮೂಲಗಳು, ಕರಾವಳಿ ವಲಯ, ಜೈವಿಕ ಗೋಳಗಳು, ಪರ್ವತಗಳು ಮತ್ತು ಅರಣ್ಯಗಳು
- ಸಂತಾನೋತ್ಪತ್ತಿ, ಗೂಡುಕಟ್ಟುವಿಕೆ, ಬೇಟೆ, ವಿಶ್ರಾಂತಿ, ಅತಿಯಾದ ಚಳಿ, ವಲಸೆ ಇನ್ನಿತರ ಕಾರಣಗಳಿಗಾಗಿ ಸಂರಕ್ಷಿಸಲಾದ ಸಸ್ಯ ಅಥವಾ ಪ್ರಾಣಿಗಳ ಪ್ರಮುಖ ಅಥವಾ ಸಂವೇದನಾಶೀಲ ಜಾತಿಗಳು ಬಳಸುವ ಪ್ರದೇಶಗಳು
- ಒಳಾಂತರ, ಕರಾವಳಿ, ಸಮುದ್ರದ ಮತ್ತು ಅಂತರ್ಜಲ ನೀರು
- ರಾಜ್ಯ ಮತ್ತು ದೇಶದ ಗಡಿಗಳು

- ಮನೋರಂಜನೆ ಅಥವಾ ಇನ್ನಿತರ ಪ್ರವಾಸೀ ಯಾತ್ರಾ ಸ್ಥಳಗಳಿಗೆ ಲಭ್ಯತೆ ನೀಡುವ ಸಾರ್ವಜನಿಕರು ಬಳಸುವ ಮಾರ್ಗಗಳು ಅಥವಾ ಸೌಲಭ್ಯಗಳು
- ರಕ್ಷಣಾ ಇಲಾಖೆಯ ನಿರ್ಮಿತಿಗಳು
- ಅತಿಹೆಚ್ಚು ಜನಸಾಂದ್ರತೆ ಇರುವ ಅಥವಾ ಕಟ್ಟಡಗಳಿರುವ ಪ್ರದೇಶ
- ಸಂವೇದನಾಶೀಲ ಮಾನವನಿರ್ಮಿತ ಭೂ ಬಳಕೆಗಾಗಿ ಇರುವ ಪ್ರದೇಶಗಳು (ಉದಾ: ಶಾಲೆಗಳು, ಆಸ್ಪತ್ರೆಗಳು, ಪೂಜಾ ಸ್ಥಳಗಳು, ಸಮುದಾಯ ಸೌಲಭ್ಯಗಳು)
- ಪ್ರಮುಖ, ಉತ್ತಮ ಗುಣಮಟ್ಟದ ಅಥವಾ ಅಪರೂಪದ ಸಂಪನ್ಮೂಲಗಳನ್ನು ಒಳಗೊಂಡ ಪ್ರದೇಶಗಳು (ಉದಾ: ಅಂತರ್ಜಲ ಸಂಪನ್ಮೂಲಗಳು, ಮೇಲ್ಮೈ ಸಂಪನ್ಮೂಲಗಳು, ಅರಣ್ಯ, ಕೃಷಿ, ಮೀನುಗಾರಿಕೆ, ಪ್ರವಾಸ, ಖನಿಜಗಳು)
- ಮಾಲಿನ್ಯ ಅಥವ ಪರಿಸರದ ಹಾನಿಗೆ ಈಗಾಗಲೇ ಒಳಗಾದ ಪ್ರದೇಶಗಳು ಮತ್ತು ಸದ್ಯದ ಕಾನೂನುಬದ್ಧ ಪಾರಸರಿಕ ಮಾನದಂಡಗಳನ್ನು ಮೀರಿರುವುದು
- ನೈಸರ್ಗಿಕ ವಿಕೋಪಕ್ಕೆ ಒಳಗಾಗುವ ಸಂಭವವಿರುವ ಪ್ರದೇಶಗಳು ಯೋಜನೆಯು ಪಾರಿಸರಿಕ ಸಮಸ್ಯೆಗಳನ್ನು ಒಡ್ಡುವಂತೆ ಮಾಡಬಹುದು (ಉದಾ: ಭೂಕಂಪಗಳು, ಭೂಕುಸಿತಗಳು, ಭೂಸವೆತಗಳು, ನೆರೆ/ಪ್ರವಾಹ ಅಥವಾ ಅತಿಯಾದ ಅಥವಾ ಪ್ರತಿಕೂಲ ಹವಾಮಾನದ ಸ್ಥಿತಿಗತಿಗಳು)

**11. ಪ್ರಸ್ತಾಪಿತ ಒಪ್ಪಂದದ ಕರಾರುಗಳು**

ನಂತರ, ಈ ಕೆಳಗಿನ ಒಂದು ಅಫಿಡೆವಿಟ್ ನೀಡಬೇಕು;

ನಾನು ಈ ಮೂಲಕ ಮುಚ್ಚಳಿಕೆ ಬರೆದುಕೊಡುವುದೇನೆಂದರೆ ಅರ್ಜಿ ಮತ್ತು ಲಗತ್ತುಗಳಲ್ಲಿ ನೀಡಿದ ದತ್ತಾಂಶಗಳು ಹಾಗೂ ಮಾಹಿತಿಗಳು ನನ್ನ ತಿಳಿವಿನ ಮತ್ತು ನಂಬಿಕೆಯ ಪ್ರಕಾರ ಸರಿಯಿದೆ ಮತ್ತು ಯಾವುದೇ ಹಂತದಲ್ಲಿ ಸಲ್ಲಿಸಲಾದ ದತ್ತಾಂಶ ಮತ್ತು ಮಾಹಿತಿಯ ಯಾವುದೇ ಭಾಗ ತಪ್ಪಿದೆ ಅಥವಾ ತಪ್ಪುದಾರಿಗೆಳೆಯುತ್ತದೆ ಎಂದು ಕಂಡುಬಂದರೆ, ಯೋಜನೆಯನ್ನು ತಿರಸ್ಕರಿಸಿ, ಏನಾದರೂ ಇದ್ದಲ್ಲಿ, ನಮ್ಮ ಸ್ವಂತ ಅಪಾಯ ಮತ್ತು ವೆಚ್ಚದಲ್ಲಿ, ಯೋಜನೆಗೆ ನೀಡಲಾದ ಪರವಾನಗಿಯನ್ನು ರದ್ದುಪಡಿಸಬಹುದು.

ದಿನಾಂಕ ಅರ್ಜಿದಾರರ ಸಹಿ

ಸ್ಥಳ: ಹೆಸರು ಮತ್ತು ಪೂರ್ಣ ವಿಳಾಸದೊಂದಿಗೆ ಸಲ್ಲಿಸುವುದು

ಟಿಪ್ಪಣಿ:

ಸಿಆರ್‌ಜಡ್ ಅಧಿಸೂಚನೆ ೧೯೯೧ರ ಅಡಿಯಲ್ಲಿ ಪರವಾನಗಿ/ಒಪ್ಪಿಗೆಯನ್ನು ಒಳಗೊಂಡ ಯೋಜನೆಗಳಿಗೆ ಸಂಬಂಧಿಸಿದಂತೆ, ಈ ಕೆಳಗಿನವುಗಳನ್ನು ಅರ್ಜಿಯ ಜೊತೆ ಸಲ್ಲಿಸತಕ್ಕದ್ದು:

೧. ಸಿಆರ್‌ಜಡ್ ನಕ್ಷೆ, ಸಿಆರ್‌ಜಡ್‌ಗೆ ತತ್ಸಂಬಂಧಿ ಯೋಜನಾ ಚಟುವಟಿಕೆಗಳನ್ನು ತೋರಿಸುವ ಅಧಿಕೃತ ಸಂಸ್ಥೆಯೊಂದರಿಂದ ಸರಿಯಾಗಿ ವ್ಯಾಪ್ತಿ ಗುರುತಿಸಲಾದ ನಕ್ಷೆ

೨. ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ ಶಿಫಾರಸುಗಳು (ಇಸಿ ಕೊಡುವ ಮೊದಲೇ)

ರಾಷ್ಟ್ರೀಯ ಉದ್ಯಾನಗಳು, ಸಂರಕ್ಷಣಾಲಯಗಳು, ಜೈವಿಕಗೋಳ ಮೀಸಲು, ವನ್ಯಜೀವಿಗಳ ವಲಸೆ

ಕಾರಿಡಾರ್‌ಗಳ ೧೦ ಕಿ.ಮೀ. ವ್ಯಾಪ್ತಿಯಲ್ಲಿರುವ ಯೋಜನೆಗಳಿಗೆ ಸಂಬಂಧಿಸಿದಂತೆ, ಈ ಕೆಳಗಿನವುಗಳನ್ನು ಅರ್ಜಿಯ ಜೊತೆ ಸಲ್ಲಿಸಬೇಕು:

೧. ಮುಖ್ಯ ವನ್ಯಜೀವಿ ವಾರ್ಡನ್ ಅವರಿಂದ ಪ್ರಮಾಣೀಕರಣಗೊಂಡ ಈ ಎಲ್ಲ ಲಕ್ಷಣಗಳನ್ನು ಮತ್ತು ಯೋಜನಾ ಸ್ಥಳವನ್ನು ತೋರಿಸುವ ಒಂದು ನಕ್ಷೆ

೨. ಮುಖ್ಯ ವನ್ಯಜೀವಿ ವಾರ್ಡನ್ ಅವರ ಅಭಿಪ್ರಾಯಗಳು

# ಅನುಬಂಧ ಬಿ: ಒಪ್ಪಂದದ ಕರಾರುಗಳು

೧. ಯೋಜನಾ ಸ್ಥಳದ ಭವಿಷ್ಯದ ದೀರ್ಘಕಾಲೀನ ಯೋಜನೆಯನ್ನು ಸೂಚಿಸುವ ದೂರದೃಷ್ಟಿ ವರದಿ/ವಿಷನ್ ಡಾಕ್ಯುಮೆಂಟ್, ಏನಾದರೂ ಇದ್ದರೆ ವರದಿ ರೂಪಿಸಿ, ಸಲ್ಲಿಸುವುದು

೨. ಹಿಂದಿನ ಹಂತ(ಗಳ)ದ ಪಾರಿಸರಿಕ ಮತ್ತು ಸಿಆರ್‌ಜಡ್ ಒಪ್ಪಿಗೆ/ಪರವಾನಗಿಗಳಲ್ಲಿ ಹಾಕಿರುವ ಕರಾರುಗಳಿಗೆ ಅನುಗುಣವಾಗಿರುವ ಸ್ಥಿತಿಗತಿಯ ವಿವರಗಳನ್ನು, ಇದಕ್ಕೆ ಅನ್ವಯವಾಗುವಂತೆ, ಸಲ್ಲಿಸತಕ್ಕದ್ದು.

೩. ಮಂಜೂರಾದ ಸ್ಥಳದ ಇತ್ತೀಚಿನ ಭಾವಚಿತ್ರಗಳೊಡನೆ ಅಗತ್ಯವಿರುವ ವಿವರಗಳನ್ನು ಸೂಚಿಸುವ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶನ್ನು ಒದಗಿಸತಕ್ಕದ್ದು.

೪. ಸಾರ್ವಜನಿಕ ಅಹವಾಲು ಸಮಯದಲ್ಲಿ ಎತ್ತಲಾದ ಸಮಸ್ಯೆ/ವಿಚಾರಗಳಿಗೆ ಮತ್ತು ಲಿಖಿತ ಪ್ರತಿನಿಧಿತ್ವಗಳಿಗೆ (ಏನಾದರೂ ಇದ್ದಲ್ಲಿ) ಪ್ರತಿಕ್ರಿಯೆ, ಜೊತೆಗೆ ಈ ಸಮಸ್ಯೆ/ವಿಚಾರಗಳನ್ನು ಉದ್ದೇಶಿಸಲು ಕಾಲಮಿತಿಯುಳ್ಳ ಕ್ರಿಯಾ ಯೋಜನೆ ಹಾಗೂ ಆಯವ್ಯಯ ಹಂಚಿಕೆಗಳು, ಇದೆಲ್ಲವನ್ನು ಕೋಷ್ಟಕದ ರೂಪದಲ್ಲಿ ಪ್ರಸ್ತಾಪಿಸಲಾದ ಪ್ರತೀ ಕಾರ್ಯಕ್ಕೆ ಪ್ರತಿಯಾಗಿ ಒದಗಿಸಬೇಕು.

೫. ಘಟಕದೊಳಗೇ ಸೌರಶಕ್ತಿ ವಿದ್ಯುತ್ ಉತ್ಪಾದಿಸುವುದನ್ನು, ವಿಶೇಷವಾಗಿ ಲಭ್ಯವಿರುವ ಮೇಲ್ಛಾವಣಿಗಳಲ್ಲಿ ಮತ್ತು ಇನ್ನಿತರ ಲಭ್ಯ ಪ್ರದೇಶಗಳಲ್ಲಿ, ಸೂಕ್ತರೀತಿಯಲ್ಲಿ ದಾಖಲಿಸಿ, ಅನುಷ್ಠಾನದ ಸ್ಥಿತಿಗತಿಯನ್ನು ಸಚಿವಾಲಯಕ್ಕೆ ಸಲ್ಲಿಸಬೇಕು.

೬. ಬೂದಿ ಹೊಂಡವಿರುವ ಸ್ಥಳವೂ ಸೇರಿದಂತೆ ಒಪ್ಪಿಗೆ ಪಡೆದ ಸ್ಥಳದ ನಿರ್ದೇಶಾಂಕ ಅಕ್ಷಾಂಶಗಳನ್ನು ಟೋಪೋ ಶೀಟ್ ಜೊತೆ (೧:೫೦,೦೦೦ ಸ್ಕೇಲ್) ಸಲ್ಲಿಸಬೇಕು ಮತ್ತು ಖಾತ್ರಿಪಡಿಸಿಕೊಂಡ ಸ್ಥಾವರ/ಘಟಕದ ಗಡಿಗಳ ಜಿಪಿಎಸ್ ರೀಡಿಂಗ್‌ಗಳನ್ನು ಮತ್ತು ಆ ಪ್ರದೇಶದ ಎನ್‌ಆರ್‌ಎಸ್ ಉಪಗ್ರಹ ನಕ್ಷೆಯನ್ನು ಸಲ್ಲಿಸಬೇಕು. ಸ್ಥಾವರದ ಸ್ಥಳವು ಯಾವುದೇ ನೀರಿನ ಮೂಲ/ನಾಲೆ/ನದಿಗೆ ಸಮೀಪವಿದ್ದರೆ, ನೀರಿನ ಮೂಲ/ನಾಲೆ/ನದಿಯ ಎಚ್‌ಎಫ್‌ಎಲ್‌ಗೆ ಸಂಬಂಧಿಸಿದಂತೆ ಸ್ಥಾವರದ/ಘಟಕದ ಸ್ಥಳ ಮತ್ತು ಬೂದಿ ಹೊಂಡದ ಸ್ಥಳವನ್ನು ಎತ್ತರಿಸುವುದನ್ನು ನಿರ್ದಿಷ್ಟಪಡಿಸಬೇಕು.

೭. ಸ್ಥಾವರದ ಪ್ರದೇಶ, ಬೂದಿ ಹೊಂಡ, ಹಸಿರು ಬೆಲ್ಟ್ ಪ್ರದೇಶ, ಮೂಲಸೌಕರ್ಯ, ರಸ್ತೆಗಳು ಇತ್ಯಾದಿಗಳನ್ನು ನಿರ್ದಿಷ್ಟಪಡಿಸಿ, ಸೂಚಿಸಿರುವ ಲೇಔಟ್ ಯೋಜನೆಯನ್ನು ಒದಗಿಸಬೇಕು.

೮. ಯೋಜನೆಗೆ ಅಗತ್ಯವಿರುವ ಭೂಮಿಯ ಗರಿಷ್ಠ ಉಪಯೋಗ ಪಡೆದುಕೊಳ್ಳಬೇಕು ಮತ್ತು ಇದು ಯಾವುದೇ ಸಂದರ್ಭದಲ್ಲಿಯೂ ಸಿಇಎದಿಂದ ಕಾಲ ಕಾಲಕ್ಕೆ ನಿರ್ದಿಷ್ಟಪಡಿಸಿದ್ದಕ್ಕಿಂತ ಹೆಚ್ಚು ಆಗಿರುವುದಿಲ್ಲ. ಯಾವುದಕ್ಕೆ ಎಷ್ಟು ಅಗತ್ಯವಿದೆ ಎಂದು ಭೂಮಿ ಅಗತ್ಯವನ್ನು ವಿಂಗಡಿಸಿ, ಪರಿಷ್ಕೃತ ಲೇಔಟ್ ಅನ್ನು (ಇಎಸಿಯಿಂದ ಮಾರ್ಪಾಡು ಮಾಡಿದಂತೆ) ಒದಗಿಸಬೇಕು.

೯. ಕಂದಾಯ ದಾಖಲೆಗಳ ಪ್ರಕಾರ ಪ್ರಸ್ತುತದ ಭೂ ಬಳಕೆ (ಪ್ರಸ್ತಾಪಿತ ಸ್ಥಳದ ಎಲ್ಲ ರೀತಿಯ ಅಡಚಣೆಗಳಿಂದ ಮುಕ್ತವಾದ ದಾಖಲೆಗಳನ್ನು ಒದಗಿಸಬೇಕು. ವಶಪಡಿಸಿಕೊಳ್ಳಲಾಗುವ ಭುಮಿಯ ಕುರಿತ ಮಾಹಿತಿ) ಏನಾದರೂ

ಇದ್ದಲ್ಲಿ, ಕಲ್ಲಿದ್ದಲು ಸಾಗಾಣಿಕೆ ವ್ಯವಸ್ಥೆ, ಜೊತೆಗೆ ಆರ್‌ಒಡಬ್ಲ್ಯು ಸೇರಿದಂತೆ ಪೈಪ್‌ಲೈನ್ ಹಾಕುವುದೂ ಒಳಗೊಂಡಂತೆ, ನಿರ್ದಿಷ್ಟವಾಗಿ ಉಲ್ಲೇಖಿಸಬೇಕು.

೧೦. ಭೂಮಿ ವಶಪಡಿಸಿಕೊಳ್ಳುವುದಕ್ಕೆ ಮತ್ತು ಆರ್ & ಆರ್ ಕಾರ್ಯಕ್ರಮಕ್ಕೆ ಸಂಬಂಧಿಸಿದ ಸಮಸ್ಯೆಗಳೊಂದಿಗೆ ಕಾಲಮಿತಿಯಿರುವ ಕ್ರಿಯಾಯೋಜನೆಯನ್ನು ರೂಪಿಸಿ, ಇಐಎ ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.

೧೧. ಅಧ್ಯಯನದ ಪ್ರದೇಶದಲ್ಲಿರುವ ಚರಂಡಿ/ಕಾಲುವೆಗಳು, ಬೆಳೆಗಳ ರೀತಿ, ನೀರಿನ ಮೂಲಗಳು (ಜೌಗುನೆಲ, ನದಿ ವ್ಯವಸ್ಥೆ, ತೊರೆಗಳು, ನಾಲೆಗಳು, ಕೆರೆಗಳು ಇತ್ಯಾದಿ), ಹತ್ತಿರದ ಹಳ್ಳಿಗಳ ಪ್ರದೇಶ, ಕೊಲ್ಲಿಗಳು, ಕಾಂಡಲು ಗಿಡಗಳು/ಮ್ಯಾಂಗ್ರೂವ್ಸ್, ನದಿಗಳು, ಜಲಾಶಯಗಳು ಇತ್ಯಾದಿಯನ್ನು ಉಪಗ್ರಹ ಚಿತ್ರ ಅಥವಾ ಅಧಿಕೃತತೆ ಇರುವ ಟೋಪೋ ಶೀಟ್ ಮೂಲಕ ಸೂಚಿಸಿ, ಸಲ್ಲಿಸಬೇಕು.

೧೨. ಯೋಜನಾ ಸ್ಥಳದ ೧೦ ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ರಾಷ್ಟ್ರೀಯ ಉದ್ಯಾನ, ಸಂರಕ್ಷಣಾಲಯ, ಆನೆ/ಹುಲಿ ಮೀಸಲು (ಈಗ ಇರುವ ಮತ್ತು ಪ್ರಸ್ತಾಪಿಸಲಾದ), ವಲಸೆ ಮಾರ್ಗಗಳು/ವನ್ಯಜೀವಿ ಕಾರಿಡಾರ್, ಏನಾದರೂ ಇದ್ದಲ್ಲಿ, ಅದನ್ನು ನಿರ್ದಿಷ್ಟಪಡಿಸಿ, ನಕ್ಷೆಯ ಮೇಲೆ ಸೂಚಿಸಿ, ಸಂಬಂಧ ಪಟ್ಟ ಪ್ರದೇಶದ ಮುಖ್ಯ ವನ್ಯಜೀವಿ ವಾರ್ಡನ್ ಕಚೇರಿಯಿಂದ ಸೂಕ್ತ ರೀತಿಯಲ್ಲಿ ಪ್ರಮಾಣೀಕರಿಸಿ, ಸಲ್ಲಿಸಬೇಕು.

೧೩. ಭಾರತೀಯ ಸರ್ವೇಕ್ಷಣಾ ಇಲಾಖೆಯ ೧:೫೦,೦೦೦ ಸ್ಕೇಲ್‌ನಲ್ಲಿ ಟೋಪೋ ಶೀಟ್ ಮೇಲೆ ಅಧ್ಯಯನ ಪ್ರದೇಶದ ಟೋಪೋಗ್ರಫಿಯನ್ನು ಸೂಚಿಸಿ, ಜೊತೆಗೆ ಒಂದು ದೊಡ್ಡ ಸ್ಕೇಲ್ ನಕ್ಷೆ, ೧:೨೫,೦೦೦ ಸ್ಕೇಲ್ ಇರುವಂತೆ ಮತ್ತು ಆ ಸ್ಥಳಕ್ಕೆ ಏನಾದರೂ ತುಂಬಿಸುವುದು (ಗುಂಡಿಮುಚ್ಚಿಸುವುದು/ಸಮತಟ್ಟಾಗಿಸುವುದು) ಅಗತ್ಯವಿದೆಯೇ ಎಂಬ ನಿರ್ದಿಷ್ಟ ಮಾಹಿತಿಯನ್ನು ಒದಗಿಸಬೇಕು. ಅಂತಹ ಸಂದರ್ಭದಲ್ಲಿ, ಗುಂಡಿ ಮುಚ್ಚಿಸುವ ಎಲ್ಲ ವಿವರಗಳು, ತುಂಬಬೇಕಾದ ಸಾಮಗ್ರಿಯ ಪ್ರಮಾಣ, ಅದರ ಮೂಲ, ಸಾಗಾಣಿಕೆ ಇತ್ಯಾದಿ ವಿವರಗಳನ್ನೂ ಸಲ್ಲಿಸಬೇಕು.

೧೪. ಅಧ್ಯಯನ ಸ್ಥಳದಲ್ಲಿ ಭೂ ಬಳಕೆ ವಿನ್ಯಾಸದ ಒಂದು ವಿವರವಾದ ಅಧ್ಯಯನವನ್ನು ಮಾಡಬೇಕು, ಇದು ಲಭ್ಯವಿರುವ ಸಾಮಾನ್ಯ ಆಸ್ತಿ ಮೂಲಗಳನ್ನು (ಅಂದರೆ ಗೋಮಾಳ ಮತ್ತು ಸಮುದಾಯ ಭೂಮಿ, ನೀರಿನ ಸಂಪನ್ಮೂಲಗಳು ಇತ್ಯಾದಿ) ಗುರುತಿಸುವುದನ್ನೂ ಒಳಗೊಂಡಿರಬೇಕು ಮತ್ತು ಅದರ ಸಂರಕ್ಷಣೆ ಹಾಗೂ ನಿರ್ವಹಣೆಗೆ ಕ್ರಿಯಾಯೋಜನೆಯನ್ನು ರೂಪಿಸಬೇಕು. ಗೋಮಾಳವನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ಒಳಗೊಂಡಿದ್ದರೆ, ಗೋಮಾಳದ ಜಾಗದಷ್ಟೇ ಪ್ರದೇಶವನ್ನು ಬೇರೆಡೆ ಪರ್ಯಾಯವಾಗಿ ಅಭಿವೃದ್ಧಿಪಡಿಸಲಾಗುವುದು ಎಂಬುದನ್ನು ಖಾತ್ರಿಪಡಿಸಬೇಕು ಮತ್ತು ಅದರ ವಿವರವಾದ ಯೋಜನೆಯನ್ನು ಸಲ್ಲಿಸತಕ್ಕದ್ದು.

೧೫. ಪ್ರಸ್ತಾಪಿತ ಸ್ಥಳದ ಖನಿಜಶಾಸ್ತ್ರೀಯ ನಕ್ಷೆಯನ್ನು (ಮಣ್ಣಿನ ವಿಧವನ್ನೂ ಒಳಗೊಂಡು) ಮತ್ತು ಸ್ಥಳವು ಆರ್ಥಿಕವಾಗಿ ವ್ಯವಹಾರಾರ್ಯ/ಕಾರ್ಯಸಾಧ್ಯ ಖನಿಜ ನಿಕ್ಷೇಪದ ಪ್ರದೇಶದಲ್ಲಿ ಇಲ್ಲ ಎಂಬ ಮಾಹಿತಿಯನ್ನು (ಲಭ್ಯವಿದ್ದರೆ) ಸಲ್ಲಿಸಬೇಕು.

೧೬. ತೀರಾ ಇತ್ತೀಚಿನ ಭಾರತ ಸರ್ಕಾರದ ಹಾರು ಬೂದಿ ಸದ್ಬಳಕೆ ಅಧಿಸೂಚನೆಯ ಪ್ರಕಾರ ಶೇ. ೧೦೦ರಷ್ಟು ಹಾರು ಬೂದಿ ಸದ್ಬಳಕೆ ಯೋಜನೆಯ ವಿವರಗಳನ್ನು, ಜೊತೆಗೆ ಬೇರೆ ಬಳಕೆಗಳೂ ಸೇರಿದಂತೆ ಗುತ್ತಿಗೆ ಪಕ್ಷಗಳೊಂದಿಗೆ ಮಾಡಿಕೊಂಡ ಈ ಕುರಿತ ದೃಢವಾದ ಒಪ್ಪಂದಗಳು/ಎಂಒಯುವನ್ನು ಸಲ್ಲಿಸತಕ್ಕದ್ದು.

ಯೋಜನೆಯಲ್ಲಿ ತಳದಲ್ಲಿ ಉಳಿಯುವ ಬೂದಿಯ ವಿಲೇವಾರಿ ವಿಧಾನ/ಕಾರ್ಯವಿಧಾನವನ್ನೂ ಸೇರಿಸಿರಬೇಕು.

೦೭. ನೀರಿನ ಅಗತ್ಯವನ್ನು, ಕಾಲಕಾಲಕ್ಕೆ ಸಿಇಎ ವಿಧಿಸಿದ ಮಾನದಂಡಗಳ ಪ್ರಕಾರ ಲೆಕ್ಕಹಾಕಿ, ನೀರು ಸಮತೋಲನ ರೇಖಾಚಿತ್ರದೊಂದಿಗೆ ಸಲ್ಲಿಸಬೇಕು. ದ್ರವ ತ್ಯಾಜ್ಯದ ಮರುಬಳಕೆ ಮತ್ತು ಪುನರ್-ಪರಿಚಲನೆಯನ್ನು ವಿಶದವಾಗಿ ನಿರ್ದಿಷ್ಟಪಡಿಸಿ, ಅದನ್ನು ಪರಿಗಣನೆಗೆ ತೆಗೆದುಕೊಂಡು ನೀರಿನ ಸಮತೋಲನದ ವಿವರಗಳನ್ನು ಲೆಕ್ಕ ಹಾಕಬೇಕು.

೦೮. ಸ್ಥಳದ ಮೂಲಕ ಹಾದುಹೋಗುವ ನೀರಿನ ಮೂಲ/ನಾಲಾ (ಯಾವುದಾದರೂ ಇದ್ದಲ್ಲಿ), ಸಾಧ್ಯವಿದ್ದಷ್ಟೂ ಅದಕ್ಕೆ ತೊಂದರೆ/ಅಡ್ಡಿಪಡಿಸಬಾರದು. ನಾಲಾ/ಚರಂಡಿಯನ್ನು ಬೇರೆಡೆ ತಿರುಗಿಸಬೇಕು ಎಂದಾದಲ್ಲಿ, ಹಾಗೆ ತಿರುಗಿಸುವಿಕೆಯು ಆ ಪ್ರದೇಶದ ಸ್ವಾಭಾವಿಕ ಚರಂಡಿನೀರು ಹರಿವಿನ ವಿನ್ಯಾಸಕ್ಕೆ ಅಡ್ಡಿಯಾಗುವುದಿಲ್ಲ ಎನ್ನುವುದನ್ನು ಖಾತ್ರಿಪಡಿಸಬೇಕು. ಹಾಗೆ ತಿರುಗಿಸುವಿಕೆಯ ಅಗತ್ಯವಾದ ವಿವರಗಳನ್ನು ನೀಡಿ, ಅದನ್ನು ಸಂಬಂಧಿತ ಇಲಾಖೆಯಿಂದ ಸೂಕ್ತರೀತಿಯಲ್ಲಿ ಮಂಜೂರಾತಿ ಪಡೆದುಕೊಳ್ಳಬೇಕು.

೦೯. ನದಿ ವ್ಯವಸ್ಥೆ/ತೊರೆ ಇತ್ಯಾದಿಗಳ ಎಚ್ಎಫ್ಎಲ್‌ನಿಂದ ಕನಿಷ್ಠ ೫೦೦ ಮೀ. ದೂರ ಸ್ಥಾವರ/ಘಟಕ ಗಡಿಯನ್ನು ಇಟ್ಟುಕೊಳ್ಳುವುದನ್ನು ಖಾತ್ರಿಪಡಿಸಬೇಕು.

೧೦. ಆ ಪ್ರದೇಶದ ಜಲ-ಭೌಗೋಳಿಕ ಅಧ್ಯಯನವನ್ನು ಅಂತರ್ಜಲ ಮತ್ತು ಮೇಲ್ಮೈ ನೀರಿನ ಕ್ಷೇತ್ರಗಳ ಪರಿಣಾಮ/ಪ್ರಭಾವವನ್ನು ಮೌಲ್ಯಮಾಪನ ಮಾಡುವಲ್ಲಿ ಹೆಸರಾಗಿರುವ ಒಂದು ಸಂಸ್ಥೆ/ಸಂಘದ ಮೂಲಕ ಮಾಡಿಸಬೇಕು. ನಿರ್ದಿಷ್ಟ ಪರಿಹಾರ ಕ್ರಮಗಳನ್ನು ಖಚಿತವಾಗಿ ಹೇಳಬೇಕು ಮತ್ತು ಅದರ ಅನುಷ್ಠಾನಕ್ಕಾಗಿ ಒಂದು ಕಾಲಮಿತಿ ಕ್ರಿಯಾಯೋಜನೆಯನ್ನು ಸಲ್ಲಿಸಬೇಕು.

೧೧. ನದಿ/ಕೊಲ್ಲಿ/ಸಮುದ್ರದಿಂದ ಪ್ರಸ್ತಾಪಿತ ನೀರನ್ನು ತೆಗೆದುಕೊಳ್ಳುವುದು/ ಅವಕ್ಕೆ ಸಂಸ್ಕರಿತ ತ್ಯಾಜ್ಯನೀರನ್ನು ಬಿಡುವುದರಿಂದ ನದಿ/ಕೊಲ್ಲಿ/ಸಮುದ್ರದ ಮೀನುಗಾರಿಕೆ ಮೇಲಾಗುವ ಪರಿಣಾಮವೂ ಸೇರಿದಂತೆ ಪರಿಸರದ ಮೇಲಾಗುವ ಪರಿಣಾಮಗಳ ವಿವರವಾದ ಅಧ್ಯಯನವನ್ನು ನಡೆಸಬೇಕು ಮತ್ತು ಅದನ್ನು ಇಐಎ ವರದಿಯ ಜೊತೆ ಸಲ್ಲಿಸಬೇಕು. ಕಡಲಿನ ಮೇಲಾಗುವ ಪರಿಣಾಮಗಳ ಮೌಲ್ಯಾಂಕನ ಅಧ್ಯಯನದ ಅಗತ್ಯವಿದ್ದರೆ, ನೀರನ್ನು ತೆಗೆದುಕೊಳ್ಳುವ ಮತ್ತು ನೀರನ್ನು ಬಿಡುವ ಸ್ಥಳಗಳನ್ನು ಎಷ್ಟು ಆಳದಿಂದ ನೀರನ್ನು ತೆಗೆದುಕೊಳ್ಳಲಾಗುತ್ತದೆ ಮತ್ತು ನೀರನ್ನು ಸಮುದ್ರಕ್ಕೆ ಬಿಡಲಾಗುತ್ತದೆ ಎಂಬ ವಿವರವೂ ಸೇರಿದಂತೆ ಸ್ಪಷ್ಟವಾಗಿ ನಿರ್ದಿಷ್ಟಪಡಿಸಿರಬೇಕು.

೧೨. ನೀರು ಕಡಿಮೆ ಇರುವ ಋತುವಿನಲ್ಲಿ ಕೂಡ ನೀರಿನ ಮೂಲ ಮತ್ತು ಅದರ ಸುಸ್ಥಿರತೆಯನ್ನು, ನೀರು ತೆಗೆದುಕೊಳ್ಳುವುದರಿಂದ ಉಂಟಾಗಬಹುದಾದ ಪಾರಿಸರಿಕ ಪರಿಣಾಮಗಳ ವಿವರಗಳೊಂದಿಗೆ, ಅಂತರರಾಜ್ಯ ಪಾಲನ್ನೂ (ಏನಾದರೂ ಇದ್ದಲ್ಲಿ) ಪರಿಗಣನೆಗೆ ತೆಗೆದುಕೊಂಡು, ಸ್ಪಷ್ಟವಾದ ವಿವರಗಳೊಂದಿಗೆ ಸಲ್ಲಿಸಬೇಕು. ಪ್ರಸ್ತಾಪಿತ ಯೋಜನೆಯ ಸ್ಥಳದ ಬೇರೆ ಪ್ರವಾಹ/ನದೀಹರಿವಿನ ದಿಕ್ಕಿನ ಮೂಲಗಳ ಮಾಹಿತಿಯನ್ನು ನೀಡಬೇಕು. ಕಾಂಪಿಟಂಟ್ ಅಥಾರಿಟಿಯಿಂದ ಅಗತ್ಯ ಪ್ರಮಾಣದ ನೀರಿನ ಲಭ್ಯತೆಯ ಕುರಿತ ಬದ್ಧತೆಯನ್ನು, ನಿಶ್ಚಿತ ನೀರಿನ ಹಂಚಿಕೆಯನ್ನು ಉಲ್ಲೇಖಿಸಿದ ಪತ್ರ/ವರದಿಯನ್ನೂ ಇದರೊಂದಿಗೆ ಸಲ್ಲಿಸಬೇಕು.

೧೩. ಮಳೆನೀರು ಕೊಯ್ಲು ಮಾಡಲು ಮತ್ತು ಸ್ಥಾವರದಲ್ಲಿ ಅದರ ಪ್ರಸ್ತಾಪಿತ ಬಳಕೆಯ ಕುರಿತ ವಿವರವಾದ ಯೋಜನೆಯನ್ನು ಒದಗಿಸಬೇಕು.

೧೪. ಶೂನ್ಯ ತ್ಯಾಜ್ಯಹರಿವು ಕಾರ್ಯಸಾಧ್ಯತೆಯನ್ನು ವಿವೇಚನಾಪೂರ್ವಕವಾಗಿ ಪರೀಕ್ಷಿಸಿ, ಅದರ ವಿವರಗಳನ್ನು ಸಲ್ಲಿಸಬೇಕು.

೧೫. ಸಿಒಸಿಯ ಅತ್ಯುತ್ತಮ ಬಳಕೆಯೊಂದಿಗೆ ಯೋಜನೆಯಲ್ಲಿ ನೀರಿನ ಇನ್ನಿತರ ಸಂರಕ್ಷಣಾ ಕ್ರಮಗಳ ಕುರಿತು ನಿರ್ದಿಷ್ಟಪಡಿಸಬೇಕು.

೧೬. ಬೂದಿ ಹೊಂಡದ ನೀರಿನ ಪುನರ್-ಪರಿಚಲನೆಗೆ ಯೋಜನೆ ಮತ್ತು ಅದರ ಅನುಷ್ಠಾನವನ್ನು ನಿರ್ದಿಷ್ಟಪಡಿಸಿ, ಸಲ್ಲಿಸಬೇಕು.

೧೭. ದಾಖಲೆಗಳ ಸೂಕ್ತ ನಿರ್ವಹಣೆಯೊಂದಿಗೆ ನೀರಿನ ಗುಣಮಟ್ಟವನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡುವ ವಿವರವಾದ ಯೋಜನೆಯನ್ನು ರೂಪಿಸತಕ್ಕದ್ದು. ಮೇಲ್ವಿಚಾರಣಾ ಸ್ಥಳಗಳ ಗುರುತಿಸುವಿಕೆ (ಸ್ಥಾವರ ಮತ್ತು

ಮೇಲ್ಮೈ ನೀರು/ಅಂತರ್ಜಲ ಹರಿವಿನ ದಿಕ್ಕಿನಲ್ಲಿರುವ ಚರಂಡಿ/ನಾಲೆಯ ಮಧ್ಯೆ) ಮತ್ತು ಕಾರ್ಯವಿಧಾನದ ವಿವರಗಳನ್ನು ಸಲ್ಲಿಸತಕ್ಕದ್ದು, ಮೇಲ್ವಿಚಾರಣೆ ಮಾಡಲಾಗುವ ಪ್ರಮಿತಿ/ಅಂಶಗಳಲ್ಲಿ ಭಾರ ಲೋಹಗಳೂ ಸೇರಿರುತ್ತವೆ ಎಂಬುದನ್ನು ಖಾತ್ರಿಪಡಿಸಬೇಕು.

೧೮. ಸ್ಥಾವರದ ಸ್ಥಳದ ೧೦ ಕಿ.ಮೀ. ವ್ಯಾಪ್ತಿಯನ್ನು ಒಳಗೊಂಡ ಅಧ್ಯಯನ ಸ್ಥಳದಲ್ಲಿ ಸಾಮಾಜಿಕ-ಆರ್ಥಿಕ ಅಧ್ಯಯನವನ್ನು ಪ್ರತಿಷ್ಠಿತ ಸಂಸ್ಥೆ/ಏಜೆನ್ಸಿಗಳಿಂದ ನಡೆಸಬೇಕು, ಅದು ಸ್ಥಳೀಯ ಸಮುದಾಯಗಳ ಜೀವನೋಪಾಯದ ಮೇಲೆ ಆಗುವ ಪರಿಣಾಮದ ವಿವರವಾದ ಮೌಲ್ಯಾಂಕನವನ್ನೂ ಒಳಗೊಂಡಿರಬೇಕು.

೧೯. ಯೋಜನೆಗೆ ಪ್ರಸ್ತುತತೆ ಇರುವ ಕೌಶಲಗಳಲ್ಲಿ ತರಬೇತಿ ನೀಡಿ, ಯೋಜನೆಯಲ್ಲಿಯೇ ಅವರಿಗೆ ಉದ್ಯೋಗಾವಕಾಶ ನೀಡಲು ಸ್ಥಳೀಯ ಉದ್ಯೋಗಾರ್ಹ ಯುವಜನತೆಯನ್ನು ಗುರುತಿಸಲು ಕ್ರಿಯಾಯೋಜನೆಯನ್ನು ರೂಪಿಸಬೇಕು ಮತ್ತು ಯೋಜನೆಯ ಕಾಮಗಾರಿ ಹಾಗೂ ಕಾರ್ಯಾಚರಣೆಯ ಹಂತಗಳಲ್ಲಿ ಎಷ್ಟು ಜನರನ್ನು ಹಾಗೆ ತೆಗೆದುಕೊಳ್ಳಲಾಗುವುದು ಎಂದು ಸಂಖ್ಯೆಯನ್ನು ನಿರ್ದಿಷ್ಟಪಡಿಸಬೇಕು.

೨೦. ಆ ಪ್ರದೇಶವು ಬುಡಕಟ್ಟು ಜನರನ್ನು ಹೊಂದಿದ್ದರೆ, ಬುಡಕಟ್ಟು ಜನರ ಹಕ್ಕುಗಳನ್ನು ರಕ್ಷಿಸಲಾಗುತ್ತದೆ ಎಂದು ಖಾತ್ರಿಪಡಿಸಬೇಕು. ಯೋಜನಾ ಪ್ರಸ್ತಾಪಕರು ಕಾಯಿದೆಯ ವಿವಿಧ ಪ್ರಾವಧಾನಗಳ ಅಡಿಯಲ್ಲಿ ಬುಡಕಟ್ಟು ಸಮಸ್ಯೆಗಳನ್ನು ಗುರುತಿಸಬೇಕು.

೨೧. ಒಂದು ವಿವರವಾದ ಸಿಎಸ್ಆರ್ ಯೋಜನೆಯನ್ನು, ಹಣಕಾಸು ಹೊಣೆಗಾರಿಕೆಯ ಚಟುವಟಿಕೆವಾರು ಹಂಚಿಕೆಯೊಂದಿಗೆ ಸಿದ್ಧಪಡಿಸಬೇಕು. ಅಗತ್ಯಾಧಾರಿತ ಮೌಲ್ಯಾಂಕನ ಅಧ್ಯಯನವನ್ನು ಪರಿಗಣಿಸಿ ಸಿಎಸ್ಆರ್ ಘಟಕವನ್ನು ಗುರುತಿಸಬೇಕು. ಸಮಾಜದ ಬಡವರ್ಗವನ್ನು ಮೇಲೆತ್ತುವಲ್ಲಿ ಸಹಾಯಕವಾಗಬಲ್ಲ ಹಾಗೂ ಸ್ಥಳೀಯ ಜನರ ಸಾಂಪ್ರದಾಯಿಕ ಕೌಶಲಗಳಿಗೆ ಸರಿಹೊಂದಬಲ್ಲ ಸುಸ್ಥಿರ ಆದಾಯ ಉತ್ಪಾದನಾ ಕ್ರಮಗಳನ್ನು ಗುರುತಿಸಬೇಕು. ಸಮುದಾಯ ಅಭಿವೃದ್ಧಿ ಚಟುವಟಿಕೆಗಳಿಗೆ ಪ್ರತ್ಯೇಕ ಆಯವ್ಯಯ ಮತ್ತು ಆದಾಯ ಉತ್ಪಾದನಾ ಕಾರ್ಯಕ್ರಮಗಳನ್ನು ನಿರ್ದಿಷ್ಟಪಡಿಸಬೇಕು.

೨೨. ಸಿಎಸ್ಆರ್ ಕಾರ್ಯಕ್ರಮಗಳನ್ನು ರೂಪಿಸುವಾಗ, ಕಾರ್ಯಕ್ರಮಗಳಿಗೆ ಒಂದು ಅಂತರ್ಗತ ಮೇಲ್ವಿಚಾರಣಾ ಕಾರ್ಯವಿಧಾನ ಇರುವುದನ್ನು ಖಾತ್ರಿಪಡಿಸಬೇಕು ಮತ್ತು ಆ ಪ್ರದೇಶದ ಹತ್ತಿರದ ಪ್ರತಿಷ್ಠಿತ ಸರ್ಕಾರಿ ಸಂಸ್ಥೆಯೊಂದರಿಂದ ವಾರ್ಷಿಕ ಸಾಮಾಜಿಕ ತಃಖ್ತೆ/ಪರಿಶೋಧನೆಯನ್ನು ನಡೆಸಲು ಕಾರ್ಯವಿಧಾನವನ್ನು ಸಿದ್ಧಪಡಿಸಬೇಕು. ಯೋಜನೆ ಪ್ರಸ್ತಾಪಕರು ಕಾಲ ಕಾಲಕ್ಕೆ ಕಾರ್ಯಕ್ರಮದ ಅನುಷ್ಠಾನದ ಸ್ಥಿತಿಗತಿಯ ಕ್ರಿಯಾಯೋಜನೆಯನ್ನು ಒದಗಿಸಬೇಕು ಮತ್ತು ಅದನ್ನು ಯಾವುದಾದರೂ ಸರ್ಕಾರಿ ಕಾರ್ಯಕ್ರಮ(ಗಳ)ದ ಜೊತೆ ಕೂಡಿಸಬೇಕು. ಯೋಜನೆಯ ವಿಸ್ತರಣೆಯ ಸಂದರ್ಭದಲ್ಲಿ ಹಿಂದೆ ಮಾಡಿರುವ ಸಿಎಸ್ಆರ್ ಚಟುವಟಿಕೆಗಳ ವಿವರಗಳನ್ನು ಸ್ಪಷ್ಟವಾಗಿ ಹೇಳಬೇಕು.

೨೩. ಆರ್ ಮತ್ತು ಆರ್ ಯೋಜನೆಯನ್ನು, ಅದಕ್ಕೆ ಅನ್ವಯಿಸುವಂತೆ, ರೂಪಿಸಬೇಕು, ಇದರಲ್ಲಿ ಪರಿಣಾಮಕ್ಕೆ ಒಳಗಾಗಬಹುದಾದ ಆ ಪ್ರದೇಶದ ಜನರ ಹಕ್ಕುಗಳು ಮತ್ತು ಜೀವನೋಪಾಯವನ್ನು ಸಂರಕ್ಷಿಸಲು ಕಾರ್ಯವಿಧಾನವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಆರ್ ಮತ್ತು ಆರ್ ಯೋಜನೆಯನ್ನು ಯೋಜನೆಯಡಿಯಲ್ಲಿ ಬರುವ ಭೂಮಿಯ ಮೇಲೆ ಅವಲಂಬಿತರಾದ ಹಾಗೂ ತಮ್ಮ ಸ್ವಂತದ್ದಲ್ಲದ ಭೂಮಿಯ ಮೇಲೆ ಅವಲಂಬಿತರಾದ ಜನರ ಸಾಮಾಜಿಕ-ಆರ್ಥಿಕ ಸಮೀಕ್ಷೆಯನ್ನು ಆಧರಿಸಿದ ವಿವರವಾದ ಜನಗಣತಿಯ ನಂತರ ರೂಪಿಸಬೇಕು.

೨೪. ಪಾರಿಸರಿಕ ಮೂಲದ ಸ್ಥಳೀಕ ಕಾಯಿಲೆಗಳ ಅರ್ಥದಲ್ಲಿ ಔದ್ಯೋಗಿಕ ಆರೋಗ್ಯದ ಮೌಲ್ಯಮಾಪನವನ್ನು ನಡೆಸಬೇಕು ಮತ್ತು ಅದನ್ನು ಪರಿಹರಿಸುವುದಕ್ಕಾಗಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಬೇಕು.

೨೫. ಕೆಲಸಕ್ಕೆ ಸಂಬಂಧಿತ ಆರೋಗ್ಯ ಅಪಾಯಗಳನ್ನು ಗುರುತಿಸುವುದೂ ಸೇರಿದಂತೆ ಕೆಲಸಗಾರರ ಔದ್ಯೋಗಿಕ ಆರೋಗ್ಯ ಮತ್ತು ಸುರಕ್ಷತಾ ಕ್ರಮಗಳನ್ನು ರೂಪಿಸಬೇಕು. ಔದ್ಯೋಗಿಕ ಆರೋಗ್ಯದ ವಿಚಾರದಲ್ಲಿ ತರಬೇತಿ ಪಡೆದಿರುವ ಕಂಪನಿಯು ಅರ್ಹತೆಯಿರುವ ವೈದ್ಯರನ್ನು ಪೂರ್ಣಾವಧಿ ಇಟ್ಟುಕೊಳ್ಳಬೇಕು. ಕೆಲಸಗಾರರ ಆರೋಗ್ಯ ಮೇಲ್ವಿಚಾರಣೆಯನ್ನು ನಿಯತಕಾಲಿಕ ಅವಧಿಗೊಮ್ಮೆ ನಡೆಸಬೇಕು ಮತ್ತು ಆರೋಗ್ಯದ ದಾಖಲೆಗಳನ್ನು ನಿರ್ವಹಣೆ ಮಾಡಬೇಕು. ಕೆಲಸಗಾರರಿಗೆ ಅನನುಕೂಲಕರ ವಾತಾವರಣದಲ್ಲಿ ಕೆಲಸ ಮಾಡುವುದರಿಂದ ಅವರ ಆರೋಗ್ಯದ

ಮೇಲಾಗಬಹುದಾದ ಅಡ್ಡ/ಪ್ರತಿಕೂಲ ಪರಿಣಾಮಗಳ ಕುರಿತ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಬೇಕು ಮತ್ತು ಸಿಬ್ಬಂದಿ ಸಾಧನಗಳ ಬಳಕೆ ಇತ್ಯಾದಿಯಂತಹ ಮುನ್ನೆಚ್ಚರಿಕೆ ಕ್ರಮಗಳನ್ನು ಒದಗಿಸಬೇಕು. ತೆಗೆದುಕೊಳ್ಳಲಾದ ವಿವಿಧ ಆರೋಗ್ಯ ಕ್ರಮಗಳ ಪರಿಶೀಲನೆಯನ್ನು ಎರಡು ವರ್ಷಗಳಿಗೊಮ್ಮೆ ನಡೆಸಬೇಕು, ಜೊತೆಗೆ ಅಗತ್ಯವಿದ್ದಲ್ಲಿ ಅತ್ಯುತ್ತಮವಾದ ಅನುಸರಣಾ ಕ್ರಿಯಾಯೋಜನೆಯನ್ನೂ ಅಳವಡಿಸಿಕೊಳ್ಳಬೇಕು.

೩೬. ೧೬.೧೧.೨೦೦೯ ದಿನಾಂಕದ ಎಂಒಇಎಫ್ ಅಧಿಸೂಚನೆಯ ಪ್ರಕಾರ ಒಂದು ಪೂರ್ಣ ಋತು ಸ್ಥಳ ನಿರ್ದಿಷ್ಟ ಪವನಶಾಸ್ತ್ರೀಯ ಮತ್ತು ಎಎಕ್ಯು ದತ್ತಾಂಶಗಳನ್ನು ಸಂಗ್ರಹಿಸಬೇಕು ಮತ್ತು ಮೇಲ್ವಿಚಾರಣೆಯ ದಿನಾಂಕಗಳನ್ನು ದಾಖಲಿಸಬೇಕು. ಎಎಕ್ಯು ಅಡಿಯಲ್ಲಿ ಒಳಗೊಳ್ಳಲಾದ ಪ್ರಮಿತಿ/ಅಂಶಗಳು ಎಸ್‌ಪಿಎಂ, ಆರ್‌ಎಸ್‌ಪಿಎಂ (ಪಿಎಂ ೧೦, ಪಿಎಂ ೨.೫), SO2, NOx, Hg ಮತ್ತು O3 (ನೆಲದ ಮಟ್ಟದಲ್ಲಿ) ಇವುಗಳನ್ನು ಒಳಗೊಂಡಿರಬೇಕು. ಗರಿಷ್ಠ ನೆಲಮಟ್ಟದ ಅನಿಲ ಸಾಂದ್ರತೆ ಉಂಟಾಗಬಹುದಾದ ಸಾಧ್ಯತೆ ಇರುವ ಸ್ಥಳದಲ್ಲಿ ಗಾಳಿಗೆ ಎದುರಾದ ದಿಕ್ಕಿನಲ್ಲಿ ಮತ್ತು ಹೆಚ್ಚುಮುಖ್ಯವಾದ ಗಾಳಿ ಬೀಸುವ ದಿಕ್ಕಿನಲ್ಲಿ ಕನಿಷ್ಠ ಒಂದಾದರೂ ಮೇಲ್ವಿಚಾರಣಾ ನಿಲ್ದಾಣ/ ಸ್ಟೇಷನ್ ಇರಬೇಕು.

೩೭. ಅಧ್ಯಯನ ಪ್ರದೇಶದಲ್ಲಿ ಸದ್ಯ ಇರುವ ಮತ್ತು ಪ್ರಸ್ತಾಪಿತ ಕೈಗಾರಿಕೆಗಳ ಒಂದು ಪಟ್ಟಿಯನ್ನು ಒದಗಿಸಬೇಕು.

೩೮. ಆ ಪ್ರದೇಶದ ಎಎಕ್ಯು ಮೇಲೆ ಎಲ್ಲ ಮೂಲಗಳಿಂದ ಹೊರಸೂಸುವಿಕೆಗಳ (ಸಾರಿಗೆಯೂ ಸೇರಿದಂತೆ) ಸಂಚಯಿತ ಪ್ರಮಾಣವನ್ನು ಚೆನ್ನಾಗಿ ಮೌಲ್ಯಾಂಕನ ಮಾಡಬೇಕು. ಬಳಸಿದ ಮಾದರಿ(ಮಾಡೆಲ್)ಯ ವಿವರಗಳು ಮತ್ತು ಮಾಡೆಲಿಂಗ್‌ಗೆ ಬಳಸಿದ ಒಳಸುರಿ ದತ್ತಾಂಶಗಳನ್ನೂ ಒದಗಿಸಬೇಕು. ಗಾಳಿಯ ಗುಣಮಟ್ಟ ಸಮೋನ್ನತ ರೇಖೆಯನ್ನು ಆ ಪ್ರದೇಶದ ನಕ್ಷೆಯ ಮೇಲೆ, ಯೋಜನೆ ಸ್ಥಳದ ಪ್ರದೇಶ, ಹತ್ತಿರದ ಜನವಸತಿ, ಸಂವೇದನಾಶೀಲ ಗ್ರಾಹಕಗಳು (ಏನಾದರೂ ಇದ್ದಲ್ಲಿ) ತೋರಿಸುವಂತೆ ಚಿತ್ರಿಸಬೇಕು. ಪ್ರದೇಶದ ನಕ್ಷೆಯ ಮೇಲೆ ಗಾಳಿ ಮೇಲೇಳುವುದನ್ನೂ ತೋರಿಸಬೇಕು.

೩೯. ಸ್ಥಾವರಕ್ಕೆ ಒದಗಿಸಲಾಗುವ ಕಲ್ಲಿದ್ದಲಿನ ವಿಕಿರಣಪಟುತ್ವ(ರೇಡಿಯೋ ಆಕ್ಟಿವಿಟಿ) ಮತ್ತು ಭಾರ ಲೋಹಗಳ ಪ್ರಮಾಣವನ್ನು ಪರೀಕ್ಷಿಸಿ, ಪ್ರಯೋಗಾಲಯಗಳ ವರದಿಗಳೊಡನೆ ಸಲ್ಲಿಸಬೇಕು.

೪೦. ಇಂಧನ ವಿಶ್ಲೇಷಣೆಯನ್ನು ಒದಗಿಸಬೇಕು. ಪೂರಕ/ಹೆಚ್ಚುವರಿ ಇಂಧನ, ಏನಾದರೂ ಇದ್ದಲ್ಲಿ ಅದರ ಪ್ರಮಾಣ, ಗುಣಮಟ್ಟ, ದಾಸ್ತಾನು ಇತ್ಯಾದಿ ಎಲ್ಲ ವಿವರಗಳನ್ನು ಒದಗಿಸಬೇಕು.

೪೧. ಅಗತ್ಯವಿರುವ ಇಂಧನದ ಪ್ರಮಾಣ, ಅದರ ಮೂಲ ಮತ್ತು ಗುಣಲಕ್ಷಣಗಳು, ದೃಢಗೊಂಡ ಇಂಧನ ಕೊಂಡಿಯನ್ನು ಸಮರ್ಥಿಸುವ ದಾಖಲುಗೊಂಡ ಸಾಕ್ಷ್ಯವನ್ನು ಒದಗಿಸಬೇಕು.

೪೨. ಇಂದನದ ಮೂಲದಿಂದ ಪ್ರಸ್ತಾಪಿತ ಸ್ಥಾವರಕ್ಕೆ ಇಂಧನ ಸಾಗಾಣಿಕೆಯ (ಬಂದರಿನಲ್ಲಿ ನಿಭಾವಣೆಯನ್ನೂ ಸೇರಿಸಿ) ವಿವರಗಳನ್ನು ಮತ್ತು ಸುತ್ತುವರಿದ ಎಎಕ್ಯು ಮೇಲೆ ಅದರ ಪರಿಣಾಮವನ್ನು ಸೂಕ್ತರೀತಿಯಲ್ಲಿ ಮೌಲ್ಯಮಾಪನ ಮಾಡಿ, ಸಲ್ಲಿಸತಕ್ಕದ್ದು. ಸಾಗಾಣಿಕೆಯು ಹೆಚ್ಚು ದೂರವನ್ನು ಒಳಗೊಂಡಿದ್ದರೆ, ಸ್ಥಳಕ್ಕೆ ರೈಲು ಸಾಗಾಣಿಕೆಯನ್ನು ಮೊದಲು ಮೌಲ್ಯಮಾಪನ ಮಾಡಬೇಕು. ಇಂಧನದ ಮೂಲದಲ್ಲಿಯೇ ಬೋಗಿ/ವ್ಯಾಗನ್‌ಗೆ ಸರಕು ತುಂಬಿಸುವುದು ಸಿಲೊ/ಕನ್ವೇಯರ್ ಬೆಲ್ಟಿನ ಮೂಲಕ ಮಾಡಿದರೆ ಒಳ್ಳೆಯದು.

೪೩. ಆಮದಾದ ಕಲ್ಲಿದ್ದಲನ್ನು ಆಧರಿಸಿದ ಪ್ರಸ್ತಾವನೆಗಳಿಗೆ, ಒಳಾಂತರ ಸಾರಿಗೆ ಮತ್ತು ಬಂದರಿನಲ್ಲಿ ನಿಭಾವಣೆ ಮತ್ತು ರೋಲಿಂಗ್ ಸ್ಟಾಕ್ಸ್/ರೈಲು ಚಲನೆಯಲ್ಲಿ ಇಕ್ಕಟ್ಟಾದ ಸ್ಥಳಗಳನ್ನು ತುಂಬ ಸೂಕ್ಷ್ಮವಾಗಿ ಪರೀಕ್ಷಿಸಬೇಕು ಮತ್ತು ವಿವರಗಳನ್ನು ಒದಗಿಸಬೇಕು.

೪೪. ನಿರ್ಮಾಣದ ಸಂದರ್ಭದಲ್ಲಿ ಕಾಮಗಾರಿ ಕಾರ್ಮಿಕರಿಗೆ ಹಾಗೂ ಕಾರ್ಯಾಚರಣೆಯ ಹಂತದಲ್ಲಿ ಲಾರಿ ಚಾಲಕರೂ ಸೇರಿದಂತೆ ಸಾಮಾನ್ಯ ಕೆಲಸಗಾರರಿಗೆ ಒದಗಿಸಲಾಗುವ ನೈರ್ಮಲ್ಯ, ಇಂಧನ, ವಿಶ್ರಾಂತಿ ಕೊಠಡಿಗಳು, ವೈದ್ಯಕೀಯ ಸೌಲಭ್ಯಗಳು, ನಿರ್ಮಾಣ ಹಂತದಲ್ಲಿ ಸುರಕ್ಷತೆ ಇತ್ಯಾದಿ ಮೂಲಸೌಕರ್ಯಗಳನ್ನು ಸಮರ್ಪಕ ರೀತಿಯಲ್ಲಿ ಒದಗಿಸಬೇಕು ಮತ್ತು ಆ ವಿವರಗಳನ್ನು ಸಲ್ಲಿಸಬೇಕು.

೪೫. ಯೋಜನೆಯಿಂದ ಆಗುವ ಪ್ರತಿಕೂಲ ಪರಿಣಾಮಗಳನ್ನು ನಿವಾರಿಸಲು ಇಎಂಪಿಯನ್ನು ಪ್ರತೀ ಘಟಕವಾರು ವೆಚ್ಚದೊಂದಿಗೆ ಒಂದು ಕಾಲಮಿತಿಯಲ್ಲಿ ಅವುಗಳ ಅನುಷ್ಠಾನವನ್ನು ನಿರ್ದಿಷ್ಟಪಡಿಸಬೇಕು.

೪೬. ಒಂದು ವಿಕೋಪ ನಿರ್ವಹಣಾ ಯೋಜನೆ (ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಪ್ಲಾನ್ - ಡಿಎಂಪಿ)ಯನ್ನು ಇಂಧನದ ದಾಸ್ತಾನು ಮತ್ತು ಬಳಕೆಯಿಂದ ಉಂಟಾಗಬಹುದಾದ ಬೆಂಕಿ ಮತ್ತು ಸ್ಫೋಟದ ಸಮಸ್ಯೆಯೂ ಸೇರಿದಂತೆ ಅಪಾಯ ಮೌಲ್ಯಮಾಪನ ಅಧ್ಯಯನವನ್ನು ನಡೆಸಬೇಕು. ಯಾವುದೇ ಸಮಯದಲ್ಲಿಯೂ ಸ್ಥಳದಲ್ಲಿ ಇರಬಹುದಾದ ಗರಿಷ್ಠ ಸಾಮಗ್ರಿ ದಾಸ್ತಾನನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಸ್ಥಾವರದ ಲೇಔಟ್ ನಕ್ಷೆಯ ಮೇಲೆ ಅಪಾಯದ ಬಾಹ್ಯರೇಖೆಗಳನ್ನು ಮತ್ತು ಅಪಘಾತವೇನಾದರೂ ಸಂಭವಿಸಿದಲ್ಲಿ, ಹಾನಿಗೀಡಬಹುದಾದ ಪ್ರಸ್ತಾಪಿತ ಚಟುವಟಿಕೆಗಳನ್ನು ಸ್ಪಷ್ಟವಾಗಿ ತೋರಿಸಿ, ಚಿತ್ರಿಸಬೇಕು. ಇದನ್ನು ಆಧರಿಸಿ, ಪ್ರಸ್ತಾಪಿತ ಸಂರಕ್ಷಣಾ ಕ್ರಮಗಳನ್ನು ಒದಗಿಸಬೇಕು, ಬೆಂಕಿ ಅಪಾಯಗಳ ವಿರುದ್ಧ ತೆಗೆದುಕೊಳ್ಳುವ ಕ್ರಮಗಳನ್ನೂ ವಿಶದವಾಗಿ ಒದಗಿಸಬೇಕು.

೪೭. ಹೀಗೆ ರೂಪಿಸಿದ ಡಿಎಂಪಿಯು ಸಂಭವಿಸಬಹುದಾದ ಸುನಾಮಿ/ಚಂಡಮಾರುತ/ತತ್‌ಕ್ಷಣದಲ್ಲಿ ಬಿರುಗಾಳಿ ಏರಿಕೆ/ಭೂಕಂಪನ ಇತ್ಯಾದಿಗಳ ವಿರುದ್ಧ ತೆಗೆದುಕೊಳ್ಳುವ ಕ್ರಮಗಳನ್ನು ಕೂಡ ಒಳಗೊಂಡಿರಬೇಕು. ಡಿಎಂಪಿಯು ಯೋಜನಾ ಸ್ಥಳದ/ಸ್ಥಾವರದ (ಆನ್-ಸೈಟ್) ಮತ್ತು ಯೋಜನಾ ಸ್ಥಳದಿಂದ ಹೊರಗೆ/ಸ್ಥಾವರದ ಹೊರಗೆ (ಆಫ್‌ಸೈಟ್) ಯೋಜನೆಯನ್ನು ಒಳಗೊಂಡಿರುವುದನ್ನು ಮತ್ತು ಆ ಕೆಲಸಕ್ಕೆ ಗುರುತಿಸಲಾದ ಸಿಬ್ಬಂದಿಯನ್ನು ನಿರ್ದಿಷ್ಟವಾಗಿ ಉಲ್ಲೇಖಿಸಿರುವುದನ್ನು ಖಾತ್ರಿಪಡಿಸಬೇಕು. ಈ ಯೋಜನೆಯ ಸಂಕ್ಷಿಪ್ತರೂಪವನ್ನು ಇಂಗ್ಲಿಷ್ ಮತ್ತು ಸ್ಥಳೀಯ ಭಾಷೆಗಳಲ್ಲಿ ಸಿದ್ಧಪಡಿಸಬೇಕು.

೪೮. ಸ್ಥಾವರದ ಗಡಿಯ ಸುತ್ತ ಕನಿಷ್ಠ ೩ ಹಂತಗಳಲ್ಲಿ ಇರುವಂತೆ (ಗಿಡ ನೆಡಲು ಸಾಧ್ಯವೇ ಇಲ್ಲದ ಪ್ರದೇಶವನ್ನು ಬಿಟ್ಟು) ಪ್ರತೀ ಹೆಕ್ಟೇರ್‌ಗೆ ೨೦೦೦ರಿಂದ ೨,೫೦೦ ಮರಗಳು ಇರುವಂತೆ, ಶೇ. ೮೦ರಷ್ಟು ಗಿಡಗಳು ಬದುಕುಳಿಯುವಂತೆ ಮತ್ತು ಸ್ಥಳೀಯ/ದೇಸೀ ಮರಗಳನ್ನು ಒಳಗೊಂಡ ಸೂಕ್ತ ಅಗಲದ (೫೦ರಿಂದ ೧೦೦ ಮೀ) ಹಸಿರು ಪಟ್ಟಿ ನಿರ್ಮಾಣ ಮಾಡುವ ವಿವರವಾದ ಯೋಜನೆಯನ್ನು ಸಲ್ಲಿಸಬೇಕು. ಇದಕ್ಕೆ ಛಾಯಾಚಿತ್ರಗಳ ಸಾಕ್ಷಿಯನ್ನು ಇಟ್ಟುಕೊಂಡು, ಎನ್‌ಆರ್‌ಎಸ್‌ಎ ವರದಿಗಳೊಂದಿಗೆ ನಿಯತಕಾಲಿಕವಾಗಿ ಸಲ್ಲಿಸಬೇಕು.

೪೯. ಹಸಿರುಪಟ್ಟಿಯಲ್ಲಿ ಮತ್ತು ಅದರ ಮೇಲೆ, ಇಂಗಾಲದ ತೊಟ್ಟಿಯ ಹಾಗೆ ಗುರುತಿಸಲಾದ ಅವನತಿಗೀಡಾದ ಅರಣ್ಯಗಳ ಬ್ಲಾಕ್‌ಗಳಲ್ಲಿ ಜಿಲ್ಲಾ ಅರಣ್ಯ ಇಲಾಖೆಯೊಂದಿಗೆ ಸೂಕ್ತ ಸಮಾಲೋಚನೆ ನಡೆಸಿ, ಹೆಚ್ಚುವರಿ ಗಿಡಗಳನ್ನು ನೆಡಬೇಕು. ಇದಕ್ಕೆ ಅನುಸರಣೆಯಾಗಿ ಯೋಜನಾ ಪ್ರಸ್ತಾಪಕರು ಹಣಕಾಸು ಹಂಚಿಕೆಯೊಡನೆ ಕಾಲಮಿತಿಯ ಕ್ರಿಯಾಯೋಜನೆಯನ್ನು ರೂಪಿಸಬೇಕು ಮತ್ತು ಪ್ರತೀ ಆರು ತಿಂಗಳಿಗೊಮ್ಮೆ ಸಚಿವಾಲಯಕ್ಕೆ ಅನುಷ್ಠಾನದ ಸ್ಥಿತಿಗತಿಯ ವರದಿಯನ್ನು ಸಲ್ಲಿಸತಕ್ಕದ್ದು.

೫೦. ಕಾರ್ಪೋರೇಟ್ ಪರಿಸರ ನೀತಿ

ಎ. ಕಂಪನಿಯು ತನ್ನ ನಿರ್ದೇಶಕರ ಮಂಡಳಿಯಿಂದ ಮಂಜೂರಾತಿ ಪಡೆದ ಉತ್ತಮವಾಗಿ ರೂಪಿಸಲಾದ ಪರಿಸರ ನೀತಿಯನ್ನು ಹೊಂದಿದೆಯೇ? ಹಾಗಿದ್ದಲ್ಲಿ, ಅದನ್ನು ಇಐಎ ವರದಿಯಲ್ಲಿ ವಿವರವಾಗಿ ನೀಡಿರಿ.

ಬಿ. ಪ್ರಮಾಣಕ ಕಾರ್ಯನಿರ್ವಹಣಾ ಪ್ರಕ್ರಿಯೆ/ಕಾರ್ಯವಿಧಾನಗಳಿಗೆ ಸೂಚಿಸಲಾದ ಪರಿಸರ ನೀತಿಯು ಯಾವುದೇ ಪಾರಿಸರಿಕ ಅಥವಾ ಅರಣ್ಯ ಮಾನದಂಡಗಳು/ಸ್ಥಿತಿಗತಿಗಳ ಉಲ್ಲಂಘನೆ/ಅತಿಕ್ರಮ/ಮೀರುವುದರ ಮೇಲೆ ಗಮನಕೇಂದ್ರೀಕರಿಸುತ್ತದೆಯೇ? ಹಾಗಿದ್ದರೆ ಅದನ್ನು ಇಐಎ ವರದಿಯಲ್ಲಿ ವಿವರವಾಗಿ ನೀಡಿರಿ.

ಸಿ) ಪರಿಸರದ ಸಮಸ್ಯೆಗಳೊಂದಿಗೆ ವ್ಯವಹರಿಸಲು ಮತ್ತು ಪರಿಸರ ಪರವಾನಗಿ/ಒಪ್ಪಿಗೆ ಕರಾರುಗಳನ್ನು ಅನುಸರಿಸುವುದನ್ನು ಖಾತ್ರಿಪಡಿಸಲು ಇರುವ ಕಂಪನಿಯ ಆಡಳಿತಾತ್ಮಕ ಶ್ರೇಣಿ/ವ್ಯವಸ್ಥೆಯು ಯಾವುದು? ಈ ವ್ಯವಸ್ಥೆಯ ವಿವರಗಳನ್ನು ಕೊಡಬೇಕಾಗಬಹುದು.

ಡಿ) ಕಂಪನಿಯು ಪಾರಿಸರಿಕ ಮಾನದಂಡಗಳನ್ನು ಪಾಲಿಸದೇ ಇರುವುದನ್ನು/ಉಲ್ಲಂಘನೆಗಳನ್ನು ಕಂಪನಿಯ ನಿರ್ದೇಶಕ ಮಂಡಳಿಗೆ ಮತ್ತು/ಅಥವಾ ಷೇರುದಾರರಿಗೆ/ ವಿಸ್ತೃತ ಭಾಗೀದಾರರಿಗೆ ವರದಿ ಮಾಡಲು ಕಂಪನಿಯು ಏನಾದರೂ ವ್ಯವಸ್ಥೆ ಹೊಂದಿದೆಯೇ? ಈ ವರದಿಗಾರಿಕೆ ಕಾರ್ಯವಿಧಾನವನ್ನು ಇಐಎ ವರದಿಯಲ್ಲಿ ವಿವರವಾಗಿ ಬರೆದಿರಬೇಕು.

೫೦. ಮೇಲಿನ ಎಲ್ಲ ವರದಿಗಳನ್ನು ಇಐಎ ವರದಿಯಲ್ಲಿ ಮತ್ತು ಸಮಿತಿಯ ಮಂಡನೆಯಲ್ಲಿ ಸಮರ್ಪಕವಾಗಿ ಬರೆದಿರಬೇಕು.

೫೧. ಬಾಕಿ ಉಳಿದಿರುವ ಮೊಕದ್ದಮೆಗಳ ಅಥವಾ ಯೋಜನೆಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ/ನ್ಯಾಯಪೀಠ ಇತ್ಯಾದಿಗಳಲ್ಲಿ ಇರುವ ದೂರುಗಳ ವಿವರಗಳನ್ನು ಅತ್ಯಗತ್ಯವಾಗಿ ನೀಡಬೇಕು.

ಕರಾವಳಿ ತೀರದಲ್ಲಿರುವ ಟಿಪಿಪಿಗಳಿಗೆ ಹೆಚ್ಚಿನವರಿ ಒಪ್ಪಂದದ ಕರಾರುಗಳು:

ಮೇಲೆ ನಿರ್ದಿಷ್ಟಪಡಿಸಿದ ಸಾಮಾನ್ಯ ಷರತ್ತುಗಳ ಜೊತೆಗೆ, ಈ ಕೆಳಗಿನ ಕರಾರುಗಳನ್ನೂ (ಅನ್ವಯವಾಗುವಂತೆ) ಕಟ್ಟುನಿಟ್ಟಾಗಿ ಪಾಲಿಸಬೇಕು:

೧. ರಾಮ್ಸರ್ ಒಡಂಬಡಿಕೆಯ ಪ್ರಕಾರ ಜೌಗುನೆಲದ ವ್ಯಾಖ್ಯಾನಕ್ಕೆ ಸರಿಹೊಂದುವ ಕೆಳಭಾಗದಲ್ಲಿರುವ ಪ್ರದೇಶಗಳನ್ನು ಗುರುತಿಸಿ, ಪ್ರಸ್ತಾಪಿತ ಸ್ಥಳದಿಂದ ಸ್ಪಷ್ಟವಾಗಿ ಪ್ರತ್ಯೇಕಿಸಿ, ಗುರುತಿಸಬೇಕು.

೨. ಯೋಜನಾ ಸ್ಥಳವು ಜೌಗು ಪ್ರದೇಶ ಮತ್ತು ಹಿನ್ನೀರಿನ ಪ್ರದೇಶವನ್ನು ಹೊಂದಿದ್ದರೆ ಅಥವಾ ಅವಕ್ಕೆ ಹತ್ತಿರವಿದ್ದರೆ, ಆ ಪ್ರದೇಶಗಳನ್ನು ಯೋಜನಾ ಸ್ಥಳದಿಂದ ಕೈಬಿಡಬೇಕು ಮತ್ತು ಯೋಜನೆಯ ಗಡಿಯನ್ನು ಸೀಆರ್‌ಜಡ್ ಗೆರೆಯಿಂದ ದೂರವಿರುವಂತೆ ನೋಡಿಕೊಳ್ಳಬೇಕು. ಯಾವುದಾದರೂ ಅಧಿಕೃತ ಏಜೆನ್ಸಿಯ ಅಧಿಕೃತವಾದ ಸೀಆರ್‌ಜಡ್ ನಕ್ಷೆಯನ್ನು ಸಲ್ಲಿಸಬೇಕಾಗುತ್ತದೆ.

೩. ಮಣ್ಣು ಸಮತಟ್ಟುಗೊಳಿಸುವುದು ಕನಿಷ್ಠವಿರಬೇಕು ಮತ್ತು ಆ ಪ್ರದೇಶದ ಸ್ವಾಭಾವಿಕ ನೀರಿನ ಹರಿವಿಗೆ ಏನೂ ಅಡ್ಡಿಯಾಗಬಾರದು ಅಥವಾ ಕನಿಷ್ಠ ಅಡ್ಡಿಯಾಗುವಂತಿರಬೇಕು. ಚಿಕ್ಕ ಕಾಲುವೆ/ತೊರೆಗಳನ್ನೇನಾದರೂ (ಇದ್ದಲ್ಲಿ) ಬೇರೆ ದಿಕ್ಕಿಗೆ ತಿರುಗಿಸಬೇಕು ಎಂದಾದರೆ, ತಿರುಗಿಸುವಿಕೆಯ ವಿನ್ಯಾಸವು ಹೇಗಿರಬೇಕು ಎಂದರೆ ಕಾಲುವೆ/ತೊರೆಯನ್ನು ತಿರುಗಿಸುವುದು ಯೋಜನಾ ಪ್ರದೇಶದಲ್ಲಿ ನೀರು ಬಸಿದುಹೋಗುವಂತೆ ಮಾಡುವುದು ಮಾತ್ರವಲ್ಲ, ಬೇರೆ ಸುತ್ತಲಿನ ಪ್ರದೇಶದಿಂದ ಪ್ರವಾಹದ ನೀರನ್ನು ಸಂಗ್ರಹಿಸಿ, ಆ ಕೊಲ್ಲಿಯನ್ನು ಪ್ರವೇಶಿಸುವ ಜೌಗುಪ್ರದೇಶಕ್ಕೆ/ಮುಖ್ಯ ಕಾಲುವೆ/ತೊರೆಗಳಿಗೆ ಬಿಡುವಂತಿರಬೇಕು. ಮುಖ್ಯ ಕಾಲುವೆ/ತೊರೆಗಳ ದಿಕ್ಕು ಬದಲಿಸಬಾರದು, ಆದರೆ ಅವುಗಳ ದಂಡೆಯನ್ನು ಗಟ್ಟಿಗೊಳಿಸಿ, ಹೂಳೆತ್ತಿಸಬೇಕು.

೪. ಯೋಜನಾ ಸ್ಥಳವನ್ನು ಸಮತಟ್ಟು ಮಾಡಲು ಬೇಕಾದ ಮಣ್ಣನ್ನು ಸ್ಥಳದ ಒಳಗೇ ಪಡೆದುಕೊಳ್ಳಲು ಸಾಧ್ಯವಿದ್ದಷ್ಟು ಪ್ರಯತ್ನಿಸಬೇಕು, ಅದು ಆ ಪ್ರದೇಶದ ಸ್ವಾಭಾವಿಕ ನೀರಿನ ಹರಿವಿನ ವ್ಯವಸ್ಥೆಯನ್ನು ಸಂರಕ್ಷಿಸಿ, ಉತ್ತಮಪಡಿಸಲು ನೆರವಾಗುತ್ತದೆ.

೫. ಹೆಚ್ಚು ಪ್ರಮಾಣದಲ್ಲಿ ನೆರೆ/ಪ್ರವಾಹದ ನೀರನ್ನು ಹಿಡಿದಿಟ್ಟುಕೊಳ್ಳಬಲ್ಲ ಜೌಗು ಪ್ರದೇಶಗಳನ್ನು ಗುರುತಿಸಿ, ಅವಕ್ಕೆ ಅಡ್ಡಿಪಡಿಸದೇ, ಹಾಗೆಯೇ ಬಿಡಬೇಕು.

೬. ಕೊಲ್ಲಿ, ಕಾಲುವೆ ವ್ಯವಸ್ಥೆ, ಹಿನ್ನೀರು, ಜೌಗುಪ್ರದೇಶ ಮತ್ತು ಸಮುದ್ರಕ್ಕೆ ಯಾವುದೇ ರೀತಿಯ ತ್ಯಾಜ್ಯವನ್ನು ಸೂಕ್ತ ಸಂಸ್ಕರಣೆ ಮಾಡದೆಯೇ ಹಾಗೆಯೇ ಬಿಡಬಾರದು. ಘಟಕದಿಂದ ಹೊರಬರುವ ನೀರನ್ನು ಮೊದಲು ರಕ್ಷಣೆ ಇರುವ ಕೆರೆಯಲ್ಲಿ ಸಂಸ್ಕರಿಸಬೇಕು (ಸಾಧ್ಯವಿರುವೆಡೆಯಲ್ಲೆಲ್ಲ) ಮತ್ತು ನಂತರ ಆಳ ಸಮುದ್ರಕ್ಕೆ (೧೦ರಿಂದ ೧೫ ಮೀ. ಆಳದಲ್ಲಿ) ಬಿಡಬೇಕು. ಹಾಗೆಯೇ ನೀರನ್ನು ಒಳತೆಗೆದುಕೊಳ್ಳುವಾಗ ಮೀನುಗಳು ಒಂದೆಡೆ ಗುಂಪುಗೂಡುವುದನ್ನು ತಪ್ಪಿಸಲು ಆಳಸಮುದ್ರದಿಂದ ತೆಗೆದುಕೊಳ್ಳಬೇಕು ಮತ್ತು ಯಾವುದೇ ಸಂದರ್ಭದಲ್ಲಿಯೂ ಅಳಿವೆ ಅಥವಾ ನದಿಮುಖಜ ವಲಯದಿಂದ ತೆಗೆದುಕೊಳ್ಳಬಾರದು. ನೀರನ್ನು ಉಪ್ಪುರಹಿತಗೊಳಿಸುವ ಘಟಕಗಳಿಂದ (ಯಾವುದಾದರೂ ಇದ್ದಲ್ಲಿ) ಹೊರಬರುವ ಬ್ರೈನ್ ಅನ್ನು ಸೂಕ್ತರೀತಿಯಲ್ಲಿ ದುರ್ಬಲಗೊಳಿಸದೆಯೇ ಹಾಗೆಯೇ ನೇರವಾಗಿ ಸಮುದ್ರಕ್ಕೆ ಬಿಡಬಾರದು.

೭. ಅಧ್ಯಯನ ಪ್ರದೇಶದಲ್ಲಿ ಮ್ಯಾಂಗ್ರೂವ್/ಕಾಂಡಲು ಇದ್ದರೆ, ಮ್ಯಾಂಗ್ರೂವ್/ಕಾಂಡಲು ಸಂರಕ್ಷಣೆ ಮತ್ತು ಪುನರುಜ್ಜೀವನ ಯೋಜನೆಯನ್ನು ರೂಪಿಸಿ, ಕಾಲಮಿತಿ ಅನುಷ್ಠಾನ ವಿವರಗಳೂ ಸೇರಿದಂತೆ ಕ್ರಿಯಾಯೋಜನೆಯನ್ನು ನಿರ್ದಿಷ್ಟವಾಗಿ ಸೂಚಿಸಬೇಕು.

೮. ಯೋಜನಾ ಅರ್ಜಿದಾರರು/ಪ್ರತಿಪಾದಕರು ಇಎಂಪಿ ಆಯವ್ಯಯದಿಂದ ಒಂದು ಸಾಮಾನ್ಯ ಹಸಿರು ದತ್ತಿ ನಿಧಿಯನ್ನು ಸ್ಥಾಪಿಸಬೇಕು. ಇದರಿಂದ ಬಂದ ಬಡ್ಡಿಯನ್ನು ಆ ಪ್ರದೇಶದ ಹಸಿರು ಕವಚ/ಪಟ್ಟಿಯನ್ನು ಅಭಿವೃದ್ಧಿಪಡಿಸಲು ಮತ್ತು ನಿರ್ವಹಣೆ ಮಾಡಲು ಬಳಸಿಕೊಳ್ಳಬೇಕು.

೯. ವಿವಿಧ ಸಾಮಾಜೋ-ಆರ್ಥಿಕ ಹಂತದಲ್ಲಿ ಮೀನುಗಾರಿಕೆ ಮೇಲಾಗುವ ಪರಿಣಾಮವನ್ನು ಮೌಲ್ಯಾಂಕನ ಮಾಡಬೇಕು.

೧೦. ಸಿಎಸ್‌ಆರ್ ನಿಧಿ/ಅನುದಾನದಿಂದ ಒಂದು ಮೀನುಗಾರರ ಕಲ್ಯಾಣ ದತ್ತು ನಿಧಿಯನ್ನು ಸ್ಥಾಪಿಸಬೇಕು, ಇದು ಮೀನುಗಾರಿಕೆ ಲ್ಯಾಂಡಿಂಗ್ ಪ್ಲಾಟ್‌ಫಾರ್ಮ್‌ಗಳು/ಮೀನುಗಾರಿಕೆ ಬಂದರು/ಶೀತಲ ಘಟಕ ಇಂತಹ ಸೌಲಭ್ಯಗಳನ್ನು ಹುಟ್ಟುಹಾಕುವ ಮೂಲಕ ಅವರ ಬದುಕಿನ ಗುಣಮಟ್ಟವನ್ನು ವೃದ್ಧಿಸುವುದು ಮಾತ್ರವಲ್ಲದೇ, ಪ್ರಕ್ಷುಬ್ಧ ಸಮುದ್ರ, ಚಂಡಮಾರುತ, ಬಿರುಗಾಳಿ ಇನ್ನಿತರ ಕಾರಣಗಳಿಂದ ಮೀನುಗಾರಿಕೆಯಲ್ಲಿ ತೊಡಗಿದ್ದ ಮೀನುಗಾರರು ಕಳೆದುಹೋಗುವುದು/ತಪ್ಪಿಸಿಕೊಳ್ಳುವುದು ರೀತಿಯ ತುರ್ತು ಸಂದರ್ಭಗಳಲ್ಲಿ ಪರಿಹಾರ ಕೊಡಲೂ ಸಾಧ್ಯವಾಗಬೇಕು.

೧೧. ಸುನಾಮಿ ತುರ್ತು ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸಿ, ಕಾಮಗಾರಿ ಕೆಲಸ ಶುರುವಾಗುವ ಮೊದಲೇ ಯೋಜನೆಯನ್ನು ಸಲ್ಲಿಸಬೇಕು.

೧೨. ಯೋಜನಾ ಸ್ಥಳದಲ್ಲಿ ಮತ್ತು ಸುತ್ತಮುತ್ತ ಮಣ್ಣು, ಅಂತರ್ಜಲ ಮತ್ತು ಮೇಲ್ಮೈ ನೀರಿಗೆ (ನಾಲೆಗಳು & ಗ್ರಾಮದ ಕೆರೆಗಳು) ಸಮುದ್ರದ ನೀರಿನಿಂದ ಯಾವುದೇ ರೀತಿಯ ಮಾಲಿನ್ಯ ಉಂಟಾಗಬಾರದು. ಬೇರೆ ಮಾತಿನಲ್ಲಿ ಹೇಳಬೇಕೆಂದರೆ, ನೀರಿನ ಕೊಳವೆಗಳಿಂದ ಸೋರಿಕೆ, ಸಮುದ್ರಕ್ಕೆ ನೀರನ್ನು ಹೊರಬಿಡುವ ಮೊದಲು ಸಂಸ್ಕರಿಸಲು ಬಳಸುವ ರಕ್ಷಿತ ಕೆರೆಯ ತಡೆದಂಡೆಯಿಂದ ಸೋರಿಕೆ, ಹೊರಗೆಬಿಡುವ ಮತ್ತು ಒಳತೆಗೆದುಕೊಳ್ಳುವ ನೀರಿನ ಕೊಳವೆಗಳುದ್ದಕ್ಕೂ ಇರುವ ಮೇಲ್ಮೈನಲ್ಲಿರುವ ಆರ್‌ಸಿಸಿ ಕಾಲುವೆಗಳ ಸೋರಿಕೆ, ಇಂಥವನ್ನು ತಡೆಗಟ್ಟುವ ಅತ್ಯಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಏಕೆಂದರೆ ಯೋಜನಾ ಸ್ಥಳದ ಗಡಿಗಳಲ್ಲಿ ಫಲವತ್ತಾದ ಭೂಮಿಇದ್ದು, ಅವನ್ನು ಭತ್ತದ ಕೃಷಿಗೆ ಸಾಮಾನ್ಯವಾಗಿ ಬಳಸಲಾಗುತ್ತಿರುತ್ತದೆ.

| ಇಐಎ ಸಂರಚನೆ | ವಿಷಯವಸ್ತು/ಪರಿವಿಡಿ |
|---|---|
| ಪರಿಚಯ | ೧. ವರದಿಯ ಉದ್ದೇಶ ೨. ಯೋಜನೆ ಮತ್ತು ಯೋಜನೆಯ ಪ್ರತಿಪಾದಕರು/ಅರ್ಜಿದಾರರನ್ನು ಗುರುತಿಸುವುದು ೩. ಯೋಜನೆಯ ಸಂಕ್ಷಿಪ್ತ ವಿವರಣೆ - ಲಕ್ಷಣ, ಗಾತ್ರ, ಸ್ಥಳ, ದೇಶಕ್ಕೆ ಅಥವಾ ಆ ಪ್ರದೇಶಕ್ಕೆ ಅದರ ಮಹತ್ವ ೪. ಅಧ್ಯಯನದ ವ್ಯಾಪ್ತಿ (ಒಪ್ಪಂದದ ಕರಾರಿನ ಅನ್ವಯ) |
| ಯೋಜನೆಯ ವಿವರಣೆ | ೧. ಪಾರಿಸರಿಕ ಪರಿಣಾಮವನ್ನು ಉಂಟುಮಾಡುವ ಸಂಭವನೀಯತೆ ಇರುವ ಯೋಜನೆಯ ಅಂಶಗಳ ವಿವರಣೆ ೨. ಈ ಕೆಳಗಿನ ಅಂಶಗಳ ಕುರಿತು ಸ್ಪಷ್ಟಚಿತ್ರಣವನ್ನು ನೀಡಬೇಕು: ವಿಧ ಅಗತ್ಯ ಸ್ಥಳ (ಸ್ಥಳ, ಯೋಜನೆಯ ಎಲ್ಲೆಗಳು, ಯೋಜನಾ ಸ್ಥಳದ ಲೇಔಟ್ ತೋರಿಸುವ ನಕ್ಷೆ) ಕಾರ್ಯಾಚರಣೆಯ ಗಾತ್ರ ಮಂಜೂರಾತಿ ಮತ್ತು ಅನುಷ್ಠಾನದ ಪ್ರಸ್ತಾಪಿತ ವೇಳಾಪಟ್ಟಿ ತಂತ್ರಜ್ಞಾನ ಮತ್ತು ಪ್ರಕ್ರಿಯೆಗಳು ೩. ಯೋಜನೆಯ ವಿವರಣೆ (ಯೋಜನಾ ಸ್ಥಳದ ಲೇಔಟ್ ತೋರಿಸುವ ರೇಖಾಚಿತ್ರವೂ ಸೇರಿದಂತೆ) ೪. ಸ್ಥೂಲ ಚಿತ್ರರೂಪದ ಪ್ರಸ್ತುತಿ (ಇಐಎಯ ಉದ್ದೇಶಕ್ಕೆ ಮಹತ್ವವಾದ ಮಾಹಿತಿಯನ್ನು ನೀಡುವ ಕಾರ್ಯಸಾಧ್ಯತೆಯ ರೇಖಾಚಿತ್ರವೂ ಸೇರಿದಂತೆ) ೫. ದುಷ್ಪರಿಣಾಮ ಕಡಿಮೆಗೊಳಿಸುವ/ತಗ್ಗಿಸುವ ಕ್ರಮಗಳು (ಪಾರಿಸರಿಕ ಮಾನದಂಡಗಳು ಮತ್ತು ಇತರೇ ಇಐಎ ಅಗತ್ಯಗಳನ್ನು ಈಡೇರಿಸಲು) ೬. ಹೊಸ ಮತ್ತು ಪರೀಕ್ಷೆ ಮಾಡದೇ ಇರುವ ತಂತ್ರಜ್ಞಾನದ ಮೌಲ್ಯಮಾಪನ (ತಾಂತ್ರಿಕ ವೈಫಲ್ಯದ ಅಪಾಯಸಾಧ್ಯತೆಗಾಗಿ) |
| ಪರಿಸರದ ವಿವರಣೆ | ೧. ಅಧ್ಯಯನದ ಪ್ರದೇಶ ೨. ಕಾಲಾವಧಿ ೩. ಘಟಕಗಳು ಮತ್ತು ಕಾರ್ಯವಿಧಾನ ೪. ಮೂಲಾಧಾರ (ಬೇಸ್‌ಲೈನ್) ಹುಟ್ಟುಹಾಕುವುದು (ವ್ಯಾಪ್ತಿಯಲ್ಲಿ ಗುರುತಿಸಲಾದ ಮೌಲಿಕ ಪಾರಿಸರಿಕ ಘಟಕಗಳು) ೫. ಎಲ್ಲ ಪಾರಿಸರಿಕ ಘಟಕಗಳ ಮೂಲ ನಕ್ಷೆಗಳು |

| ಇಐಎ ಸಂರಚನೆ | ವಿಷಯವಸ್ತು/ಪರಿವಿಡಿ |
|---|---|
| ಊಹಿಸಲಾದ ಪಾರಿಸರಿಕ ಪರಿಣಾಮಗಳು & ಪರಿಹಾರ ಕ್ರಮಗಳು | ೧. ಈ ಕೆಳಗಿನ ರೀತಿಯ ವಿವಿಧ ಅಂಶಗಳಿಂದ ಉಂಟಾಗುವ ತನಿಖೆ ಮಾಡಲಾದ ಪಾರಿಸರಿಕ ಪರಿಣಾಮಗಳ ವಿವರಗಳು ಸ್ಥಳ ವಿನ್ಯಾಸ ನಿರ್ಮಾಣ ನಿಯಮಿತ ಕಾರ್ಯಾಚರಣೆಗಳು ಅಂತಿಮ ಪುನರ್ವಸತಿ ಅಥವಾ ಕಾರ್ಯಾಚರಣೆ ನಿಲ್ಲಿಸುವುದು (ಪೂರ್ಣಗೊಂಡ ಯೋಜನೆಯೊಂದರ) ಗುರುತಿಸಲಾದ ಪ್ರತಿಕೂಲ ಪರಿಣಾಮಗಳನ್ನು ಕನಿಷ್ಠಗೊಳಿಸುವ/ಸರಿದೂಗಿಸುವ ಕ್ರಮಗಳು ೨. ಪಾರಿಸರಿಕ ಘಟಕಗಳ ಪುನಾಸ್ಥಿತಿಗೆ ತರಲಾಗದ ಬದ್ಧತೆಗಳು ೩. ಪರಿಣಾಮಗಳ ಮಹತ್ವದ ಮೌಲ್ಯಾಂಕನ ೪. ದುಷ್ಪರಿಣಾಮ ಕಡಿಮೆಗೊಳಿಸುವ/ತಗ್ಗಿಸುವ ಕ್ರಮಗಳು |
| ಪರ್ಯಾಯಗಳ ವಿಶ್ಲೇಷಣೆ (ತಂತ್ರಜ್ಞಾನ ಮತ್ತು ಯೋಜನಾಸ್ಥಳ) | ಪ್ರತಿಯೊಂದೂ ಪರ್ಯಾಯದ ವಿವರಗಳು (ವ್ಯಾಪ್ತೀಕರಣವು ಪರ್ಯಾಯಗಳ ಅಗತ್ಯವಿದೆ ಎಂದು ಸೂಚಿಸಿದರೆ) ೧. ವಿವರಣೆ ೨. ಪ್ರತಿಕೂಲ ಪರಿಣಾಮಗಳ ಸಾರಾಂಶ ೩. ಪ್ರಸ್ತಾಪಿತ ಪರಿಹಾರ ಕ್ರಮಗಳು ೪. ಪರ್ಯಾಯವೊಂದರ ಆಯ್ಕೆ |
| ಪಾರಿಸರಿಕ ನಿರ್ವಹಣಾ ಕಾರ್ಯಕ್ರಮ | ಕಡಿಮೆಗೊಳಿಸುವ/ತಗ್ಗಿಸುವ ಕ್ರಮಗಳ ಪರಿಣಾಮಕಾರಿತ್ವ ಮೇಲ್ವಿಚಾರಣೆಯ ತಾಂತ್ರಿಕ ಅಂಶಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ: ಮಾಪನ ವಿಧಾನಗಳು ಎಷ್ಟು ದಿನಕ್ಕೊಮ್ಮೆ ಯಾವ ಸ್ಥಳ ದತ್ತಾಂಶ ವಿಶ್ಲೇಷಣೆ ವರದಿಗಾರಿಕೆ ವೇಳಾಪಟ್ಟಿ ತುರ್ತು ಕಾರ್ಯವಿಧಾನಗಳು ವಿವರವಾದ ಆಯವ್ಯಯ ಸಂಗ್ರಹಣಾ ವೇಳಾಪಟ್ಟಿ |
| ಹೆಚ್ಚುವರಿ ಅಧ್ಯಯನಗಳು | ಸಾರ್ವಜನಿಕ ಸಮಾಲೋಚನೆ ಅಪಾಯಸಾಧ್ಯತೆ ಮೌಲ್ಯಮಾಪನ ಸಾಮಾಜಿಕ ಪರಿಣಾಮ ಮೌಲ್ಯಮಾಪನ |
| ಯೋಜನೆಯ ಲಾಭಗಳು / ಅನುಕೂಲಗಳು | ಭೌತಿಕ ಮತ್ತು ಸಾಮಾಜಿಕ ಮೂಲಸೌಕರ್ಯದಲ್ಲಿ ಸುಧಾರಣೆಗಳು ಉದ್ಯೋಗಾವಕಾಶ ಸಂಭಾವ್ಯತೆ (ಕುಶಲಿಗ/ಅರೆಕುಶಲಿಗ/ಕುಶಲಿಗರಲ್ಲದ) ಬೇರೆ ಗೋಚರ (ಕಣ್ಣಿಗೆ ಕಾಣಿಸುವಂತಹ) ಲಾಭಗಳು |
| ಪಾರಿಸರಿಕ ವೆಚ್ಚ ಲಾಭ/ಅನುಕೂಲ ವಿಶ್ಲೇಷಣೆ | ವ್ಯಾಪ್ತೀಕರಣದ ಸಮಯದಲ್ಲಿ ಶಿಫಾರಸು ಮಾಡಿದರೆ |
| ಇಎಂಪಿ | ಇಐಎಗೆ ಒಪ್ಪಿಗೆ ದೊರೆತೊಡನೆ ದುಷ್ಪರಿಣಾಮ ಕಡಿಮೆಗೊಳಿಸುವ/ತಗ್ಗಿಸುವ ಕ್ರಮಗಳ ಅನುಷ್ಠಾನವನ್ನು ಮತ್ತು ಅವುಗಳ ಪರಿಣಾಮಕಾರಿತ್ವವನ್ನು ಮೇಲ್ವಿಚಾರಣೆ ಮಾಡುವುದನ್ನು ಖಾತ್ರಿಪಡಿಸುವ ಆಡಳಿತಾತ್ಮಕ ಅಂಶಗಳ ವಿವರಣೆ |
| ಸಾರಾಂಶ ಮತ್ತು ನಿರ್ಣಯ (ಇದು ಇಐಎ ವರದಿಯ ಸಾರಾಂಶವನ್ನು ಒಳಗೊಂಡಿರುತ್ತದೆ) | ಯೋಜನೆಯ ಅನುಷ್ಠಾನಕ್ಕೆ ಒಟ್ಟಾರೆ ಸಮರ್ಥನೆಗಳು/ದೃಢೀಕರಣಗಳು ಪ್ರತಿಕೂಲ ಪರಿಣಾಮಗಳನ್ನು ಕಡಿಮೆಗೊಳಿಸುವ/ತಗ್ಗಿಸುವುದರ ಕುರಿತ ವಿವರಣೆ |
| ಇದರಲ್ಲಿ ತೊಡಗಿಸಿಕೊಂಡಿರುವ ಸಮಾಲೋಚಕರ ಪ್ರಕಟಣೆ | ಇದರಲ್ಲಿ ತೊಡಗಿಸಿಕೊಂಡಿರುವ ಸಮಾಲೋಚಕರ ವಿವರಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ<br>ಹೆಸರು<br>ಸಂಕ್ಷಿಪ್ತ ರೆಸ್ಯೂಮೆ<br>ಸಮಾಲೋಚನೆಯ ಲಕ್ಷಣ |

**ಐಎ ವರದಿಯ ಸಂಕ್ಷಿಪ್ತ ಸಾರಾಂಶದ ವಿಷಯವಸ್ತು**

ಇಐಎ ವರದಿಯ ಸಂಕ್ಷಿಪ್ತ ಸಾರಾಂಶವು ಪೂರ್ಣ ಇಐಎ ವರದಿಯ ಸಾರಾಂಶವಾಗಿದ್ದು, ಎಳನ ಗರಿಷ್ಠ ೧೦ ಪುಟಗಳಿಗೆ ಸಂಕ್ಷಿಪ್ತಗೊಳಿಸಲಾಗಿರುತ್ತದೆ. ಇದು ಪೂರ್ಣ ಇಐಎ ವರದಿಯ ಈ ಕೆಳಗಿನ ಅಧ್ಯಾಯಗಳನ್ನು ಒಳಗೊಂಡಿರಬೇಕಾಗುತ್ತದೆ:

೧. ಯೋಜನೆಯ ವಿವರಣೆ

೨. ಪರಿಸರದ ವಿವರಣೆ

೩. ಊಹಿಸಲಾದ ಪಾರಿಸರಿಕ ಪರಿಣಾಮಗಳು ಮತ್ತು ಅವನ್ನು ಕಡಿಮೆಗೊಳಿಸುವ/ತಗ್ಗಿಸುವ ಕ್ರಮಗಳು

೪. ಪಾರಿಸರಿಕ ಮೇಲ್ವಿಚಾರಣಾ ಕಾರ್ಯಕ್ರಮ

೫. ಹೆಚ್ಚುವರಿ ಅಧ್ಯಯನಗಳು

೬. ಯೋಜನೆಯ ಅನುಕೂಲಗಳು/ಲಾಭಗಳು

೭. ಪರಿಸರ ನಿರ್ವಹಣಾ ಯೋಜನೆ

CITIZEN CONSUMER & CIVIC ACTION GROUP [CAG]
9/5, II Street, Padmanabha Nagar, Adyar, Chennai 600 020
www.cag.org.in

COMPUPRINT • 2811 6768